UNIVERSAL
LIBRARY
OU_200461
UNIVERSAL
LIBRARY

OUP—552—7-7-66—10,000

**OSMANIA UNIVERSITY LIBRARY**

Call No. K83 S538 Accession No. K490

Author ಶರಚ್ಚಂದ್ರ

Title ಶುಭದಾ

This book should be returned on or before the date last marked below.

# ಶುಭದಾ

ಕನ್ನಡ ಕಾವ್ಯ ಮಾಲೆ

# ಶುಭದಾ


ಶರಚ್ಚಂದ್ರ

ಅನುವಾದಕರು :

ಎ. ಶಂಕರ



ಕಾವ್ಯಾಲಯ : : ಪ್ರಕಾಶಕರು

ಮೈಸೂರು

'Subhada' by Sharatchandra
translated by A. Shankar

ಮೊದಲನೆಯ ಮುದ್ರಣ : ೧೯೫೬

Copyright
All Rights Reserved
ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ

ಬೆಲೆ: ರೂ. ೧–೮–೦

Published by Kavyalaya Publishers
at Mysore

ಮುದ್ರಕರು :
ಜಿ. ಎಚ್. ರಾಮರಾವ್, ಬಿ.ಎಸ್‌ಸಿ.,
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

# ಶುಭದಾ

## ೧

ಗಂಗೆಯ ದಡದಲ್ಲಿ ಸ್ನಾನಮಾಡುತ್ತಿದ್ದ ಕೃಷ್ಣಪ್ರಿಯಾ ಠಾಕೂರಣಿಯು ಕಿವಿ ಕಣ್ಣುಗಳನ್ನು ಮುಚ್ಚಿಕೊಂಡು ಮೂರು ಮುಳುಗು ಹಾಕಿ ಥಳಥಳನೆ ಹೊಳೆಯುತ್ತಿದ್ದ ಹಿತ್ತಾಳೆಯ ಬಿಂದಿಗೆಯಲ್ಲಿ ನೀರು ತುಂಬುತ್ತಾ "ಅಲ್ಲವೇ ಶನಿಕಾಟ ಬಂದರ ಇಕೋ ಹೀಗೇನೇ ಬರುವುದು" ಎಂದಳು.

ಘಟ್ಟದಲ್ಲಿ ಇನ್ನೂ ನಾಲ್ಕೈದು ಜನ ಹೆಂಗಸರು ಸ್ನಾನಮಾಡುತ್ತಿದ್ದರು. ಎಲ್ಲರೂ ಅವಾಕ್ಕಾಗಿ ಠಾಕೂರಣಿಯ ಮುಖವನ್ನು ನೋಡುತ್ತಾ ನಿಂತರು.

ಆ ಗ್ರಾಮದ ಹೆಣ್ಣು ಹುಲಿಯಾದ ಕೃಷ್ಣಾ ಠಾಕೂರಣಿಯ ಮಾತಿಗೆ ಎದುರುವಾದಿಸುವುದು, ಮಾತಿಗೆ ಪ್ರಶ್ನೆ ಹಾಕುವುದೆಂದರೂ ಸಾಧಾರಣ ಸಾಹಸವಲ್ಲ. ಅಲ್ಲದೆ ಅಲ್ಲಿದ್ದವರೆಲ್ಲ ವಯಸ್ಸಿನಲ್ಲಿ ಆಕೆಗಿಂತ ಬಹಳ ಚಿಕ್ಕವರು.

"ಅದೇ ಹೇಳ್ತೀನೆ ಬಿಂದೂ, ಯಾರಿಗೆ ಶನಿ ಹಿಡಿಯತ್ತೋ ಅವರಿಗೆ ಹೀಗೆಯೇ ಶುರುವಾಗುವುದು" ಎಂದು ಮುದುಕಿ ಹೇಳುತ್ತಲೂ, ಯಾರ ಹೆಸರನ್ನುದ್ದೇಶಿಸಿ ಮಾತಾಡಿಸಿದಳೋ ಆ ಬಿಂದುವಾಸಿನಿಯು ಮುದುಕಿಯ ಕಡೆ ನೋಡಿದಳು. ಅವಳು ದೊಡ್ಡ ಮನುಷ್ಯರ ಮಗಳು, ಶ್ರೀಮಂತರ ಮನೆಯ ಸೊಸೆ ...ಸದ್ಯಕ್ಕೆ ತೌರುಮನೆಗೆ ಬಂದಿದ್ದಳು.

ಅವಳೂ ಸಾಹಸದಿಂದ "ಯಾಕೆ, ದೊಡ್ಡಮ್ಮಾ?" ಅಂದಳು.

"ಅವೇ ಕಣೆ ಆ ಹಾರಾಣ್ ಮುಖೋಪಾಧ್ಯಾಯನ ಮಾತು ಹೇಳುತ್ತಾ ಇದ್ದೀನಿ. ದೇವರು ಕಾಲಲ್ಲಿ ತುಳಿದು ಮುಳುಗಿಸುತ್ತಾ ಇದ್ದಾನೆ ಅವನನ್ನ."

ಹಾರಾಣ್ ಮುಖೋಪಾಧ್ಯಾಯನ ದುರದೃಷ್ಟದ ಕಥೆಯನ್ನು ಕೇಳಿ

ಬಿಂದುವಿಗೂ ದುಃಖವಾಯಿತು. ಈಗೊಂದು ತಿಂಗಳ ಹಿಂದೆ ಅವನ ಐದಾರು ವರ್ಷ ವಯಸ್ಸಿನ ಮಗ ತೀರಿಕೊಂಡಿದ್ದನು.

"ದೇವರು ಕರೆಸಿಕೊಂಡರೆ ನರಮನುಷ್ಯರು ನಾವೇನು ಮಾಡುವುದಕ್ಕಾಗುತ್ತೆ ದೊಡ್ಡಮ್ಮಾ? ಹುಟ್ಟುವುದು, ಸಾಯುವುದು ಎಲ್ಲರ ಮನೆಯಲ್ಲೂ ಇರುವುದೇ ತಾನೇ?"

ಕೃಷ್ಣರಾಕೂರಣಿಯು ಅರ್ಥವಾಗದವಳಂತೆ ಅವಳನ್ನು ದುರುಗುಟ್ಟಿಕೊಂಡು ನೋಡಿದಳು. ಒಂದುಕ್ಷಣದ ಮೇಲೆ ತಿಳಿದುಕೊಂಡು "ಓ, ಆ ಮಾತಂತೀಯಾ? ಈಗೊಂದು ತಿಂಗಳ ಹಿಂದೆ ಹುಡುಗನೇನೋ ತೀರಿಕೊಂಡ, ನಿಜ .. ಆದರೆ ಆ ಮಾತಲ್ಲ ಬಿಂದೂ, ಆ ಮಾತಲ್ಲ ನಾನು ಹೇಳಿದ್ದು. ಸಾಯುವುದು, ಉಳಿಯುವುದು ಭಗವಂತನ ಕೈಯಲ್ಲಿರುವುದೇನೋ ನಿಜ, ಆದರೆ ಇದು—ನೀನು ಈ ವಿಷಯವಾಗಿ ಕೇಳಿಯೇ ಇಲ್ಲವೇನೇ ಹಾಗಾದರೆ?" ಎಂದಳು.

ಬಿಂದುವಾಸಿನಿಯು ಮಾತಾಡದೆ ಆಕೆಯ ಮುಖದ ಕಡೆ ಪ್ರತೀಕ್ಷಿಸಿದಳು.

"ಹಾರಾಣ್ ಮುಖೋಪಾಧ್ಯಾಯನ ಕಥೆ ನೀನು ಕೇಳಿಲ್ಲ ಅಂತ ಕಾಣತ್ತೆ ಅಂದೆ!"

"ಇನ್ನೇನು ಬೇರೆ ಕಥೆ?"

"ಅಯ್ಯೋ, ಅದೇ ಅಲ್ಲವೇನೇ ನಾನು ಹೇಳುತ್ತಾ ಇರೋದು ಆಗಲಿಂದ! ...ದೇವರು ಶಿಕ್ಷೆ ಕೊಟ್ಟ ಅಂದರೆ, ಹೀಗೇ ಅಲ್ಲವೇ ಬೀಳಿಸುವುದು ...! ಆದರೆ ಆ ಮನೆಹಾಳನಿಗೋಸ್ಕರ ಯಾರೂ ಅಯ್ಯೋ ಅನ್ನಬೇಕಾಗಿಲ್ಲ ಬಿಡು. ಪಾಪ ಅವನ ಹೆಂಡತಿ, ಬಂಗಾರದಂಥವಳು...ಅವಳಿಗೆ.. ! ಆ ಹುಡುಗಿ ಈ ಪೋಕರಿ ಕೈಹಿಡಿದು ಒಂದು ದಿನವಾದರೂ ಸುಖವಾಗಿದ್ದಿದ್ದರೇ!"

ಬಿಂದೂ ಯಾವ ರೀತಿ ಆಕೆಯ ಮುಖವನ್ನು ನೋಡುತ್ತಿದ್ದಳೋ ಅದೇ ಬಗೆಯಾಗಿ ನೋಡುತ್ತಲೇ ಇದ್ದಳು. ಬಾಯಿಂದ ಮಾತು ಹೊರಡಲಿಲ್ಲ. ಏನೂ ಅರ್ಥವಾಗಲಿಲ್ಲ. ಘಟ್ಟದಲ್ಲಿದ್ದವರೆಲ್ಲರೂ ಮಂಕು ಮಂಕಾಗಿ ನೋಡಿದರು. ಅವರ ಕುತೂಹಲಕ್ಕೆ ಮಿತಿಯೇ ಇರಲಿಲ್ಲ ...ಒಬ್ಬೊಬ್ಬಳೂ "ಹಾರಾಣ್ ಮುಖೋಪಾಧ್ಯಾಯನಿಗೆ ಬೇರೆ ಏನೋ ಭಯಂಕರ ವಿಪತ್ತು

ಬಂದಿದೆ...ಅದು ಊರಿಗೆಲ್ಲಾ ಗೊತ್ತಿದೆ, ನನಗೆ ಮಾತ್ರ ಗೊತ್ತಿಲ್ಲ" ಎಂದು ಕೊಂಡಳು.

ಸ್ವಲ್ಪಕಾಲ ಯೋಚಿಸಿ ಬಿಂದುವು "ದೊಡ್ಡಮ್ಮಾ, ವಿಷಯ ಏನು ಬಿಚ್ಚಿ ಹೇಳಬಾರದೇ ...ಯಾಕೆ ಹೀಗೆ ಮಾಡುತ್ತೀರಿ ?" ಎಂದಳು.

"ಯಾಕೆ ಹೇಳಬಾರದು ಮಗು ? ಆದರೆ ಇದು ಸಂತೋಷದ ಸುದ್ದಿಯಲ್ಲ ನೋಡು . ಹೇಳೋದಕ್ಕೆ ಹೇಗೇ ಸಾಧ್ಯ ? ಹೇಳೋಣ ಅಂದರೆ ಎದೆ ಉರಿಯುತ್ತೆ....ಅಯ್ಯೋ . ಅಂತೂನೂ ಆ ಹುಡುಗಿ ಹಣೆಯಲ್ಲಿ ಇಂಥಾ ಕಷ್ಟ ಬರೆದಿದ್ದನೇ ಬ್ರಹ್ಮ?"

"ಎಂಥಾ ಕಷ್ಟ ?"

"ಎಂಥಾ ಕಷ್ಟವೇ ಏನು ಒಂದು ತರಹೆ ಕಷ್ಟವೇ....ಒಂದು ಹಿಂಸೆಯಲ್ಲ, ನಾನಾ ಹಿಂಸೆ ...ನಾನಾ ಉಪದ್ರ.....ನಿನಗೆ ನಾನು ಯಾವುದು ಅಂತ ಹೇಳಲಿ ?"

"ಆಗಲಿ ...ಕೇಳೋಣಂತೆ, ಹೇಳಬಾರದೇ ?"

"ಬೇಡಮ್ಮಾ ಸ್ವಲ್ಪ ಇರು....ಯಾವುದೂ ಮುಚ್ಚಿಡುವುದಕ್ಕೆ ಸಾಧ್ಯವಿಲ್ಲ, ಎಲ್ಲರಿಗೂ ಗೊತ್ತಾಗುತ್ತೆ .ಎಲ್ಲರಿಗೂ ...ಕೆಲವರಿಗೆ, ಮೊದಲೇ....ಕೆಲವರಿಗೆ ಆಮೇಲೆ ನಿಮಗೆಲ್ಲರಿಗೂ ತಿಳಿಯುತ್ತೆ....ತಿಳಿಯದೆ ಇರೋದಿಲ್ಲ."

"ಹಾಗಾದರೆ ನೀವೇ ಹೇಳಿ ಮತ್ತೆ."

"ಇಲ್ಲ . ಇಲ್ಲಮ್ಮ...ನಾನು ಹೇಳೋದಿಲ್ಲ. ಮತ್ತೊಬ್ಬರ ವಿಚಾರದಲ್ಲಿ ತಲೆ ಹಾಕುವುದಿಲ್ಲ ಅಂತ ಮನಸ್ಸು ಮಾಡಿಬಿಟ್ಟಿದ್ದೀನಿ."

ಬಿಂದು ನಕ್ಕಳು.

"ನಾನೇನು ನಿಮಗೆ ಹೊರಗಿನವಳಲ್ಲವಲ್ಲಾ ದೊಡ್ಡಮ್ಮ...ನನಗೆ ಗೊತ್ತು .. ನನಗೆ ನೀವು ಹೇಳದೆ ಬಿಡುವುದಿಲ್ಲ."

"ಏನೇ ಬಿಂದೂ, ಗಂಗೆಯ ಮಧ್ಯದಲ್ಲಿ ನಿಂತುಕೊಂಡು ಸುಳ್ಳು ಹೇಳಲೇ ?"

"ಸುಳ್ಳು ಹೇಳು ಅಂದೆನೇ ದೊಡ್ಡಮ್ಮ....ನಿಜವಾದ ವಿಷಯವೇ ಹೇಳಿ . !"

"ಹಾಗಾದರೆ ಹೇಗೆ ಹೇಳಲಿ ಹೇಳು? ಇದೇ ಗಂಗಾಜಲದ ಮಧ್ಯೆ

ನಿಂತುಕೊಂಡು ಪರರ ವಿಚಾರ ಮಾತಾಡುವುದಿಲ್ಲ ಅಂತ ಪ್ರತಿಜ್ಞೆ ಮಾಡಿದ್ದೀನೆ....ಮತ್ತೇ ?"

ಹೀಗೆಂದು ಕಲಹಪ್ರಿಯಳಾದ ಕೃಷ್ಣಾ ರಾಕೂರಣಿಯು ಹೊರಟು ಹೋಗುತ್ತಲೂ ಎಲ್ಲರೂ ಪರಸ್ಪರ ಮುಖ ನೋಡಿಕೊಂಡರು. ಎಲ್ಲರಿಗೂ ಆಶ್ಚರ್ಯ! ರಾಕೂರಣಿಯು ಯಾವ ಮಾತನ್ನೂ ಇಷ್ಟರವಮಟ್ಟಿಗೆ ಗೋಪ್ಯವಾಗಿಡುವುದು ಅಂದರೆ ಏನು? ಸ್ನಾನ ಮುಗಿಸಿ ಎಲ್ಲರೂ ಅವರವರ ಮನೆಗಳಿಗೆ ಹಿಂದಿರುಗಿದರು.

ಬಿಂದುವು ಮನೆಗೆ ಬಂದು ಬಟ್ಟೆ ಬದಲಾಯಿಸಿ ತಾಯಿಯ ಹತ್ತಿರ ಹೋಗಿ ಕೂತಳು. ಆಕೆ "ಅಲ್ಲೇ, ಇಷ್ಟು ಹೊತ್ತು ನೀರಿನಲ್ಲಿದ್ದು ಬಿಟ್ಟೆ ಬಂದು ಮೈಗೇನಾದರೂ ಆದರೇನು ಗತಿಯೇ ?" ಎಂದಳು.

"ಗತಿಯೇನು, ಎರಡು ದಿನ ಅನುಭವಿಸುವುದು "

ತಾಯಿಯು ನಕ್ಕಳು "ಆ ಮಾತಿಗೇನು, ಸುಲಭವಾಗಿ ಆಡುತ್ತೀಯೆ."

"ಅಮ್ಮಾ, ಹಾರಾಣ್ ಮುಖೋಪಾಧ್ಯಾಯನ ಮನೆಯಲ್ಲಿ ಮತ್ತೇನು ಆಗಿದೆ?"

"ಮತ್ತೇನು ಆಗಬೇಕು ?"

"ಇವತ್ತು ಸ್ನಾನಘಟ್ಟದಲ್ಲಿ ಕೃಷ್ಣಾ ರಾಕೂರಣಿಯ ಬಾಯಿಂದ ಕೇಳಿದೆ. ಅವರ ಮನೆಯಲ್ಲಿ ಮತ್ತೇನೋ ಆಪತ್ತು ಬಂದಿದೆ ಎಂದು. ನಿನಗೇನೂ ಗೊತ್ತಿಲ್ಲವೇ ಹಾಗಾದರೆ ?"

"ಏನೂ ಇಲ್ಲ....ಏನು ಹೇಳಿದಳು ?"

"ಹೀಗೆ....ಶನಿಕಾಟ ಅವನನ್ನು ತಿಂತಾ ಇದೆಯಂತೆ....ದೇವರು ಶಿಕ್ಷೆ ಕೊಟ್ಟ ಅಂದರೆ ಹೀಗೇ ಕಾಲಲ್ಲಿ ಮೆಟ್ಟಿ ಮುಳುಗಿಸುವುದು—ಮತ್ತೆ ಆ ಪಾಪಿಗೋಸ್ಕರ ಯಾರೂ ಅಯ್ಯೋ ಅನ್ನಬೇಕಾಗಿಲ್ಲ . ಅವನ ಬಂಗಾರದಂಥ ಹೆಂಡತಿಗೆ ಅನ್ನಬೇಕು ಇಷ್ಟು ಹೇಳಿ ನಿಲ್ಲಿಸಿಬಿಟ್ಟಳು ಇನ್ನೊಬ್ಬರ ವಿಚಾರ ಬಾಯಲ್ಲಿ ಆಡಗೊಡಿಸುವುದಿಲ್ಲ ಅಂತ ಪ್ರತಿಜ್ಞೆ ಮಾಡಿದ್ದಾಳಂತೆ."

"ಹಾಗೇನು? ಮುದುಕಿಗೆ ಇಷ್ಟು ದಿನವಾದ ಮೇಲೆ ಜ್ಞಾನ ಬಂದ ಹಾಗಿದೆ."

"ಅಮ್ಮಾ, ಸತ್ಯವಾಗಿ ನಿನಗೆ ಏನೂ ಗೊತ್ತಿಲ್ಲವೇ ?"

"ಏನೂ ಗೊತ್ತಿಲ್ಲಮ್ಮ."

"ಹಾಗಾದರೆ ಇವತ್ತು ಮಧ್ಯಾಹ್ನ ನಾನು ಅವರ ಮನೆಗೆ ಹೋಗುತ್ತೇನೆ."

"ಯಾಕೆ?, ಏನು ಆವತ್ತಾಗಿದೆಯೋ ತಿಳಿದುಕೊಂಡು ಬರೋಣ ಅಂತಲೇ?"

"ಹೌದು, ಅದಕ್ಕೇ."

"ನಿನಗೇನು ಹುಚ್ಚುಗಿಚ್ಚು ಹಿಡಿಯಿತೇನೆ? ಆಕೆ ಯಾವ ಮಾತು ಬಾಯಲ್ಲಿ ಕೂಡ ಆಡಲಿಕ್ಕೆ ಹಿಂಜರಿದಳೋ ಆ ಮಾತನ್ನು ವಿಚಾರಿಸಿಕೊಂಡು ಬರುವುದಕ್ಕೇ ನೀನು ಹೋಗುವುದು?"

"ಆಕೆ ಅಂದರೆ ಯಾರು?"

"ಯಾರೇ..? ಅದೇ ಕೃಷ್ಣಾ ಠಾಕೂರಣಿ."

"ಕೃಷ್ಣಾ ಠಾಕೂರಣಿ ಯಾವ ಆದರ್ಶ ಅಂತ? ಆಕೆ ಬಾಯಲ್ಲಿ ಆಡವೇ ಇರುವ ಮಾತನ್ನು ನಾವು ಆಡಕೂಡದು?"

"ಹೌದು, ಇಂತಹ ವಿಷಯಗಳಲ್ಲಿ ಆಕೆಯದು ಒಂದು ತರಹ ಆದರ್ಶವಲ್ಲದೆ ಮತ್ತೇನು?"

"ಅದೇನಾದರೂ ಆಗಲಮ್ಮ, ನಾನು ಹೋಗ್ತೇನೆ."

"ಪರರ ಮಾತಿಗೆ ಹೋಗದೇ ಹೋದರ ಆಗುವುದಿಲ್ಲವೇ?"

"ಒಳ್ಳೆಯದಮ್ಮಾ, ಯಾರಾದರೂ ನೀರಲ್ಲಿ ಮುಳುಗುತ್ತಾ ಇದ್ದರೆ 'ಪರರಗೊಡವೆ ನಮಗ್ಯಾಕೆ?' ಅಂದುಬಿಟ್ಟು ಮೇಲಕ್ಕೆತ್ತದೆ ಸುಮ್ಮನಿದ್ದು ಬಿಡುತ್ತಾರೆಯೇ?"

"ಹಾಗಾದರೆ ಮುಳುಗುವವನನ್ನ ಎತ್ತುವುದಕ್ಕೆ ಹೋಗುತ್ತಾ ಇದ್ದೀಯೇನೇ ನೀನು?"

"ಮುಳುಗುತ್ತಾ ಇದಾರೆಯೋ ಇಲ್ಲವೋ, ತಿಳಿದುಕೊಂಡು ಬಂದ ಮೇಲೆ ತಾನೇ ಎತ್ತುವುದಕ್ಕೆ ಹೋಗುವದು!"

ಬಿಂದುವಿನ ತಾಯಿ ಸ್ವಲ್ಪ ಹೊತ್ತು ಸುಮ್ಮನಿದ್ದು "ಬಿಂದೂ, ನೀನ ಅವರ ಮನೆಗೆ ಹೋಗುವ ಪ್ರಮೇಯವಿಲ್ಲ. ಆ ಮನುಷ್ಯ ಕೆಟ್ಟವ. ಅಲ್ಲ ಅವನ ಕೂಡ ನಿಮ್ಮ ತಂದೆ ಜಗಳ ಕೂಡ ಆಡಿದ್ದಾರೆ. ಹೀಗಿರುವಾ

ನೀನು ಅವರ ಮನೆಗೆ ಹೋದರೆ ಚೆನ್ನವೇನು ಹೇಳು" ಎಂದಳು.

"ಹಾರಾಣ್ ಮುಖೋಪಾಧ್ಯಾಯ ಒಳ್ಳೆಯವನಲ್ಲ ಅದು ನನಗೂ ಗೊತ್ತು—ಆದರೆ ಅವನ ಹತ್ತಿರ ನನಗೇನು ಕೆಲಸ.. ಅವನ ಹೆಂಡತಿ ನನಗೆ ಹೊರಗಿನವಳಲ್ಲ. ಅವಳ ಹತ್ತಿರ ಹೋಗಿ ಕೇಳಿಕೊಂಡು ಬಂದರೆ ತಪ್ಪೇನು....? ನನಗೆ ಗೊತ್ತು ಅವಳಿಗೇನೋ ಆಪತ್ತು ಬಂದಿದೆ. ನಾವಿಬ್ಬರೂ ಒಂದೇ ಜತೆಯವರಾಗಿ ಆಡಿಕೊಂಡಿದ್ದವರು ಇಂತಹ ಸಮಯದಲ್ಲಿ ಕಣ್ಣುಮುಚ್ಚಿಕೊಂಡು ಸುಮ್ಮನಿದ್ದರೆ ನಮ್ಮ ಅತ್ತೆ ಮನೆಯಲ್ಲಿ ನನ್ನ ಗೌರವ ಏನಾಗುತ್ತೆ ಹೇಳು? ಯಾರಿಗೂ ಮುಖ ತೋರಿಸುವುದಕ್ಕಾಗುವುದಿಲ್ಲ."

"ಹೌದು ಕಣೆ, ಅಘೋರನಾಥ ನಿನಗೆ ಹೇಳಿಕಳುಹಿಸಿದ್ದಾನೆ, ಯಾರ ಮನೆಯಲ್ಲಿ ಏನಾಗಿದೆ, ಯಾರ ಮನೆಯಲ್ಲಿ ಏನಾಗಿಲ್ಲ ಹಾಗಂತ ತಿಳಿದುಕೊಂಡು ಬರದೆ ಹೋದರೆ ನಿನ್ನ ಮುಖ ನೋಡುವುದಿಲ್ಲ ಅಂತ, ಅಲ್ಲವೇ? ಮತ್ತೆ ನಾನು ಹೆತ್ತವಳು, ನಾನು ಹೇಳುವ ಮಾತಿಗೆ ಮಾತ್ರ ಗೌರವ ಕೊಡಕೂಡದು !"

"ಇಲ್ಲಮ್ಮ ನಾನು ಹೋಗುತ್ತೇನೆ, ನೀನು ಅಡ್ಡಿ ಮಾಡಬೇಡ."

"ಹೋಗಿ ಏನು ಕೇಳುತ್ತಿ? ಯಾರನ್ನ ಕೇಳುತ್ತಿ? ಹಾರಾಣ್ ಮುಖೋಪಾಧ್ಯಾಯನಿಗೆ ಏನಾಗಿದೆ ಅನ್ನುವುದು ಇಲ್ಲಿ ಯಾರಿಗೂ ಗೊತ್ತಿಲ್ಲ."

"ನಿನಗೆ ಹೇಗೆ ಗೊತ್ತಾಯಿತು ?"

"ನಿಮ್ಮ ತಂದೆ ಹೇಳಿದರು."

"ಹಾಗಾದರೆ ಏನಾಗಿದೆ ನೀನಾದರೂ ಹೇಳು "

"ನಂದೀಬಾಬುಗಳು ಕಳ್ಳತನ ಹೊರಿಸಿ ಅವನನ್ನ ಲಾಕಪ್ಪಿನಲ್ಲಿಡಿಸಿದ್ದಾರೆ."

"ಯಾರು ನಂದೀಬಾಬುಗಳು ?"

"ಯಾರೇ... ಬ್ರಾಹ್ಮಣ ಅಗ್ರಹಾರದ ಜಮೀನ್ದಾರರು....ಅವರ ಕಛೇರಿಯಲ್ಲಿಯೇ ಹಾರಾಣ್ ಮುಖೋಪಾಧ್ಯಾಯರು ನೌಕರಿ ಮಾಡುತ್ತಿದ್ದದ್ದು."

"ಎಷ್ಟು ರೂಪಾಯಿ ಕದ್ದಿರುವುದು?"

"ಸುಮಾರು ಇನ್ನೂರು ರೂಪಾಯಿ."

"ಯಾರೂ ಜಾಮೀನಾಗಿಲ್ಲವೇ?"

"ಮತ್ಯಾರು ಆಗುತ್ತಾರೆ ಹೇಳು? ಊರಲ್ಲಿ ನಿಮ್ಮ ತಂದೆ ಎಲ್ಲರಿಗೂ ಗೊತ್ತು, ಅವರು ಆದರೆ ಆಗಬಹುದಾಗಿತ್ತು. ಆದರೆ ಆ ಪಾಪಿ ಅವರ ಹತ್ತಿರವೂ ಶತ್ರುತ್ವ ಕಟ್ಟಿಕೊಂಡಿದ್ದಾನಲ್ಲ? ಒಂದು ಸಲ ಕೇಳಿಯೂ ಇದ್ದ, ಜಾಮೀನಾಗು ಅಂತ, ಆದರ ಇವರು ಒಪ್ಪಿಕೊಳ್ಳಲಿಲ್ಲ.

ಬಿಂದು ಸ್ವಲ್ಪಹೊತ್ತು ಮೌನವಾಗಿದ್ದು ಏನು ಯೋಚಿಸಿದಳೋ ಏನು ಕಥೆಯೋ, ಆಮೇಲೆ

"ಮಧ್ಯಾಹ್ನ ಒಂದು ಸಲ ಹೋಗಿ ಬರುತ್ತೇನೆ. ಬಂದಲಾಗಾಯಿತು ಸ್ನೇಹಿತಳನ್ನು ಒಂದು ಸಲವೂ ನೋಡಲಿಲ್ಲ" ಎಂದಳು.

ಅವಳ ತಾಯಿಗೆ ಆಶ್ಚರ್ಯವಾಯಿತು. ಕೋಪವೂ ಬಂತು. "ಇಷ್ಟು ಮಾತು ಕೇಳಿಯೂ ಹೋಗುತ್ತೀಯಾ ಹಾಗಾದರ?"

ಬಿಂದುವು ಸಹಜ ಸ್ವಾಭಾವಿಕ ಭಾವದಿಂದ ತಲೆದೂಗುತ್ತಾ 'ಹೂಂ' ಎಂದ ತಕ್ಷಣ ಅವಳ ತಾಯಿಯಿಂದ ಬೇರೆ ಮಾತು ಹೊರಡಲಿಲ್ಲ. ಬಿಂದುವೂ ಸ್ವಲ್ಪ ಸುಮ್ಮನಿದ್ದು "ನಾನು ಅವರ ಮನೆಗೆ ಒಂದು ಸಲ ಹೋಗಿ ಬಂದರ ಯಾರಿಗೂ ಯಾವ ಕ್ಷತಿಯೂ ಆಗುವುದಿಲ್ಲ ಬಿಡು. ಆದರೆ ನಾನಿಷ್ಟು ಹೇಳುತ್ತೇನಮ್ಮ. ಗಂಡಗಂಡಸರ ಜಗಳ ಮನೆಯ ಹೆಂಗಸರ ಮಧ್ಯೆಯೂ ಬರದೆ ಹೋದರೆ ಒಳ್ಳೆಯದು" ಎಂದಳು. ಹೊತ್ತಾಯಿತೆಂದು ಗೃಹಿಣಿಯು ಏಳುತ್ತಾ ಹೋಗುವಾಗ "ಅವರಿಗೆ ತಿಳಿದರೆ ತುಂಬಾ ಕೋಪ ಮಾಡಿಕೊಳ್ಳುತ್ತಾರೆ ಅಷ್ಟೆ" ಎಂದಳು.

"ನಾನು ಹೋದೆ ಅಂತ ತಿಳಿಸದೆ ಹೋದರೆ ಆಯಿತು..."

"ಹೇಗೋ ತಿಳಿದುಕೊಳ್ಳುತ್ತಾರೆ."

"ನೀನು ಹೇಳಿದರೆ ತಿಳಿದುಕೊಳ್ಳುತ್ತಾರೆ."

"ಆದರೆ, ಕೇಳಿದರೆ ತುಂಬಾ ರೇಗುತ್ತಾರೆಯೇ, ನನ್ನ ಮಾತು ಕೇಳು."

ಬಿಂದುವು ಅನ್ಯಮನಸ್ಕಳಾಗಿ "ತಂದೆ ತಾಯಿ ಮಗಳ ಮೇಲೆ ಕೋಪಗೊಂಡರೆ ಏನು, ಆ ಮೇಲೆ ಮರೆತು ಹೋಗುತ್ತಾರೆ. ಅದಕ್ಕೋಸ್ಕರ ನೀನೇನೂ ಯೋಚಿಸಬೇಡಮ್ಮಾ" ಎಂದಳು.

# ೧

ಆ ಗ್ರಾಮದ ಹೆಸರು ಹಲೂದ್‌ಪುರ. ಗ್ರಾಮ ಯಾವ ಜಿಲ್ಲೆಯಲ್ಲಿದೆ ಯೆಂದು ಹೇಳಿ ಯಾರಿಗೂ ಕ್ಲೇಶವುಂಟುಮಾಡಲಿಷ್ಟವಿಲ್ಲ—ಏಕೆಂದರೆ ಈ ಗ್ರಾಮಕ್ಕೆ ಯಾರೂ ಯಾವಾಗಲಾದರೂ ಹೋಗುವ ಪ್ರಮೇಯವಿರುವುದಿಲ್ಲ. ಅಲ್ಲಿ ಕೇಳತಕ್ಕಂತಹುದಾಗಲೀ ನೋಡತಕ್ಕಂತಹುದಾಗಲೀ ಏನೂ ಇಲ್ಲ. ಆದರೂ ಕುತೂಹಲ ಇನ್ನೂ ಇರುವವರು ಈ ಸ್ವಲ್ಪ ವಿವರಣೆಯಿಂದ ತೃಪ್ತಿಹೊಂದಬಹುದು.

ಈ ಗ್ರಾಮದಲ್ಲಿ ಹಿಂದೆ ಅನೇಕ ಶ್ರೀಮಂತರು ವಾಸವಾಗಿದ್ದರು ಎಂದು ಜನ ಹೇಳುವುದುಂಟು. ಇರಬಹುದು. ಏಕೆಂದರೆ ಇದೇ ಗಂಗಾ ನದಿಯ ತೀರದಲ್ಲಿ ಸ್ಥಾಪಿತವಾಗಿರುವ ಬಹುಕಾಲದ ಹಿಂದಿನ ಜೀರ್ಣ ಭಗ್ನ ಶಿವಮಂದಿರಗಳೊಂದೆರಡು ಬಿದಿರುಮೆಳೆಗಳ ಮಧ್ಯದಲ್ಲಿ ಮೌನವ್ರತ ಧಾರಿಗಳಾದ ಯೋಗಮೂರ್ತಿಗಳಂತೆ ಮುಚ್ಚಿಕೊಂಡಿರುವುದು ಕಾಣಬರು ವುದು. ಮೆಟ್ಟಲುಗಳು ಕುಸಿದುಹೋಗಿರುವ ನೀರಿಲ್ಲದ ಕೊಳ ಒಂದು ಕೂಡ ಇದೆ. ಅದರ ಮಧ್ಯೆ ಹುಲ್ಲು, ಕುರುಚಲು ಬೆಳೆದಿದೆ ಈಗ. ಶಿವ ಮಂದಿರಗಳ ಮತ್ತೊಂದು ಪಾರ್ಶ್ವದಲ್ಲಿ ಮುರಿದು ಬಿದ್ದಿರುವ ಗೋಡೆಗಳೂ, ಅವುಗಳ ಮಧ್ಯೆ ಕಿಟಕಿಗಳ ಕದವೋ ಏನೋ, ಕಾಣಬರುವ ದೊಡ್ಡ ದೊಡ್ಡ ರಂಧ್ರಗಳೂ....ಗೆದ್ದಲು ತಿಂದು ಅರ್ಧ ಮಣ್ಣಾಗಿ ಭೂಮಿಯಲ್ಲಿ ಹೂತು ಹೋಗಿರುವ ದೊಡ್ಡ ದೊಡ್ಡ ಮರದ ಬಾಗಿಲುಗಳೂ ಗತಕಾಲದ ಯಾವದೋ ನಶ್ವರ ವೈಭವವನ್ನು ಜ್ಞಾಪಕಕ್ಕೆ ತರುತ್ತವೆ.

ಇವನ್ನೆಲ್ಲಾ ನೋಡಿದರೆ ನಿಜವಾಗಿ ಗ್ರಾಮವು ಯಾವಾಗಲೂ ಈಗಿನ ಸ್ಥಿತಿಯಲ್ಲಿರಲಿಲ್ಲ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಆದದೇನು, ಈಗ .. ಹತ್ತಿಪ್ಪತ್ತು ಬ್ರಾಹ್ಮಣ ಕಾಯಸ್ಥರ ಮನೆಗಳು.... ಬಿಟ್ಟರೆ ಒಂದೈವತ್ತೋ ಅರವತ್ತೋ ರೈತಾಪಿ ಜನರ ಗುಡಿಸಲುಗಳು.... ಆಮೇಲೆ ಕಾಡು ...ಅದರ ಸುತ್ತ ಕಾಡು ...ಅದರ ಮಧ್ಯದಲ್ಲಿಯೂ ಜನತೆಯ ಸಂಪರ್ಕವಿದೆ ಎನ್ನುವ ಗುರುತಿಗೆ ಇಬ್ಬರು ಒಟ್ಟಿಗೆ ನಡೆಯಬಹುದಾದ ಒಂದು ಕಾಲು ಹಾದಿ.

ಈ ಗ್ರಾಮದಲ್ಲಿಯೇ ಶ್ರೀಮಾನ್ ಹಾರಾಣ್‌ಚಂದ್ರ ಮುಖೋಪಾಧ್ಯಾಯ ಮಹಾಶಯನ ಮನೆ. ಮೂರಂಕಣದ ಹಳೆಯ ಕಾಲದ ಹಸಿ ಇಟ್ಟಿಗೆಯಲ್ಲಿ ಕಟ್ಟಿದ ಕುಂಬಾರ ಹೆಂಚಿನ ಮನೆ. ಅದರಲ್ಲಿಯೇ ಮಹಡಿ. ಮೇಲೆ ಎರಡು ಚಿಕ್ಕ ಕೊರಡಿಗಳು, ಕೆಳಗಡೆ ಮೂರು ಕೊರಡಿಗಳು. ನಾಲ್ಕು ದಿಕ್ಕಿನಲ್ಲಿಯೂ ಬಿದಿರುಮೆಳೆ. ಹಿತ್ತಿಲಲ್ಲಿ ನಾಲ್ಕೈದು ಬಾಳೆಯ ಗಿಡ, ಎರಡು ಕಾಯಿಬಿಡದ ಮಾವಿನ ಮರ, ಒಂದು ಕರಿಬೇವಿನ ಗಿಡ—

ಇವಿಷ್ಟೇ ಮುಖೋಪಾಧ್ಯಾಯನ ಪಾರ್ಥಿವ ಸಂಪತ್ತು, ಐಶ್ವರ್ಯ.

ಹಲುದ್‌ಪುರಕ್ಕೆ ಒಂದೂವರೆ ಮೈಲಾಚೆ ಇರುವ ಅಗ್ರಹಾರದ ಜಮೀನ್‌ದಾರ್ ನಂದೀಬಾಬುಗಳ ಕಚೇರಿಯಲ್ಲಿ ಅವನು ಗುಮಾಸ್ತಗಿರಿ ಮಾಡುತ್ತಾನೆ ತಿಂಗಳಿಗೆ ಇಪ್ಪತ್ತು ರೂಪಾಯಿ ಸಂಬಳ ಸಿಗುತ್ತದೆ. ಸರಿಯಾಗಿ ಮಾಡಿದರೆ ಸ್ವಚ್ಛಂದವಾಗಿ ಸಂಸಾರ ಮಾಡಬಹುದು ಆದರೆ ಅವನಿಗೆ ಸಾಲದು. ಯಾವಾಗಲೂ ಬಡತನ, ಯಾವಾಗಲೂ ಅಭಾವವೇ.

ಮನೆಯಲ್ಲಿ ನಾಕಬೇಕಾದವರೂ ಅನೇಕ ಜನ. ಹೆಂಡತಿ, ಇಬ್ಬರು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು—ಒಬ್ಬಳು ವಿಧವೆಯಾದ ಅಕ್ಕ ... ಇನ್ನೇನು? ಸಾಧಾರಣ ಬಂಗಾಳಿ ಗೃಹಸ್ಥರ ಮನೆಯಲ್ಲಿ ಸಚರಾಚರ ವಸ್ತು ಯಾವುದು ಇರಬೇಕೋ ಎಲ್ಲವೂ ಇತ್ತು.

ಮೊದಲು ಮೊದಲು ತಿಂಗಳಾದ ತಕ್ಷಣ ಹೆಂಡತಿಯ ಕೈಯಲ್ಲಿ ಇಪ್ಪತ್ತು ರೂಪಾಯಿಗಳನ್ನಿಡುತ್ತಿದ್ದ. ಆಗ ಎಂದೂ ಈ ತರಹೆ ನಿತ್ಯಅಭಾವ ದಾರಿದ್ರ್ಯಗಳ ಸುಳಿವೇ ಇರಲಿಲ್ಲ. ಹೆಂಡತಿಯೂ ಅಕ್ಕನೂ ಸೇರಿ ಒಪ್ಪವಾಗಿ ಜಾಣತನದಿಂದ ಸಂಸಾರ ನಡೆಸಿಕೊಂಡು ಬರುತ್ತಿದ್ದರು. ಈಗ ಅವನು ಹಾಗೆ ಮಾಡುವುದಿಲ್ಲ ಮನೆಯಲ್ಲಿ ಪ್ರತಿಷ್ಠೆಯಾದ ದಾರಿದ್ರ್ಯ ದೇವತೆ ಬಿಟ್ಟು ಹೋಗುವ ಹಾಗೆಯೂ ಇಲ್ಲ. ಇವತ್ತು ಅಕ್ಕಿ ಇಲ್ಲ ನಾಳೆ ಬೇಳೆ ಇಲ್ಲ. ಇನ್ನೊಂದು ದಿನ ಸೌದೆಯೇ ಇಲ್ಲದೆ ಅಡಿಗೆ ಆಗುವ ಹಾಗೆಯೇ ಇಲ್ಲ.

ನಿತ್ಯವೂ 'ಅದಿಲ್ಲ' 'ಇದಿಲ್ಲ' ಎಂಬ ಮಾತುಗಳ ಸುರಿಮಳೆಗೆ ತುತ್ತಾಗಿ ಮುಖೋಪಾಧ್ಯಾಯನು ಸಲ್ಲದ ಯೋಚನೆಗಳಿಗೆ ಎಡೆಗೊಟ್ಟನು. ಸಂದರ್ಭ ಉಪಯೋಗಿಸಿಕೊಂಡು ಸರ್ಕಾರಕ್ಕೆ ಕಟ್ಟಬೇಕಾದ ದುಡ್ಡಿನಲ್ಲಿ ಸ್ವಲ್ಪ ಸ್ವಲ್ಪ ತನಗಾಗಿ ವ್ಯಯಮಾಡಲು ಶುರುಮಾಡಿದನು.

ನಂಬಿಕಸ್ಥನೆನ್ನಿಸಿಕೊಂಡಿದ್ದನಾದುದರಿಂದ ಮೊದಲು ಮೊದಲು ಯಾರೂ ಅನುಮಾನಪಡಲಿಲ್ಲ.... ಆದರೆ ಕ್ರಮೇಣ ಅದು ಬದಲಾಯಿಸಿತು. ಜಮೀ್ದಾರರೇ ಸಂದೇಹಪಡಲು ಶುರುಮಾಡಿದರು ಯಾವಾಗ ಸಂದೇಹವು ಗಾಢತರವಾಯಿತೋ ಆಗ ಒಂದು ದಿನ ಲೆಕ್ಕದ ಪುಸ್ತಕಗಳನ್ನೂ ಕಾಗದ ಪತ್ರಗಳನ್ನೂ ತನಿಖೆಮಾಡಿದರು . ಖಾತೆಯಲ್ಲಿ, ಜಮಾ ಖರ್ಚುಗಳಲ್ಲಿ ಅನೇಕ ತಪ್ಪುಗಳು ಕಂಡುಬಂದುವು. ಕಳ್ಳತನವೂ ಹೊರಬಿತ್ತು.

ಜಮೀನ್‌ದಾರರು ಹಾರಾಣ್ ಮುಖೋಪಾಧ್ಯಾಯನಿಗೆ ಹೇಳಿ ಕಳುಹಿಸಿದರು.

"ಎಷ್ಟು ದುಡ್ಡು ಕದ್ದಿದ್ದೀಯ ಹೇಳು ?"

"ಗೊತ್ತಿಲ್ಲ."

"ಗೊತ್ತಿಲ್ಲ! ಲೆಕ್ಕದ ಪುಸ್ತಕ ಕೂಗಿ ಹೇಳುತ್ತೆ—ಹತ್ತಿರ ಹತ್ತಿರ ಮೂರು ಸಾವಿರದ ಮೇಲೆ ಹೊಡೆದಿದ್ದೀಯ ಅಂತ....! ಏನು ಮಾಡಿದೆ ಅಷ್ಟು ದುಡ್ಡು ?"

"ಖರ್ಚು ಮಾಡಿದೆ."

"ಖರ್ಚು ಮಾಡಿದೆ ಸರಿ ..ಆದರೆ ಕಳ್ಳತನ ಯಾಕೆ ಮಾಡಿದೆ ?"

"ನೀವು ಕೊಡುವ ಇಪ್ಪತ್ತು ರೂಪಾಯಿಯಲ್ಲಿ ನನ್ನ ಸಂಸಾರ ನಡೆಯಲಿಲ್ಲ. ಕಳ್ಳತನ ಮಾಡಬೇಕಾಯಿತು."

ಜಮೀ್ದಾರರು ಅವನ ಮುಖವನ್ನು ದುರುಗುಟ್ಟಿಕೊಂಡು ನೋಡಿದರು. ಅವನು ತಲೆ ತಗ್ಗಿಸಿದನು.

"ಸಂಸಾರ ನಡೆಯಲಿಲ್ಲ! ಇಷ್ಟು ದಿವಸ ನಡೆದಿದ್ದೇನು . ಈಗ ನಡೆಯಲಿಲ್ಲ ಸಂಸಾರ!...ಅದು ಹೋಗಲಿ ...ನನಗೆ ಹೇಳುವುದಕ್ಕೇನಾಗಿತ್ತು, ಸಂಬಳ ಸಾಕಾಗಲಿಲ್ಲ ಅಂತ !"

"ಕೇಳಿದ್ದರೆ ಜಾಸ್ತಿ ಕೊಡುತ್ತಾ ಇದ್ದಿರೇನು ?"

"ಅದು ಬೇರೆ ಮಾತು... ಈಗ ಹೋಗಲಿ.... ಕದ್ದಿದ್ದ ದುಡ್ಡಿನಲ್ಲಿ ಅರ್ಧವಾದರೂ ವಾಪಸು ಮಾಡು...ನಿನ್ನ ಬಿಟ್ಟುಬಿಡುತ್ತೇನೆ."

"ಹೇಗೆ ಕೊಡಲಿ ನಾನು? ನನ್ನ ಹತ್ತಿರ ಏನೂ ಇಲ್ಲ !"

"ಭೂಮಿ ಕಾಣಿ ಇದ್ದರೆ ಮಾರಿ ಕೊಡು! ಏನೂ ಇಲ್ಲವಂತೆ!"

"ಇರುವ ಎರಡೆಕರೆ ಜಮೀನಿನಲ್ಲಿಯೇ ನನ್ನ ಗುಡಿಸಲಿದೆ. ಅದನ್ನು ಬೇಕಾದರೆ ಮಾರಿ ತಗೊಳ್ಳಿ."

"ಮಾರಿದರೆ ಹೆಂಡತಿ ಮಕ್ಕಳೆಲ್ಲಿರುತ್ತಾರೆ?"

"ಮರದ ಕೆಳಗೆ!"

ಜಮೀನ್‌ದಾರರು ಉತ್ತರ ಕೊಡದೆ ಮತ್ತೆ ಅವನ ಮುಖವನ್ನು ಬಿರುಸಾಗಿ ನೋಡಿದರು.

"ನಿನ್ನ ಕಣ್ಣೇಕೆ ಅಷ್ಟು ಕೆಂಪಗಿದೆ?"

"ನನಗೆ ಗೊತ್ತಿಲ್ಲ."

ಜಮೀನ್‌ದಾರರು ಚಾಕರನ ಜೊತೆಯಲ್ಲಿ ಹೊರಗೆ ಕರೆದುಕೊಂಡು ಹೋಗೆಂದು ಹೇಳಿ ಮತ್ತೊಬ್ಬ ಚಾಕರನನ್ನು ಕರೆದು "ಹಾರಾಣ್ ಮುಖೋಪಾಧ್ಯಾಯನ ಮನೆಯ ವಿಚಾರ ತಿಳಿದುಕೊಂಡು ಬರುವುದಕ್ಕಾಗುತ್ತದೆಯೇ?" ಎಂದರು.

"ಏನು ವಿಚಾರ ಸ್ವಾಮಿ?"

"ಏನು ಅಂದರೆ, ಹೀಗೇ ಅವನ ಮನೆಯಲ್ಲಿ ಎಷ್ಟು ಜನ... ಹೆಂಡತಿ .. ಮಕ್ಕಳು ..ಇನ್ಯಾರಾದರೂ ಬಂಧುಬಳಗ ಅವನ ಆಸ್ತಿಪಾಸ್ತಿ, ಮನೆಯ ಆದಾಯ ಖರ್ಚಿನ ರೀತಿ .ಅವರು ಬದುಕುವ ಮಟ್ಟ... ತರಹೆ... ಇವೆಲ್ಲಾ."

"ನನಗೆ ತಿಳಿದಿರುವ ಮಟ್ಟಿಗೆ ಮುಖೋಪಾಧ್ಯಾಯನ ಮನೆ ಅವಸ್ಥೆ ಚೆನ್ನಾಗಿಲ್ಲ...ಆಸ್ತಿಪಾಸ್ತಿಯೂ ಏನೂ ಇದ್ದ ಹಾಗೆ ಇಲ್ಲ...ಸಾಲ ಸೋಲಗಳು ಇವೆಯೋ ಎಷ್ಟಿವೆಯೋ ಅದು ಮಾತ್ರ ಗೊತ್ತಿಲ್ಲ."

"ಹೋಗಿ ತಿಳಿದುಕೊಂಡು ಬಾರಯ್ಯ ಅಂದೆ...ಎಲ್ಲಾ ತಿಳಿದುಕೊಂಡು ಬಂದು ಹೇಳಬೇಕು ನನಗೆ .ಈಗಲೇ."

ಎರಡು ದಿನಗಳಾದ ಮೇಲೆ ಅವನು ಬಂದು ಹೇಳಿದ. "ಸಂಸಾರ ಎಷ್ಟರಮಟ್ಟಿಗೆ ಕೆಡಬೇಕೋ ಮುಖೋಪಾಧ್ಯಾಯನ ಮನೆ ಅವಸ್ಥೆ ಅಷ್ಟು ಕೆಟ್ಟಿದೆ. ಮುಂಚೆ ನಾನು ಏನೇನು ಹೇಳಿದ್ದೆನೋ ಎಲ್ಲವೂ ನಿಜ."

ಜಮೀನ್‌ದಾರ್ ಭಗವಾನ್‌ಬಾಬುಗಳು ಮತ್ತೆ ಕೇಳಿದರು "ಇವನಿಗೇ

ನಾದರೂ ದುರಭ್ಯಾಸಗಳುಂಟೇ, ಕುಡಿತ ಗಿಡಿತ . . ಗಾಂಜಾ ಅಫೀಮು ?"

"ಆಹಾ ! ಗಾಂಜಾ ಸೇದುವ ಅಭ್ಯಾಸ ಇದೆ, ಎಲ್ಲರಿಗೂ ಗೊತ್ತು."

"ಅದಕ್ಕೇ ಅವನ ಕಣ್ಣುಗಳು ಅಷ್ಟು ಕೆಂಪಗಿದ್ದುವು! ಜೊತೆಯಲ್ಲೇ ನಾದರೂ ಜೇರೆ ಅಭ್ಯಾಸಗಳು ?"

ಚಾಕರನು ತಲೆ ತಗ್ಗಿಸಿ "ಇವೆ ಅಂತ ಕೇಳಿದ್ದೇನೆ" ಎಂದನು.

"ಹಾಗಿದ್ದರೆ ಒಂದು ಕೆಲಸ ಮಾಡು. ನಾಳೆ ಬೆಳಿಗ್ಗೆಯೇ ಪೋಲೀಸಿಗೆ ಕಂಪ್ಲೇಂಟು ಮಾಡಿ ಅವನ ಮೇಲೆ ಕಳ್ಳತನದ ಆಪಾದನೆ ಜಾರಿಮಾಡಿಸು. ಮೊದಲು ಆ ಕೆಲಸ ಮಾಡು ಆ ಮೇಲೆ ನೋಡೋಣಂತೆ."

ಇದರ ಫಲಿತಾಂಶವಾಗಿಯೇ ಹಾರಾಣ್ ಮುಖೋಪಾಧ್ಯಾಯ ಮಹಾಶಯ ಪೋಲೀಸರಿಂದ ದಸ್ತಗಿರಿಯಾಗಿ ಲಾಕಪ್ಪಿನಲ್ಲಿರಬೇಕಾಯಿತು. ಹತ್ತಿರವೇ ಇದ್ದರೂ ಹಲೂದ್‌ಪುರ ಗ್ರಾಮದಲ್ಲಿ ಯಾರಿಗೂ ಮೊದಲು ಗೊತ್ತಾಗಲಿಲ್ಲ. ಆದರೆ ಬಿಂದುವಾಸಿನಿಯ ತಂದೆ ಭಾವತಾರಣ ಗಂಗೂಲಿಗೆ ವಿಷಯ ಗೊತ್ತಾಯಿತು. ಹಣಕಾಸು ತಕ್ಕಮಟ್ಟಿಗೆ ಇರುವ ಗೌರವಸ್ಥ, ಹತ್ತು ಜನಕ್ಕೆ ಬೇಕಾದವ. ಮನಸ್ಸು ಮಾಡಿದ್ದರ ಹಾರಾಣನನ್ನು ಬಿಡಿಸ ಬಹುದಾಗಿತ್ತು .. ಆದರ ಏಕೋ ಬಿಡಿಸಲಿಲ್ಲ ... ಇನ್ನೊಂದು ಮಾತು ... ಜಗಳಗಂಟಿ ಕೃಷ್ಣಾ ಠಾಕೂರಣಿಯು ಈ ವಿಷಯ ಹೇಗೆ ತಿಳಿದುಕೊಂಡಳೋ ಅದು ಅವಳಿಗೇ ಗೊತ್ತು.

* * * *

ವೈಶಾಖದ ಮಧ್ಯಾಹ್ನ ಇದ್ದಕ್ಕಿದ್ದ ಹಾಗೆ ಮೋಡಗಳು ತುಂಬಿ ಕತ್ತಲಾಗುತ್ತಾ ಬಂದಿದೆ. ಅಂತಹ ಸಮಯದಲ್ಲಿ ಹಾರಾಣಬಾಬುಗಳ ಮನೆಯಲ್ಲಿ ಅಡಿಗೆ ಮನೆಯ ಹೊಸಲಿನಲ್ಲಿ ಅವನ ಹೆಂಡತಿ ಮತ್ತು ದೊಡ್ಡ ಮಗಳು ಲಲನಾ ಮಾತಾಡುತ್ತಾ ಕೂತಿದ್ದಾರೆ. ಇಬ್ಬರೂ ಒಣಮುಖದಿಂದಿದ್ದಾರೆ. ಇಂದು ಏಕಾದಶಿ. ಲಲನಾ ಬಾಲವಿಧವೆ. ಅವಳಂತೂ ಉಪ ವಾಸ. ಆದರ ಇಂದು ಅವಳ ತಾಯಿಯೂ ಕೂಡ ಒಂದಿಷ್ಟು ಆಹಾರ ಕೂಡ ತೆಗೆದುಕೊಂಡಿಲ್ಲ.

ಲಲನಾ "ಅಮ್ಮಾ, ಇವತ್ತು ಕೂಡ ಅಪ್ಪ ಬರುವ ಮಟ್ಟಿಗೆ ಕಾಣೆ. ಮೋಡ ಸೇರುತ್ತಾ ಬರುತ್ತಾ ಇದೆ. ಇನ್ನು ಮಳೆ ಬಂದರೆ ಅಡುಗೆ ಮನೆ

ಯಲ್ಲಿ ಕಾಲಿಡುವ ಹಾಗೆ ಇರೊಲ್ಲ. ನೀನು ಯಾಕಮ್ಮಾ ಈಗಲೇ ಸ್ವಲ್ಪ ಫಲಹಾರ ಮಾಡಬಾರದು ?" ಅಂದಳು.

ಅವಳ ತಾಯಿ "ಇನ್ನೂ ಸ್ವಲ್ಪ ಹೊತ್ತು ನೋಡುತ್ತೇನೆಯೇ. ಮೂರು ದಿನವಾಯಿತು ...ಇವತ್ತು ಬರುತ್ತಾರೆ" ಎಂದಳು.

"ಅಮ್ಮಾ, ಅಪ್ಪ ಯಾವತ್ತೂ ಹೀಗೆ ಮಾಡಲಿಲ್ಲ. ಮೂರು ದಿನ ವಾಯಿತು. ಇವತ್ತೂ ಬರದೇ ಹೋದರೆ ಏನುಗತಿ ?"

"ಏನು ಮಾಡೋಣ ಹೇಳು. ದೇವರು ಮಾಡಿಸಿದ್ದಾಗಲಿ."

ಏಕಾದಶಿಯ ದಿನ ಹಾರಾಣ ಮುಖೋಪಾಧ್ಯಾಯನ ಅಕ್ಕ, ವಿಧವೆ, ರಾಸಮಣಿಯು ಬಹಳ ಹೊತ್ತಾದ ಮೇಲೆ ಸ್ನಾನಕ್ಕೆ, ಪೂಜೆಗೆ ಆರಂಭ ಮಾಡುವಳು. ಇಂದು ನಿತ್ಯಕರ್ಮವನ್ನು ಮುಗಿಸಿಕೊಂಡು ರುದ್ರಾಕ್ಷಿ ಯನ್ನೆಣಿಸುತ್ತಾ ಹತ್ತಿರ ಬಂದು ಗಟ್ಟಿಯಾಗಿ ಕೂಗಿದಳು. "ಏನೇ ಇನ್ನೂ ಫಲಹಾರಮಾಡಲಿಲ್ಲವೇ ?"

ಅವಳ ಅತ್ತಿಗೆಯು ಉದಾಸೀನದಿಂದ "ಇನ್ನೂ ಸ್ವಲ್ಪಹೊತ್ತು ನೋಡಿ ಮಾಡುತ್ತೇನೆ" ಎಂದಳು.

"ಇನ್ನೂ ಸ್ವಲ್ಪಹೊತ್ತು ನೋಡುತೀಯಾ....ಏನು ಬುದ್ಧಿಗಿದ್ಧಿ ಇದೆಯೇ ನಿನಗೆ? ಅವನ ಮುಖಕ್ಕೆ ಬೆಂಕಿ ಇಟ್ಟರು . . ಇನ್ನೆಲ್ಲಿ ಬರುತಾನೆಯೇ ಅವನು, ನೋಡು ಬೇಕಾದರೆ ಗಾಂಜಾವೋ ಅಫೀಮೋ ಹೊಡೆದುಬಿಟ್ಟು ಯಾವ ಸೂಳೆ ಮನೆ ಬಾಗಿಲು ಕಾದುಕೊಂಡೋ ಬಿದ್ದಿರುತಾನೆ."

ಉಪವಾಸ ಮಾಡಿದಾಗ ರಾಸಮಣಿಯ ಮನಸ್ಸೂ ಸ್ವಭಾವವೂ ಕರ್ಕಶವಾಗುವುವು. ಯಾರೂ ಜವಾಬು ಕೊಡವೆ ಇದ್ದುದನ್ನು ಕಂಡು ಆಕೆಯ ಕೋಪ ಜಾಸ್ತಿಯಾಗಿ "ಮುಂಡ್ಯಾಳ...ನಾಚುಗೆಗೆಟ್ಟ ಭಂಡ... ಬುದ್ಧಿ ಬರುವುದು ಒಂದೇ ನಲವೇ ಇವನಿಗೆ" ಎಂದು ಕೂಗಿದಳು.

ಈನಲ ಲಲನಾಗೆ ನಹಿನಲಾಗಲಿಲ್ಲ. ಕಣ್ಣಲ್ಲಿ ನೀರು ತುಂಬಿ "ಅತ್ತೇ, ಏಕಾದಶಿ ದಿನ ಯಾಕೆ ಹಾಗೆ ಬಯ್ಯುತೀರಿ ಸುಮ್ಮನೆ ?" ಎಂದಳು.

"ಏಕಾದಶಿ ದಿನ ಯಾಕೆ ಬಯ್ಯುತೀರಿ ?"

ಮಾತು ರಾಸಮಣಿಯ ಹೃದಯದಂತರಾಳಕ್ಕೆ ಮುಟ್ಟಿತು. ವಿಪರೀತ ವ್ಯಥೆಯನ್ನನುಭವಿಸಿ ನಾಚಿಕೊಂಡಳು. ಆದರೂ ಈ ಸಣ್ಣ ಹುಡುಗಿ,

ಲಲನಾ, ತನಗೆ ಬುದ್ಧಿ ಹೇಳುವಂತಾಯಿತಲ್ಲ ಎಂದು ರೇಗಿದಳು.

"ನೀನು ನಿನ್ನೆ ಮೊನ್ನೆ ಹುಡುಗಿ, ಆಗಲೆ ಏಕಾದಶಿ ದ್ವಾದಶಿ ಬಹಳ ತಿಳಿದುಕೊಂಡು ಬಿಟ್ಟಿದ್ದಿ ಕಣೆ, ನುಮ್ಮಸಿರು ನಾಕು. ಮುದುಕಿಗೆ ಹೇಳಿ ಕೊಡುವುದಕ್ಕೆ ಬರುತಾಳೆ ಏಕಾದಶಿ ದ್ವಾದಶಿ! ..ನಿನಗೆ ಅಪ್ಪನಿರಬಹುದು, ನಿಜ. ನನಗೇನೂ ಆಗಬೇಡ' ನನಗೂ ಹೊಟ್ಟೆ ಉರಿಯೋದಿಲ್ಲ?".... ಹೇಳುತ್ತಾ ಹೇಳುತ್ತಾ ಅವಳ ಧ್ವನಿ ಗದ್ಗದವಾಯಿತು. ಕಂಠ ಹಿಡಿದು ಬಂತು. "ಹುಡುಗ ಮೂರು ದಿನದಿಂದ ಮನೆಗೆ ಬರಲಿಲ್ಲ. ಏನಾಯಿತೋ ಏನೋ ...ಹೊಟ್ಟೆಯಲ್ಲಿ ಎಂಥಾ ಸಂಕಟವಾಗುತ್ತೋ ಆ ಭಗವಂತನಿಗೇ ಗೊತ್ತು." ಕಣ್ಣಿಂದ ಒಂದು ತೊಟ್ಟು ನೀರು ಬಿತ್ತು. "ನಾನು ಮುದುಕಿ, ಏನೋ ಒಂದು ಮಾತು ಅಂದೆ, ನೀನು ಕಣ್ಣು ಕೆಂಪಗೆ ಮಾಡಿಕೊಂಡು ಹತ್ತು ಮಾತು ಆಡುತ್ತೀಯಲ್ಲಾ ? ನನಗ್ಯಾಕನ್ಮಾ, ಇನ್ನುಮೇಲೆ ನಿಮ್ಮ ಸುದ್ದಿ ಯಾವುದಕ್ಕಾದರೂ ಬಂದರೆ ಕೇಳು. ನಾನ್ಯಾರು ...? ಏನೋ ಉಪವಾಸ ಬಿದ್ದು ಹೀಗೆ ಒಣಗಿಕೊಂಡು ಬಿದ್ದಿದ್ದಾಳಲ್ಲಾ ನೊಸೆ ಅಂತ ನಾನಿಷ್ಟು ಮಾತಾಡಬೇಕಾಯಿತು. ಅದು ತಪ್ಪು."

ತಕ್ಷಣ ತಾಯಿಗೂ ಏನೋ ತೋಚಿ "ಇಷ್ಟು ದೊಡ್ಡವಳಾಗಿದೀಯ, ನಿನಗೆ ಇಷ್ಟು ಬುದ್ಧಿ ಇಲ್ಲವೇನೆ ಮಗೂ, ಯಾವ ಮಾತು ಆಡಬೇಕು ಯಾವ ಮಾತು ಆಡಬಾರದು ಅಂತ ಅನ್ನಿಸಬೇಡವೇ ." ಎಂದಳು.

ಸ್ವಲ್ಪ ಹೊತ್ತಾದ ಮೇಲೆ ಎಲ್ಲರ ಬಲವಂತದಿಂದ ಲಲನಾಳ ತಾಯಿ ಸ್ವಲ್ಪ ಫಲಹಾರ ಮಾಡಿದಳು. ಅಷ್ಟು ಹೊತ್ತಿಗೆ ಬಿಂದುವಾಸಿನಿ ತನ್ನ ಐದು ವರ್ಷದ ಮಗಳು, ಪ್ರಮೀಳಾನ್ನು ಕೈಹಿಡಿದುಕೊಂಡು ಹಾರಾಣ್ ಬಾಬುಗಳ ಮನೆಯನ್ನು ಪ್ರವೇಶಮಾಡಿದಳು.

ಎದುರಿಗೆ ರಾಸಮಣಿ ನಿಂತಿದ್ದಳು. ನೋಡಿದ ತಕ್ಷಣ ಆಕೆ "ಏನೇ ಬಿಂದೂ, ಈ ಕಡೆ ಬರುವುದು ಇಷ್ಟು ಅಪರೂಪವಾಗಿ ಬಿಟ್ಟೆ ?" ಎಂದಳು.

ಲಲನಾ ಅಪ್ರತಿಭಳಾಗುವ ಹೆಂಗಸಲ್ಲ. ಅವಳೂ ನಗುತ್ತಾ "ನೀವು ಮಾತ್ರ ಆಕಡೆ ಬರುತೀರೇನತ್ತೇ ?" ಎಂದಳು.

"ಹ್ಯಾಗೇ ಬರೋದು, ನೀನೇ ನೋಡುತ್ತಾ ಇದ್ದೀಯಲ್ಲಾ ? . ಸಣ್ಣ ಹುಡುಗನಿಗೆ ಕಾಯಿಲೆ ದೆಸೆಯಿಂದ ಹೊರಗಡೆ ಎಲ್ಲೂ ಕಾಲಿಡುವುದಕ್ಕೆ

ಸಾಧ್ಯವೇ ಇಲ್ಲ."

"ಯಾಕೆ ಏನಾಗಿದೆ?"

"ಛಳಿ ಜ್ವರ .. ಹೊಟ್ಟೆನೋವು, ಯಾವುದೂ ಬಾಕಿ ಇಲ್ಲ."

"ಅಕ್ಕ ಎಲ್ಲಿ?"

"ಅವಳು ಈಗ ತಾನೇ ಒಂದಿಷ್ಟು ಫಲಹಾರ ಮಾಡಿ ಹುಡುಗನ ಹಾಸುಗೆ ಹತ್ತಿರ ಕೂತಿದ್ದಾಳೆ."

"ಇಷ್ಟು ಹೊತ್ತು ಯಾಕೆ ಫಲಹಾರ?"

"ಇಕೋ ಈ ಹಾರಾಣಸಿಗೋಸ್ಕರ ಕಾದುಕೊಂಡು....ಅವನು ಮೂರು ದಿನವಾಯಿತು ಮನೆಯಿಂದ ಹೊರಟು. ಇನ್ನೂ ಬಂದಿಲ್ಲ. ಇನ್ನೂ ನೋಡು ತೀನಿ, ಇನ್ನೂ ನೋಡುತೀನ ಅಂತ ಕಾದುಕೊಂಡು ಉಪವಾಸ ಕೂತಿದ್ದಳು."

ಬಿಂದೂ ಆ ಸ್ಥಳ ಬಿಟ್ಟು ತನ್ನ ಸ್ನೇಹಿತಳನ್ನು ಹುಡುಕಿಕೊಂಡು ಒಳಗೆ ಹೋದಳು. ಅವಳು ಕಾಯಿಲೆ ಮಲಗಿದ್ದ ತನ್ನ ಕೊನೆಯ ಮಗ ಮಾಧವನ ಹಾಸುಗೆಯ ಪಕ್ಕದಲ್ಲಿ ಕೂತು ಅವನಿಗೆ ಕಥೆ ಹೇಳುತ್ತಾ ಸಮಾಧಾನಮಾಡುತ್ತಿದ್ದಳು. ಎಂಟು ವರ್ಷದ ಮಾಧವನು ಒಂದು ವರ್ಷದಿಂದ ಮಲೇರಿಯ ರೋಗದಿಂದ ನರಳುತ್ತಿದ್ದಾನೆ. ಪ್ಲೀಹ ವೃದ್ಧಿಯಾಗಿ ಸ್ವಲ್ಪವೂ ಗುಣಮುಖವಾಗದೆ ಸಂಕಟ ಪಡುತ್ತಿದ್ದಾನೆ. ಸರಿಯಾಗಿ ಔಷಧಿ ಕೊಡು ವವರಿದ್ದಿದ್ದರೆ ಅದು ಎಂದೋ ವಾಸಿಯಾಗಬಹುದಾಗಿತ್ತು. ಆದರೆ ಯಾವು ದಕ್ಕೂ ದುಡ್ಡು ಬೇಕಲ್ಲ? ಗ್ರಾಮದ ಡಾಕ್ಟರು ಕೊಡುವ ಕ್ವಿನೀನ್ ನೀರಿನಿಂದ ಪ್ಲೀಹ ವಾಸಿಯಾಗುತ್ತದೆಯೇ? ಹುಡುಗ, ಶಾಂತ ಸ್ನಿಗ್ಧ ಕಣ್ಣುಗಳಿಂದ ತಾಯನ್ನು ನೋಡಿ "ಅಮ್ಮಾ, ಅಪ್ಪ ಏಕೆ ಮೂರು ನಾಲ್ಕು ದಿನಗಳಿಂದ ನನ್ನನ್ನು ನೋಡುವುದಕ್ಕೆ ಬರಲಿಲ್ಲವಲ್ಲಾ?" ಎಂದನು.

"ಅವರು ಮನೆಯಲ್ಲಿಲ್ಲಪ್ಪ."

"ಎಲ್ಲಿಗೆ ಹೋಗಿದ್ದಾರಮ್ಮ?"

ತಾಯಿ ಸ್ವಲ್ಪ ಹಾಗೆ ಹೀಗೆ ಯೋಚಿಸಿ "ನಿನಗೆ ಔಷಧಿ ತರುವುದಕ್ಕೆ ಹೋಗಿದ್ದಾರಪ್ಪ" ಎಂದಳು.

ಹುಡುಗ ಹಸನ್ಮುಖನಾಗಿ "ಸಿಹಿ ಔಷಧಿ ತಗೊಂಡು ಬರುತಾರೆ ಅಲ್ಲವೇನಮ್ಮ? ಕಹಿ ಔಷಧಿ ನನಗೆ ಬೇಡ ಇನ್ನು. ಕುಡಿಯುವುದಕ್ಕೆ

ಆಗೋದಿಲ್ಲ. ಸಿಹಿ ಔಷಧಿ .ಕುಡಿದರೆ ವಾಸಿ ಆಗುತ್ತೆ....ಆ ಮೇಲೆ ನಾನು ಆಡುವುದಕ್ಕೆ ಹೋಗಬಹುದು..." ಎಂದು ಸ್ವಲ್ಪ ಸುಮ್ಮನಿದ್ದು "ಅಮ್ಮ, ನನಗೆ ವಾಸಿಯಾಗುತ್ತೇನಮ್ಮ?" ಎಂದನು.

ತಾಯಿಯ ಕಣ್ಣು ನೀರು ತುಂಬಿತು. ಮನಸ್ಸಿನಲ್ಲಿ ಅಂದುಕೊಂಡಳು. "ದೇವರ ಮನಸ್ಸಿನಲ್ಲಿ ಏನಿದೆಯೋ ಯಾರಿಗೆ ಗೊತ್ತು ?" ...ಏನೋ ಹೇಳ ಬೇಕೆಂದಿದ್ದಳು. ಅಷ್ಟರಲ್ಲಿ ಬಿಂದೂ ಪಕ್ಕದ ಕೋಣೆಯಿಂದ ಪ್ರವೇಶ ಮಾಡಿದ್ದನ್ನು ನೋಡಿ "ಯಾಕಪ್ಪ ವಾಸಿಯಾಗುವುದಿಲ್ಲ? ನಾನೇ ಹತ್ತಿರಿದ್ದುಕೊಂಡು ನಿನಗೆ ವಾಸಿಮಾಡ್ತೇನೆ ಸುಮ್ಮನಿರು" ಎಂದಳು.

ಬಿಂದೂ ಪ್ರವೇಶ ಮಾಡಿದ್ದನ್ನು ನೋಡಿ ತಾಯಿ ಮಗ ಇಬ್ಬರೂ ಚಮಕಿತರಾದರು.

ಬಿಂದು ಹಾಸುಗೆಯ ಹತ್ತಿರ ಬಂದು ಕೂತು "ಶುಭದಾ ಊಟ ವಾಯಿತೇ ?" ಎಂದಳು. ಹಾರಾಣನ ಹೆಂಡತಿ ಬಿಂದುವಿಗಿಂತಲೂ ವಯಸ್ಸಿನಲ್ಲಿ ದೊಡ್ಡವಳಾದರೂ ಚಿಕ್ಕಂದಿನ ಸಲುಗೆಯಿಂದ ಬಿಂದುವು ಅವಳನ್ನು ಹೆಸರು ಹಿಡಿದೇ ಕೂಗುತ್ತಿದ್ದಳು.

ಶುಭದಾ 'ಹೂಂ' ಎಂದಳು.

"ನಿನ್ನ ದೊಡ್ಡ ಮಗಳೆಲ್ಲಿ ?"

"ಬಹುಶಃ ಮೇಲಿನ ಕೋಣೆಯಲ್ಲಿರಬಹುದಮ್ಮ "

"ಹಾಗಿದ್ದರೆ ಸ್ವಲ್ಪ ಅವಳನ್ನ ಕರಿ ಮತ್ತೆ" ಎಂದುಬಿಟ್ಟು ತಾನೇ ಕೂಗಿದಳು. 'ಲಲನಾ, ಓ ಲಲನಾ ಆ. .!'

ಅವಳು ಅಲ್ಲಿಂದಲೇ ಕೂಗಿದಳು.

"ಯಾಕೇ ?"

"ಸ್ವಲ್ಪ ಕೆಳಗಿಳಿದು ಬಾಮ್ಮ..."

ಲಲನಾ ಬಂದ ತಕ್ಷಣ ಅವಳ ಕೈಯಲ್ಲಿ ಮಗಳನ್ನು ಕೊಟ್ಟು "ಸ್ವಲ್ಪ ಪ್ರಮೀಳೆಯನ್ನು ಎತ್ತಿಕೊಂಡು ಹೋಗಿ ತಮ್ಮನ ಹತ್ತಿರ ಕೂಡಿಸಿಕೋಮ್ಮ. ಬಹಳ ದಿನವಾಯಿತು. ನಿಮ್ಮ ಅಮ್ಮನ ಹತ್ತಿರ ಒಂದಿಷ್ಟು ಮಾತುಕಥೆ ಆಡಿಕೊಂಡು ಬರೋಣ" ಎಂದಳು.

ಲಲನಾ ಪ್ರಮೀಳೆಯನ್ನು ಎತ್ತಿಕೊಂಡು ಹೋಗುತ್ತಲೂ ಬಿಂದು

ಬಾಗಿಲ ಅಗುಳಿ ಹಾಕಿ ಶುಭದಾ ಬಳಿ ಬಂದು "ಏನಕ್ಕಾ, ಯಜಮಾನರು ಬರದೆ ಎಷ್ಟು ದಿನವಾಯಿತು ?" ಎಂದು ಕೇಳಿದಳು.

"ಮೂರು ದಿನ".

"ಏಕೆ ಬರಲಿಲ್ಲ ಗೊತ್ತೇ ನಿನಗೆ ?"

"ಇಲ್ಲ. ಏನೂ ಗೊತ್ತಿಲ್ಲ"

ಬಿಂದುವಾಸಿನಿಯ ಮಾತಿನ ಭಾವದಿಂದ ಶುಭದಾ ಮನಸ್ಸಿನಲ್ಲಿ ಭಯಹುಟ್ಟಿಕೊಂಡಿತು. ಏನೋ ಹೇಳಲು ಹೋದವಳು ಆಗದೆ ಸುಮ್ಮ ನಾದಳು. ಬಿಂದು ಸ್ವಲ್ಪ ಮೌನವಾಗಿದ್ದು ಏನೋ ಯೋಚನೆಮಾಡುತ್ತಾ ಕೂತಳು. ಶುಭದಾ ಕೂಡ ತುಟಿಪಿಟಕ್ಕೆನ್ನದೆ ವಿಧವಿಧವಾದ ಭಯ ಶಂಕೆಗಳಲ್ಲಿ ಮುಳುಗಿದ್ದಳು.

ಆ ಮೇಲೆ ಬಿಂದು ಬಹಳ ಪ್ರಯಾಸದಿಂದ "ನೋಡೇ ಅಕ್ಕ, ಎಷ್ಟೇ ಇಷ್ಟಪಟ್ಟರೂ, ಕೆಲವು ಸಮಾಚಾರಗಳನ್ನು ಹಿತವಾದ ಮಾತುಗಳಲ್ಲಿ ಹೇಳೋಣಂದರೆ ಆಗುವುದೇ ಇಲ್ಲ...ಅಲ್ಲವೇನೇ ?"

ಅದಕ್ಕೆ ಒಣ ಮುಖದ ಶುಭದಾ ಕೇಳಿದಳು.

"ಯಾಕೇ ?"

"ಯಜಮಾನರು ಮೂರು ದಿನದಿಂದಲೂ ಮನೆಗೇ ಬಂದಿಲ್ಲ. ಬೇರೆ ಏನಾದರೂ ಅಸಂಗತ ನಡೆದಿರಬಹುದು ಎಂದು ಅನ್ನಿಸುತ್ತೆಯೇ ನಿನಗೆ? ಹೀಗಂತಾಳೆ ಅನ್ನಬೇಡ !"

ಶುಭದಾ ಎದೆ ಹೊಡೆದುಕೊಂಡಿತು.

"ಅವರು............" ಮುಂದೆ ಹೇಳಲಾಗಲಿಲ್ಲ ಅವಳಿಗೆ.

"ಯಾಕೇ ಹಾಗೆ ನಡುಗುತ್ತಿ ಹುಚ್ಚಿ! ಅಂಥದೇನೂ ಆಗಿಲ್ಲ ಅವರಿಗೆ. ಸ್ವಸ್ಥವಾಗಿದಾರೆ, ಹೆದರಬೇಡ."

"ಸ್ವಸ್ಥವಾಗಿದಾರೆಯೇ ?"

"ಇಲ್ಲ ಅಂತ ಹೇಳಿದವರು ಯಾರು ?"

'ಸ್ವಸ್ಥವಾಗಿದಾರೆ' ಎಂದು ಕೇಳಿ ಅವಳ ನಡುಕ ನಿಂತರೂ ಶುಭದಾ ಬಾಯಿಂದ ಮಾತು ಮಾತ್ರ ಹೊರಡಲಿಲ್ಲ. ಕೆಲವು ನಿಮಿಷಗಳ ಮೌನದ ನಂತರ ಮ್ಲಾನ ಮುಖದಿಂದ ಮೆಲ್ಲನೆ ಕೇಳಿದಳು. ಹಾಗಾದರೆ ಏನಾಗಿದೆ

ಹೇಳಬಾರದೇ ?"

"ಅದೇ ಮಾತು ಹೇಳಲಿಕ್ಕೇ ಬಂದಿರುವುದು ನಾನು. ಆದರೆ ನೀನು ಈ ರೀತಿ ಆಡಿದರೆ ಹೇಗೆ ಹೇಳಲಿ ಹೇಳು ?"

ಶುಭದಾ ದೀರ್ಘ ನಿಶ್ವಾಸ ಬಿಟ್ಟು "ಇಲ್ಲ, ಹೇಳು....ಪರವಾಗಿಲ್ಲ, ಏನಾಗಿದೆ ಹೇಳು ನಿನ್ನ ದಮ್ಮಯ್ಯ !" ಎಂದು ಅಂಗಲಾಚಿದಳು.

"ಏನಿಲ್ಲ—ಕಳ್ಳತನ ಮಾಡಿದರು ಅಂದುಬಿಟ್ಟು ಆತನ್ನ ನಂದೀಬಾಬು ಲಾಕಪ್ಪಿನಲ್ಲಿಡಿಸಿದಾರೆ, ಅಷ್ಟೆ."

"ಲಾಕಪ್ಪಿನಲ್ಲಿಡಿಸಿದಾರೆ !" ಶುಭದಾ ಮುಖ ಮತ್ತೆ ರಕ್ತಹೀನವಾಯಿತು. "ಮತ್ತೆ ಗತಿಯೇನೇ ? ಏನು ಮಾಡುವುದೇ ಈಗ ?"

ಬಿಂದು ಸ್ವಾಭಾವಿಕ ಭಾವದಿಂದ—

"ಗತಿಯೇನು ! ಹೋಗಿ ಬಿಡಿಸಿಕೊಂಡು ಬರಬೇಕು ಅಷ್ಟೆ" ಅಂದಳು.

"ಹೇಗೇ ಸಾಧ್ಯ ಅದು ?"

"ಹೇಗೇ ಸಾಧ್ಯ ಅಂದರೆ ! ಇಲ್ಲ, ಲಾಕಪ್ಪಿನಿಂದ ಜೈಲಿಗೂ ಹೋಗಲೇನು ಪ್ರಾಣಿ ?"

ಅನೇಕ ಕ್ಷಣ ಸುಮ್ಮನಿದ್ದು ಶುಭದಾ ಕೇಳಿದಳು: "ಬಿಂದೂ, ಒಂದು ಸಲ ನಿಮ್ಮ ತಂದೆಯನ್ನು ಹೋಗಿ ಕಾಣಲೇ ?"

ಬಿಂದೂ ತಲೆಯಲ್ಲಾಡಿಸಿದಳು. ಅವಳಿಗೆ ಗೊತ್ತು. ಶುಭದಾ ಮುಖ ನೋಡಿದರೆ ಕಲ್ಲು ಕೂಡ ಕರಗೀತು, ಆದರೆ ಅವಳ ತಂದೆ ಕರಗುವುದಿಲ್ಲ.... ಎಂದು ಅದೇ ಭಾವವನ್ನು ಮುಖದಲ್ಲಿ ತೋರಿಸುತ್ತಾ "ಹೋದರೆ ಏನಾದೀತು?"

"ನಮಗೆ ಬೇರೆ ದಿಕ್ಕು ಯಾರು ಹೇಳು ? ಆತನೇ ಏನಾದರೂ ದಾರಿ ತೋರಿಸಿಕೊಡುತಾರೇನೋ ಅಂತ."

"ಯಾರಿಗೆ ಯಾರೂ ದಿಕ್ಕಿಲ್ಲವೋ ಅವರಿಗೆ ದೇವರೇ ದಿಕ್ಕು. ನಿನಗೆ ಭ್ರಾಂತು ಅಕ್ಕ. ಅಪ್ಪನ ಜೊತೆಯಲ್ಲಿ ನಿಮ್ಮ ಯಜಮಾನರು ಶತ್ರುತ್ವ ಕಟ್ಟಿಕೊಂಡಿದಾರೆ. ಇನ್ನು ಅಂತಹವರ ಹತ್ತಿರ ಹೋದರೆ ನಿನಗೆ ಏನಾದೀತು ಹೇಳು."

"ಹಾಗಿದ್ದರೆ ಉಪಾಯ ?"

"ಉಪಾಯ ನಾನು ಹೇಳಿಕೊಡುತ್ತೇನೆ. ಇಲ್ಲ, ಸುಮ್ಮ ಸುಮ್ಮನೆ

ಕೆಟ್ಟಸುದ್ದಿ ತಿಳಿಸಿ ತಮಾಷೆ ನೋಡಲಿಕ್ಕೆ ಬಂದಳು ಬಿಂದೂ ಅಂದು ಕೊಂಡೆಯಾ? ಆದರೆ ನೋಡಮ್ಮ, ನಾನು ಹೇಳುವ ಹಾಗೆ ಮಾತ್ರ ಮಾಡ ಬೇಕು—ಆಗುತ್ತೋ?"

"ಹೋ—ಆಗುತ್ತೆ. ಹೇಳು."

"ಎಷ್ಟು ಕಷ್ಟವಾದರೂ?"

ಶುಭದಾ ದೃಢಸ್ವರದಲ್ಲಿ ಹೂಂಗುಟ್ಟಿದಳು.

"ಹಾಗಾದರೆ ಕೇಳು. ಅಬ್ಬಬ್ಬ ಅಂದರೆ ಇನ್ನೂರು, ಇಲ್ಲ ಮುನ್ನೂರು ರೂಪಾಯಿವರೆಗೆ ಕದ್ದಿದ್ದಾರೆ" ಅಂದುಬಿಟ್ಟು "ಜಮೀನ್‌ದಾರರ ಫಿರ್ಯಾದು."

ಇನ್ನೂರು ಮುನ್ನೂರು ರೂಪಾಯಿ! ಶುಭದಾ ಬೆಚ್ಚಿದಳು. ಇಷ್ಟು ದುಡ್ಡು ಒಂದೇ ಸಲ ಹೇಗೆ ಕದ್ದರು ಇವರು? ಕದ್ದು ಏನು ತಾನೇ ಮಾಡಿದ್ದಾರು? "ಛೇ, ಬಿಂದೂ, ಇಷ್ಟು ದುಡ್ಡು ಅವರೆಂದಿಗೂ ಕದ್ದಿಲ್ಲ."

"ಕದ್ದೇ ಇಲ್ಲ ಅನ್ನೋಣಂತೆ. ಈಗ ಆ ಮಾತಿನಿಂದ ಪ್ರಯೋಜನ ವಿಲ್ಲ. ಅಷ್ಟು ದುಡ್ಡೂ ನಂದೀ ಬಾಬುಗಳ ಕೈಗೆ ಕೊಟ್ಟು ಸ್ವಲ್ಪ ಬೇಡಿ ಕೊಂಡರೆ ಅವರು ಬಿಟ್ಟುಬಿಟ್ಟರೂ ಬಿಟ್ಟಾರು."

"ಅಯ್ಯೋ ಅದು ಹೇಗೆ ಸಾಧ್ಯವೇ ಬಿಂದೂ? ಅಷ್ಟು ದುಡ್ಡು ನಾನೆಲ್ಲಿಂದ ತರಲೇ?"

"ಆ ವಿಷಯ ನನಗೆ ಬಿಡು. ನೋಡಕ್ಕಾ! ಈಗ ಸಂಕೋಚ, ಬಿಗುಮಾನಗಳಿಗೆ ಸಮಯ ಅಲ್ಲ. ನೀನು ಈ ಕ್ಷಣ ನನ್ನದೆರಡು ಕೈ ಬಳೆ ಗಳನ್ನು ತೆಗೆದುಕೊಂಡು ಈ ರಾತ್ರಿಯೇ ನಂದೀ ಭಗವಾನ್‌ಬಾಬುಗಳ ಹತ್ತಿರ ಹೋಗಿ ಕೇಳಿಕೋ. ನಿನ್ನದೃಷ್ಟ. ದೇವರು ಮಾಡಿಸಿದ್ದಾಗಲಿ."

ಶುಭದಾ ವಿಸ್ಮಿತಳಾಗಿ "ನಿನ್ನ ಕೈಬಳೆ!" ಎಂದಳು.

"ಹಾಂ—ಹೌದು. ನನ್ನದೇ, ಆದರೇನು? ಇದರ ಬೆಲೆಯೂ ಸುಮಾರು ಮುನ್ನೂರು ನಾನೂರಕ್ಕೇನು ಕಡಿಮೆಯಿಲ್ಲ. ಇವುಗಳನ್ನು ಮುಂದಿಟ್ಟು ಹೇಗೋ ಅಂಗಲಾಚಿಕೊಂಡರೆ ಕನಿಕರದಿಂದ ಬಿಟ್ಟರೂ ಬಿಡಬಹುದು."

"ಆದರೆ ಹೇಗೇ ಬಿಂದೂ....?"

"ಇನ್ನು 'ಆದರೆ' ಏನು ಬಂತೂ? ಮೊದಲು ಹೋಗಿ ಯಜಮಾನ ರನ್ನ ಬಿಡಿಸಿಕೊಂಡು ಬಾ. ಆಮೇಲೆ ನಿನ್ನ 'ಆದರೆ' ಆಗಲಿ ಕೇಳ್ತೋ.

ಣಂತೆ. ಈಗ ಬಿಂಕ, ಬಿಗುಮಾನಗಳಿಗೆ ಸಮಯವೇ, ಅಕ್ಕಾ....ನನ್ನ ದುಡ್ಡು ಸಾಲ ತೀರಿಸುವುದು ಹೇಗೇ....ಅಂತ ಯೋಚನೆಯೇ? ಅದಕ್ಕೇನು ಬಿಡು—ನಿನ್ನ ಮಗ ದೊಡ್ಡವನಾದಮೇಲೆ ತೀರಿಸಿಕೊಳ್ಳುತ್ತಾನೆ."

"ಇವತ್ತೇ ಹೋಗಲೇ ?"

"ಹಾಂ! ಇವತ್ತೇ— !"

"ಯಾರ ಸಂಗಡ ಹೋಗಲಿ ?"

"ಅಂತಹ ಯಾರಾದರೂ ನಂಬಿಕಸ್ಥರು ಇದ್ದಾರೋ ಜತೆಗೆ ಬರಲು ?"

"ಯಾರಿದ್ದಾರೆ ಹೇಳು ?"

"ಹಾಗಾದರೆ ಒಬ್ಬಳೇ ಹೋಗು, ಭಯವೇನು ಬಂತು. ಒಬ್ಬಳೇ ಹೋಗುವುದೇ ಒಳ್ಳೆಯದು. ಇಲ್ಲದೆ ಹೋದರೆ ಹತ್ತು ಜನಕ್ಕೆ ತಿಳಿದರೆ ಹತ್ತು ಮಾತು ಆಡುತ್ತಾರೆ.'

"ಹಾಗಾದರೆ ಇವತ್ತೇ ಹೋಗುತ್ತೇನೆ."

"ಇವತ್ತೇ ಹೋಗು, ಸಂಜೆಯಾದ ಮೇಲೆ ಮೈತುಂಬಾ ಯಾವುದಾದರೂ ಮೈಲಿಗೆ ಬಟ್ಟೆಯನ್ನು ಚೆನ್ನಾಗಿ ಹೊದ್ದುಕೊಂಡು ಮುಖಕ್ಕೆ ಮುಸುಗು ಹಾಕಿಕೊಂಡು ಹೋಗು. ನಾಳೆ ನಾನು ಇಷ್ಟು ಹೊತ್ತಿಗೆ ಮತ್ತೆ ಬರುತ್ತೇನೆ." ಎಂದಳು.

ಅವಳು ಹೊರಡುವ ಸಮಯ ಶುಭದಾ ಕಣ್ಣಲ್ಲಿ ನೀರು ತುಂಬಿ ಹರಿಯಿತು. ಬಿಂದುವು ವಾತ್ಸಲ್ಯದಿಂದ ಅವಳ ಕಣ್ಣೊರಸಿ "ದೇವರು ಮನಸ್ಸು ಮಾಡಿದರೆ ಎಲ್ಲವೂ ಸರಿಹೋಗುತ್ತೆ ಸುಮ್ಮನಿರು. ಒಂದು ವರ್ಷ ಆಗದಿದ್ದರೂ ಬೇರೆ ಉಪಾಯವೂ ಇದೆ. ನೀನೇನೂ ಗಾಬರಿಪಡಬೇಡ" ಎಂದಳು.

ಆ ಮೇಲೆ ಸೊಂಟಕ್ಕೆ ಕೈ ಹಾಕಿ ಐದು ರೂಪಾಯಿ ತೆಗೆದು ಶುಭದಾ ಕೈಯಲ್ಲಿಡುತ್ತಾ "ಅಕ್ಕಾ....ನಾನು ನಿನ್ನ ಒಡಹುಟ್ಟಿದ ತಂಗಿ—ನನ್ನ ಹತ್ತಿರ ನಾಚುಗೆ ಪಡಬೇಡ. ಏನೂ ಅಂದುಕೊಳ್ಳದೆ ಈ ರೂಪಾಯಿ ಹಿಡಿ. ಮಕ್ಕಳಿಗೇನಾದರೂ ಕೊಡುವಿಯಂತೆ" ಎಂದು ಬೇಗ ಕೆಳಗೆ ಬಂದು ಲಲನಾ ಕೈಯಿಂದ ಪ್ರಮೀಳಾವನ್ನು ತೆಗೆದುಕೊಂಡು "ಹೊತ್ತು ವಿಪರೀತವಾಗಿ ಹೋಯಿತು. ನಡಿಯಮ್ಮಾ ಮನೆಗೆ ಹೋಗೋಣಂತೆ" ಎಂದು ಸ್ನೇಹ ಪೂರಿತ ಕರುಣಾ ದೃಷ್ಟಿಯನ್ನು ಬೀರಿ ಬೇಗ ಬೇಗ ಮನೆಗೆ ಹೊರಟಳು.

೩

ಅಂದು ಮಧ್ಯಾಹ್ನ ಬಿರುಗಾಳಿಯ ಹೊಡೆತದಿಂದ ಛಿನ್ನಭಿನ್ನವಾಗಿ ಚದರಿಹೋಗಿದ್ದ ಮೇಘಗಳ ಸೈನ್ಯ ಮತ್ತೆ ಸಂಜೆಯಾಗುತ್ತಲೂ ಒಂದರ ಮೇಲೊಂದು ಭೀಷಣವಾದ್ಯ ಸಮೇತ ಬಂದು ಶೇಖರಿಸಿ ಆಕಾಶ ಪ್ರಾಂತ ವೆಲ್ಲವನ್ನೂ ಆಕ್ರಮಿಸಿಕೊಂಡಿತು. ಎಲ್ಲರ ಮನಸ್ಸಿನಲ್ಲೂ ದೃಢವಾಯಿತು. ಇಂದು ಖಂಡಿತ ದೊಡ್ಡ ಮಳೆಯಾಗುತ್ತೆ. ಬಿಡುವುದಿಲ್ಲ. ಸೆಕೆ ಕಡಿಮೆ ಯಾಗುತ್ತೆ ಉಸಿರಾಡಬಹುದು ಸದ್ಯ ಎಂತ.

ಈ ಮಳೆ ಎಲ್ಲರಿಗೂ ಮಂಗಳ. ಕೇವಲ ಶುಭದಾ ಮನಸ್ಸಿನಲ್ಲಿ ಅಂದುಕೊಂಡಳು. ನನ್ನ ಕೆಟ್ಟ ಹಣೆಯ ಬರೆಹ. ಇವತ್ತೇ ಈ ಸಮಯ ದಲ್ಲಿಯೇ ಈ ಮಳೆಯೇ ! ಸಮಸ್ತ ಹಲೂದ್‌ಪುರ ಪ್ರಾಂತದ ಸುತ್ತು ಮುತ್ತೂ, ಎಲ್ಲಾ ದಿಕ್ಕುಗಳ ಪ್ರವೇಶಗಳಲ್ಲೂ ಆಕಾಶವು ಕಪ್ಪನೆಯ ಮೇಘಗಳ ಮುಸುಕು ಹಾಕಿಕೊಂಡು ಹೆದರಿಸುತ್ತಿದೆ. ಈಗಲೋ ಆಗಲೋ ಪ್ರಳಯದ ಮಳೆ ಸುರಿಸಿಬಿಟ್ಟೇನು ಎನ್ನುತ್ತಿದೆ. ಅಂತಹ ಸಮಯದಲ್ಲೂ ವಿಧಿಯಿಲ್ಲದೆ ಶುಭದಾ ಬಿಂದುವಿನ ಕೈಬಳೆಗಳನ್ನು ಸೊಂಟದಲ್ಲಿ ಸಿಕ್ಕಿಸಿ ಕೊಂಡು ಹಾಸುಗೆಯ ದುಪ್ಪಟಿಯೊಂದರಿಂದ ಮೈತುಂಬಾ ಹೊದ್ದುಕೊಂಡು ಮನೆ ಬಿಟ್ಟು ಹೊರಟಳು. ಇದಕ್ಕೆ ಮುಂಚೆ ಆಕೆಯೆಂದೂ ಅಗ್ರಹಾರಕ್ಕೆ ಹೋಗಿರಲಿಲ್ಲ. ಪ್ರಮೇಯವೂ ಇರಲಿಲ್ಲ. ಇಷ್ಟುಮಾತ್ರ ಕೇಳಿದ್ದಳು. ಉತ್ತರ ದಿಕ್ಕಿನಲ್ಲಿ ಅರ್ಧ ಮೈಲು ದೂರ ಕಾಡುರಸ್ತೆಯಲ್ಲಿ ಹೊರಟರೆ ಸರ್ಕಾರದ ರಸ್ತೆ ಸಿಗುತ್ತದೆ. ಅದರಲ್ಲಿ ಸ್ವಲ್ಪ ದೂರ ನಡೆದರೆ ಅಗ್ರಹಾರ. ಅಲ್ಲಿ ಹೋದ ಮೇಲೆ ಜಮೀನ್‌ದಾರರ ಮನೆ ಗುರುತುಹಿಡಿಯುವುದು ಸುಲಭ. ಏಕೆಂದರೆ ನಂದಿ ವಂಶಸ್ಥರ ಅರಮನೆಯ ಪ್ರಕಾಂಡ ಸೌಧಗಳು ಗ್ರಾಮಪ್ರವೇಶಮಾಡುತ್ತಲೇ, ಕಂಡು ಬರುವುವೆಂದು ಕೇಳಿದ್ದಳು. ಆದರೆ ಹಲೂದ್‌ಪುರದ ಕತ್ತಲೆಯ ಕಾಡುರಸ್ತೆ ಬಿಟ್ಟು ರಾಜಬೀದಿಗೆ ಬರುವುದೇ ಒಂದು ಅಗಾಧವಾದ ವಿಪತ್ತಿನ ಕೆಲಸವಾಯಿತು. ಮೊದಲು ಮೊದಲು ಒಂದೆರಡು ತೊಟ್ಟು ಮಳೆ ನೀರು ಆರಂಭವಾಗಿ, ಇದ್ದಕ್ಕಿದ್ದ ಹಾಗೆ ಒಂದೇ

ಸಮನೆ ಸುರಿಯುವುದಕ್ಕೆ ಶುರುವಾಯಿತು.

ಆಗ ದೊಡ್ಡ ಮರವೊಂದರ ಕೆಳಗೆ ಆಶ್ರಯ ಪಡೆಯಬೇಕಾಯಿತು. ಮಳೆ ನಿಲ್ಲುವವರೆಗೂ ಹೊರಗೆ ಕಾಲಿಡುವ ಹಾಗಿಲ್ಲ. ಈ ಹೆಪ್ಪುಗಟ್ಟಿದ್ದ ಕತ್ತಲೆಯಲ್ಲಿ ಏನೂ ಕಂಡುಬರುವುದಿಲ್ಲ. ಈ ಪ್ರಚಂಡ ಮಳೆ, ಗುಡುಗು, ಮಿಂಚುಗಳ ಶಬ್ದದಿಂದ ಶುಭದಾ ಎದೆ ಧಸಕ್ಕೆಂದಿತು. ಸುತ್ತಮುತ್ತಲ ಅನೇಕ ಕಾಡು ಜಂತುಗಳು ಮಳೆಯಿಂದ ತಪ್ಪಿಸಿಕೊಳ್ಳಲು ಆ ದೊಡ್ಡ ಮರದಾಶ್ರಯಕ್ಕೆ ಒಂದೊಂದಾಗಿ ಬಂದು ಮನುಷ್ಯ ವ್ಯಕ್ತಿಯನ್ನು ನೋಡಿ ಭಯಂಕರ ಚೀತ್ಕಾರ ಮಾಡುತ್ತಾ ಪಲಾಯನ ಮಾಡಿದುವು. ಶುಭದಾಗೆ ಮತ್ತೊಂದು ಭಯ. ಕಳ್ಳ ಡಕಾಯಿತರಾರಾದರೂ ಈಗ ಇಲ್ಲಿಗೆ ಬಂದರೆ ಗತಿಯೇನು! ಅವಳಿಗೆ ಬೇರೇನೂ ಭಯವಿಲ್ಲ. ಆದರೆ ಬೇರೊಬ್ಬರ ಒಡವೆ ಹತ್ತಿರ ಇದೆ. ಅದಕ್ಕೆ ಭಯ. ಯಜಮಾನರ ಬಿಡುಗಡೆ ಮತ್ತು ತನ್ನ ಸ್ವಂತ ಭವಿಷ್ಯ, ನೆಮ್ಮದಿ ಎಲ್ಲವೂ ಈಗ ಈ ಬಳೆಗಳೆರಡರ ಆಧಾರದ ಮೇಲೆಯೇ,........ಆ ಯೋಚನೆ ಹೊಳೆದ ತಕ್ಷಣ "ಆದದ್ದಾಗಲಿ ದೇವರೇ" ಎಂದು ಆ ಮಳೆಯು ಹೊಡೆತ ಲೆಕ್ಕಿಸದೆ ಮರಬಿಟ್ಟು ಓಡಲು ಶುರುಮಾಡಿದಳು. ಒಂದು ಕ್ಷಣದಲ್ಲಿ ತಲೆಯಿಂದ ಕಾಲಿನವರೆಗೂ ಪೂರ್ತಿಯಾಗಿ ನೆನೆದಳು. ಮುಹೂರ್ತ ಮಾತ್ರ ಕೂಡ ಆ ಮಳೆಗೆ ವಿರಾಮವಿಲ್ಲ. ಆ ಗುಡುಗು ಮಿಂಚುಗಳ ಆರ್ಭಟಕ್ಕೆ ತಡೆಯಿಲ್ಲ. ಅಂತಹ ಭೀಕರ ಸನ್ನಿವೇಶದಲ್ಲಿ ಯಾವುದನ್ನೂ ಗಮನಿಸದೆ ಕಲ್ಲು, ಮುಳ್ಳು, ಹಳ್ಳ, ಕುಂಟೆ ಯಾವುದನ್ನೂ ಲೆಕ್ಕಿಸದೆ ಆ ಕತ್ತಲೆಯ ಕಾಡುರಸ್ತೆಯಲ್ಲಿ ಮನಸ್ಸಿಗೆ ಬಂದ ಯಾವುದೋ ದಿಕ್ಕಿನಲ್ಲಿ ಗಿಡ, ಪೊದೆಗಳ ಮಧ್ಯೆ ದಾರಿ ಬಿಡಿಸಿಕೊಂಡು ಮುಂದೆ ಮುಂದೆ ಹೋದಳು. ಸ್ವಲ್ಪ ದೂರ ಹೋಗುತ್ತಲೂ ದೊಡ್ಡ ರಸ್ತೆ ಕಾಣಿಸಿತು. ಸದ್ಯ ಬದುಕಿದೆ ಎಂದು ಬೇಗ ಬೇಗ ರಸ್ತೆ ತಲುಪಿದಳು. ಇದುವರೆಗೂ ಈ ಕಾಡು ಪಾರಾದೇನೇ ಎನ್ನುವ ಯೋಚನೆಯಿದ್ದದ್ದು ರಸ್ತೆಗೆ ಬರುತ್ತಲೂ ತಾನು ಹೊರಟಿರುವ ಕೆಲಸದ ಯೋಚನೆಗೆ ಎಡೆಗೊಟ್ಟಿತು. ಇಂತಹ ಸರು ಹೊತ್ತಿನಲ್ಲಿ ಯಾರನ್ನು ಹೋಗಿ ನೋಡುವುದು? ಯಾರನ್ನು ವಿಚಾರಿಸುವುದು? ನೋಡಿದ ಮೇಲೆ ವಿಷಯ ಹೇಗೆ ಹೇಳುವುದು? ಹೇಳಿದ ತಕ್ಷಣ ಕಾರ್ಯಸಿದ್ಧಿ ಆಗಿಬಿಡುತ್ತದೆಯೇ? ಸಿದ್ಧಿಯಾಗಲಿ, ಆಗದಿರಲಿ,

ಇಂತಹ ದುರ್ಯೋಗದಲ್ಲಿ, ಈ ಕಾಡು ದಾರಿಯಲ್ಲಿ, ಮತ್ತೆ ಈ ಮಳೆ, ಈ ಕಗ್ಗತ್ತಲಲ್ಲಿ ಮನೆಗೆ ಹಿಂದಿರುಗುವುದು ಹೇಗೆ? ಹೀಗೆ ಯೋಚಿಸುತ್ತಾ ಯೋಚಿಸುತ್ತಾ ಗ್ರಾಮವನ್ನು ಪ್ರವೇಶಮಾಡಿಬಿಟ್ಟಿದ್ದಳು. ಸ್ವಲ್ಪ ದೂರ ದಲ್ಲಿಯೇ ದೊಡ್ಡದೊಂದು ಮಹಡಿಯ ಮನೆಯ ಅಂತಸ್ತುಗಳು ಕಂಡು ಬಂದುವು. ಅದರ ಸುತ್ತಲೂ ಕಬ್ಬಿಣದ ಕಂಬಿಗಳಿಂದ ಬೇಲಿ ಹಾಕಿದ್ದ ದೊಡ್ಡ ತೋಟ. ಇದೇ ನಂದೀಯವರ ಮಹಲು. ಆದರೆ ಪ್ರವೇಶ ಮಾಡುವುದು ಹೇಗೆ? ಪ್ರವೇಶಮಾಡಿ ಜಮೀನ್ದಾರರ ಸಂಗಡ ಇಂತಹ ರಾತ್ರಿಯಲ್ಲಿ ಹೇಗೆ ಭೇಟಿ ಮಾಡುವುದು? ಶುಭದಾಗೆ ಅಳು ಬಂದಿತು. ಈಗೇನು ಗತಿ? ಮನೆಗೆ ವಾಪಸ್ಸು ಹೇಗೆ ಹೋಗಲಿ? ಅತ್ಯಂತ ಪರಿಶ್ರಮ ದಿಂದ, ಅನಾಹಾರದಿಂದ, ಅನೇಕ ದುರ್ಭಾವನೆಗಳಿಂದ ಮೃತಪ್ರಾಯಳಾಗಿ, ಅದೇ ನಂದೀ ವಂಶದವರ ಮಹಲಿನ ಸಮ್ಮುಖದಲ್ಲಿದ್ದ ಶಿವಮಂದಿರದ ಮಂಟಪದಡಿಯಲ್ಲಿ ಬಂದು ಬಿದ್ದು ಮಲಗಿಬಿಟ್ಟಳು. ಮಳೆಯಿನ್ನೂ ಹೊಡೆಯುತ್ತಲೇ ಇದೆ ...ಸ್ವಲ್ಪ ಸ್ವಲ್ಪವಾಗಿ ಕಡಿಮೆಯಾಗುತ್ತಾ ಬಂತು. ವೈಶಾಖದ ಮೇಘಗಳು ಹೇಗೆ ಇದ್ದಕ್ಕಿದ್ದ ಹಾಗೆ ಆಕಾಶವನ್ನು ಮುತ್ತು ವುವೋ ಹಾಗೆಯೇ ಇದ್ದಕ್ಕಿದ್ದ ಹಾಗೆ ಚದರಿಯೂ ಹೋಗುವುವು. ಹಾಗೆಯೇ ಈಗಲೂ ಒಂದು ಕ್ಷಣದಲ್ಲಿ ಮೇಘಗಳ ಸೈನ್ಯ ಪಲಾಯನವಾಗಿ ದೂರದ ದಿಗಂತದಲ್ಲಿ ಸೇರಿಹೋಯಿತು. ಶುಕ್ಲಪಕ್ಷದ ಚಂದ್ರನ ಶುಭ್ರವಾದ ಬೆಳಕು ಸುತ್ತ ಜಗತ್ತನ್ನು ಬೆಳಗಿತು. ಶುಭದಾ ಎಚ್ಚತ್ತು ಹಿಂದಿರುಗುವ ಯೋಚನೆ ಯನ್ನು ಮಾಡಿದಳು. ಒದ್ದೆ ಬಟ್ಟೆಗಳನ್ನು ಇದ್ದಂತೆಯೇ ಹಿಂಡುತ್ತಿರುವಾಗ ಆ ಕಡೆ ಬರುತ್ತಿದ್ದ ವೃದ್ಧನೊಬ್ಬನನ್ನು ನೋಡಿದಳು. ಕೈಯಲ್ಲಿ ಲಾಂದ್ರ ಹಿಡಿದಿದ್ದ ಭೃತ್ಯನೊಬ್ಬನನ್ನು ಹಿಂದಿಟ್ಟುಕೊಂಡು ಆತ ಜಮೀನ್ದಾರರ ಮನೆಯ ಹೆಬ್ಬಾಗಿಲಿನಿಂದ ಮಂದಿರದ ಕಡೆ ಬರುತ್ತಿದ್ದನು. ಈತನ ಬಳಿ ಏನಾದರೂ ಸಲಹೆ ಸಿಗಬಹುದೆಂಬ ಕ್ಷೀಣವಾದ ಆಸೆಯಿಂದ ಶುಭದಾ ಹೊರಗೆ ಹೋಗದೆ ಒಂದು ಪಾರ್ಶ್ವದಲ್ಲಿ ಆತನನ್ನು ನಿರೀಕ್ಷಿಸುತ್ತಾ ನಿಂತಳು.

ವೃದ್ಧನು ಮಂದಿರದ ಬಾಗಿಲಿಗೆ ಬಂದು ಮುಖಕ್ಕೆ ಮುಸುಗು ಹಾಕಿದ್ದ ಹೆಂಗುಸನ್ನು ನೋಡಿ ಏನೂ ಮಾತಾಡದೆ ಒಳಗೆ ಪ್ರವೇಶ ಮಾಡಿ ದನು. ಸ್ವಲ್ಪ ಹೊತ್ತಾದ ಮೇಲೆ ಹೊರಗೆ ಬಂದರೆ ಆ ಹೆಂಗುಸು ಇನ್ನೂ

ಅಲ್ಲಿಯೇ ನಿಂತಿದ್ದಾಳೆ. ಮುದುಕನು ಮುಸುಕನ್ನು ನೋಡಿ ಅಂದುಕೊಂಡಿದ್ದನು. ಯಾರೋ ಗೃಹಸ್ಥರ ಹೆಂಗಸು ಮಳೆಯ ಭಯಕ್ಕೆ ಇಲ್ಲಿ ಆಶ್ರಯ ಪಡೆದಿದ್ದಾಳೆಂದು. ಆದರ ಮಳೆ ನಿಂತಿದ್ದರೂ ಆಕೆ ಅಲ್ಲಿಯೇ ನಿಂತಿದ್ದುದನ್ನು ನೋಡಿ! ಕುತೂಹಲದಿಂದ "ನೀವು ಯಾರಮ್ಮಾ?" ಎಂದು ಕೇಳಿದನು.

ಹೆಂಗುಸೇನೂ ಉತ್ತರ ಕೊಡಲಿಲ್ಲ.

"ಎಲ್ಲಿಗೆ ಹೋಗಬೇಕಮ್ಮಾ?"

ಶುಭದಾಗೆ ಮಾತನಾಡಲು ನಾಚುಗೆಯಾಯಿತು. ಆದರೂ ಮೃದು ಸ್ವರದಲ್ಲಿ "ಜಮೀನ್‌ದಾರ ಬಾಬುಗಳ ಮನೆಗೆ" ಅಂದಳು.

"ಜಮೀನ್‌ದಾರರ ಮನೆ ಇದೇ ಎದುರುಗಡೆಯದೇ! ಅಲ್ಲಿಗೆ ಹೋಗದೆ ಇಲ್ಲಿ ನಿಂತಿದ್ದೀ ಯಾಕೆ?"

ಶುಭದಾ ಬಾಯಲ್ಲಿ ಉತ್ತರ ಬರಲಿಲ್ಲ. ವೃದ್ಧನು ಪುನಃ "ಜಮೀನ್‌ದಾರರ ಮನೆಯಲ್ಲಿ ಯಾರ ಬಳಿ ಹೋಗಬೇಕು?" ಎಂದು ಕೇಳಿದನು.

"ಬಾಬುಗಳನ್ನು ನೋಡಬೇಕು."

"ಯಾವ ಬಾಬುಗಳು?"

"ಭಗವಾನ್‌ಬಾಬುಗಳು."

ವೃದ್ಧನು ವಿಸ್ಮಿತನಾಗಿ "ಭಗವಾನ್‌ಬಾಬುಗಳೇ!" ಎಂದನು

"ಹೌದು."

"ಹಾಗಾದರೆ ನನ್ನ ಸಂಗಡ ಬಾ" ಎಂದು ಭೃತ್ಯನ ಕಡೆ ಇಂಗಿತ ಮಾಡಿ ಮುಂದೆ ಹೊರಟನು. ಶುಭದಾ ದೀವದ ಬೆಳಕಿನಲ್ಲಿ ವೃದ್ಧನ ಬಿಳಿಯ ಕೂದಲು, ಸೌಮ್ಯ ಮುಖಗಳನ್ನು ನೋಡಿ ನಿರ್ಭಯದಿಂದ ಹಿಂದೆ ಹೊರಟಳು. ಕ್ರಮವಾಗಿ ಹೆಬ್ಬಾಗಿಲನ್ನು ದಾಟಿ ತೋಟವನ್ನೂ ದಾಟಿ ಹತ್ತಿರ ಪಾರ್ಶ್ವದಲ್ಲಿದ್ದ ಕೋಣೆಯ ಬಾಗಿಲನ್ನು ತೆಗೆದು ವೃದ್ಧನು "ಈ ಮನೆಯೊಳಗೆ ಬಾಮ್ಮ" ಎಂದನು.

ಶುಭದಾ ಪ್ರವೇಶಮಾಡಿ ನೋಡಿದಳು. ಚಮತ್ಕಾರವಾಗಿ ಸುಸಜ್ಜಿತವಾದ ಕೋಣೆ. ದುಂಡುಮೇಜುಗಳ ಮೇಲೆ ಬೆಲೆ ಬಾಳುವ ಸುಂದರ ಪದಾರ್ಥಗಳು. ನೆಲದ ಮೇಲೆ ಅಮೌಲ್ಯವಾದ ರತ್ನಗಂಬಳಿ. ಮತ್ತು ಒಂದು ಪಾರ್ಶ್ವ ಸ್ವಲ್ಪ ಎತ್ತರದ ಜಗುಲಿ ರತ್ನಗಂಬಳಿಯಿಂದಾವೃತ

ವಾಗಿದೆ. ಗೋಡೆಗೆ ಮೆತ್ತನೆಯ ದಿಂಬುಗಳನ್ನು ಒರಗಿಸಿದೆ. ವೃದ್ಧನು ಹೋಗಿ ಜಗುಲಿಯ ಮೇಲೆ ಕೂತು ಶುಭದಾಳನ್ನು ಆಪಾದಮಸ್ತಕ ನೋಡಿದನು. ಆ ದೀಪದ ಬೆಳಕಿನಲ್ಲಿ ಆ ಮುಸುಕು ಹಾಕಿದ್ದ ಹೆಂಗಸನ್ನು ತೀಕ್ಷ್ಣವಾಗಿ ಗಮನಿಸಿದನು- ಶುಭದಾ ಯೌವನದಲ್ಲಿ ಸುಂದರಿಯಾಗಿದ್ದಳು. ವಯಸ್ಸಿನಿಂದ, ದುಃಖ ಕಷ್ಟಗಳಿಂದ ಹಿಂದಿನ ಆ ಜ್ಯೋತಿ ಈಗಿಲ್ಲ. ಆದರೂ ಕ್ಷೀಣಿಸುತ್ತಿದ್ದ ಕಾಂತಿಯ ಲಾವಣ್ಯ ಎಷ್ಟು ಉಳಿದಿತ್ತೋ ಅಷ್ಟನ್ನೇ ನೋಡಿ ಮುದುಕನು ಮುಗ್ಧನಾದನು. ಅನೇಕ ಮುಹೂರ್ತ ನೋಡುತ್ತಾ ನೋಡುತ್ತಾ ಅಂದನು "ಮಗಳೇ, ನೀನು ತಪ್ಪು ಮಾಡಿದೆ ಎಂದು ತೋರುತ್ತೆ. ಬಹುಶಃ ವಿನೋದಬಾಬುಗಳನ್ನು ನೋಡಲು ಬಂದಿರಬೇಕೇನೋ ನೀನು ?"

"ವಿನೋದ ಬಾಬು ಯಾರು ?"

"ವಿನೋದನು ಭಗವಾನ್ ಬಾಬುಗಳ ಕೊನೆಯ ತಮ್ಮ."

ಶುಭದಾ ತಲೆಯಲ್ಲಾಡಿಸಿ "ಇಲ್ಲ, ಅವರನ್ನು ನೋಡಬೇಕಾಗಿಲ್ಲ" ಎಂದಳು.

"ಹಾಗಾದರೆ ಭಗವಾನ್‌ಬಾಬುಗಳ ಹತ್ತಿರವೇ ನಿನಗೆ ಕೆಲಸವಿರುವುದು ?"

"ಹೌದು."

"ಭಗವಾನ್ ನಂದಿ ನನ್ನ ಹೆಸರೇ. ಆದರೆ ನಾನು ನಿನ್ನನ್ನೆಂದೂ ನೋಡಿದ ಹಾಗಿಲ್ಲ."

ಶುಭದಾ ತಲೆಯಲ್ಲಾಡಿಸಿ ಸುಮ್ಮನಿದ್ದಳು. "ಆದರೆ ನನ್ನ ಬಳಿ ನಿನಗೆ ಕೆಲಸವೇನಿದೆ ?"

ಶುಭದಾ ಮಾತಾಡಲಿಲ್ಲ. ಭಗವಾನ್‌ಬಾಬುಗಳು ಮತ್ತೆ ಹೇಳಿದರು "ನಾನು ಅಂದುಕೊಂಡಿದ್ದೆ. ರಾತ್ರಿಹೊತ್ತು ಪ್ರಾಯದ ಹೆಂಗಸರು ವಿನೋದನನ್ನು ಹುಡುಕಿಕೊಂಡು ಬರುತ್ತಾರೆ ಅಂತ. ಆದರೆ ಇಂತಹ ಸರು ಹೊತ್ತಿನಲ್ಲಿ ನಿನಗೆ ನನ್ನ ಬಳಿ ಅಂತಹ ಕೆಲಸವಿದೆಯೆಂದು ಊಹಿಸಲಸಾಧ್ಯ."

ಆಗಲೂ ಶುಭದಾಳ ಬಾಯಿಂದ ಮಾತು ಹೊರಡಲಿಲ್ಲ.

"ನಿನ್ನ ಮನೆ ಎಲ್ಲಿ ?"

"ಹಲೂದ್‌ಪುರ."

"ಹಲೂದ್‌ಪುರ! ಮತ್ತೆ ನನ್ನ ಬಳಿ ಕೆಲಸವಿದೆಯೇ? ನೀನು.... ನೀನು.... ಹಾರಾಣನ ಹೆಂಡತಿಯೇನಮ್ಮಾ?"

ಶುಭದಾ ಮುಸುಕಿನೊಳಗಿಂದಲೇ ತಲೆ ತಗ್ಗಿಸಿ "ಹೂಂ" ಎಂದಳು.

"ಹಾಗಾದರೆ ಹೇಳು ನನ್ನ ಬಳಿ ಕೆಲಸವೇನು?"

ಶುಭದಾ ಸೊಂಟದಿಂದ ಕೈಬಳೆಗಳನ್ನು ತೆಗೆದು ಮೆಲ್ಲಗೆ ಭಗವಾನ್‌ ಬಾಬುಗಳ ಹತ್ತಿರ ನೆಲದ ಮೇಲಿಡುತ್ತಾ ಗದ್ಗದ ಕಂಠದಿಂದ ಹೇಳಿದಳು.

"ಅವರನ್ನು ಬಿಟ್ಟುಬಿಡಿ, ದಯವಿಟ್ಟು."

ವೃದ್ಧನು ಎಲ್ಲವನ್ನೂ ಅರ್ಥಮಾಡಿಕೊಂಡನು. ಜೋಡಿ ಬಳೆಗಳನ್ನು ಕೈಯಲ್ಲಿ ತೆಗೆದುಕೊಂಡು ಚೆನ್ನಾಗಿ ಹಾಗೆ ಹೀಗೆ ತಿರುಗಿಸಿ ಪರೀಕ್ಷೆಮಾಡಿ ಸ್ವಲ್ಪ ನಗುತ್ತಾ "ಆದರೂ ಸಮಾಧಾನವೇ. ಇದನ್ನಾದರೂ ಮಾಡಿಸಿಟ್ಟಿದಾನಲ್ಲಾ ನಿನಗೆ" ಎಂದು, ಅವುಗಳನ್ನು ಪುನಃ ನೆಲದ ಮೇಲಿಟ್ಟು "ನೀನು ಇವುಗಳನ್ನು ವಾಪಸ್ಸು ತೆಗೆದುಕೊಂಡುಹೋಗು. ನಾನು ನಿನ್ನಂತಹ ಮುತ್ತೈದೆಯ ಕೈಬಳೆಯನ್ನು ತೆಗೆದುಕೊಂಡು ಏನು ಮಾಡಲಿ! ಬಿಡ ಬೇಕಾಗಿದ್ದರೆ ಹಾಗೆಯೇ ಬಿಟ್ಟು ಬಿಡೋಣಂತೆ. ನನ್ನಿಂದ ಅವನು ಎಷ್ಟು ಸುಲಿದಿದ್ದಾನೆಯೋ ಅದಕ್ಕೆ ಈ ಒಡವೆ ತೆಗೆದುಕೊಂಡು ಬಿಟ್ಟರೂ ಒಂದೇ ಏನೂ ಇಲ್ಲದೆ ಬಿಟ್ಟರೂ ಒಂದೇ" ಎಂದನು.

ಶುಭದಾ ಕಣ್ಣುಮುಚ್ಚಿ ಕೇಳಿದಳು. "ಹಾಗಿದ್ದರೆ ಅವರನ್ನು ಬಿಡುತ್ತೀರೆಯೇ?"

"ಬಿಡಲು ಇಷ್ಟವಿರಲಿಲ್ಲ. ಅವನಂತಹ ಪಾಪಿಗೆ ತಕ್ಕ ಶಿಕ್ಷೆ ಆಗಬೇಕಾಗಿತ್ತು. ಆದರೂ ನಿನ್ನ ಸಲುವಾಗಿ ಬಿಡುತ್ತೇನೆ."

ಶುಭದಾ ಕಣ್ಣಿಂದ ನೀರು ತೊಟ್ಟಿಕ್ಕಿತು. ಅವಳು ಬ್ರಾಹ್ಮಣ ಹೆಂಗುಸಾಗಿದ್ದರೂ, ಮುಸುಕು ತೆಗೆದು ಆಶೀರ್ವಾದ ಮಾಡೋಣವೆಂದರೆ, ನಂದೀಬಾಬು ಹುಡುಗನೇ, ತಲೆ ನರೆತಮುದುಕ. ಮನಸ್ಸಿನಲ್ಲಿ ಆತನಿಗೆ ಶುಭವಾಗಲೆಂದು ದೇವರನ್ನು ಕೋರಿದಳು. ಆಮೇಲೆ ಹೊರಡಲು ಅನುವಾಗಿ ಎದ್ದು ನಿಂತಳು.

ಭಗವಾನ್‌ಬಾಬು ಕೇಳಿದರು "ಈಗಲೇ ಮನೆಗೆ ಹೊರಡುವಿಯೇನು?"

ಶುಭದಾ ತಲೆತಗ್ಗಿಸಿ "ಈಗಲೇ, ಹೋಗುತ್ತೇನೆ."

"ನಿನ್ನ ಸಂಗಡ ಯಾರಾದರೂ ಬಂದಿದ್ದಾರೆಯೇ?"

"ಯಾರೂ ಇಲ್ಲ."

"ಯಾರೂ ಇಲ್ಲ! ಹಾಗಾದರೆ ಇಂತಹ ರಾತ್ರಿಯಲ್ಲಿ ಒಬ್ಬಳೇ ಹೇಗೆ ಹೋಗುತ್ತೀಯೆ? ಯಾರಾದರೂ ಆಳನ್ನು ಸಂಗಡ ಕರೆದುಕೊಂಡು ಹೋಗು."

ಶುಭದಾ ಸ್ವೀಕಾರ ಮಾಡದೆ ಒಬ್ಬಳೇ ಹೊರಟು ಮತ್ತೆ ಆ ಭೀಕರ ವನವನ್ನು ಪ್ರಯಾಸವಿಲ್ಲದೆ ತಟಹಾಯ್ದು ಮನೆಸೇರಿದಳು.

ಮನೆಯನ್ನು ಪ್ರವೇಶಮಾಡುವ ಹೊತ್ತಿಗೆ ಬೆಳಗಾಗಿತ್ತು. ಲಲನಾ ಬೇಗಲೇ ಎದ್ದು ಉಪಕರಣ ತೊಳೆಯುವ ಕೆಲಸದಲ್ಲಿ ತೊಡಗಿದ್ದಳು. ಒದ್ದೆ ಬಟ್ಟೆಯಲ್ಲಿ ಬಂದ ತಾಯಿಯನ್ನು ನೋಡಿ "ಏನಮ್ಮಾ, ಇಷ್ಟು ಬೆಳಗಿನ ಜಾವ ಸ್ನಾನ ಮಾಡಿ ಬಂದೆಯಾ?" ಎಂದಳು.

"ಹೌದು" ಎಂದು ಶುಭದಾ ಒಳಗೆ ಹೋದಳು.

೪

ರಾಮಮಣಿ, ದುರ್ಗಾಮಣಿ ಎಂಬ ಹೆಸರುಗಳನ್ನಿಡದೆ ಶುಭದಾ ತನ್ನ ಇಬ್ಬರು ಹೆಣ್ಣುಮಕ್ಕಳಿಗೆ ಲಲನಾ, ಛಲನಾ ಎಂದು ನಾಮಕರಣ ಮಾಡಿದಾಗ ಅವಳ ಅತ್ತಿಗೆ ರಾಸಮಣಿಗೆ ತಡೆಯಲಾಗದ ಕೋಪಬಂದಿತ್ತು.

ಪೇಟೆಯ ಕರ್ಕಶವಾದ ಶಬ್ದಗಳಂತೆ ಲಲನಾ, ಛಲನಾ ಎಂಬ ಶಬ್ದಗಳು ಮೂರು ಹೊತ್ತೂ ಅವಳ ಕಿವಿಯಲ್ಲಿ ಚಿಟ್ಟನ್ನಿಸುತ್ತಿದ್ದುವು. 'ಲಲನಾ' ಎನ್ನುವುದೇನೋ ಅಷ್ಟು ವಿಚಿತ್ರವಲ್ಲ. ಛಲನಾ ಎಂತಹ ಹೆಸರು ಹೇಳಿ! ಛಲನಾವನ್ನು ಹೆಚ್ಚಿಗೆ ನೋಡಲಿಷ್ಟವಿಲ್ಲದಿದ್ದುದೂ ಇದೇ ಕಾರಣಕ್ಕಾಗಿಯೇ! ಮಕ್ಕಳಿಗೆ ದೇವರ ಹೆಸರುಗಳನ್ನಿಡುವುದು ಏತಕ್ಕೆ? ಆ ನೆವದಿಂದಾದರೂ ಬಾಯಲ್ಲಿ ದೇವರನಾಮ ಹೇಳಿದ ಹಾಗಾಗಲೀ ಎಂದು ತಾನೇ? ಆದರೆ ಈ ಇಬ್ಬರು ಹುಡುಗಿಯರ ಹೆಸರನ್ನ ಬಾಯಲ್ಲಿ ಉಚ್ಚರಿಸುತ್ತಾ ಹೋದರೆ ಇರುವ ಪಾಪ ಹೋಗುವುದು ಹಾಗಿರಲಿ, ಹೊಸ ಪಾಪ ಶೇಖರಿಸಿದಂತೆ ಆಗುತ್ತದೆ.

ಲಲನಾಮಯಿ, ಛಲನಾಮಯಿ ಹಾರಾಣಚಂದ್ರನ ಇಬ್ಬರು ಹೆಣ್ಣುಮಕ್ಕಳು. ಲಲನಾ ಹಿರಿಯವಳು—ಹದಿನೇಳು ವರ್ಷದ ಯುವತಿ—ಆದರೆ ಬಾಲವಿಧವೆ.

ಛಲನಾ ಇನ್ನೂ ಹನ್ನೊಂದು ವರ್ಷದ ಆಡುವ ಹುಡುಗಿ.

ಲಲನಾ ಸ್ನಾನಮಾಡಲು ನದಿಗೆ ಹೋದರೆ ವಯಸ್ಕರು ಒಬ್ಬರಿಗೊಬ್ಬರು "ಆ ಹುಡುಗಿ ಎಷ್ಟು ಲಕ್ಷಣವಂತೆ ನೋಡಿರೇ!... ಅಲ್ಲ, ಹಣೆ ಬರಹ ನೋಡಿ!....ಹೀಗೆ ಈ ಎಳೆಯ ವಯಸ್ಸಿನಲ್ಲಿ ವಿಧವೆಯಾಗಿ ಮಾಡಿ ಕೂಡಿಸಿಡುವುದಕ್ಕೇ ಆ ದೇವರು ಇಂಥಾ ಚೆಲುವು ಕೊಟ್ಟನೆ?" ಎನ್ನುತ್ತಿದ್ದರು.

ಲಲನಾ ಕೇಳಿಯೂ ಕೇಳದವಳಂತೆ ಬೇರೆ ದಿಕ್ಕಿಗೆ ಮುಖ ತಿರುಗಿಸಿ ನೀರಲ್ಲಿ ಮುಳುಗಿ ಬರುತ್ತಿದ್ದಳು....ಅವಳಿಗೆ ಯಾರೊಡನೆಯೂ ಹೆಚ್ಚು ಮಾತಿಲ್ಲ. ಉಪಕರಣ ತೊಳೆದು, ಬಟ್ಟೆ ಒಗೆದು ಹಿಂಡಿ ಹಾಕಿ, ಬೇಗ ಒಂದೆರಡು ಮುಳುಗು ಹಾಕಿ ಮನೆಗೆ ಬಂದು ಬಿಡುವಳು. ಆದರೆ ಛಲನಾ

ಹರಟೆಮಲ್ಲಿ. ಎಂಟಕ್ಕೆ ಸ್ನಾನಕ್ಕೆ ಹೊರಟಳೆಂದರೆ ಮನೆಗೆ ಬರಬೇಕೆಂದರೆ ಹನ್ನೊಂದೇ ! ಸರಿಯಾದ ಸೀರೆ, ಕುಪ್ಪುಸ, ಒಡವೆ ವಸ್ತು ಇಲ್ಲದ್ದು ಅವಳಿಗೆ ಎಷ್ಟು ದುಃಖವೋ! ಘಟ್ಟದಲ್ಲಿ ಓರಗೆಯ ಹುಡುಗಿಯರನ್ನು ನೋಡುತ್ತಿದ್ದಳು. ಕರುಬುತ್ತಿದ್ದಳು. ಅಷ್ಟೇನೆ? ಹಾಳು ದಪ್ಪಕ್ಕಿ ಅನ್ನ ಅವಳಿಗೆ ಅಸಹ್ಯ, ಊಟಮಾಡುವಾಗ ಅದೆಷ್ಟು ಗೊಣಗಾಟವೋ, ಮುಖ ಅದೆಷ್ಟು ವಿಕೃತಿಯೋ!

"ಬರಿಯ ಸಾರು... ಬೇಳೆ ಸಾರು....! ಒಂದು ದಿನವಾದರೂ ಮೀನು ರುಚಿಗಾದರೂ ಮಾಡುವುದಿಲ್ಲ," ಎಂದು ತಟ್ಟೆ ಕುಕ್ಕುವಳು.

ರೂಪದಲ್ಲೇನೂ ಅವಳು ಕಡಿಮೆಯಿಲ್ಲ, ಕಾದ ಬಂಗಾರದ ಬಣ್ಣ. ಗುಲಾಬಿಯ ಹೂವಿನಂತೆ ಸುಂದರ ಮುಖ. ತಿದ್ದಿದಂತಹ ಹುಬ್ಬುಗಳು.

ವಿಳ್ಳೇದೆಲೆ ಹಾಕಿಕೊಂಡು, ಇರುವ ಕೆಂಪು ತುಟಿಗಳನ್ನು ಮತ್ತೂ ಕೆಂಪು ಮಾಡಿಕೊಂಡು ಕನ್ನಡಿ ನೋಡುತ್ತಾ ಕೂಡುವಳು ...ಇದ್ದಕ್ಕಿದ್ದ ಹಾಗೆ ಅನ್ನಿಸುವುದು ಇದಕ್ಕೆ ತಕ್ಕ ಹಾಗೆ ಮೈಗೆಲ್ಲಾ ಒಡವೆಗಳಿದ್ದಿದ್ದರೆ! . ಅಕ್ಕನ ಹತ್ತಿರ ಓಡಿ ಬಂದು "ಅಕ್ಕಾ....ನನ್ನ ಬಣ್ಣ ಈ ನಡುವೆ ಸ್ವಲ್ಪ ಕಪ್ಪಗಾಗುತ್ತಾ ಬಂದಿದೆ ಅಲ್ಲವೇ ?" ಎನ್ನುವಳು.

ಏನೋ ಕೆಲಸದಲ್ಲಿ ತೊಡಗಿದ್ದ ಅಕ್ಕ ನಗುತ್ತಾ "ನಿನಗೆ ಬೇರೆ ಕೆಲಸ ವೇನು ಹೇಳು, ...ನಿನಗೆ ಯಾರು ಹೇಳಿದರು ಕಪ್ಪಗಾಗಿದ್ದೀ ಅಂತ?" ಎಂದು ಕೇಳುವಳು.

"ಇಲ್ಲವೇ ಹಾಗಾದರೆ! ಅಕ್ಕ, ಯಾರ ಹತ್ತಿರಲಾದರೂ ಕೈತೋರಿ ಸಲೇ ?"

"ಇದೇನು ಬಂತೇ ನಿನಗೆ....ಕೈಯಾಕೆ ತೋರಿಸಬೇಕು ?"

"ಇಲ್ಲ ...ಯಾರಾದರೂ ನೋಡಿ ಹೇಳುತ್ತಾರೇನೋ....ಕೈಯಲ್ಲಿ ಏನು ಬರೆದಿದೆ ? ಇನ್ನು ಮುಂದೆ ದೊಡ್ಡವಳಾದ ಮೇಲಾದರೂ ಒಡವೆ, ಗಿಡವೆ ತೊಟ್ಟುಕೊಳ್ಳುತ್ತೇನೆಯೇ....! ಕೇಳೋಣ." ಕೇಳಿ ಲಲನಾಳ ಕಣ್ಣುಗಳಲ್ಲಿ ನೀರು ತುಂಬುವುದು. ಅವಳ ತಲೆ ತಡವುತ್ತಾ "ತೊಟ್ಟುಕೊಳ್ಳದೆ ಏನೇ.... ಅಗತ್ಯವಾಗಿ ತೊಟ್ಟುಕೊಳ್ಳುತ್ತಿ ...ನೀನು....ರಾಣಿ, ರಾಣಿಯ ಹಾಗೆ ಮೆರೆಯುತ್ತಿ, ಸುಮ್ಮನಿರು" ಎನ್ನುವಳು.

ಛಲನಾಗೆ ಎಷ್ಟೋ ಸಮಾಧಾನವಾಗಿ ನಾಚುಗೆಯಿಂದ ನಗುತ್ತಾ "ಹೋಗೇ . ಒಡವೆ ಸಿಗುತ್ತೆಯೇ ಅಂತ ಕೇಳಿದರೆ ..ರಾಣಿ ಆಗುತೇನೆಯೇ ಅಂತ ಕೇಳಿದವರು ಯಾರು ?" ಎಂದು ಕಪಟದ ಮುನಿಸು ತೋರಿಸುವಳು. ಆಮೇಲೆ "ಹಾಗಾದರೆ ನೀನೇನಾಗುತ್ತೀ, ಹೇಳು" ಎನ್ನುವಳು. ಎಂತಹ ಪ್ರಶ್ನೆ?

ಅವಳಿಗೆ ಗೊತ್ತಿಲ್ಲವೇ, ಅಕ್ಕ ವಿಧವೆ ಎಂತ? ಆದರೂ ಹುಡುಗತನದ ಮೌಢ್ಯತೆಯಿಂದ ಮಾತು ತನಗೆ ತಾನೇ ಬಂದುಬಿಟ್ಟಿದೆ. ಬಂದ ಮೇಲೆ ನಾಲಿಗೆ ಕಚ್ಚಿಕೊಂಡು ನಾಚಿ ತಲೆ ತಗ್ಗಿಸುವಳು. ಲಲನಾ ಅವಳ ಗಲ್ಲವನ್ನೆತ್ತಿ ಮೃದು ಹಾಸ್ಯದಿಂದ "ನಾನೂ ಸುಖವಾಗಿರುತ್ತೀನೆಯೇ, ತಂಗಿ, ನಾನೂ ಸುಖವಾಗಿರುತ್ತೇನೆ" ಎಂದು "ಅಕೋ, ಅಮ್ಮ ಯಾಕೋ ಕೂಗುತ್ತಾಳೆ" ಎಂದು ಹೊರಟು ಹೋಗುವಳು.

'ಅಮ್ಮಾ, ಯಾಕೆ ಕೂಗಿದೆಯಲ್ಲಾ ?"

"ಏನೂ ಇಲ್ಲ. ನಿಮ್ಮ ತಂದೆ ಬಂದಿದ್ದಾರೆ—ಆ ಕೋಣೆಯಲ್ಲಿ—" ಮಾತು ಪೂರ್ತಿಯಾಗುವ ಮುಂಚೆಯೇ ಲಲನಾ ಆ ಕಡೆ ಓಡುವಳು.

* * * *

ಅನ್ನ ಬಡಿಸುತ್ತಾ ಬಡಿಸುತ್ತಾ ರಾಸಮಣಿ ಕೇಳಿದಳು "ಇಷ್ಟು ದಿನ ಎಲ್ಲಿದ್ದೆಯೋ ?"

ತುತ್ತು ಬಾಯಿಗಿಡುತ್ತಾ ಹಾರಾಣಬಾಬುವು ಗಂಭೀರಭಾವದಿಂದ "ಅದೊಂದು ದೊಡ್ಡ ಕಥೆ, ಅಕ್ಕಾ !" ಎಂದನು.

ರಾಸಮಣಿ ವಿಸ್ಮಿತಳಾಗಿ "ಅದೆಂಥದೋ ದೊಡ್ಡ ಕಥೆ ಅಂದರೆ," ಎಂದಳು.

ಬಾಯಲ್ಲಿ ಅನ್ನ ಮೆಲ್ಲುತ್ತಲೇ ಹಾರಾಣನು ಅದೇ ಗಂಭೀರಬಾವದಿಂದ "ದೊಡ್ಡ ಕಥೆ ಏನೂ ಅಂದರೆ, ತಲೆಯ ಮೇಲೆ ಸಿಡಿಲು....ಸಿಡಿಲು.... ಬೀಳುವುದರಲ್ಲಿತ್ತು ಅಷ್ಟೇ !" ಎಂದನು.

ರಾಸಮಣಿ ವಿವರ್ಣಳಾಗಿ ಏನು ಏನನ್ನೋ ಊಹಿಸುತ್ತಾ "ಬಿಚ್ಚಿ ಹೇಳಬಾರದೇನೋ ಹಾರಾಣ—ಏನು ಹುಡುಗಾಟಿಕೆ ?" ಎಂದು ಕೂಗಿದಳು.

ಆಗ ಹಾರಾಣನು ಸ್ವಲ್ಪವಾಗಿ ನಗುತ್ತಾ "ಹುಣ್ಣಿಮೆ ಚಂದ್ರನ

ಕಳಂಕ ನೋಡಿದ್ದೀಯೋ ಇಲ್ಲವೋ ...ನಿನ್ನ ಹಾರಾಣಚಂದ್ರನಿಗೂ ಒಂದು ಬಗೆಯ ಕಳಂಕ ಬಂದಿತ್ತು. ಕಳ್ಳತನ ಮಾಡಿದೆ ಅಂದುಬಿಟ್ಟು ನನ್ನ ಲಾ—ಅಲ್ಲ, ನನ್ನ ಮೇಲೆ ಕೇಸು ಹಾಕಿದ್ದರು." ಎಂದನು.

"ಕೇಸು ಹಾಕಿದ್ದರೇ ?"

"ಹಾಂ, ಕೇಸು ಹಾಕಿದ್ದರು. ಆದರೇನು, ಸುಳ್ಳು ಎಷ್ಟು ಹೊತ್ತು ತಡೆಯುತ್ತೆ. ರುಜುವಾತು ಏನೂ ಇಲ್ಲದೆ ಹೇಗೆ ನಿಲ್ಲುತ್ತೆ ? ಇವತ್ತು ಮೊಕದ್ದಮೆ ಗೆದ್ದುಕೊಂಡು ವಾಪಸ್ಸು ಬಂದೆ ಅಂತೂನೂ." ಅಂಗಳದಲ್ಲಿ ನಿಂತಿದ್ದ ಶುಭದ ಈ ಮಾತುಕೇಳಿ ಕಣ್ಣು ಮುಚ್ಚಿದಳು. ಈ ಕಡೆ ರಾಸಮಣಿ ತಮ್ಮನಿಗೆ ಇಷ್ಟು ಅನ್ಯಾಯ ಮಾಡಿದ ನಂದಿಗಳ ಮೇಲೆ ಶಾಪದ ಮಳೆ ಸುರಿಸಿದಳು. ಆಮೇಲೆ—

"ಹಾಗಾದರೆ ಚಾಕರಿ! .ಚಾಕರಿಯಲ್ಲಿ ಮತ್ತೆ ತೆಗೆದುಕೋತಾರೆ ತಾನೇ ?" ಎಂದು ಕೇಳಿದಳು.

ಹಾರಾಣಬಾಬು ಕಣ್ಣು ಕೆಂಪಗೆ ಮಾಡಿಕೊಂಡು "ತೆಗೆದು ಕೊಂಡಾರು! ಹುಂ! ನಾನು ಇದ್ದರಲ್ಲವೇ? ಏನು ಅಷ್ಟು ಭಂಡ ಕೆಟ್ಟುಹೋದೆ ನೇನು? ಆ ಮುದುಕ ....ಮಗನ ಮುಖ ನೋಡುತೇನೆಯೇ ತಿರುಗಿ? ಇರಲಿ....ಸಮಯ ಬರದೆ ಇರೊಲ್ಲ ...ಇವತ್ತು ನನಗೆ ಮಾಡಿದ ಅವಮಾ ನಕ್ಕೆ ನಾನು ಬದಲು ತೆಗೆದುಕೊಳ್ಳದೆ ಹೋದರೆ ಹಾರಾಣಚಂದ್ರನಲ್ಲ" ಎಂದನು.

ರಾಸಮಣಿ ಸ್ವಲ್ಪ ಹೊತ್ತು ಭಯವಿಸ್ಮಿತ ನೇತ್ರಗಳಿಂದ ತನ್ನ ವೀರ ಸಹೋದರನನ್ನು ನೋಡುತ್ತಾ, ಮೆಲ್ಲ ಮೆಲ್ಲಗೆ "ಹಾ....ಗಾ....ದರೆ.... ಖರ್ಚಿನ ವ್ಯವಸ್ಥೆ . ?"—ಎನ್ನುವಳು.

"ಅದಕ್ಕೇನು ಯೋಚನೆ ಅಕ್ಕಾ? ಮಕ್ಕಳು ಮರಿ ಇರುವವನು, ನನಗೆ ಆ ಯೋಚನೆ ಇಲ್ಲವೇ? ನಾಳೆಯೇ ಬೇರೆ ಚಾಕರಿ ನೋಡುತ್ತೇನೆ."

ತಮ್ಮನ ಮಾತುಗಳಿಂದ ನಂಬಿಕೆಯಾಗಲಿಲ್ಲವೆಂದಲ್ಲ—ಆದರೂ ರಾಸಮಣಿಗೆ ಮನಸ್ಸಿನಲ್ಲಿ ಸ್ವಲ್ಪ ಯೋಚನೆಯೇನೋ ಹುಟ್ಟಿಕೊಂಡಿತು. ತಕ್ಷಣ ಆಸೆ ಭರವಸೆಗಳನ್ನೂ ಉತ್ತೇಜಿಸಿಕೊಳ್ಳುವಳು. "ಸಿಗದೆ ಇರು ತ್ತೆಯೆ ಗಟ್ಟಿಮುಟ್ಟಾಗಿರುವ ಗಂಡಸಿಗೆ? ಏನು ಓದಿಲ್ಲವೇ, ಬರೆಹ ಇಲ್ಲವೇ?

ಯಾಕೆ ಸಿಗೊಲ್ಲ ?" ಎಂದು ತನಗೆ ತಾನೇ ಧೈರ್ಯ ಹೇಳಿಕೊಳ್ಳುವಳು.

"ಏನೋಪ್ಪ, ನೋಡು, ಅಂತೂನೂ ಇಲ್ಲದೆ ಹೋದರೆ ಇಷ್ಟು ಮನೆ ತುಂಬಿದ ಸಂಸಾರ....ಕಥೆ ಹೇಗೆ ಕಳೆಯಬೇಕು ಹೇಳು....ನಿನಗೇನು ಗೊತ್ತಿಲ್ಲವೇ ?"

"ನೀನು ಸುಮ್ಮನಿರಕ್ಕ....ಅಷ್ಟು ಮಾತು ಯಾಕೆ?" ಎಂದು ಬೇಗ ಊಟಮುಗಿಸಿ ಹಾರಾಣನು ಕೈತೊಳೆದುಕೊಂಡು ಕಾಯಿಲೆ ಮಗನ ಹಾಸುಗೆ ಹತ್ತಿರ ಬಂದನು. ಮಾಧವನ ಕಿವಿಗೆ ಅಪ್ಪ ಬಂದಿದ್ದ ವಿಷಯ ಆಗಲೆ ತಿಳಿದಿತ್ತು. ಆತುರಾತುರವಾಗಿ, ಹಾಸುಗೆಯ ಮೇಲೆ ಮಲಗಿರಲಾರದೆ ಎದ್ದು ನಿರೀಕ್ಷಿಸುತ್ತಾ ಕೂತಿದ್ದನು. ಅಪ್ಪ ಹತ್ತಿರ ಬಂದು ಮೈಮೇಲೆ ಕೈಯಾಡಿಸುತ್ತಾ "ಹೇಗಿದ್ದೀಯೋ, ಮಾಧವ ?" ಎಂದನು.

"ಇವತ್ತು ಎಷ್ಟೋ ವಾಸಿಯಪ್ಪಾ, ನೀನು ಯಾಕೆ ಇಷ್ಟು ದಿನ ಬರಲಿಲ್ಲ ?"

ಹಾರಾಣನು ಏನು ಹೇಳಬೇಕೆಂದು ಯೋಚಿಸುತ್ತಿರುವಷ್ಟರಲ್ಲಿ ಉತ್ತರ ನಿರೀಕ್ಷಿಸದೆ ಮಾಧವನೇ "ನನಗೆ ಔಷಧಿ ತರುವುದಕ್ಕೆ ಹೋಗಿದ್ದೆಯಲ್ಲಾ, ತಂದೆಯಾ ?" ಎಂದನು.

ಒಣಮುಖದಿಂದ ತಂದೆ ಹೇಳಿದನು, "ಹೂ, ತಂದಿದೀನಿ."

"ಒಳ್ಳೇ ಔಷಧಿಯೇ? ಕುಡಿದರ ವಾಸಿಯಾಗುತ್ತವೆಯೇ ?" ಹುಡುಗ ನಗುಮುಖನಾಗಿ ಕೈಚಾಚಿ "ಹಾಗಾದರೆ ಕೊಡು ಮತ್ತೆ" ಎಂದನು.

ಹಾರಾಣಚಂದ್ರನು ಸಂದಿಗ್ಧದಲ್ಲಿ ಬಿದ್ದನು. ಸ್ವಲ್ಪ ಯೋಚಿಸಿ "ಈಗ ಬೇಡ, ರಾತ್ರಿ ಕುಡಿಯುವಿಯಂತೆ" ಎಂದನು. ಹುಡುಗನಿಗೆ ಅದೂ ಸಮಾಧಾನವೇ. "ಹಾಗೇ ಆಗಲಿ, ರಾತ್ರಿ ಕುಡಿಯುತ್ತೀನೆ" ಎಂದನು. ಸ್ವಲ್ಪ ಹೊತ್ತು ಅಪ್ಪನ ಮುಖ ನೋಡುತ್ತಾ ಇದ್ದು "ಅಪ್ಪಾ, ನನಗೊಂದು ದಾಳಿಂಬೆಹಣ್ಣು ತಗೊಂಡು ಬಾಪ್ಪ, ತರುತೀಯಾ ?" ಎಂದನು.

ಹಾರಾಣನು ಸುಲಭವಾಗಿ ತಲೆಯಲ್ಲಾಡಿಸಿ "ಹೋ, ಆಗಲಿ" ಎಂದನು.

ಅಷ್ಟುಹೊತ್ತಿಗೆ ಶುಭದಾ ಅಲ್ಲಿಗೆ ಬಂದಳು. ಅವಳನ್ನು ಹತ್ತಿರ ಕರೆದು ಹಾರಾಣಚಂದ್ರನು "ನನಗೊಂದೆರಡು ಆಣೆ ಚಿಲ್ಲರೆ ಇದ್ದರೆ ಕೊಡು.

ತೀಯಾ ?" ಎಂದನು.

"ಯಾಕೆ ?"

"ಬೇಕಾಗಿದೆ, ಯಾರ ಹತ್ತಿರವೋ ತೆಗೆದುಕೊಂಡಿದ್ದೆ. ಅವನಿಗೆ ಕೊಡಬೇಕಾಗಿದೆ."

ಶುಭದಾ ಪೆಟ್ಟಿಗೆ ತೆಗೆದು ನಾಲ್ಕಾಣೆ ತೆಗೆದುಕೊಟ್ಟಳು. ಹಾರಾಣ ಚಂದ್ರನು ಬಾಗಿ ನೋಡಿದನು. ಪೆಟ್ಟಿಗೆಯಲ್ಲಿ ಇನ್ನೂ ಎಷ್ಟೋ ಚಿಲ್ಲರೆ ಇದ್ದದ್ದು ಕಂಡು ಬಂತು. ಕೈ ಹಾಕಿ ಇನ್ನೂ ಎರಡಾಣೆ ತೆಗೆದುಕೊಂಡು "ಇದ್ದರೆ ಇನ್ನೂ ನಾಲ್ಕೈದಾಣೆ ಕೊಡೆ .ಮಾಧವನಿಗೆ ಏನಾದರೂ ಹಣ್ಣು ತರೋಣವಂತೆ" ಎಂದನು.

ಶುಭದಾ ಕಾತರದಿಂದ ಗಂಡನ ಮುಖವನ್ನು ನೋಡಿದಳು. ಇಷ್ಟು ಚಿಲ್ಲರೆ ಒಟ್ಟಿಗೇ ಗಂಡನಿಗೆ ಕೊಡುವುದಕ್ಕೆ ಅವಳಿಗೆ ಕ್ಲೇಶವಾದಂತೆ ತೋರಿತು. ಆದರೂ ಮನಸ್ಸು ಮಾಡಿ ಇದ್ದ ಚಿಲ್ಲರೆಯನ್ನೆಲ್ಲಾ ಗಂಡನ ಕೈಯಲ್ಲಿ ಹಾಕಿದಳು.

ದುಡ್ಡನ್ನು ಎಣಿಸಿ ಕೈಯಲ್ಲಿಟ್ಟುಕೊಂಡು ಹಾರಾಣಚಂದ್ರನು ಸ್ವಲ್ಪ ಗಟ್ಟಿಯಾಗಿ ನಗುತ್ತಾ "ನಾಳೆಯೇ ನಿನಗೆ ಈ ದುಡ್ಡೆಲ್ಲಾ ವಾಪಸು ಮಾಡು ತ್ತೇನೆ ನೋಡುತ್ತಾ ಇರು" ಎಂದನು.

ಶುಭದಾ ಅನ್ಯಮನಸ್ಕಭಾವದಿಂದ ತಲೆದೂಗಿದಳು. ಅವಳಿಗೆ ಚೆನ್ನಾಗಿ ಗೊತ್ತು, ಗಂಡನ ಮಾತಿಗೆ ಯಾವ ಅರ್ಥವನ್ನೂ ಮಾಡಕೂಡದು ಎಂದು. ಅವನು ಹೊರಡಲನುವಾದದ್ದನ್ನು ನೋಡಿ ಶುಭದಾ—

"ಈಗೆಲ್ಲೂ ಹೋಗಬೇಡಿ, ಸ್ವಲ್ಪ ಮಲಗಿಕೊಳ್ಳಿ" ಎಂದಳು.

ಹಾರಾಣಚಂದ್ರನು ಮುಖ ತಿರುಗಿಸಿ "ಮಲಗಿದರೆ ಆಗುತ್ತೇನು ? ಮನೆಯಲ್ಲಿ ಕೂತುಕೊಂಡರೆ ಕಥೆ ಕಳೆಯುವುದು ಹೇಗೆ ?....ಎಷ್ಟು ಕೆಲಸ ಇದೆ ಗೊತ್ತೇನು ?" ಎಂದನು.

"ಹಾಗಿದ್ದರೆ ಹೋಗಿ."

ಅವನು ಹೊರಟ ಮೇಲೆ ಶುಭದಾ ಮತ್ತೆ ಪೆಟ್ಟಿಗೆ ತೆಗೆದಳು. ಇನ್ನೊಂದು ರೂಪಾಯಿ ಮಾತ್ರ ಇದೆ. ಬಿಂದುವಾಸಿನಿ ಅಂದು ಕೊಟ್ಟಿದ್ದ ರೂಪಾಯಿಗಳು ಮುಗಿಯುತ್ತಾ ಬಂದಿವೆ. ಇನ್ನುಳಿದಿರುವುದು ಇದೊಂದು

ರೂಪಾಯಿ ಮಾತ್ರ. ಶುಭದಾ ಅದನ್ನು ಪೆಟ್ಟಿಗೆಯ ಕೊನೆಯಲ್ಲೊಂದು ಕಡೆ ಮುಚ್ಚಿಟ್ಟು ಮಗನ ಹಾಸುಗೆಯ ಬಳಿ ಬಂದಳು.

"ಅಮ್ಮಾ, ಅಪ್ಪಾ ಹಣ್ಣು ಯಾವಾಗ ತರುತ್ತಾನೆ?"

"ಸಂಜೆಗೆ" ಎಂದು ಹೇಳಿ ಸುಮ್ಮನಾದಳು.

ಸಂಜೆಯಾಯಿತು. ಅಪ್ಪ ಬರಲಿಲ್ಲ. ರಾತ್ರಿಯೂ ಆಯಿತು. ಆದರೂ ಹಾರಾಣಬಾಬುಗಳ ಆಗಮನವಾಗಲಿಲ್ಲ. ಮಾಧವನು ಅನೇಕ ಸಲ ಕೇಳಿದನು—ವಿಚಾರಿಸಿದನು. ಅನಂತರ ಅಳುವುದಕ್ಕಾರಂಭಿಸಿದನು.

ಶುಭದಾ ಮತ್ತೆ ಹತ್ತಿರ ಬಂದು ಕುಳಿತಳು. ಲಲನಾ ಎಷ್ಟೋ ಮಾತುಕಥೆಯಾಡಿ ಮರೆಸೋಣವೆಂದು ನೋಡಿದಳು. ಹುಡುಗ ಕೊನೆಗೆ ಬೇಸತ್ತು ನೊಂದ ದೇಹವನ್ನು ನಿದ್ರೆಗೊಪ್ಪಿಸಿ, ಬೆಳಗಾಗುವುದಕ್ಕೆ ಮುಂಚೆಯೇ ಎದ್ದು "ಅಮ್ಮಾ! ಅಪ್ಪ ದಾಳಿಂಬೆ ಹಣ್ಣು ತಂದನೇ?"—ಎಂದು ಕೇಳಿದನು.

ಶುಭದಾ "ನೀನು ದಾಳಿಂಬೆಹಣ್ಣು ತಿನ್ನ ಕೂಡದಪ್ಪಾ....ಕಾಯಿಲೆ ಹುಡುಗ!" ಅಂದಳು. ಕುಳಿತ ಹುಡುಗ ಹಾಗೇ ಮಲಗಿದನು. ಮತ್ತೆ ಎದ್ದು ಕೂತನು. ಮಾರನೆಯ ದಿನ ಹಾರಾಣನು ಹಿಂದಿರುಗಿದನು.

ರಾಸಮಣಿ ಕೋಪದಿಂದ ಮಾತಾಡಿಸಲಿಲ್ಲ. ಲಲನಾ ಕೈಕಾಲಿಗೆ ನೀರು ಕೊಟ್ಟಳು. ಸ್ನಾನಪಾನ ಆದಮೇಲೆ ಶುಭದಾ "ಮಾಧವನಿಗೆ ಹಣ್ಣು ತಂದಿರಾ?" ಎಂದಳು.

"ಅರೇ ಓ .ಹಣ್ಣೇ? ನೋಡು ಎಂತಹ ಎಡವಟ್ಟಾಗಿ ಹೋಯಿತು ಅಂತೀ? ಜೇಬಿನಲ್ಲಿ ನೀನು ಕೊಟ್ಟ ದುಡ್ಡು ಹಾಕಿಕೊಂಡೆ ನೋಡು. ಜೇಬಿನಲ್ಲಿ ತೂತಿದ್ದು ಎಲ್ಲಿ ಬಿದ್ದು ಹೋಯಿತೋ ಏನು ಸುಡುಗಾಡೋ! ದುರ್ಭಿಕ್ಷದಲ್ಲಿ ಅಧಿಕಮಾಸ! ನಿನ್ನ ದಮ್ಮಯ್ಯ, ಇನ್ನೊಂದು ನಾಲ್ಕಾಣೆ ಇದ್ದರೆ ಕೊಡು ಮತ್ತೆ, ಸಾಯಂಕಾಲ ಕೊಟ್ಟು ಬಿಡುತ್ತೇನೆ."

"ನನ್ನ ಹತ್ತಿರ ಏನೂ ಇಲ್ಲ."

"ಇಲ್ಲದೆ ಏನು? ನಿನ್ನ ಲಕ್ಷ್ಮೀ ಭಂಡಾರದಲ್ಲಿ ಇಲ್ಲದೆ ಹೋದರೆ ಬೇರೆಲ್ಲಿರುತ್ತದೆ?"

ಶುಭದಾ ಮನಸ್ಸಿನಲ್ಲಿ"ಆಹಾ, ನನ್ನ ಲಕ್ಷ್ಮೀ ಭಂಡಾರವೇ?" ಎಂದು

ಕೊಂಡಳು. ಹಾರಾಣನಿಗೆ “ನಿಜವಾಗಿ ಏನೂ ಇಲ್ಲ” ಅಂದಳು.

“ಅದು ಹೇಗೆ ಇರುವುದಿಲ್ಲ? ನಿನ್ನೆ....ನಿನ್ನೆ ಒಂದು ರೂಪಾಯಿತ್ತು ನಾನು ನೋಡಿದೆ.”

ಶುಭದಾ ಮಾತನಾಡಲಿಲ್ಲ. ಹಾರಾಣನು “ಛೀ, ಛಿ! ಈ ಹಾಳು ನಾಲ್ಕಾಣೆಗೋಸ್ಕರ ನನ್ನ ಮೇಲೆ ಅಪನಂಬಿಕೆ! ರೂಪಾಯಿಗಲ್ಲ, ಬರೀ ನಾಲ್ಕಾಣೆ .ನಾಲ್ಕಾಣೆಗೆ ನನ್ನ ಮೇಲೆ ಅಪನಂಬಿಕೆ! ನಾಲ್ಕಾಣೆಗೆ ಕೂಡ ಬೆಲೆಯಿಲ್ಲದವನಾಗಿ ಬಿಟ್ಟೆ, ಅಲ್ಲವೇ ?” ಎಂದನು.

ಶುಭದಾ ಏನೂ ಮಾತನಾಡದೆ ಪೆಟ್ಟಿಗೆ ತೆಗೆದು ರೂಪಾಯಿ ಅವನ ಕೈಯಲ್ಲಿಟ್ಟಳು.

## ೫

ಹಾರಾಣಚಂದ್ರನು ಹಲೂದ್ ಪುರವನ್ನು ದಾಟಿ ಬ್ರಾಹ್ಮಣ ಅಗ್ರಹಾರದ ಸಮೀಪ ಒಂದು ಸಣ್ಣ ಗಲ್ಲಿಯೊಳಗೆ ಹೊಕ್ಕು ಒಂದು ಹಳೆಯ ಶಿಥಿಲವಾದ ಮನೆಯೊಳಗೆ ಪ್ರವೇಶಮಾಡಿದನು. ಅಲ್ಲಿ ಎಷ್ಟೋ ಜನ ಜ್ಞಾನವಿಲ್ಲದವರಂತೆ ಮೂಲೆ ಮೂಲೆಗಳಲ್ಲಿ ಬಿದ್ದುಕೊಂಡಿದ್ದರು. ಹಾರಾಣನನ್ನು ನೋಡಿದ ಕೂಡಲೇ ಜ್ಞಾನಬಂದಂತೆ ಸಂತೋಷದಿಂದ ಕೇಕೆ ಹಾಕಿದರು. "ಬಾಬಾ" "ಅಣ್ಣಾ" "ತಮ್ಮಯ್ಯಾ!" "ಮಾವ"—ಹೀಗೆ ನಾನಾ ರೀತಿಯಾಗಿ ಸಂಬೋಧಿಸಿದರು. ಹಾರಾಣನು ಯುದ್ಧದಲ್ಲಿ ವಿಜಯ ಹೊಂದಿದ ವೀರನಂತೆ ಉಬ್ಬಿ ಅವರ ಮಧ್ಯೆ ಹೋಗಿ ಕೂತನು.

ಎಷ್ಟೋ ಮಾತುಕತೆ, ಹರಟೆಗಳಾದುವು. ಇದೇ ಅಫೀಮಿನ ಅಂಗಡಿ. ಇಲ್ಲಿಯೇ ಎಷ್ಟೋ ಜಮೀನ್ದಾರರ, ರಾಜರುಗಳ ತಲೆಗಳು ಬಿದ್ದುಹೋಗಿದ್ದುವು. ಲಕ್ಷಾಂತರ ರೂಪಾಯಿಗಳು ಕ್ಷಣಮಾತ್ರದಲ್ಲಿ ಅದೃಶ್ಯವಾಗಿದ್ದುವು. ಶ್ಮಶಾನದಲ್ಲಿ ರಾಜನೂ ಒಂದೇ ಬಿಕ್ಷುಕನೂ ಒಂದೇ! ಆದರೆ ಅಫೀಮಿನಂಗಡಿಯಲ್ಲಿ ರಾಜ ಭಿಕ್ಷುಕರು ತಾರುಮಾರಾಗುತ್ತಾರೆ. ರಾಜನ ಸಾಮ್ರಾಜ್ಯಕ್ಕೆ ಮಿತಿ, ಮತ್ತೇರಿದ ಬಿಕ್ಷುಕನ ಸಾಮ್ರಾಜ್ಯಕ್ಕೆ ಮಿತಿಯೆಲ್ಲಿ?

ಮಾದಕತೆಯ ಮೇರೆ ಮುಟ್ಟದ ಹಾಗೆಲ್ಲಾ ಹೃದಯದ ಶೌರ್ಯ, ಧೈರ್ಯ, ಗಾಂಭೀರ್ಯ, ಪಾಂಡಿತ್ಯಗಳು ಒಂದೊಂದಾಗಿ ಅರಳಿ ಹೊರಗೆ ಬರುತ್ತವೆ.

"ಎಷ್ಟು ದಾನ, ಪ್ರತಿ ದಾನಗಳು! ಎಷ್ಟು ರತ್ನ, ವೈಢೂರ್ಯಗಳು! ಎಷ್ಟು ಅಪೂರ್ವಸುಂದರ ರಾಜಕನ್ಯೆಯರು....ಅಷ್ಟೇಕೆ? ನಿರ್ಭಾಗ್ಯರ ಯಾವದ್ವಂಚಿತ ಸುಖ, ಭೋಗಗಳೂ ಇಲ್ಲಿ, ಈ ಮದ್ಯದಂಗಡಿಯಲ್ಲಿ, ದಮ್ಮು ದಮ್ಮಿಗೂ ಪ್ರತ್ಯಕ್ಷವಾಗಿ ಅಂಗೈಯಲ್ಲಿ ಬೀಳುತ್ತವೆ. ಹಾಗೆಯೇ ಅದೇ ಕ್ಷಣದಲ್ಲಿ ಜಾರಿಯೂ ಹೋಗುತ್ತವೆ.

ಕ್ರಮೇಣ ಸಾಯಂಕಾಲವಾಗುತ್ತ ಬಂತು. ಎಷ್ಟೋ ಮಂದಿ ಕಾಳಿದಾಸರೂ, ತಾನಸೇನರೂ ಎಷ್ಟೊ ಡಿಲ್ಲಿಯ ಬಾದಶಹರೂ, ಮತ್ತೆಷ್ಟೋ

ವಿಲಾಯತಿಯ ದೊರೆಗಳೂ, ಎಲ್ಲರೂ ಒಬ್ಬರೊಬ್ಬರಾಗಿ ಅಂಗಡಿಯ ಬಾಗಿಲು ತೆಗೆದುಕೊಂಡು ಮೆಲ್ಲಗೆ ಮನೆಯ ದಾರಿ ಹಿಡಿದರು.

ಅವರಂತೆಯೇ ಹಾರಾಣಚಂದ್ರನೂ ಹೊರಗೆ ಬಂದನು. ಬಂದ ತಕ್ಷಣ ಎಲ್ಲಾ ಜ್ಞಾಪಕಕ್ಕೆ ಬಂತು. ರೋಗಪೀಡಿತನಾದ ಮಗ ಮಾಧವ, ಆ ಮಾಧವನ ಮುಖ...ಅವನು ಕೇಳಿಕೊಂಡಿದ್ದ ದಾಳಿಂಬೆಹಣ್ಣು!

ಎಲ್ಲರಂತೆ ಪಡಕಾಸೆಯಲ್ಲಿ ಅಮಲಿನ ಸಾಮ್ರಾಜ್ಯವನ್ನನುಭವಿಸಿದ್ದ. ಈ ಕಾಯಿಲೆಯ ಹುಡುಗನ ಮುಖ ಆ ಸಾಮ್ರಾಜ್ಯವನ್ನು ಛಿದ್ರಛಿದ್ರ ಮಾಡಿತು.

ಡಿಲ್ಲಿ ಬಾದಶಹನು ಅಂಗಿಯ ಜೇಬಿನಲ್ಲಿ ಕೈಹಾಕಿ ನೋಡಿದರೆ ರಾಜ ಕೋಶವು ಶೂನ್ಯ! ನಾಲ್ಕೈದು ಮೂರು ಕಾಸಿನ ಬಿಲ್ಲೆಗಳು, ಒಂದೆರಡು ಅಫೀಮಿನ ಗುಳಿಗೆಗಳು!

"ಒಳ್ಳೆಯದು" ಎಂದುಕೊಂಡು ಅಫೀಮಿನ ಗುಳಿಗೆಗಳ ಸಹಾಯ ದಿಂದ ಹತ್ತಿರಿದ್ದ ಆಲದಮರದ ಕೆಳಗೆ ಕೂತು ತನ್ನ ಭಿನ್ನವಾದ ಸಾಮ್ರಾಜ್ಯ ವನ್ನು ಮತ್ತೆ ಸೃಷ್ಟಿಸಲು ತೊಡಗಿದನು. ರಾತ್ರಿ ಬಹಳ ಹೊತ್ತಾದ ಮೇಲೆ ಅಮಲು ಬಿಟ್ಟು ಸಾಮ್ರಾಜ್ಯವು ಮತ್ತೆ ಕರಗಿ ವಿಧಿಯಿಲ್ಲದೆ ಮರದಡಿ ಬಿಟ್ಟು ರಸ್ತೆಗೆ ಬಂದನು.

ಸ್ವಲ್ಪ ದೂರ ನಡೆದು ಒಂದು ಹಳೆಯ ಹೆಂಚಿನ ಮನೆಯ ಸಮೀಪ ಬಂದು ಬಾಗಿಲು ತಟ್ಟುತ್ತಾ "ಕಾತ್ಯಾಯನೀ" ಎಂದು ಕೂಗಿದನು. ಯಾರೂ ಉತ್ತರ ಕೊಡಲಿಲ್ಲ. ಮತ್ತೆ ಕೂಗಿದನು "ಕಾತೂ, ಮನೆಯಲ್ಲಿ ದ್ದೀಯೇನೂ, ಕಾತೂ ... ಕಾತೂ ...ಕಾತ್ಯಾಯನೀ !" ಆದರೂ ಉತ್ತರ ವಿಲ್ಲ. ರೇಗಿ ಹಾರಾಣಚಂದ್ರನು ಗಟ್ಟಿಯಾಗಿ ಬಾಗಿಲು ಬಡಿಯುತ್ತಾ ಕೂಗಲು ತೊಡಗಿದನು. "ಕಾತ್ಯಾಯನೀ....ಬಾಗಿಲು ತೆಗೆ, ನಿನ್ನ ದಮ್ಮಯ್ಯ ಕಾತೂ—!" ಈಸಲ ಅತಿ ಕ್ಷೀಣವಾದ ಹೆಂಗಸಿನ ಧ್ವನಿಯೊಂದು "ಯಾರೂ ?" ಎಂದಿತು. "ನಾನು ...ನಾನು !"

"ನನಗೆ ಮೈ ಚೆನ್ನಾಗಿಲ್ಲ. ಏಳುವುದಕ್ಕಾಗುವುದಿಲ್ಲ."

"ಅದು ಹೇಗೆ? ಏನಾದರೂ ಆಗಲಿ, ಎದ್ದು ಬಾಗಿಲು ತೆಗಿ ಮತ್ತೆ."

ಆಗ ಒಬ್ಬ ಸುಮಾರು ಇಪ್ಪತ್ತೈದು ವರ್ಷದ ಕಪ್ಪನೆಯ ಟೊಣೆಯ

ಹೆಂಗಸು ಬಾಗಿಲು ತೆಗೆಯುತ್ತಾ "ಅಯ್ಯಪ್ಪ, ಹೊಟ್ಟೆ ಅಸಾಧ್ಯ ನೋವು. ನರಳುತ್ತಾ ಇದ್ದರೆ ಏನೋ ಕೊಳ್ಳೆ ಹೋದಹಾಗೆ ಅರಚುತ್ತೀಯಲ್ಲಾ?" ಎಂದು ಮುಖ ಗಂಟು ಹಾಕಿಕೊಂಡು ಕೇಳಿದಳು.

ಹಾರಾಣನು "ಅರಚುವುದಕ್ಕೆ ನನಗೇನಾದರೂ ಖುಷಿಯೇನು? ಬಾಗಿಲು ತೆಗೆಯದೆ ಹೋದರೆ ಅರಚಬೇಕಾಗುತ್ತೆ" ಎಂದನು.

"ಹಾಗೆ ಬರಬೇಕಾಗಿದ್ದರೆ ಸ್ವಲ್ಪ ಹೊತ್ತಿಗೆ ಮುಂಚೆ ಬರುವುದಕ್ಕಾಗು ವುದಿಲ್ಲವೇ? ಇಂತಹ ಸರಿ ರಾತ್ರಿಯಲ್ಲಿ, ಹೊತ್ತಿಲ್ಲ, ಗೊತ್ತಿಲ್ಲ ಹೀಗೆ ಬಂದು ಅರಚಿದರೆ ಚೆನ್ನಾಗಿರುವುದಿಲ್ಲ. ಈ ತರಹೆ ಗಲಭೆ ನನಗೆ ನರಿಬೀಳುವುದಿಲ್ಲ."

ಹಾರಾಣಚಂದ್ರನು ಒಳಗೆ ತೂರಿ ಬಾಗಿಲು ಹಾಕಿ ಕಾತ್ಯಾಯನಿ ಯನ್ನು ನೋಡಿ "ಓ ..ಓ ಹೊಟ್ಟೆ ನೋಯುತ್ತೆಯೇನು? ನನಗೆ ಗೊತ್ತಾಗಲಿಲ್ಲವಲ್ಲ?" ಎಂದನು.

"ನಿನಗೆ ಹೇಗೆ ಗೊತ್ತಾಗುತ್ತೆ? ಈ ರಸ್ತೆಗೆಲ್ಲಾ ಗೊತ್ತು. ನಿನಗೆ ಮಾತ್ರ ಗೊತ್ತಿಲ್ಲ. ನಾನು ಬದುಕಿದರೇನು, ನತ್ತರೇನು? ನಿನಗೇನು ನಷ್ಟ? ನಿನ್ನೆ ಬೆಳಿಗ್ಗೆಯಿಂದ ಹೊಟ್ಟೆಗೊಂದು ತೊಟ್ಟು ನೀರು ಕೂಡ ಹಾಕಿಲ್ಲ . ಅದು ಹೋಗಲಿ ..ಇಷ್ಟು ರಾತ್ರಿಯಲ್ಲಿ ಏಕೆ ಬಂದಿದ್ದು?"

"ಸ್ವಲ್ಪ ಕೆಲಸವಿದೆ."

"ಏನದು?"

"ಹೇಳುತೇನೆ....ಮುಂಚೆ ಸ್ವಲ್ಪ ಕೊಳವೆಗೆ ಹೊಗೆಸೊಪ್ಪು ತುಂಬಿ ಕೊಡು."

ಕಾತ್ಯಾಯನಿ ಕೋಪದಿಂದ ಒಂದು ಮೂಲೆಯನ್ನು ತೋರಿಸುತ್ತಾ "ಆ ಮೂಲೆಯಲ್ಲಿ ನಿನಗೆ ಬೇಕಾದ ಸಾಮಾನೆಲ್ಲಾ ಇದೆ. ಬೇಕಾಗಿದ್ದರೆ ನೀನೇ ಹೋಗಿ ಹೊಗೆಸೊಪ್ಪು ತುಂಬಿಕೋ. ನನ್ನನ್ನ ಇನ್ನು ಗೋಳು ಹೊಯ್ದುಕೋ ಬೇಡ. ನಾನಿನ್ನು ಸ್ವಲ್ಪ ನಿದ್ದೆ ಮಾಡುತ್ತೇನೆ" ಎಂದಳು.

"ಹಾಗೇ ಮಾಡು. ನಾನೇ ಹೊಗೇಸೊಪ್ಪು ನವರಿಸಿಕೊಳ್ಳುತ್ತೇನೆ. ನೀನು ಹೋಗಿ ನಿದ್ದೆಮಾಡು. ನಿನಗೆ ಹೊಟ್ಟೆ ನೋವು ಅನ್ನುವುದು ಮರೆತುಹೋಯಿತು" ಎಂದು ಮೂಲೆಗೆ ಹೋಗಿ ಕೊಳವೆಯಲ್ಲಿ ಹೊಗೆ ಸೊಪ್ಪು ತುಂಬಿಸಿಕೊಂಡು ಹೊತ್ತಿಸಿ ಸೇದುತ್ತಾ ಕಾತ್ಯಾಯನಿಯ ಮಂಚದ

ಮೇಲೆ ಬಂದು ಕೂತನು. ಅವಳು ಗೋಡೆಗೆ ಮುಖ ತಿರುಗಿಸಿಕೊಂಡು ಮಲಗಿದ್ದಳು. ಮೆಲ್ಲ ಮೆಲ್ಲಗೆ "ಕಾತ್ಯಾಯನಿ, ನನಗೆರಡು ರೂಪಾಯಿ ಇದ್ದರೆ ಕೊಡುತೀಯಾ ?" ಎಂದು ಕೇಳಿದನು

ಕಾತ್ಯಾಯನಿ ಉತ್ತರ ಕೊಡಲಿಲ್ಲ. "ಕೇಳಿತೇ? ಕಾತೂ, ಆಗಲೇ ನಿದ್ದೆ ಬಂತೇನು? ನಿನ್ನೇ ಕೇಳಿದೆ, ನನಗೆರಡು ರೂಪಾಯಿ ಬೇಕಾಗಿದೆ."

ಕಾತ್ಯಾಯನಿ ಕಂಬಳಿಯಿಂದ ಮುಸುಗುಹಾಕಿಕೊಂಡಳು. ಮಾತ ನಾಡಲಿಲ್ಲ. ಹಾರಾಣಚಂದ್ರ ಸ್ವಲ್ಪ ಧೈರ್ಯಮಾಡಿ, ಕೊಳವೆಯನ್ನು ಕೆಳ ಗಿಟ್ಟು ಕಾತ್ಯಾಯನಿಯ ಮೈಮೇಲೆ ಕೈಯಾಡಿಸುತ್ತಾ "ಕೊಡುತೀಯ ತಾನೇ ?" ಎಂದು ಕೇಳಿದನು.

"ಸುಮ್ಮಸುಮ್ಮನೆ ಯಾಕೆ ಹಾಗೆ ಒದರುತೀಯಾ? ಎಲ್ಲಿಂದ ತಂದು ಕೊಡಲಿ ?"

"ನಿನ್ನ ಹತ್ತಿರ ಇಲ್ಲವೇನು."

"ಇಲ್ಲ."

"ಇಲ್ಲ! ಹೇಗೆ ಇರೊಲ್ಲ. ನನಗೆ ಗೊತ್ತಿಲ್ಲವೇ? ಬಹಳ ತುರುತಾಗಿದೆ. ಇದೊಂದು ಸಲ ನನ್ನ ಮೇಲೆ ದಯೆ ತೋರಿಸು. ತೋರಿಸದೆ ಸಾಧ್ಯವಿಲ್ಲ."

"ಇಲ್ಲದೆ ಹೋದರ ದಯೆಯೇನು ತೋರಿಸುವುದು ?"

"ಎರಡು ರೂಪಾಯಿ ಇಲ್ಲದೆ ಹೋಗುವುದಿಲ್ಲ. ಇಲ್ಲ ಅಂದರೆ ನಂಬು ವುದಿಲ್ಲ. ಇದ್ದೇ ಇರುತ್ತದೆ. ನನಗೆ ಗೊತ್ತು. ಏಕೆ ಹೀಗೆ ಪರೀಕ್ಷೆ ಮಾಡುತ್ತಿ? ಕಾಳಿಗೆ ದುಡ್ಡಿಲ್ಲದೆ ನಾವೆಲ್ಲಾ ಉಪವಾಸ, ಗೊತ್ತೇನು? ಕಾಯಿಲೆ ಮಗನ ತುತ್ತು ಕಸಿದುಕೊಂಡು ನನ್ನ ಹೊಟ್ಟೆತುಂಬಿಸಿ ಕೊಳ್ಳ ಬೇಕಾಯಿತು, ತಿಳಿಯಿತೇನು? ಅವಮಾನ, ಅಸಹ್ಯ, ನೋವಿನಿಂದ ಎದೆ ಒಡೆದು ಹೋಗುತ್ತಾ ಇದೆ. ಕಾತ್ಯಾಯನಿ, ಏನಾದರೂ ಮಾಡಿ ನೀನು ಕಾಪಾಡಬೇಕು ಇವತ್ತು."

"ಕಾಪಾಡಲಿಕ್ಕೆ ಏನಿದೆ ನನ್ನ ಹತ್ತಿರ ? ನಿಜವಾಗಿ, ನನ್ನ ಹತ್ತಿರ ಈಗ ಒಂದು ಬಿಡಿಕಾಸೂ ಇಲ್ಲ."

ಹಾರಾಣಚಂದ್ರನು ಕೋಪಗೊಂಡು "ಹೌದು ! ಹೇಗೆ ಇರುತ್ತದೆ? ಎಷ್ಟೊಂದು ದುಡ್ಡು ತಂದುಕೊಟ್ಟಿದ್ದೇನೆ. ಇಂತಹ ಕಷ್ಟ ಸಮಯದಲ್ಲಿ

ಕೇಳಿದರೆ ಎರಡು ರೂಪಾಯಿ ಕೊಡಲು ಕೈಬರುವುದಿಲ್ಲ ಅಲ್ಲವೇ ನಿನಗೆ? ಸರಿ, ಹಾಗಾದರೆ, ಬೀಗದ ಕೈ ಕೊಡು ಹೀಗೆ....ನಾನೇ ನಿನ್ನ ಪೆಟ್ಟಿಗೆಯಲ್ಲಿ ದುಡ್ಡು ಇದೆಯೋ ಇಲ್ಲವೋ ನೋಡುತ್ತೇನೆ" ಎಂದನು.

ಈ ಮಾತೆನ್ನುತ್ತಲೂ ಅವಳು ತಕ್ಷಣ ಮೇಲೆದ್ದು ಅವನ ಕಡೆ ರೋಷದಿಂದ ನೋಡುತ್ತಾ ಬಹಳ ಹೀನಾಯವಾಗಿ ಕಿರುಚಿದಳು. "ಬೀಗದ ಕೈ ಕೇಳುವುದಕ್ಕೆ ನೀನು ಯಾರೊ?....ಬೀಗದ ಕೈ ಕೊಡಬೇಕಂತೆ ಬೀಗದ ಕೈ!" ಹಾರಾಣನು ಬೆಚ್ಚಿ ಸುಮ್ಮನಾದನು.

ಅವಳು ಕೀಳುಜಾತಿಯ ಹೆಂಗಸು ಅಂತಹವಳ ಬಾಯಲ್ಲಿ ಇಂತಹ ಮಾತು ಬರುವುದು ಅಸಮಂಜಸವಲ್ಲ.

ಮತ್ತೆ "ಅಷ್ಟು ಕೊಟ್ಟನಂತೆ, ಇಷ್ಟು ಕೊಟ್ಟನಂತೆ .. ಇಟ್ಟುಕೊಂಡಿರಲಿಲ್ಲ? ಅದಕ್ಕೆ ಕೊಟ್ಟೆ. ಸುಮ್ಮನೆ ಕೊಟ್ಟೆಯಾ? ಮತ್ತೆ ನಿನಗೆ ಬೇಕಾದಾಗ ಎಲ್ಲಾ ವಾಪಸು ಕೊಟ್ಟು ಬಿಡಬೇಕಲ್ಲ? ಕಲಿಸಿಕೊಡುತಾನೆ ನನಗೆ!" ಎಂದು ಒದರಿದಳು.

ಹಾರಾಣಚಂದ್ರನು ಇದ್ದಕ್ಕಿದ್ದ ಹಾಗೆ ಮೆತ್ತಗಾದನು. ಅವನೆಂದಿಗೂ ಕಾತ್ಯಾಯನಿಯನ್ನೆದುರಿಸುವಂತಹ ಗಂಡಲ್ಲ. ಇವತ್ತೂ ಅಲ್ಲ. ಬೇರೇನೂ ತೋಚದೆ ಗದ್ಗದ ಧ್ವನಿಯಲ್ಲಿ "ಪ್ರೀತಿ ಇದ್ದರೆ ಕೊಡಬಹುದು. ಅಷ್ಟೇ ವಿನಹ, ಬಲವಂತದಿಂದ ."

"ಪ್ರೀತಿ! ಪ್ರೀತಿಯಂತೆ! ಬೆಂಕಿ ಹಾಕು ಇಂತಹ ಪ್ರೀತಿಗೆ. ಮೂರು ತಿಂಗಳು—ಮೂರು ತಿಂಗಳಾಯಿತು, ಒಂದು ಬಿಡಿಕಾಸಾದರೂ ಕೊಟ್ಟಿದ್ದೀಯಾ? ಪ್ರೀತಿ ಇರುವುದಕ್ಕೆ?"

"ಛೀ, ಅಂತಹ ಮಾತಾಡಬೇಡ, ಕಾತೂ, ಹಾಗಾದರೆ ಪ್ರೀತಿ ಇಲ್ಲವೇ ನಿನಗೆ?"

"ಎಳ್ಳಷ್ಟೂ ಇಲ್ಲ. ನಮಗೆ ಎಲ್ಲಿ ಹೊಟ್ಟೆ ತುಂಬುತ್ತದೋ ಅಲ್ಲೇ ಪ್ರೀತಿ. ಮನೆ ಹೆಂಗಸು ಕೆಟ್ಟುಹೋದೆನೇನು ಕತ್ತು ಹಿಸುಕಿದರೂ ಪ್ರೀತಿಸುವುದಕ್ಕೆ? ನಿನ್ನನ್ನು ಬಿಟ್ಟರ ನನಗೇನು ಗತಿಯಿಲ್ಲವೇ? ಎಲ್ಲಿ ದುಡ್ಡಿದೆಯೋ ಅಲ್ಲಿ ನಮ್ಮ ವೃತ್ತಿ. ಅಲ್ಲಿಯೇ ನಮ್ಮ ಪ್ರೀತಿ....ಮನೆಗೆ ಹೋಗು.... ಹೊರಡು."

ಮಧ್ಯ ರಾತ್ರಿಯಲ್ಲಿ ರೇಗಿಸಬೇಡ.

"ಕಾತೂ, ಹಾಗಾದರೆ ಎಲ್ಲಾ ಮುಗಿದ ಹಾಗೇ ತಾನೇ?"

"ಎಷ್ಟೋ ದಿನವಾಯಿತು. ಇವತ್ತು ಕೇಳುತಾನೆ! ಇಷ್ಟು ದಿವಸದ ವರೆಗೆ ಏನೋ ದಾಕ್ಷಿಣ್ಯದಿಂದ ಸುಮ್ಮನಿದ್ದೆ. ಇವತ್ತು ಯಾವಾಗ ನೀನೇ ಮಾತೆತ್ತಿದೆ, ಹೇಳುತ್ತೇನೆ ಕೇಳು, ಸ್ಪಷ್ಟವಾಗಿ ನಿನ್ನ ಸ್ವಭಾವ, ನಡತೆ ಯಾವುದೂ ಚೆನ್ನಾಗಿಲ್ಲ. ಜಮೀನ್‌ದಾರರ ಕಛೇರಿಯಲ್ಲಿ ಕಳ್ಳತನಮಾಡಿ ಜೈಲಿನಲ್ಲಿ ಬಿದ್ದಿದ್ದಿ. ನೌಕರಿಯಂತೂ ಇಲ್ಲ. ಯಾವತ್ತು ಏನು ವಿಪತ್ತು ತಂದೊಡ್ಡುತೀಯೋ ನನಗೂ ಕೂಡ. ನಿನ್ನ ನಂಬುವುದು ಕಷ್ಟ....ಅದಕ್ಕೇ ಇನ್ನು ಮೇಲೆ ನೀನು ಇಲ್ಲಿಗೆ ಬರಬೇಕಾಗಿಲ್ಲ. ಇದೇ ಕೊನೆ."

ಹಾರಾಣಚಂದ್ರನು ಬಹಳ ಹೊತ್ತು ಅದೇ ಸ್ಥಳದಲ್ಲಿ ಅದೇ ಅವಸ್ಥೆಯಲ್ಲಿ ಮೌನವಾಗಿ ಕೂತಿದ್ದು ಆಮೇಲೆ ಮೆಲ್ಲಮೆಲ್ಲಗೆ "ಹಾಗೇ ಆಗಲಿ ಇನ್ನು ಮೇಲೆ ಇಲ್ಲಿ ಕಾಲಿಡುವುದಿಲ್ಲ. ನಿನ್ನಿಂದಲೇ ನನಗೆ ಇಷ್ಟೆಲ್ಲಾ ಆದದ್ದು. ನಿನಗೋಸ್ಕರವಾಗಿಯೇ ನಾನು ಕಳ್ಳತನ ಮಾಡಿದ್ದು. ನಿನಗೋಸ್ಕರವಾಗಿಯೇ ವ್ಯಭಿಚಾರಿಯಾದದ್ದು .. ನಿನಗೆ . . ನಿನಗೋಸ್ಕರವಾಗಿಯೇ ನಾನು .... ಹೆಂಡತಿ ಮಕ್ಕಳ ಮುಖ ನೋಡದೆ ಇದ್ದದ್ದು....ಕಡೆಗೆ ನೀನೂ ಕೂಡ ..."

ಮತ್ತೆ ಹಾರಾಣಚಂದ್ರನು ಸ್ವಲ್ಪ ಹೊತ್ತು ಮೌನವಾಗಿದ್ದು, ತಿರುಗಿ "ಇವತ್ತು ನನ್ನ ಕಣ್ಣು ತೆರೆಯಿತು " ಎಂದನು.

ಈಗ ಕಾತ್ಯಾಯನಿಯೂ ಮೆತ್ತಗಾದಳು. ಸ್ವಲ್ಪ ಹತ್ತಿರಕ್ಕೆ ಸರಿದು ಕೂತು "ದೇವರ ದಯೆಯಿಂದ ನಿನ್ನ ಕಣ್ಣು ತೆರೆಯಿತು. ನಿಜ. ನಾನಂತೂ ಕೀಳು ಜಾತಿಯ ಹೆಂಗಸು. ಕೀಳು ಜನ. ಆದರೂ ಇಷ್ಟು ಮಾತ್ರ ನನಗೆ ಗೊತ್ತಾಗುತ್ತೆ. ಏನೆಂದರೆ, ಮೊದಲು ಹೆಂಡತಿ ಮಕ್ಕಳು, ಮನೆ ಮಠ. ಆಮೇಲೆ ನಮ್ಮಂತಹವರು. ಮೊದಲು ಹೊಟ್ಟೆಗೆ ಅನ್ನ. ಉಡಲಿಕ್ಕೆ ಬಟ್ಟೆ—ಆಮೇಲೆ ಸ್ನೇಹಿತರು ... ಹೊಗೆಸೊಪ್ಪು, ಭಂಗಿ—"

"ನಿನಗೆ ನಾನೇನು ಕೆಟ್ಟದ್ದೆಣಿಸಲಿಲ್ಲ. ಒಳ್ಳೆಯದಕ್ಕೋಸ್ಕರವೇ ಹೇಳುತ್ತೇನೆ....ಇಲ್ಲಿಗೆ ಇನ್ನು ಮೇಲೆ ಬರಬೇಡ. ಅಫೀಮಿನಂಗಡಿಗೆ ತಲೆಹಾಕಬೇಡ. ಮನೆಗೆ ಹೋಗು....ಹೆಂಡತಿ ಮಕ್ಕಳ ಯೋಗಕ್ಷೇಮ ನೋಡಿಕೋ. ಯಾವುದಾದರೂ ಚಾಕರಿ, ಗೀಕರಿ ಸಿಕ್ಕಿದರೆ ಹುಡುಕು. ಮಕ್ಕಳ ಬಾಯಿಗೆ

ಇಷ್ಟು ಅನ್ನ ಸಿಗುವ ಹಾಗೆ ಮಾಡು. ಎಲ್ಲಾ ಆದ ಮೇಲೆ ಇಷ್ಟವಾದರೆ ಈ ಕಡೆ ಬಾ, ಅಗತ್ಯವಾಗಿ."

ಕಾತ್ಯಾಯನಿಯು ಹಾಸುಗೆ ಬಿಟ್ಟಿದ್ದು ಪೆಟ್ಟಿಗೆಯಿಂದ ಹತ್ತು ರೂಪಾಯಿಗಳನ್ನು ಹೊರಗೆ ತೆಗೆದು ಹಾರಾಣಚಂದ್ರನ ಎದುರಿಗಿಟ್ಟು "ಇದನ್ನು ತೆಗೆದುಕೊಂಡು ಹೋಗು" ಎಂದಳು.

ಹಾರಾಣಚಂದ್ರನು ಮಾತಾಡದೆ ಅಧೋವದನನಾಗಿ ಕೂತಿದ್ದನು. ಆ ಮೇಲೆ ತಲೆಯಲ್ಲಾಡಿಸಿ "ನನಗೆ ಬೇಕಾಗಿಲ್ಲ" ಎಂದನು.

ಕಾತ್ಯಾಯನಿಯು ಚಿಕ್ಕದಾಗಿ ನಕ್ಕಳು. ಕೈಚಾಚಿ ಹಾರಾಣನ ಮುಖ ವೆತ್ತಿ "ಏನೂ ಗೊತ್ತಿಲ್ಲದವರ ಹತ್ತಿರ ಈ ಬಿಂಕ ತೋರಿಸಿಕೋ. ಇದನ್ನ ತೆಗೆದುಕೊಂಡು ಹೋಗದೆ ಹೋದರೆ ನಾಳೆ ನಿಮ್ಮ ಮನೆಯವರೆಲ್ಲಾ ಉಪ ವಾಸ ಮಾಡಬೇಕಾಗುತ್ತೆ, ಗೊತ್ತೇ ?" ಎಂದಳು.

"ಏಕೆ ?"

"ನಿಮ್ಮ ಮನೆಯಲ್ಲಿ ಅಕ್ಕಿ, ಬೇಳೆ ಏನೂ ಇಲ್ಲ ಅದಕ್ಕೆ."

"ನಿನಗೆ ಹೇಗೆ ಗೊತ್ತು ?"

"ಈಗ ತಾನೇ ನಿನ್ನ ಸ್ವಂತ ಬಾಯಿಂದಲೇ ಕೇಳಿದೆ. ಮಗುವಿನ ಅನ್ನ ಕಿತ್ತುಕೊಂಡು ಹೊಟ್ಟೆ ತುಂಬಿಸಿಕೊಂಡೆ ... ಎಂದೆ."

"ಓ ."

"ಅಷ್ಟೇ ಅಲ್ಲ. ನೀನು ಹೇಳದೆ ಹೋಗಿದ್ದರೂ ನಾನು ಮೊದಲೇ ತಿಳಿದುಕೊಂಡಿದ್ದೆ. ನಾನೇ ಸ್ವತಃ ನಿಮ್ಮ ಮನೆಗೆ ಹೋಗಿ ಎಲ್ಲಾ ನೋಡಿ ಕೊಂಡು ಬಂದೆ."

"ಯಾಕೆ ?"

"ಯಾಕೇ ?... ಯಾಕೆಂದರೆ, ಮೊಟ್ಟಮೊದಲು, ಹೆಂಗಸರು ಅಂದರೆ ಹೀಗೆ.... ಎಲ್ಲಾ ತಿಳಿದು, ನೋಡಿ ಬರಬೇಕೆಂದರೆ ಆಸೆ... ಅದು ಬಿಟ್ಟು ... ನಮ್ಮಂತಹವರಿಗೆ .. ಇಂತಹ ವಿಷಯಗಳೆಲ್ಲಾ ಚೆನ್ನಾಗಿ ನೋಡಿ ತಿಳಿಯದೆ ಹೋದರೆ ಆಗುವುದಿಲ್ಲ.... ನೀನು ಎಷ್ಟು ಮೂಢನೋ, ಹೆಂಗಸಾದರೂ ನಾನು ಅಷ್ಟು ಮೂಢಳಲ್ಲ. ನಿನಗೆ ಹೆಂಡತಿಯಿದ್ದಾಳೆ. ಮಕ್ಕಳು, ಮರಿ .... ಬಂಧು ಬಳಗ ಎಲ್ಲಾ ಇದ್ದಾರೆ. ಒಂದು ಸಲ ಬಿದ್ದರೆ ಹತ್ತೂ ಕೈಗಳನ್ನ

ಚಾಚುತ್ತಾರೆ....ಎಬ್ಬಿಸುವುದಕ್ಕೆ. ಆದರೆ ನನಗೆ ಯಾರು ಇದ್ದಾರೆ ಹಾಗೆ ಎಬ್ಬಿಸುವುದಕ್ಕೆ ? ನಾನು ...ನಮ್ಮಂತಹವರು, ಅನ್ನ ನೀರಿಲ್ಲದೆ ಸತ್ತು ಹೋದರೂ ಯಾರೂ ಅಳುವುದಿಲ್ಲ. ಜನ ಹೇಳುವುದುಂಟು. ಯಾರಿಗೆ ಯಾರೂ ಇಲ್ಲವೋ ಅವರಿಗೆ ದೇವರಿದ್ದಾನೆ. ಅಂತ ನಮ್ಮಂತಹ ಪಾಪಿಗಳಿಗೆ ಆ ಭರವಸೆಯೂ ಇಲ್ಲ. ಅದಕ್ಕೋಸ್ಕರವಾಗಿಯೇ ಎಲ್ಲಾ ವಿಷಯಗಳನ್ನೂ ಸಾವಧಾನವಾಗಿ, ಖುದ್ದಾಗಿ, ನೋಡಿ ತಿಳಿದುಕೊಂಡು ಬರದೆ ಹೋದರೆ ನಮಗೆ ಹೇಗೆ ಸಾಧ್ಯ ? ಅರ್ಥವಾಯಿತೇ ?"

ಇಷ್ಟು ಹೇಳಿ ಕಾತ್ಯಾಯನಿಗೆ ಬಹಳ ಕ್ಲೇಶವಾದಂತೆ ತೋರಿತು. ಈ ಮಾತುಗಳನ್ನು ಆಡುತ್ತಾ ಆಡುತ್ತಾ ಅವಳ ಹೃದಯದಲ್ಲಿ ಆದ ನೋವಿನನು ಭವವು ಮುಖದಲ್ಲಿ ತೋರದೆ ಇರಲಿಲ್ಲ. ಆದರೂ ಒಂದು ಕ್ಷಣದಲ್ಲಿ ಎಲ್ಲಾ ಮುಚ್ಚುವಂತೆ ಮುಖಭಾವವನ್ನು ಸಹಜ ಸ್ಥಿತಿಗೆ ತಂದುಕೊಂಡಳು. ಹಾರಾಣಚಂದ್ರನ ಮುಖವನ್ನು ಮತ್ತೆ ಗಲ್ಲ ಹಿಡಿದು ಎತ್ತಿ "ನಾನು ಹೇಳಿದ್ದೆಲ್ಲಾ ಅರ್ಥವಾಯಿತೋ ? ಈ ದುಡ್ಡೆಲ್ಲಾ ನಿನ್ನ ಹೆಂಡತಿಯ ಕೈಯಲ್ಲಿ ಕೊಡು. ಹೇಗೋ ಎರಡು ದಿನ ಕಳೆಯುತ್ತದೆ. ನಿನ್ನ ಕೈಯಲ್ಲಿ ಒಂದು ಬಿಡಿ ಕಾಸೂ ಇಟ್ಟುಕೊಳ್ಳಬೇಡ....ಗೊತ್ತಾಯಿತೋ ?" ಎಂದಳು.

ಹಾರಾಣಚಂದ್ರನು ಅನ್ಯಮನಸ್ಕ ಭಾವದಿಂದ ತಲೆದೂಗಿ "ಹು" ಎಂದನು.

"ರಾತ್ರಿ ಎಷ್ಟೋ ಹೊತ್ತಾಯಿತು. ಈಗೇನೂ ಎಲ್ಲಿಗೂ ಹೋಗುವುದು ಬೇಡ . ಈ....ಇಲ್ಲೇ....ಮಲಗಿಕೋ .."

# ೬

ಶ್ರೀ ಸದಾನಂದ ಚಕ್ರವರ್ತಿಯನ್ನು ಗ್ರಾಮದ ಅರ್ಧ ಜನ "ಸದೂ ಮಾವ" ಎಂದು ಕರೆದರೆ ಉಳಿದರ್ಧ ಜನ "ಹುಚ್ಚು ಸದಾನಂದ" ಎಂದು ಕರೆಯುವರು. ಅವನ ವಾಸ ಹಲೂದ್ ಪುರದಲ್ಲಿಯೇ. ಅವನ ತಂದೆ ಅತ್ಯಂತ ನಿಷ್ಠಾವಂತ ಹಿಂದೂ ಆಗಿದ್ದನು. ಇಂಗ್ಲೀಷು ಮ್ಲೇಚ್ಛರ ಭಾಷೆ, ಇಂಗ್ಲೀಷನ್ನು ಕಲಿತರೆ ಧರ್ಮಭ್ರಷ್ಟರಾದಂತೆಯೇ—ಹೀಗೆಂದು ಮಗನಿಗೆ ಓದು ಬರಹ ಕಲಿಸಲಿಲ್ಲ. ಅದರಿಂದ ತಾನೇ ಪ್ರಯೋಜನವೇನು? ಹತ್ತಿಪ್ಪತ್ತು ಎಕರೆ ಜಮೀನಿರುವಾಗ ಹೇಗೋ ಅದರಲ್ಲಿ ಒಂದಿಷ್ಟು ಕಾಳು, ಕಡ್ಡಿ ಬೆಳೆಸಿ ಎರಡು ಹೊತ್ತು ಊಟ, ಒಂದಿಷ್ಟು ಬಟ್ಟೆ ಆಗುವುದಿಲ್ಲವೇ? ಹಾಗೆ ಆರಾಮವಾಗಿ ಇರುವುದು ಬಿಟ್ಟು ಹೊಟ್ಟೆ ಪಾಡಿಗೋಸ್ಕರ ಹೊರಗಿನವರ ಹತ್ತಿರ ಹೋಗಿ ಯಾಕೆ ದುಡಿಯಬೇಕು? ಅದಕ್ಕೋಸ್ಕರ ಇಂಗ್ಲೀಷು ಕಲಿತು ಜಾತಿ ಯಾಕೆ ಕೆಡಬೇಕು? ಕೆಲವರು ಸದಾನಂದನಿಗೆ ಸಂಸ್ಕೃತ ಚೆನ್ನಾಗಿ ಬರುತ್ತದೆ ಎಂದು ಹೇಳುವರು. ಇತರರು "ಛೇ, ಅವನಿಗೇ? ಎಂದಿಗೂ ಇಲ್ಲ" ಎಂದು ನಗುವರು. ಆದರೂ ಎಲ್ಲರಿಗೂ ಗೊತ್ತು. ಅವನು ಬುದ್ಧಿಯಲ್ಲಿ ಹಾಗೆ ಹಾಗೆಯೇ! ಅದರ ಜತೆಯಲ್ಲಿ ಅವನಿಗೆ ಆಗಾಗ ವಾಯು (ಸನ್ನಿ) ಬರುವುದುಂಟು.

ಜಮೀನು ಕೆಲಸ ಮಾಡುತ್ತಾನೆ. ರಾಮಗಾನ ಮಾಡುತ್ತಾನೆ. ಅವರ ಮನೆ, ಇವರ ಮನೆ ತಿರುಗುತ್ತಾನೆ—ಹೀಗೇ ಹಗಲು, ರಾತ್ರಿ ಆನಂದವಾಗಿ ಕಳೆದುಬಿಡುತ್ತಾನೆ.

ದೂರ ಸಂಬಂಧದ ಚಿಕ್ಕಮ್ಮನ ವರಿಸೆಯ ಹೆಂಗಸೊಬ್ಬಳು ವಿನಹ ಅವನಿಗೆ ಆತ್ಮೀಯರಾರೂ ಇಲ್ಲ. ಅದಕ್ಕೇ ಅವನು ಗ್ರಾಮದವರನ್ನೆಲ್ಲಾ ತನ್ನ ಆತ್ಮೀಯರನ್ನಾಗಿ ಮಾಡಿಕೊಂಡಿದ್ದಾನೆ.

ಎಲ್ಲರಿಗೂ ಅವನು ಬೇಕಾದವನು. ಎಲ್ಲರ ಮನೆಯ ಬಾಗಿಲೂ ಇವನಿಗೆಂದರೆ ಸದಾ ತೆಗೆದಿರುತ್ತದೆ.

ಬಾಲ್ಯದಲ್ಲಿ ಸದಾನಂದನ ತಂದೆ ಬಹಳ ಹಣ ಖರ್ಚುಮಾಡಿ

ಅವನಿಗೊಂದು ಮದುವೆ ಮಾಡಿಸಿದ್ದನು. ಆದರೆ ಆದ ಒಂದು ವರ್ಷದೊಳಗಾಗಿ ಹೆಂಡತಿ ತೀರಿಕೊಂಡಳು. ಇದಾಗಿ ಆರು ವರ್ಷಗಳಾಯಿತು.... ಇಂದಿನವರೆಗೂ ಅವನು ಒಬ್ಬಂಟಿಗನಾಗಿಯೇ ಇದ್ದಾನೆ. ಅವರ ಕುಲದಲ್ಲಿ ಗಂಡಿನ ಕಡೆಯವರು ಹೆಣ್ಣಿಗೆ ತೆರಕೊಡುವ ಪದ್ಧತಿ. ಅದೇ ನೆಪಮಾಡಿ "ಎಲ್ಲಪ್ಪಾ ತರುವುದು ಅಷ್ಟು ದುಡ್ಡು.... ?" ಎಂದು ಮದುವೆಯ ಮಾತೆತ್ತಿದವರಿಗೆ ಜವಾಬು ಕೊಡುವನು.

ಇಂದು ಸಂಜೆ ಆಕಾಶ ಮೇಘದಿಂದ ತುಂಬಿದೆ. ಎಲ್ಲ ಕಡೆಯೂ ನಿಶ್ಶಬ್ದ, ನಿಶ್ಚಲ. ಪ್ರಕೃತಿಯ ಆಗಿನ ಅವಸ್ಥೆ ಹೀಗೇ ಎಂದು ಹೇಳುವುದಕ್ಕಾಗದು. ಬೇಕೆಂದರ ಒಂದು ಕ್ಷಣದಲ್ಲಿ ಪ್ರಚಂಡ ಮಳೆ ಸುರಿಸಿ ಅಲ್ಲೋಲ ಕಲ್ಲೋಲ ಮಾಡಿಬಿಡಬಹುದು. ಇಲ್ಲ, ಹೀಗೆಯೇ ಒಂದು ಹನಿ ಕೂಡ ಸುರಿಸದೆ ಸಂಜೆ ಕಳೆದುಬಿಡಬಹುದು.

ನೋದರತ್ತೆ ರಾಸಮಣಿ ಲಲನಾಳನ್ನು ಕೂಗಿ "ಮನೆಯಲ್ಲಿ ಒಂದು ತೊಟ್ಟು ನೀರಿಲ್ಲ, ಚಟ್ಟಂತ ಹೋಗಿ ಒಂದು ಕೊಡ ನೀರು ತಂದುಬಿಡು ಮಗು" ಅಂದಳು.

ಲಲನಾ ಕೊಡ ಕಂಕುಳಲ್ಲಿ ಇಟ್ಟುಕೊಂಡು ನದಿಯ ಕಡೆ ಹೊರಟಳು. ನೀರು ತುಂಬಿಕೊಂಡು ಎರಡು ಹೆಜ್ಜೆ ಹಾಕುತ್ತಲೂ ದೊಡ್ಡ ದೊಡ್ಡ ಹನಿ ಬೀಳುವುದಕ್ಕಾರಂಭವಾಯಿತು. ಅವಳು ಬೇಗ ಬೇಗ ನಡೆದು ಬಂದಳು. ದಾರಿಯಲ್ಲಿಯೇ ಸದಾನಂದನ ಮನೆ. ಮನೆಯ ಮುಂದಿನ ಅಂಗಳದಲ್ಲಿ ಕೂತು ಸದಾನಂದ ಯಥಾಪ್ರಕಾರ ರಾಮನಾಮದ ರಾಗದಲ್ಲಿ ಕಾಳೀಸ್ತೋತ್ರ ಹೇಳುತ್ತಿದ್ದಾನೆ. ಲಲನಾಳನ್ನು ನೋಡಿ ಹಾಡು ನಿಲ್ಲಿಸಿ "ಯಾಕೇ ಲಲನಾ, ನೆನೆದುಕೊಂಡು ಹೋಗುತ್ತೀಯಲ್ಲಾ ?" ಎಂದು ಕೂಗಿದನು.

ಲಲನಾ ಸ್ವಲ್ಪ ನಕ್ಕು "ನೀನೇಕೆ ಹಾಡು ನಿಲ್ಲಿಸಿಬಿಟ್ಟೆ ?" ಎಂದಳು.

ಸದಾನಂದನೂ ನಕ್ಕನು. ಹಾಡು ನಗು, ಇವು ಅವನ ಮುಖದಲ್ಲಿ ನಿರಾಯಾಸವಾಗಿ ಬರುತ್ತಿದ್ದವು. ರಾಗವಾಗಿಯೇ "ಹಾಡು, ಮುಗಿದು ಹೋ .. ಯಿ....ತೂ " ಎಂದು ತಕ್ಷಣ ಸಹಜ ಧ್ವನಿಯಲ್ಲಿ "ಅದು ಹೋಗಲಿ, ಸುಮ್ಮ ಸುಮ್ಮನೆ ಮಳೆಯಲ್ಲೇಕೆ ನೆನೆಯಬೇಕು. ಇಲ್ಲಿ ಸ್ವಲ್ಪ ನಿಂತುಕೊಂಡು ಹೋಗಬಾರದೇ ?" ಎಂದನು.

ಲಲನಾ ಅಂಗಳದೊಳಗೆ ಬಂದು ನಿಂತಳು. ಸ್ವಲ್ಪ ಹೊತ್ತು ಸದಾನಂದನು ಅವಳ ಕಡೆ ದುರುಗುಟ್ಟಿಕೊಂಡು ನೋಡಿ "ನಿಲ್ಲಬೇಡ, ಮನೆಗೆ ಹೋಗು" ಎಂದನು.

"ಇದೇನು ಹುಡುಗಾಟಿಕೆ?"

"ನಮ್ಮ ಚಿಕ್ಕಮ್ಮ ಮನೆಯಲ್ಲಿ ಇಲ್ಲ. ಮಳೆ ಜೋರಾಗಿ ಬಂದರೆ ಮನೆಗೆ ಹೇಗೆ ಹೋಗುತ್ತೀಯಾ?"

"ಈ ಮಾತು ನಿಜ" ಎಂದು ಲಲನಾ ಮನಸ್ಸಿಗೂ ಬಂತು. ಹಾಗೆಂದು ಎರಡು ಹೆಜ್ಜೆ ಹಾಕಿ ಮತ್ತೆ ಏಕೋ ಹಿಂದೆ ಬಂದಳು.

"ಮತ್ತೆ ಹಿಂದೆ ಬಂದೆ ಏಕೆ?" ಎಂದು ಸದಾನಂದನು ಆಶ್ಚರ್ಯದಿಂದ ಕೇಳಿದನು.

"ನಿನ್ನೆ ರಾತ್ರಿ ನನಗೆ ಜ್ವರ ಬಂದಿತ್ತು. ಮಳೆಯಲ್ಲಿ ನೆನೆದರೆ ಮತ್ತೆ ಜ್ವರ ಬಂದುಬಿಡುತ್ತೆ."

"ಹಾಗಾದರೆ ಹೋಗಬೇಡ. ಮಳೆ ನಿಲ್ಲುವವರೆಗೂ ಇಲ್ಲಿಯೇ ಇರು."

ಸದಾನಂದನು ಮತ್ತೆ ಹಾಡಲಾರಂಭಿಸಿದನು.

ಲಲನಾ ಕೊಡವನ್ನು ಕೆಳಗಿಟ್ಟು ಕೇಳುತ್ತಾ ಕೂತಳು. ಸದಾನಂದನು ತಕ್ಷಣ ನಿಲ್ಲಿಸಿಬಿಟ್ಟನು. "ಏಕೆ ನಿಲ್ಲಿಸಿ ಬಿಟ್ಟೆ?"

"ಇನ್ನು ಹಾಡುವುದಿಲ್ಲ."

"ಏಕೆ?"

"ಮುಂದಿನ ಚರಣ ಗೊತ್ತಿಲ್ಲ."

"ಹಾಗಿದ್ದರೆ ಶುರು ಏಕೆ ಮಾಡಿದೆ?"

"ನಾನು ಯಾವಾಗಲೂ ಹಾಡುವುದು ಹಾಗೆಯೇ" ಎಂದು ಸುಮ್ಮನಾಗಿ ಆ ಮೇಲೆ ಆಕಾಶದ ಕಡೆ ನೋಡಿ "ಮೋಡದಲ್ಲಿ ಕಮಲ ಹುಟ್ಟುತ್ತದಂತೆ.... ನೋಡಿದ್ದೀಯಾ?" ಎಂದನು.

ಲಲನಾ ನಕ್ಕು "ಇಲ್ಲ, ನೀನು ನೋಡಿದ್ದೀಯಾ?" ಎಂದಳು.

"ಓ, ನೋಡಿದ್ದೇನೆ."

"ಯಾವಾಗ ನೋಡಿದೆ?"

"ಎಷ್ಟೋ ಸಲ. ಯಾವಾಗ ಆಕಾಶದಲ್ಲಿ ಮೋಡಗಳು ಸೇರುತ್ತವೆ,

ಆಗೆಲ್ಲಾ." ಸದಾನಂದನ ಗಂಭೀರ ಮುಖಭಾವವನ್ನು ನೋಡಿ ಲಲನಾಗೆ ನಗುಬಂತು. ನೆರಗಿಂದ ಬಾಯಿ ಮುಚ್ಚಿಕೊಂಡು

"ಅದು ಹೇಗೆ ಸಾಧ್ಯ ?" ಎಂದಳು.

"ಏಕೆ ಸಾಧ್ಯವಿಲ್ಲ ? ನೀರಿನಲ್ಲಿ ತಾನೇ ಕಮಲ ಹುಟ್ಟುವುದು? ಮೋಡಗಳಿಂದ ತಾನೇ ನೀರು ? ನೀರಿದ್ದ ಕಡೆ ಕಮಲ ಹುಟ್ಟುವುದಿಲ್ಲವೇ ?"

"ಹೋಗು ಹೋಗು ಸದೂ ಮಾವ! ಮಣ್ಣು ಬೇಡವೇ, ಬರೀ ನೀರಿದ್ದರೆ ಸಾಕೇ ?"

ಸದಾನಂದನು ಲಲನಾ ಮುಖವನ್ನು ಸ್ವಲ್ಪ ಹೊತ್ತು ನೋಡಿ "ಹೌದು, ನೀನು ಹೇಳುವುದೂ ನಿಜವೇ !....ಅದಕ್ಕೇ ಒಣಗಿಕೊಂಡು ಹೋಗಿದೆ."

ಲಲನಾ ಮತ್ತೆ ಮಾತಾಡಲಿಲ್ಲ. ಎಲ್ಲರಿಗೂ ಗೊತ್ತು: ಸದಾನಂದನು ಹೀಗೆಯೇ ಆಗಾಗ ಅರ್ಥವಿಲ್ಲದ, ಒಂದಕ್ಕೊಂದು ಸಂಬಂಧವಿಲ್ಲದ ಮಾತುಗಳನ್ನಾಡುತ್ತಾನೆಂದು. ಸ್ವಲ್ಪ ಹೊತ್ತು ಮೌನವಾಗಿದ್ದು ಸದಾನಂದನು ಮತ್ತೆ "ಲಲನಾ, ಶರತ್ ನಿಮ್ಮ ಮನೆಗೆ ಈ ನಡುವೆ ಬರುವುದಿಲ್ಲ " ಎಂದನು.

ಲಲನಾ ಮುಖ ಬೇರ ಕಡೆ ತಿರುಗಿಸಿಕೊಂಡಳು. ಸದಾನಂದನು ಮತ್ತೆ ಕೇಳಿದನು.

"ಬರುವುದಿಲ್ಲವೇ ?"

"ಇಲ್ಲ."

"ಏಕೆ ?"

"ನನಗೆ ಗೊತ್ತಿಲ್ಲ."

ಸದಾನಂದನು ಮತ್ತೆ ಹಾಡಲಾರಂಭಿಸಿದನು. ಸ್ವಲ್ಪ ಹೊತ್ತಿಗೆ ಹಾಡು ಮುಗಿಯಿತು. ಮಳೆ ನಿಲ್ಲಲಿಲ್ಲ. ಆಕಾಶದಲ್ಲಿ ಮತ್ತೂ ಮೋಡಗಳು ತುಂಬಿದುವು.

ಲಲನಾ ಕಂಕುಳಲ್ಲಿ ಕೊಡವೆತ್ತಿಕೊಂಡಳು. ಸದಾನಂದನು "ಏನು ?, ಮತ್ತೆಲ್ಲಿಗೆ ಹೊರಟೆ ?" ಎಂದನು.

"ಮನೆಗೆ."

"ಮಳೆಯಲ್ಲಿ ಹೋದರೆ ಮತ್ತೆ ಜ್ವರ ಬಂದರೆ ...?"

"ಬಂದರೆ ಏನು ?" ಎನ್ನುತ್ತಾ ಲಲನಾ ಬೇಗ ಬೇಗ ಹೊರಟು ಹೋದಳು. ಸದಾನಂದನು ಹಾಡಲಾರಂಭಿಸಿದನು.

# ೭

ಹಾರಾಣಚಂದ್ರನು ಮನೆಗೆ ಬಂದು ಹೆಂಡತಿಯನ್ನು ಕರೆದು ಅವಳ ಕೈಯಲ್ಲಿ ಎಣಿಸೆಣಿಸಿ ಹತ್ತು ರೂಪಾಯಿಗಳನ್ನು ಹಾಕಿದಾಗ ಅವಳ ಸಂತೋಷಕ್ಕೆ ಮೇರೆಯಿರಲಿಲ್ಲ. ಇದ್ದಕ್ಕಿದ್ದ ಹಾಗೆ ಬೇರೆ ಯೋಚನೆಯೊಂದು ಹೊಳೆದು ಮುಖ ಕಪ್ಪಿಟ್ಟು "ಇಷ್ಟು ದುಡ್ಡು ನಿಮಗೆ ಹೇಗೆ ಸಿಕ್ಕಿತು?" ಎಂದಳು.

ಅವನು ಕೂಡ ಜವಾಬನ್ನು ನಗುಮುಖದಿಂದ ಕೊಡಲಾಗಲಿಲ್ಲ. ಸ್ವಲ್ಪ ಹೊತ್ತು ಜವಾಬು ಕೊಡದೆ ಸುಮ್ಮನಿದ್ದು "ಶುಭದಾ, ನೀನು ಏನೆಂದು ಕೊಂಡಿದ್ದೀಯ? ಈ ದುಡ್ಡು ನಾನು ಕದ್ದುಕೊಂಡು ಬಂದಿದ್ದೀನಿ ಅಂತಲೇ?" ಎಂದನು.

ಶುಭದಾಳ ಮುಖ ಮತ್ತೂ ಕಪ್ಪಿಟ್ಟಿತು. ಅವಳ ಪಾಪಿಷ್ಠ ಹೃದಯದಲ್ಲಿ ಈ ಯೋಚನೆಯೇನೋ ಬಂದಿತ್ತು....ಆದರೆ, ಪಾಪ, ಬಾಯಿಬಿಟ್ಟು ಹೇಗೆ ಹೇಳುತ್ತಾಳೆ. ಸದ್ಯ ದೇವರ ದಯೆಯಿಂದ ಹಾಗಾಗದೆ ಇರಲಿ.... ಒಂದು ಪಕ್ಷ ಆಗಿದ್ದರೆ ಈ ದುಡ್ಡು ಅವಳು ತೆಗೆದುಕೊಳ್ಳುವುದು ಸರಿಯೇ? ಕಳ್ಳತನ ಮಾಡಿ ಹೊಟ್ಟೆ ಹೊರೆದು ಕೊಳ್ಳುವುದಕ್ಕಿಂತ ಉಪವಾಸ ಸಾಯುವುದು ಮೇಲು ...ಆದರ ಮಕ್ಕಳು ಮರಿ....? ಹಾಳು, ಈ ಯೋಚನೆಗಳಿಗೆ ಈಗ ಸಮಯವಲ್ಲ, ಎಂದುಕೊಂಡು ಶುಭದಾ ಬೇಗ ಆ ರೂಪಾಯಿಗಳನ್ನು ಪೆಟ್ಟಿಗೆಯಲ್ಲಿ ಮುಚ್ಚಿಟ್ಟಳು.

ಕೆಲವು ದಿನಗಳು ಸ್ವಚ್ಛಂದವಾಗಿ ಕಳೆದುವು. ಹಾರಾಣಚಂದ್ರನ ಮುಖ ಮತ್ತೆ ಹಲೂದ್‌ಪುರದಲ್ಲಿ ಕೆಲವು ದಿನ ಕಾಣಲಿಲ್ಲ.

ಮನೆಗೆ ಹಿಂದಿರುಗಿದಾಗ ರಾಸಮಣಿ ಕೇಳಿದಳು. "ಇಷ್ಟು ದಿವಸ ಎಲ್ಲಿದ್ದೆಯೋ, ಹಾರಾಣ?"

"ಎಷ್ಟು ಕೆಲಸವಿದೆ ಗೊತ್ತೇನು? ಏನು ಮನೆಯಲ್ಲಿ ಮುಸುಗಿಟ್ಟು ಕೂತುಕೊಂಡಿದ್ದರೆ ಆಗುತ್ತದೆಯೇ? ಚಾಕರಿ ಹುಡುಕಿಕೊಂಡು ಅಲೆಯುತ್ತಾ ಇದ್ದೆ."

ಶುಭದಾ ಕೇಳಿ "ಇದು ಸಂಭವವಿರಬಹುದು" ಎಂದುಕೊಂಡಳು.... ಏಕೆಂದರೆ ಈ ನಡುವೆ ಇವರು ಅವಳ ಹತ್ತಿರ ಚಿಲ್ಲರೆ ಕೇಳುವುದಕ್ಕೆ ಬರುವುದಿಲ್ಲ! ನಾಳೆ ಎಲ್ಲಾ ನಿನ್ನ ಸಾಲ ತೀರಿಸಿಬಿಡುತ್ತೇನೆ ಎಂದು ನಾಲ್ಕಾಣೆ, ಎಂಟಾಣೆ ತೆಗೆದುಕೊಂಡು ಹೋಗುವುದಿಲ್ಲ! ಅವರೀಗ ಎಲ್ಲಿ ಇರುತ್ತಾರೆ ಎಂದು ಕೇಳಿದರೆ ಅವಳಿಗೆ ಗೊತ್ತು, ಹೇಳಬಲ್ಲಳು. ಅವರೀಗ ದಿನ ಬೆಳಗೂ ಊಟ, ನಿದ್ದೆಯಿಲ್ಲದೆ ಚಾಕರಿಗೋಸ್ಕರ ತಿರುಗುತ್ತಾರೆ. ಎಷ್ಟು ಜನಗಳ ಹತ್ತಿರ ಹೋಗಿ ಗೋಳು ಹೇಳಿಕೊಳ್ಳಬೇಕೋ. .ಎಷ್ಟು ಮಂದಿಯ ಮುಂದೆ ಹೋಗಿ ಆಳುದ್ದದ ದೇಹ ಗೇಣುದ್ದ ಮಾಡಿಕೊಂಡು 'ದೇಹಿ' ಅನ್ನಬೇಕೋ ....ಸುಂಕದ ಕಟ್ಟೆಯಿಂದ ದೊಡ್ಡ ಕಛೇರಿಯವರಗೆ....ಮಂಡಿಯಿಂದ ಚಿಲ್ಲರೆ ಅಂಗಡಿಯವರೆಗೂ ಸರಿ...ಲೆಕ್ಕ ಪತ್ರ ಬರೆಯುವುದಕ್ಕೆ ಗುಮಾಸ್ತೆ ಬೇಕೇ ಎಂದು ಕೇಳಿ ಇಲ್ಲವೆನ್ನಿಸಿಕೊಳ್ಳಬೇಕೋ ಇದ್ದವರೂ ಕೂಡ ಇವನ ಪರಿಚಯ ತಿಳಿದು ಇಟ್ಟುಕೊಳ್ಳಬೇಕಲ್ಲ! ನಂಬಿಕೆಯಿಲ್ಲವಲ್ಲ? ಸಾಯಂಕಾಲ ದಣಿದು ಬೇಸತ್ತು ಬಂದ ಒಣ ಮುಖದ ಗಂಡನನ್ನು ಶುಭದಾ ಕೇಳುವಳು: "ಇವತ್ತು ಎಲ್ಲಿ ಊಟ ಮಾಡಿದಿರಿ?" ಎಂದು

ಹಾರಾಣನು ನಗಲು ವ್ಯರ್ಥ ಪ್ರಯತ್ನ ಮಾಡುತ್ತಾ "ನನಗೆ ಊಟಕ್ಕೆ ಕೊರತೆಯೇ ಹೇಳು ..ಎಲ್ಲಾದರೂ ಆಗುತ್ತೆ. ನನಗೆ ಹೊಸಬರು ಯಾರಿದ್ದಾರ?" ಎನ್ನುವನು.

ಶುಭದಾ ಸುಮ್ಮನಾಗುವಳು.

ಕ್ರಮೇಣ ಅವಳ ಅಮೃತ ಕಲಶವು ಬರಿದಾಗುತ್ತಾ ಬಂತು. ಇನ್ನು ಒಂದೆರಡು ದಿವಸಗಳಲ್ಲಿ ಸಮಾಪ್ತವಾಗಿ ಹೋಗುತ್ತದೆ. ಆದರೂ ಹಾಗೆಂದು ಬಾಯಿ ತೆಗೆದು ಗಂಡನ ಹತ್ತಿರ ಹೇಳಲಾಗಲಿಲ್ಲ.

ಉಳಿದಿರುವುದನ್ನೇ ಕೃಪಣತ್ವದಿಂದ ಮಿಗಿಸಿಕೊಂಡು ಇನ್ನೆರಡು ದಿನ ತಳ್ಳುವ ಹಾಗೆ ಮಾಡಿದಳು.

ಇಂದು ಮೂರು ದಿನಗಳಾದ ಮೇಲೆ ರಾತ್ರಿ ಬಹಳ ಹೊತ್ತಾದ ಮೇಲೆ ಗಂಡನ ಕಾಲುಗಳನ್ನೊತ್ತುತ್ತಾ ಹೇಳಲೋ ಬೇಡವೋ ಎಂದು ತರ್ಕ ವಿತರ್ಕ ಮಾಡಿಕೊಂಡು ಕಡೆಗೆ "ಏನೂ ಇಲ್ಲ ಇನ್ನು. ರೂಪಾಯೆಲ್ಲಾ ಆಗಿಹೋಯಿತು." ಎಂದು ಧೈರ್ಯಮಾಡಿ ಹೇಳಿಬಿಟ್ಟಳು. ಹಾರಾಣಚಂದ್ರನು ಕಣ್ಣು ಮುಚ್ಚಿ

ಕೊಂಡು ಏನೂ ಚಿಂತೆಯೇ ಇಲ್ಲದವನಂತೆ "ಹತ್ತು ರೂಪಾಯಿ ಎಷ್ಟು ದಿನ ಬಂದೀತು ?" ಎಂದನು. ಮತ್ತೇನೂ ಮಾತಿಲ್ಲ. ಇಬ್ಬರೂ ರಾತ್ರಿಯೆಲ್ಲಾ ಹಾಗೆಯೇ ಮೌನವಾಗಿ ಕಳೆದರು. ಶುಭದಾ ಅಂದುಕೊಂಡಿದ್ದಳು. "ನಾಳೆ ಯಿಂದ ಏನು ಮಾಡುವುದು ? ವ್ಯವಸ್ಥೆ ಏನು ಮಾಡಿದ್ದೀರಿ ?" ಎಂದು ಕೇಳಿ ಬಿಡೋಣವೆಂದು, ಆದರೆ ಕೇಳಲು ಮನಸ್ಸು ಬರಲಿಲ್ಲ. ನಿಷ್ಕಾರಣವಾಗಿ ತನ್ನನ್ನು ತಾನೇ ತಪ್ಪಿತಸ್ಥಳನ್ನಾಗಿ ಮಾಡಿಕೊಂಡು ಸುಮ್ಮನಿದ್ದಳು. ಖರ್ಚಿ ನಲ್ಲಿ ತನಗೇ ವಿತರಣೆಯಿಲ್ಲವೇನೋ, ಅದಕ್ಕೇ ಇಷ್ಟು ಬೇಗ ಮುಗಿದು ಹೋಯಿತು !

ಮರುದಿನ ಬೆಳಗ್ಗೆ ಹೊತ್ತಿಗೆ ಮುಂಚೆಯೇ ಹಾರಾಣನು ಎದ್ದು ಹೊರಟುಹೋದನು. ಲಲನಾ ಎಂದಿನಂತೆಯೇ ಕಸಮುಸುರೆ ಮಾಡುತ್ತಿದ್ದಳು. ರಾಸಮಣಿಯು ಸ್ನಾನಮಾಡಿ ಬಂದು ತಲೆಗೆ ಗಂಗೆಯ ಮಣ್ಣನ್ನು ಸ್ಪರ್ಶಮಾಡಿ ಪೂಜೆಗೆ ಕುಳಿತಳು.

ಶುಭದಾ ಒಬ್ಬಳಿಗೆ ಮಾತ್ರ ಕೆಲಸವೇನೂ ತೋಚದೆ ಅಲ್ಲಿ ಸ್ವಲ್ಪ ಹೊತ್ತು, ಇಲ್ಲಿ ಸ್ವಲ್ಪ ಹೊತ್ತು ಕೂಡುವುದು, ಏಳುವುದು, ಈ ರೀತಿ ಮಾಡಲು ಆರಂಭಿಸಿದಳು. ಗಂಟೆ ಎಂಟು ಹೊಡೆಯುತ್ತಲೂ ಲಲನಾ ಹತ್ತಿರ ಬಂದು "ಇದೇನಮ್ಮಾ ಇನ್ನೂ ಸ್ನಾನಕ್ಕೆ ಹೋಗಲಿಲ್ಲ? ಹೊತ್ತ್ತಾಯಿತು ನೋಡು" ಎಂದಳು.

"ಇಗೋ ಹೊರಟೆ."

ಲಲನಾ ಸ್ವಲ್ಪ ಹೊತ್ತಿನ ನಂತರ ತಾಯಿಯು ಹಾಗೆಯೇ ಕೂತಿದ್ದುದನ್ನು ನೋಡಿ ಆಶ್ಚರ್ಯದಿಂದ "ಏನಾಗಿದೆಯಮ್ಮಾ ?" ಎಂದಳು.

"ಏನು ಇಲ್ಲ."

"ಹೀಗೆ ಯಾಕೆ ಕೂತಿದ್ದೀ ಮತ್ತೆ ?"

"ಮತ್ತೇನು ಮಾಡಲಿ ?"

"ಏನು ಹಾಗೆಂದರೆ....? ಸ್ನಾನ ಮಾಡುವುದಿಲ್ಲ ? ಅನ್ನಕ್ಕೆ ಎಸರಿಡುವುದಿಲ್ಲ ?"

ಶುಭದಾ ತನ್ನೆರಡು ಕಾತರದ ಕಣ್ಣುಗಳಿಂದ ಮಗಳ ಮುಖವನ್ನು ನೋಡುತ್ತಾ ಭಯದಿಂದ "ಇವತ್ತು ಏನೂ ಇಲ್ಲ" ಎಂದಳು.

"ಏನೂ ಇಲ್ಲ ?"

"ಮನೆಯಲ್ಲಿ ಒಂದು ಹಿಡಿ ಅಕ್ಕಿ ಕೂಡ ಇಲ್ಲ."

ಲಲನಾ ಮುಖವು ಒಣಗಿಹೋಯಿತು.

"ಹಾಗಾದರೆ ಏನು ಮಾಡುವುದಮ್ಮಾ? ಮಕ್ಕಳಿಗೆ ಏನು ಹಾಕುವುದು ?"

ಶುಭದಾ ಬೇರೊಂದು ಕಡೆ ಮುಖ ತಿರುಗಿಸಿ "ದೇವರಿಗೆ ಗೊತ್ತು" ಎಂದಳು.

ಸ್ವಲ್ಪ ಹೊತ್ತಾದ ಮೇಲೆ ಶುಭದಾ "ಲಲನಾ, ಹೋಗಿ ಒಂದು ಸಲ ನಿಮ್ಮ ಬಿಂದೂ ಚಿಕ್ಕಮ್ಮನ್ನ ಕೇಳಿ ಬರುತ್ತೀಯಾ ?" ಎಂದಳು.

"ಯಾಕಮ್ಮಾ...?"

"ಏನಾದರೂ ಕೊಡಬಹುದು."

ಲಲನಾ ಹೋದಳು. ಶುಭದಾ ಕಣ್ಣು ತುಂಬಾ ನೀರು ಹರಿಸಿ ಅತ್ತಳು....ಇಂತಹ ದಿನ ಬರುತ್ತೆ ಎಂದು ಯಾರಿಗೆ ಗೊತ್ತಿತ್ತು ? ಹೋಗಿ ಇನ್ನೊಬ್ಬರ ಹತ್ತಿರ ಭಿಕ್ಷೆ ಕೇಳಿ ಬಾ ಎಂದು ಮಗಳಿಗೆ ಎಂದೂ ಹೇಳಿರಲಿಲ್ಲ. ಅವಳು ಅವಮಾನದಿಂದ ಭೂಮಿಗಿಳಿದು ಹೋದಳು.

ಹಣೆಯ ಮೇಲೆ ಕೈಯಿಟ್ಟು ಶುಭದಾ ಬಹಳ ಹೊತ್ತು ಹಾಗೆಯೇ ಕೂತಿದ್ದಳು. ಸಮಯ ಸುಮಾರು ಹನ್ನೊಂದಾಗಿರಬೇಕು. ಆಗ ಎರಡನೆ ಹುಡುಗಿ ಛಲನಾಮಯಿ ಬಂದು "ಅಮ್ಮಾ, ಅನ್ನ ಹಾಕಮ್ಮ" ಎಂದಳು.

ಶುಭದಾ ಅವಳ ಮುಖದ ಕಡೆ ನೋಡುತ್ತಾ ಮಾತಾಡದೆ ಸುಮ್ಮನಿದ್ದಳು.

"ಹೊಟ್ಟೆ ಹಸಿಯುತ್ತೆ, ಅನ್ನ ಹಾಕಮ್ಮಾ " ಜವಾಬು ಕೊಡದೇಯಿದ್ದ ತಾಯಿಯನ್ನು ಮತ್ತೆ ಕೇಳಿದಳು.

"ಅಡುಗೆ ಇನ್ನೂ ಆಗಲಿಲ್ಲವೇ ?"

"ಇಲ್ಲ."

"ಏಕೆ ಆಗಲಿಲ್ಲ. ಚೆನ್ನಾಗಿ ನಿದ್ದೆ ಹೋಗಿ ಬೆಳಗ್ಗೆ ಹೊತ್ತಾಗಿ ಎದ್ದೆಯೇನೋ ..!" ಎಂದು ಏನೋ ಹೊಳೆದು ತಕ್ಷಣ ಅಡುಗೆಮನೆಯೊಳಕ್ಕೆ ಹೊಕ್ಕು ನೋಡಿ ಓಡಿ ಬಂದು "ಅಯ್ಯೋ, ಇದೇನಮ್ಮಾ, ಒಲೆಯೇ

ಹೊತ್ತಿಸಿ ಇಲ್ಲವಲ್ಲ ?"

"ಇಕೋ. ಈಗಲೇ ಹೊತ್ತಿಸಿ ಎಸರಿಡುತ್ತೇನೆ."

ಛಲನಾ ತಾಯಿಯ ಮುಖ ನೋಡಿ ಗಾಬರಿಯಾದಳು. ಹತ್ತಿರ ಬಂದು ಕೂತು "ಯಾಕಮ್ಮಾ, ಒಲೆ ಹೊತ್ತಿಸುವುದಕ್ಕೆ ಇಷ್ಟು ನಿದಾನ ?"

"ಇಕೋ....ಈಗೆಲ್ಲಾ ಆಗಿ ಹೋಗುತ್ತೆ, ತಡಿ."

"ಅಮ್ಮಾ, ನೀನು ಏಕೆ ಹೀಗಾಗಿದ್ದೀ ?"

ಈ ಸಮಯದಲ್ಲಿ ಒಳಕೋಣೆಯಿಂದ ಕಾಯಿಲೆಯ ಹುಡುಗ ಮಾಧವನು "ಅಮ್ಮಾ...ಏ, ಅಮ್ಮಾ...!" ಎಂದು ಕೂಗಿದನು.

ಶುಭದಾ ಭೀತಳಾಗಿ ಎದ್ದು "ನೀನಿಲ್ಲೇ ಕೂಡು ಛಲನಾ, ಮಾಧವ ಏಕೋ ಕೂಗುತ್ತಾನೆ" ಎಂದು ಮಗನ ಬಳಿ ಹೋದಳು.

* * * *

ಈ ಕಡೆ ಮನೆ ಬಿಟ್ಟು ಹೊರಗೆ ಬಂದ ಲಲನಾ ಭವತಾರಣ ಗಂಗೋಪಾಧ್ಯಾಯನ ಮನೆಯನ್ನು ಹೊಕ್ಕಳು. ನಿರಾಸೆಯಾಯಿತು. ಬಿಂದುವಾಸಿನಿ ಇಲ್ಲ. ಹಿಂದಿನ ದಿನವೇ ಗಂಡನ ಮನೆಗೆ ಹೊರಟು ಹೋಗಿದ್ದಳು. ಇದ್ದಕ್ಕಿದ್ದಹಾಗೆ ಗಂಡನ ಕರೆ ಬಂದು ಹೋಗಬೇಕಾಯಿತು. ಇಲ್ಲವಾದರೆ ಶುಭದಾಳನ್ನು ಒಂದು ಸಲ ನೋಡಿ ಹೋಗುತ್ತಿದ್ದಳು

ಒಣಗಿದ ಮುಖದಿಂದ ಲಲನಾ ಹಿಂದಿರುಗಿದಳು ಮುಂದೆ ಕಾಲಿಡಲಾಗಲಿಲ್ಲ. ಭವತಾರಣನ ಮನೆಗೆ ಬರುವಾಗಲೂ ನಾಚುಗೆಯಿಂದ ಕಾಲೆಳೆದುಕೊಂಡೇ ಬಂದಿದ್ದಳು. ಆದರೆ ಈಗಲಂತೂ ಬರಿಯ ಕೈಯಲ್ಲಿ ಹೋಗಲು ಕಾಲು ಚಲಿಸಲಿಲ್ಲ. ದಾರಿಯಲ್ಲೊಂದು ಮರದ ಕೆಳಗೆ ಬಹಳ ಹೊತ್ತು ನಿಂತಿದ್ದಳು.

ಆಮೇಲೆ ಇದ್ದಕ್ಕಿದ್ದ ಹಾಗೆ ಏನೋ ಹೊಳೆದು ನದಿಯ ಕಡೆ ಕಾಲು ಹಾಕಿದಳು. ಹತ್ತಿರದಲ್ಲಿಯೇ ಸದಾನಂದನ ಮನೆ. ಹೊರಗಡೆ ಬಯಲಲ್ಲಿ ಸದಾನಂದನು ಒಂದು ಕರುವನ್ನು ಮೈತಡವುತ್ತಾ ಅದನ್ನು ನಾನಾ ಮಾತುಗಳಿಂದ ಸಂಬೋಧನೆ ಮಾಡುತ್ತಾ ಕೂತಿದ್ದನು. ಲಲನಾ ಬಂದು ಅವನ ಬಳಿ ನಿಂತಳು.

"ಏನು ಬಂದೆ ಲಲನಾ ?"

"ಅತ್ತೆ ಮನೆಯಲ್ಲಿದಾಳೆಯೇ?"

"ಇಲ್ಲ. ಈಗ ತಾನೇ ಹೊರಗೆ ಎಲ್ಲೋ ಹೋದಳು."

ಲಲನಾ ಒಂದು ಹೆಜ್ಜೆ ಹಿಂದೆ ಹಾಕಿ ನಿಂತಳು. ಸದಾನಂದನು ಕರುವನ್ನು ಬಿಟ್ಟು ಲಲನಾಳ ಮುಖವನ್ನು ನೋಡುತ್ತಾ "ಅತ್ತೆಯ ಹತ್ತಿರ ಏನಾದರೂ ಕೆಲಸವಿತ್ತೇ?" ಎಂದನು.

"ಇತ್ತು."

"ಆಕೆ ಇಲ್ಲವಲ್ಲಾ. ನನ್ನ ಹತ್ತಿರ ಹೇಳಬಾರದೇ?"

"ಲಲನಾ ಕೂಡ ಅದೇ ಯೋಚನೆ ಮಾಡುತ್ತಿದ್ದಳು. ಆದರೆ ಹಾಗೆಂದು ಸದಾನಂದ ಹೇಳಿದ ತಕ್ಷಣ ನಾಚುಗೆಯಿಂದ ಮುಖವೆಲ್ಲಾ ಕೆಂಪಾಗಿಹೋಯಿತು.

"ಮನೆಯಲ್ಲಿ ಯಾರಿಗೂ ತಿನ್ನುವುದಕ್ಕಿಲ್ಲ....ಅದಕ್ಕೇ ಏನಾದರೂ ಕೇಳಲು ಬಂದೆ" ಎಂದು, "ಛೀ ಛೀ, ಹೇಗೆತಾನೇ ಕೇಳುವುದು? ಒಂದು ದಿನ ಊಟವಿಲ್ಲದೆ ಹೋದರೆ ಸಾಯುತ್ತಾಳೆಯೇ?....ಆದರೆ ಮಕ್ಕಳು ..."

ಸದಾನಂದನು ಅವಳ ಮುಖಭಾವವನ್ನು ನೋಡಿ ಗ್ರಹಿಸಿ ನಗುತ್ತಾ ಅವಳ ಕೈಯನ್ನು ಹಿಡಿದುಕೊಂಡನು. ಅವನು ಹುಚ್ಚನಲ್ಲವೇ! ಎಲ್ಲರಿಗೂ ಗೊತ್ತು ಅವನು ಹುಚ್ಚನೆಂದು. ಅದಕ್ಕೇ ಯಾವುದನ್ನು ಮಾಡಲು ಇತರರು ಹಿಂಜರಿಯುವರೋ, ಸಂಕೋಚಪಡುವರೋ, ಸದಾನಂದನಿಗೆ ಅದರಲ್ಲಿ ಸಂಕೋಚವಿಲ್ಲ—ಹೆದರಿಕೆಯಿಲ್ಲ. ಸಮಂಜಸ ಅಸಮಂಜಸಗಳು ಗೊತ್ತಿಲ್ಲದುದಕ್ಕೆ ತಾನೇ ಅವನು ಹುಚ್ಚ. ಅದಕ್ಕೇ ಅವನು ಸ್ವಚ್ಛಂದವಾಗಿ ಲಲನಾ ಕೈಯನ್ನು ಹಿಡಿದನು. ನಗುನಗುತ್ತಾ "ನಿಮ್ಮ ಸದೂ ಮಾವನ್ನ ಕಂಡರೆ ನಾಚುಗೆಯೇ ನಿನಗೆ ಲಲನಾ! ಹುಚ್ಚು ಸದಾನಂದನನ್ನ ಕಂಡರೆ ನಾಚುಗೆಯೇ?"—ಎಂದನು ಇದ್ದಕ್ಕಿದ್ದ ಹಾಗೆಯೇ ಅವಳ ಕೈಬಿಟ್ಟು "ಏನು ವಿಷಯ, ಹೇಳುವುದಿಲ್ಲವೇ?" ಎಂದು ಕೇಳಿದನು. ಅವನ ಮುಖ ಭಾವ, ಅವನ ಕಂಠಸ್ವರ, ...ಯಥಾಪ್ರಕಾರವೇ!....ನಗುತ್ತ ನಗುತ್ತಲೇ ಎಷ್ಟು ಹೊತ್ತಾದರೂ ಮಾತನಾಡಬಲ್ಲ.....

ಲಲನಾ ಅವನ ಮಾತಿಗೆ ಉತ್ತರ ಕೊಡಲಿಲ್ಲ. ಆಗ ಸದಾನಂದನು ನಗು ನಿಲ್ಲಿಸಿ ಗಂಭೀರ ಮುಖಭಾವದಿಂದ "ಏಕೆ ಲಲನಾ, ಏನಾದರೂ ಆಗಿ

ದೆಯೇ ಮನೆಯಲ್ಲಿ?" ಎಂದನು. ಲಲನಾ ಮುಖ ತಗ್ಗಿಸಿ ಕಣ್ಣು ಮುಚ್ಚಿ ಗದ್ಗದ ಸ್ವರದಲ್ಲಿ "ನನಗೊಂದು ರೂಪಾಯಿದ್ದರೆ ಕೊಡುತ್ತೀಯಾ?" ಎಂದಳು.

ಸದಾನಂದನು ಮೊದಲಿನಂತೆ, ಸ್ವಲ್ಪ ಇನ್ನೂ ಗಟ್ಟಿಯಾಗಿಯೇ ನಕ್ಕು "ಓಹೋ, ಈ ಮಾತೇ? ಅದಕ್ಕೇ ನೀನು ಈ ಮಾತು ನನ್ನ ಹತ್ತಿರ ಹೇಳುವುದಕ್ಕೆ ಹೆದರಿದ್ದು? ಆದರೆ ರೂಪಾಯಿಯೇಕೆ?" ಎಂದನು.

ಲಲನಾಗೆ ಮತ್ತೂ ನಾಚುಗೆಯಾಯಿತು. ಲಲನಾ ಏನು ಹೇಳಲೂ ತೋಚದೆ ಕೆನ್ನೆಗಳು ಮತ್ತೂ ಕೆಂಪಾಗಿ ಕಡೆಗೆ "ಅಪ್ಪ ಮನೆಯಲ್ಲಿ ಇಲ್ಲ" ಎಂದಳು.

ಸದಾನಂದನು ಮನೆಯೊಳಗೆ ಹೊಕ್ಕು ಐದು ರೂಪಾಯಿಗಳನ್ನು ತಂದು ಲಲನಾ ಕೈಯಲ್ಲಿ ಹಾಕಿದನು ಹಾಕುತ್ತಾ "ಅಲ್ಲವೇ ಲಲನಾ, ಬೇರೆ ಮನುಷ್ಯರ ಹತ್ತಿರ ನಾಚುಗೆ, ಹುಚ್ಚನ ಹತ್ತಿರವೂ ನಾಚುಗೆಯೇ..." ಎಂದು ಬೇರೆ ಕಡೆ ಮುಖ ತಿರುಗಿಸಿ ಸ್ವಲ್ಪ ನಕ್ಕು "ಹೀಗೇ ಯಾವಾಗಲಾದರೂ ಬೇಕಿದ್ದರೆ ನಿಮ್ಮ ಹುಚ್ಚ ಸದೂ ಮಾವನ ಹತ್ತಿರ ಬಂದು ಕೇಳಬೇಕು, ಗೊತ್ತಾಯಿತೇ?....ಕೇಳುತ್ತೀಯಾ?" ಎಂದನು. ಲಲನಾ ತನ್ನ ಕೈಯಲ್ಲಿದ್ದ ರೂಪಾಯಿಗಳನ್ನು ನೋಡಿ "ಇಷ್ಟೊಂದು ರೂಪಾಯಿಯೇಕೆ?" ಎಂದಳು.

"ಎಷ್ಟಿದೆ? ಇಟ್ಟಿದ್ದರೆ ಏನೂ ಆಗುವುದಿಲ್ಲ?"

"ಇರಬಹುದು. ಇಷ್ಟು ರೂಪಾಯಿ ನಮಗೆ ಆವಶ್ಯಕವಿಲ್ಲ."

ಹೀಗೆಂದು ರೂಪಾಯಿ ಹಿಂದೆ ಕೊಡಲು ಬಂದುದನ್ನು ನೋಡಿ ಸದಾನಂದನು ಮತ್ತೆ ಅವಳ ಕೈಹಿಡಿದನು. ಅವಳನ್ನು ಹಿಯ್ಯಾಳಿಸುವ ಧ್ವನಿಯಲ್ಲಿ "ಛೀ ಛೀ! ಸಣ್ಣ ಮಕ್ಕಳ ಹಾಗೆ ಆಡಬೇಡ. ರೂಪಾಯಿಗಳು ಬೇಕಿಲ್ಲದೆ ಹೋದರೆ ಇನ್ನು ಯಾವತ್ತಾದರೂ ವಾಪಸು ಕೊಡುವಿಯಂತೆ. ಆಮೇಲೆ ಇನ್ನೊಂದು, ಈ ವಿಷಯ ಯಾರಿಗೂ ಹೇಳಬೇಡ. .ಹಾಗೊಂದು ಪಕ್ಷ ಹೇಳಲೇಬೇಕಾದಲ್ಲಿ ಸದೂ ಮಾವ ರೂಪಾಯಿಗೆ ಒಂದಾಣೆ ಬಡ್ಡಿಯ ಹಾಗೆ ಸಾಲ ಕೊಟ್ಟಿದ್ದಾನೆ ಅನ್ನು." ಎಂದನು.

....ನಾನಾ ಭಾವನೆಗಳಿಂದ ಏನೂ ಹೇಳಲೂ ತೋಚದೆ ಲಲನಾಳ

ಕಣ್ಣಲ್ಲಿ ನೀರು ತುಂಬಿತು. ಬಿಕ್ಕಿ ಬಿಕ್ಕಿ ಅಳು ಬಂದಿತು. ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಅಳುವುದನ್ನು ನೋಡಿ ಸದಾನಂದನು ಅವಳ ತಲೆಯ ಮೇಲೆ ಕೈಯಿಟ್ಟು ಮೃದುವಾಗಿ ತಡವುತ್ತಾ "ಏನಾಯಿತು...ಲಲನಾ..... ಅಯ್ಯೋ...ಹುಚ್ಚಿ....ಅಳುವುದಕ್ಕೆ ನಾನೇನು ಅಂದೆ!" ..ಎಂದನು. ಅವಳು ಅಳು ನಿಲ್ಲಿಸುತ್ತಲೇ ಸದಾನಂದನು "ಇನ್ನು ಮನೆಗೆ ಹೋಗು....ನಾನು ಹೇಳಿದ್ದು ಜ್ಞಾಪಕವಿರಲಿ" ಎಂದನು.

ಲಲನಾ ಮನೆಗೆ ಬಂದು ರೂಪಾಯಿಗಳನ್ನು ತಾಯಿಯ ಕೈಯಲ್ಲಿ ಕೊಟ್ಟು ಎಲ್ಲವನ್ನೂ ಹೇಳಿದಳು ...ದೇವರೇ ಸಹಾಯಕ್ಕೆ ಬಂದ ಸದೂ ಮಾವನ ರೂಪದಲ್ಲಿ ಎಂದು, ಶುಭದಾ ಮನಸ್ಸಿನಲ್ಲಿ ಅವನಿಗೆ ಶುಭವನ್ನು ಕೋರಿ ಅಡುಗೆಗೆ ತೊಡಗಿದಳು. ಆದಿನ ಎಲ್ಲರೂ ಊಟ ಮಾಡಿದರು. ಶುಭದಾ ಒಂದು ತೊಟ್ಟು ನೀರು ಕೂಡ ಮುಟ್ಟಲಿಲ್ಲ. ರಾಸಮಣಿ ಎಷ್ಟೋ ಅಂದಳು, ರೇಗಿದಳು....ಲಲನಾ ಕೂಡ ಎಷ್ಟೊ ಕೇಳಿಕೊಂಡಳು. ಆದರೂ ಶುಭದಾ ಹರದಿಂದ ಏನೂ ತೆಗೆದುಕೊಳ್ಳಲಿಲ್ಲ.

ಸಾಯಂಕಾಲ ಹಾರಾಣಚಂದ್ರನು ಸುಸ್ತಾಗಿ ಬಟ್ಟೆ ಬರೆಗಳೆಲ್ಲಾ ಧೂಳಿನಿಂದ ಮಾಸಿ ನೊಂದ ಮುಖದಿಂದ ಮನೆಯೊಳಗೆ ಬಂದನು. ಹೊದ್ದ ವಸ್ತ್ರದ ಒಂದು ಕೊನೆಯಲ್ಲಿ ಎರಡು ಸೇರುಗಳವರೆಗೂ ಅಕ್ಕಿಯಿತ್ತು. ಇನ್ನೊಂದು ಕೊನೆಯಲ್ಲಿ ಸ್ವಲ್ಪ ಉಪ್ಪು, ಎರಡು, ಮೂರು ಆಲೂಗಡ್ಡೆ, ನಾಲ್ಕೆಂಟು ಮೆಣಸಿನಕಾಯಿ, ಮುಂತಾದುವನ್ನೆಲ್ಲಾ ಗಂಟುಕಟ್ಟಿದ್ದನು. ಒಂದು ಪಾತ್ರೆಯನ್ನು ತಂದು ಅವನ್ನೆಲ್ಲಾ ಅದರಲ್ಲಿ ಹಾಕುತ್ತಿರುವಾಗ ಶುಭದಾಗೆ ತಡೆಯಲು ಆಗದೆ ಅಳು ಬಂದಿತು. ಏಕೆಂದರೆ ಅಕ್ಕಿ ಎಲ್ಲಾ ಒಂದು ಬಗೆಯದಲ್ಲ. ಸ್ವಲ್ಪ ದಪ್ಪಕ್ಕಿ, ಸ್ವಲ್ಪ ಸಣ್ಣ, ಇನ್ನು ಮಧ್ಯಸ್ಥ.... ಹೀಗೆ ಎಲ್ಲಾ ಮಿಶ್ರವಾಗಿತ್ತು........"ಅಯ್ಯೋ, ಇವರು ನಮ್ಮ ಹೊಟ್ಟೆ ತುಂಬಿಸಲಿಕ್ಕೆ ಹೋಗಿ ಮನೆ ಮನೆಯಲ್ಲೂ ಭಿಕ್ಷೆ ಬೇಡಿಕೊಂಡು ಬಂದಿದ್ದಾರಲ್ಲ! ... ಸುಡಲಿ ನನ್ನ ಜನ್ಮ" ಎಂದುಕೊಂಡು ಅತ್ತಳು.

## ೮

ಸಾಯಂಕಾಲವಿನ್ನೂ ಆಗಿಲ್ಲ. ಹಾಸುಗೆಯ ಪಕ್ಕದಲ್ಲಿ ಕೂತಿದ್ದ ಅಕ್ಕ ಲಲನಾಳನ್ನು ಕುರಿತು ಮಾಧವ "ಅಕ್ಕಾ, ನನಗೆ ಇನ್ನು ವಾಸಿಯಾಗೊಲ್ಲ ಅಲ್ಲವೇನೇ?" ಎಂದನು.

ಲಲನಾ ವಿಶ್ವಾಸದಿಂದ ತಮ್ಮನ ತಲೆಯ ಮೇಲೆ ಕೈಯಾಡಿಸುತ್ತಾ ಮೃದುವಾದ ಧ್ವನಿಯಲ್ಲಿ "ಯಾಕೋ ಮಗು ವಾಸಿಯಾಗೊಲ್ಲ! ಇನ್ನೆರಡು ಮೂರು ದಿನಗಳಲ್ಲಿ ನೋಡುತ್ತಿರು ಎದ್ದು ಓಡಾಡುತ್ತೀ."

"ಇಂತಹ ಎಷ್ಟು ಎರಡು ಮೂರು ದಿನಗಳು ಆಗಿಹೋಯಿತೋ, ಆದರೂ ವಾಸಿಯಾಗಲಿಲ್ಲ."

"ಈ ಸಲ ಆಗಿಯೇ ಆಗುತ್ತೆ. ನೋಡುತ್ತಾ ಇರು."

"ಆಗದೆ ಹೋದರೆ?"

"ಯಾಕೆ ಆಗೊಲ್ಲ. ಖಂಡಿತ ಸರಿಹೋಗುತ್ತೆ."

"ಒಂದು ವೇಳೆ ಆಗದೆ ಹೋದರ?"

ಲಲನಾ ಆಗ ಅವನ ದುರ್ಬಲವಾದ ಕ್ಷೀಣ ಕೈಗಳನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡು ಸ್ವಲ್ಪ ಗಂಭೀರಭಾವದಿಂದ "ಹಾಗೆಲ್ಲಾ ಅನ್ನಬಾರದಪ್ಪಾ, ಮಾಧೂ" ಎಂದಳು.

ಮಾಧವ ಸುಮ್ಮನಿದ್ದನು. ಸ್ವಲ್ಪ ಹೊತ್ತಾದ ಮೇಲೆ "ಮಾಧೂ, ಸ್ವಲ್ಪ ಏನಾದರೂ ತಿನ್ನುತ್ತೀಯಾ?" ಎಂದಳು.

ಮಾಧವನು ತಲೆಯಲ್ಲಾಡಿಸಿ "ಬೇಡ" ಎಂದನು....ಇನ್ನೂ ಸ್ವಲ್ಪ ಹೊತ್ತಾದಮೇಲೆ ಔಷಧಿ ಕುಡಿಯುವ ಸಮಯ ಬಂದಾಗ ಲಲನಾ ಗ್ಲಾಸಿನಲ್ಲಿ ಔಷಧಿಯನ್ನು ಹಾಕಿಕೊಂಡು ಕುಡಿಸಲು ಬಂದಳು. "ಇದನ್ನು ಸ್ವಲ್ಪ ಕುಡಿದುಬಿಡಪ್ಪ" ಎಂದಳು.

ಮಾಧವ ಮಾತಾಡದೆ ತಲೆಯಲ್ಲಾಡಿಸಿದನು. ಔಷಧಿ ಕುಡಿಯುವುದೆಂದರೆ ಅವನು ಯಾವಾಗಲೂ ಹೀಗೆಯೇ. ಮೊದಲು ಬೇಡವೆಂದು ಹಠ ಮಾಡಿ ಆಮೇಲೆ ಗದರಿಸಿಕೊಂಡು ಕುಡಿಯುವನು.

ಲಲನಾ "ಛೇ, ಸುಮ್ಮನೆ ಹಠಮಾಡಬಾರದು. ಒಳ್ಳೆ ಮಾತಲ್ಲಿ ಕುಡಿ ಮತ್ತೆ" ಅಂದಳು. ಮಾಧವ, ಏನು ಆಯಿತೋ ಏನೋ, ಗ್ಲಾಸನ್ನು ಕೈಗೆ ತೆಗೆದುಕೊಂಡು ಔಷಧಿ ಕೆಳಗೆ ಚೆಲ್ಲಿಬಿಟ್ಟನು. ಎಂದೂ ಹೀಗೆ ಮಾಡಿರಲಿಲ್ಲ. ಲಲನಾ ಆಶ್ಚರ್ಯಪಟ್ಟಳು. ವಿಪರೀತ ಕೋಪವೂ ಬಂತು.

"ಇದೇನು ಬಂತೋ ನಿನಗೆ... ಔಷಧಿ ಯಾಕೋ ಚೆಲ್ಲಿದ್ದು ?" ಎಂದು ಛೀಮಾರಿ ಮಾಡಿದಳು. "ಹೌದು. ನಾನಿನ್ನುಮೇಲೆ ಔಷಧಿ ಕುಡಿಯುವುದಿಲ್ಲ."

"ಹಾಗನ್ನುವುದಕ್ಕಾಗುತ್ತೆಯೇನೋ? ಔಷಧಿ ಬೇಡ ಅಂದರೆ ?"

"ಸುಮ್ಮ ಸುಮ್ಮನೆ ಕುಡಿದರೆ ಏನು ಆಗುತ್ತೆ. ವಾಸಿಯಾಗದೆ ಹೋದ ಮೇಲೆ ಯಾಕೆ ಕುಡಿಯಬೇಕು ?"

"ಯಾರು ಹೇಳಿದರು ವಾಸಿಯಾಗುವುದಿಲ್ಲ ಅಂತ ?"

ಅದಕ್ಕೆ ಉತ್ತರವಿಲ್ಲ. ಸುಮ್ಮನಿದ್ದನು. ಲಲನಾ ಹತ್ತಿರ ಬಂದು ಕೂತಳು. ಸಮಾಧಾನಮಾಡುತ್ತಾ ಅವನ ಮೈ ಮೇಲೆ ಆದರದಿಂದ ಕೈಯಾಡಿಸುತ್ತಾ "ಮಾಧೂ ...ನನ್ನ ಮಾತು ಕೇಳೊಲ್ಲವೇನೋ ಮತ್ತೆ ?"

ಮಾಧವನು ಒದ್ದೆಯ ಕಣ್ಣುಗಳಿಂದ ಅವಳ ಮುಖವನ್ನು ನೋಡಿದನು.

"ನನ್ನ ಮಾತು ಯಾರಾದರೂ ಕೇಳಿದರೆ ತಾನೇ ನಾನೂ ಅವರ ಮಾತು ಕೇಳುವುದು ?"

"ಯಾರು ಕೇಳಲಿಲ್ಲ ನಿನ್ನ ಮಾತು ?"

"ಯಾರು ಕೇಳುತ್ತಾರೆ? ನಾನೇನಾದರೂ ಒಂದು ಮಾತು ಕೇಳಿದರೆ ಅಮ್ಮ ಸಿಡಕ್ಕಂತಾಳೆ. ಅಪ್ಪನೂ ರೇಗುತ್ತಾನೆ. ಅತ್ತೆ ಮಾತೇ ಆಡುವುದಿಲ್ಲ, ನೀನೂ ಅಷ್ಟೆ. ಮತ್ತೆ ನಾನೇಕೆ ನಿಮ್ಮ ಮಾತು ಕೇಳಬೇಕು ?" ಅವನ ಕಣ್ಣುಗಳಲ್ಲಿ ನೀರು ತುಂಬಿತು.

ಲಲನಾ ಸ್ನೇಹದಿಂದ ಅವನ ಕಣ್ಣೊರಸುತ್ತಾ "ನಾನು ಕೇಳುತ್ತೇನೋ, ಏನುಬೇಕೋ ಹೇಳು" ಎಂದಳು.

"ಹಾಗಾದರೆ ಹೇಳು, ವಾಸಿಯಾಗದೆ ಹೋದರೆ ಯಾವಾಗಲೂ ಹೀಗೆಯೇ ಮಲಗಿರಬೇಕಾಗುತ್ತೆಯೇ ?"

"ಹಾಗೆ ಏಕೆ ಆಗಬೇಕು ?"

"ಮತ್ತೇನು ?"

ಲಲನಾಳ ತುಟಿಗಳದುರಲು ಆರಂಭವಾಯಿತು, ಮಾತು ಹೊರಡಲಿಲ್ಲ. ಮಾಧವನು ಅವಳ ಮುಖವನ್ನು ಹಾಗೆಯೇ ನೋಡುತ್ತಿದ್ದು "ಅಕ್ಕಾ, ನನ್ನ ತಮ್ಮ ಯದು ಹೀಗೆಯೇ ಮಲಗಿದ್ದನಲ್ಲಾ ? ಅವನಿಗೆ ವಾಸಿಯಾಗಲಿಲ್ಲ. ಆಮೇಲೆ ಸತ್ತುಹೋದ. ಅಪ್ಪ ಅತ್ತರು—ಅಮ್ಮ ಅತ್ತಳು; ಅತ್ತೇ, ನೀವೆಲ್ಲಾ ಅತ್ತಿರಿ. ಅಮ್ಮ ಇವತ್ತೂ ಅಳುತ್ತಾಳೆ. ಆದರೆ ಅವನು ಇನ್ನು ಬರುವುದಿಲ್ಲ. ನಾನೂ ಅವನ ಹಾಗೆಯೇ ಸತ್ತು ಹೋದರೆ ?"

ಲಲನಾ ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡಳು. ಬೇರೆ ಯಾವಾಗಲಾದರೂ ಅವನು ಹೀಗೆಂದಿದ್ದರೆ "ಹಾಗೆಲ್ಲಾ ಅಂತಾರೇನೋ, ಛೀ" ಎಂದು ಬಾಯಿ ಮುಚ್ಚಿಸುತ್ತಿದ್ದಳು. ಇಂದು ಆಗಲಿಲ್ಲ. ಮಾಧವನೂ ಸ್ವಲ್ಪ ಹೊತ್ತು ಸುಮ್ಮನಿದ್ದು ಪುನಃ "ಅಕ್ಕಾ, ಸತ್ತಮೇಲೆ ಏನಾಗುತ್ತಕ್ಕಾ ?" ಎಂದನು

ಲಲನಾ ಮುಖ ಮುಚ್ಚಿಕೊಂಡೇ "ಏನೂ ಇಲ್ಲ. ನಾವೆಲ್ಲಾ ಅಳುತ್ತೇವೆ ಅಷ್ಟೆ" ಎಂದಳು. ಆಗಲೂ ಅವಳು ಅಳುತ್ತಲೇ ಇದ್ದಳು. ಮಾಧವ ಅದನ್ನು ನೋಡಿದನೋ, ಗಮನಿಸಿದನೋ ಇಲ್ಲವೋ....! ಆದರೆ ಅವನು —ಇವತ್ತು ಬಿಡುವುದಿಲ್ಲ. ಅನೇಕ ದಿನಗಳಿಂದ ಈ ವಿಷಯ ಕೇಳಿ ಎಲ್ಲಾ ತಿಳಿದುಕೊಳ್ಳೋಣವೆನ್ನಿಸಿದೆ. ಇವತ್ತು ತಿಳಿದುಕೊಳ್ಳಲೇಬೇಕು—ಎಂದು ಪುನಃ ಅದೇ ಹಠದಿಂದ ಕೇಳಿದನು. "ಅಕ್ಕಾ! ಸತ್ತುಹೋದ ಮೇಲೆ ಎಲ್ಲಿಗೆ ಹೋಗುತ್ತೇವೆ ?"

ಲಲನಾ ಮೇಲೆ ಕೈತೋರಿಸುತ್ತಾ "ಅಲ್ಲಿಗೆ ..ಆಕಾಶಕ್ಕೂ ಮೇಲೆ" ಎಂದಳು.

ಆಕಾಶದ ಮೇಲುಗಡೆ! ಹುಡುಗನಿಗೆ ಬಹಳ ವಿಸ್ಮಯವಾಯಿತು.

"ಆದರೆ ಅಲ್ಲಿ ಯಾರ ಹತ್ತಿರ ಇರುವುದು ?"

ಲಲನಾ ಬೇರೊಂದು ದಿಕ್ಕು ನೋಡುತ್ತಾ "ನನ್ನ ಹತ್ತಿರ" ಎಂದಳು.

ಮಾಧವನಿಗೆ ಸಮಾಧಾನವಾಯಿತು. ನಗುತ್ತಾ "ಹಾಗಾದರೆ ಒಳ್ಳೆಯದೇ ಆಯಿತು. ನಮಗೆ ಅಲ್ಲೊಂದು ಮನೆಯಿದೆಯೇನು ?" ಎಂದನು.

"ಓಹೋ, ಇಲ್ಲವೆ ?"

"ಹಾಗಾದರೆ ಇನ್ನೂ ಒಳ್ಳೆಯದು. ನಾವಿಬ್ಬರೂ ಅಲ್ಲಿ ಸುಖವಾಗಿರಬಹುದು ಬಿಡು. ಅಲ್ಲವೇ ?"

"ಯಾಕಲ್ಲ ?" ಲಲನಾ ಮನಸ್ಸಿನಲ್ಲಿಯೇ ಪ್ರಾರ್ಥನೆಮಾಡಿಕೊಂಡಳು. "ಹಾಗೆಯೇ ಆಗಬಾರದೇ ದೇವರೇ ?" ಎಂದು.

ಮಾಧವನು ಕೈ ಚಾಚಿ ಅಕ್ಕನ ಮುಖವನ್ನು ತನ್ನ ಕಡೆ ತಿರುಗಿಸಿ "ಅಕ್ಕಾ, ಅಲ್ಲಿ ನಮಗೆ ಇಷ್ಟ ಬಂದದ್ದನ್ನು ತಿನ್ನಬಹುದು, ಅಲ್ಲವೇನೇ ?" ಎಂದನು.

"ಓಹೋ ! ಅಗತ್ಯವಾಗಿ."

"ಬೇಕಾದಷ್ಟು ದಾಳಿಂಬೆ ಹಣ್ಣು ಇರುತ್ತದಲ್ಲಾ ?"

"ಓ, ಇದ್ದೇ ಇರುತ್ತೆ."

ಹುಡುಗನು ಸಂತೋಷದಿಂದ ನಕ್ಕು ಆ ಪಾರ್ಶ್ವ ತಿರುಗಿದನು. ಮತ್ತೆ ತಿರುಗಿ

"ಅಕ್ಕಾ....ಯಾವಾಗ ಅಲ್ಲಿಗೆ ಹೋಗುವುದು ?" ಎಂದನು.

"ಮಾಧೂ !"

"ಯಾಕಕ್ಕಾ ?"

"ಅಮ್ಮನ್ನ ಬಿಟ್ಟು ಒಬ್ಬನೇ ಹೇಗೋ ಹೋಗುತ್ತೀ ?"

"ಯಾಕೆ? ಅಮ್ಮನೂ ಬರುತ್ತಾಳೆ."

"ಅಮ್ಮ ಬರುವುದಕ್ಕಾಗದೆ ಹೋದರೆ ..."

"ನಾನು ಬಲವಂತ ಮಾಡಿ ಕರೆದುಕೊಂಡು ಹೋಗುತ್ತೇನೆ."

"ಆದರೂ ಬರದೇ ಹೋದರೆ ?"

ಆಗ ಮಾಧವನು ಬಹಳ ವಿಷಣ್ಣನಾದನು. "ಅಕ್ಕಾ, ಅಮ್ಮ ಯಾವಾಗಲೂ ಅಲ್ಲಿಗೆ ಹೋಗುವುದಿಲ್ಲವೇ ?"

"ಹೋಗುತ್ತಾಳೆ ಆದರೆ ಬಹಳ ದಿನಗಳಾದ ಮೇಲೆ !"

"ಹಾಗೇ ಆಗಲಿ. ನಾನು ಮೊದಲು ಹೋಗುತ್ತೇನೆ. ಆಮೇಲೆ ಅಮ್ಮ ಬರಲಿ."

ಸ್ವಲ್ಪ ಹೊತ್ತು ಸುಮ್ಮನಿದ್ದು "ಅಮ್ಮನನ್ನು ಕೇಳೋಣವೇ ?"

ಎಂದನು.

"ಕೂಡದು. ಕೇಳಿದರೆ—ತಾನೂ ಬರುವುದಿಲ್ಲ. ನಮ್ಮನ್ನೂ ಹೋಗ ಗೊಡಿಸುವುದಿಲ್ಲ."

ಮಾಧವನು ಭಯದಿಂದ "ಹಾಗಾದರೆ ಕೇಳುವುದು ಬೇಡ. ನೀನು ಬೇಕಾದರೆ ನನಗೆ ಔಷಧಿ ಕುಡಿಸು. ನಾನು ಮಲಗುತ್ತೇನೆ" ಎಂದನು. ಔಷಧಿ ಕುಡಿದು ಕಹಿ ಕಳೆದುಕೊಳ್ಳುವುದಕ್ಕೆ ಒಂದೆರಡು ದ್ವೀಪದ್ರಾಕ್ಷಿ ತಿಂದು ಮಾಧವಚಂದ್ರನು ಮನಸ್ಸಿನಲ್ಲಿ ಆಕಾಶದ ಕಥೆಯನ್ನು ಕಲ್ಪಿಸಿ ಕೊಂಡು ಕನಸುಕಾಣುತ್ತಾ ಹೋದನು. ಅಲ್ಲಿ ಏನೇನು ಮಾಡಬಹುದು,— ಎಲ್ಲಿ ಬೇಕಾದರೂ ಅಲೆಯಬಹುದು, ಎಷ್ಟು ದಾಳಿಂಬೆಹಣ್ಣು ತಿನ್ನ ಬಹುದು! ತಾನು ತೃಪ್ತಿಯಾಗುವಷ್ಟು ತಿಂದು ಅಮ್ಮನಿಗೆ ಸ್ವಲ್ಪ ಕಳುಹಿಸ ಬಹುದು—ಆದರೆ ಛಲನಾಗೆ ಒಂದೂ ಕೊಡುವುದಿಲ್ಲ. ಬರೀ ಸಿಪ್ಪೆ ಅವಳ ಮೈಮೇಲೆ ಬಿಸಾಡಿ ಬಿಡುವುದು....ಅವಳು ಕೇಳುತ್ತಾಳೆ, ಹೆದರಿಸು ತ್ತಾಳೆ ...ಒಂದು....ಒಂದಾದರೂ ಕೊಡುವುದಿಲ್ಲ, ಒಂದು ಬೀಜವೂ ಕೂಡ ಅವಳು ಬಹಳ ಅತ್ತರ, ಹೋದರೆ ಹೋಗಲಿ ಎಂದು ಒಂದೆರಡು ಕೊಟ್ಟರೂ ಕೊಡುತ್ತೇನೆ .. ಹೀಗೆಯೇ ಎಷ್ಟೋ ಮನಸ್ಸಿನ ಸಾಮ್ರಾಜ್ಯದಲ್ಲಿ ಕನಸು ಮೆರೆದು, ತಿಳಿಯದೆಯೇ ನಿದ್ದೆ ಹೋದನು.

ಈ ಕಡೆ ಲಲನಾ....ಅವಳು ಮೇಲುಗಡೆ ತನ್ನ ಕೊಠಡಿಗೆ ಹೋಗಿ ಬಾಗಿಲು ಹಾಕಿಕೊಂಡು ಮಲಗಿದಳು. ಎಷ್ಟು ಹೊತ್ತಾದರೂ ಕೆಳಗೆ ಬರಲಿಲ್ಲ. ಅತ್ತೆ ಕೂಗಿದಳು, ಅಮ್ಮ ಕೂಗಿದಳು ಛಲನಾ, ಹಾರಾಣಚಂದ್ರ—ಎಲ್ಲರೂ ಕೂಗಿದರು. ಅವಳಾದರೆ ಬಾಗಿಲು ತೆಗೆದು ಕೆಳಗೆ ಬಂದಿದ್ದರೆ ಸರಿ!

"ನನಗೆ ತಲೆ ನೋಯುತ್ತೆ. ನನ್ನನ್ನು ಕೂಗಬೇಡಿ....ಏನು ಮಾಡಿ ದರೂ ಏಳುವುದಕ್ಕಾಗದು."

* * * *

ಮಾರನೆಯ ದಿನ ಮಾಧವನ ಬಗೆಯೇ ಬದಲಾಯಿಸಿತ್ತು. ಮೊದಲೇ ಶಾಂತ ಸ್ವಭಾವದ ಹುಡುಗ....ಕಾಯಿಲೆಯ ದೆಸೆಯಿಂದ ಆಗಾಗ ಹಠ ಮಾಡುತ್ತಿದ್ದನು. "ಇದು ಬೇಡ ...ಸೇರೊಲ್ಲ. ಅದು ಕೊಡು. ಅದು ಸೇರೊಲ್ಲ....ಇದು ಬೇಕು." ಹೀಗೆಂದು ಅನ್ನುತ್ತಿದ್ದವನು ಈಗ ಮಾತಿಲ್ಲದೆ

ಕೊಟ್ಟದ್ದನ್ನು ತಿನ್ನುವನು. ಔಷಧಿಯನ್ನಂತೂ ಹಠವಿಲ್ಲದೆ ಕುಡಿಯುವನು. ಯಾವಾಗಲೂ ಹಸನ್ಮುಖಿಯಾಗಿಯೇ ಇರುವನು. ಅಕ್ಕ ಹತ್ತಿರ ಕೂತು ಕೊಂಡಿದ್ದರೆ ನಾಕು. ಅವನಿಗೆ ಬೇರೇನೂ ಬೇಡ. ಇಬ್ಬರೂ ಮೆಲ್ಲಮೆಲ್ಲಗೆ ಏನೇನೋ ಮಾತನಾಡಿಕೊಳ್ಳುವರು. ಬೇರೆ ಯಾರಾದರೂ ಬಂದರೆ ನಿಲ್ಲಿಸಿ ಬಿಡುವರು.

ಈ ಕೆಲವು ದಿವನಗಳಿಂದ ಮನೆಯಲ್ಲಿ, ಅಷ್ಟು ಅಭಾವವಿಲ್ಲ. ಎಲ್ಲಾ ಮುಗಿದು ಹೋದಾಗೆಲ್ಲಾ ಲಲನಾ ಪೆಟ್ಟಿಗೆಯಿಂದ ಒಂದೊಂದು ರೂಪಾಯಿ ತೆಗೆದು ಕೊಡುವಳು. ಶುಭದಾ "ಇವಳೆಲ್ಲೋ ಹೋಗಿ ರೂಪಾಯಿ ನಾಲ ತಂದಿದ್ದಾಳೆ"ಂದುಕೊಂಡಳು. ರಾಸಮಣಿಯು ಹಾರಾಣನೇ ತಂದು ಮಗಳ ಕೈಯಲ್ಲಿ ಕೊಟ್ಟಿದ್ದಾನೆಂದು ತಿಳಿದುಕೊಂಡಳು. ಹಾರಾಣನು ಮಾತ್ರ "ದುಡ್ಡು ಎಲ್ಲಿಂದ ಬಂದಿದ್ದರೆ ಏನು ಈಗ ? ಅಂತು ದುಡ್ಡು ಇದೆ ಸದ್ಯಕ್ಕೆ ಪರವಾಯಿಲ್ಲ" ಎಂದುಕೊಳ್ಳುವನು. ಎಲ್ಲಿಂದಾದರೂ ಬರಲಿ. ಸ್ವಚ್ಛಂದ ವಾಗಿ ಕಳೆದರೆ ನಾಕು. ಅವನು ತಾನೇ ಎಲ್ಲಿಂದ ತರುತಾನೆ? ...ಆದರೆ ಅವ ನಿಗೆ ಈಗ ಒಂದರ ಅಭಾವ ..ಅಫೀಮು ಅದರ ದಾಸ್ಯ ಹೋಯಿತಲ್ಲ ಎಂದು ಸಂತೋಷವಿಲ್ಲ. ಆಗಾಗ ಸಿಗುತ್ತಿದ್ದ ಅದರ ಅಮಲಿನ ಕಲ್ಪನಾ ಸಾಮ್ರಾಜ್ಯವು ಪೂರ್ತಿಯಾಗಿ ಬಿಟ್ಟು ಹೋದರೆ ಏನು ಗತಿ?....ಆದರ . ಮತ್ತೆ ಅಂದುಕೊಳ್ಳುವನು. ಸದ್ಯ ಹೊಟ್ಟೆಗೆ ಅನ್ನವಾದರೂ ಸಿಗುತ್ತಿದೆ ಯಲ್ಲಾ ? ಇನ್ನು ಅಫೀಮಿಗೋಸ್ಕರ ಮನಸ್ಸೇಕೆ ಕೆಡಿಸಿಕೊಳ್ಳಬೇಕು? ಸಮಯ ಬಂದರೆ ಅದೂ ಸಿಕ್ಕುತ್ತೆ . ಈಗ ಮಾತ್ರ ಹೇಗಿದೆಯೋ ಹಾಗೆಯೆ ಇರೋಣ.

*  *  *  *

ಕೆಲವು ದಿನಗಳ ನಂತರ ಸದಾನಂದನ ಚಿಕ್ಕಮ್ಮ ಅವನ ಹತ್ತಿರ ಕಾಶಿಗೆ ಕರದುಕೊಂಡು ಹೋಗೆಂದು ತಗಾದೆ ಮಾಡಿದಳು. "ಮಗೂ, ನನ್ನನ್ನೊಂದು ಸಲ ಕಾಶಿಗೆ ಕರೆದುಕೊಂಡು ಹೋಗಿ ದರ್ಶನಮಾಡಿಸಿ ಕೊಂಡು ಬಾಪ್ಪ. ಎಷ್ಟು ದಿವಸ ಬದುಕಿರುತ್ತೇನೆಯೋ ಯಾರಿಗೆ ಗೊತ್ತು. ಜನ್ಮ ಇರುವುದರೊಳಗಾಗಿ ಕಾಶೀವಿಶ್ವೇಶ್ವರನ ದರ್ಶನ ಮಾಡಿಕೊಂಡು ಬಂದು ಬಿಡಬೇಕು" ಎಂದಳು.

ಸದಾನಂದನು ಚಿಕ್ಕಮ್ಮನಿಗೆ ಯಾವುದಕ್ಕೂ ಇಲ್ಲವೆನ್ನುವವನಲ್ಲ. ಈಗಲೂ ಅಗತ್ಯವಾಗಿ ಆಗಲಿ, ಚಿಕ್ಕಮ್ಮ ಎಂದನು. ಪ್ರಯಾಣ ನಿಷ್ಕರ್ಷೆ ಯಾಯಿತು. ಹೊರಡುವ ಹಿಂದಿನ ದಿನ ಸಾಯಂಕಾಲ "ಲಲನಾ, ಲಲನಾ" ಎಂದು ಕೂಗುತ್ತಾ ಅವರ ಮನೆಗೆ ಬಂದು ನೆಟ್ಟಗೆ ಮೇಲೆ ಅವಳ ಕೊಠಡಿಗೆ ಬಂದನು. ಲಲನಾ ಕೊಠಡಿಯಲ್ಲಿದ್ದಳು. ಅವನು ಇದ್ದಕ್ಕಿದ್ದ ಹಾಗೆ ಬಂದದ್ದನ್ನು ನೋಡಿ ವಿಸ್ಮಯದಿಂದ ಎದ್ದು ನಿಂತಳು. ಸದಾನಂದನು ಹೊದ್ದಿದ್ದ ವಸ್ತ್ರದ ಅಂಚಿನಲ್ಲಿ ಕಟ್ಟಿದ್ದ ಗಂಟನ್ನು ಬಿಚ್ಚಿ ಐವತ್ತು ರೂಪಾಯಿ ಗಳನ್ನು ತೆಗೆದು ಕೋಣೆಯಲ್ಲಿದ್ದ ಗೂಡಿನೊಳಗೆ ಇಡುತ್ತಾ "ಇದನ್ನು ತೆಗೆ ದಿಟ್ಟುಕೋಮ್ಮಾ ಭದ್ರವಾಗಿ. ನಾನು ನಾಳೆ ಕಾಶಿಗೆ ಪ್ರಯಾಣ ಮಾಡು ತ್ತೇನೆ. ಯಾವಾಗ ವಾಪಸು ಬರುತ್ತೇನೋ ಗೊತ್ತಿಲ್ಲ. ಅದಕ್ಕೋಸ್ಕರವೇ ಹೇಳಿ ಹೋಗೋಣವೆಂದು ಬಂದೆ .. ಸಮಯ ಸಂದರ್ಭ ಬಂದಾಗ ಇದನ್ನು ಖರ್ಚಿಗೆ ಉಪಯೋಗಿಸಿಕೋ" ಎಂದನು.

ಲಲನಾಗೆ ಆಶ್ಚರ್ಯ ತಡೆಯಲಾಗಲಿಲ್ಲ. "ಇಷ್ಟೊಂದು ದುಡ್ಡೇ!"

ಕೂಡಲೇ ಸದಾನಂದ ಗಟ್ಟಿಯಾಗಿ ನಕ್ಕನು. "ಎಷ್ಟು ದುಡ್ಡೂ?.... ಐವತ್ತು ರೂಪಾಯಿ ಅಷ್ಟು ದೊಡ್ಡದು ಆಗಿಹೋಯಿತೇ .? ನೋಡುವು ದಕ್ಕೆ ಅಷ್ಟೊಂದು ಕಾಣುತ್ತೆ. ಆದರೆ ಖರ್ಚು ಆಗಬೇಕಾದಾಗ ಕರಗಿಹೋಗು ವುದು ಎಷ್ಟು ಹೊತ್ತು ?"

"ಆದರೆ ಇಷ್ಟೊಂದು ಹೇಗೆ....?"

ಅವಳಿಗೆ ಮಾತು ಮುಗಿಸಲು ಬಿಡದೆ ಸದಾನಂದನು ಕೈಯಿಂದ "ಸಾಕು , ಸಾಕು" ಎಂದು ಒಂದು ಬಗೆಯಾಗಿ ವ್ಯಕ್ತಪಡಿಸುತ್ತಾ ಬೇಗ ಕೆಳಗೆ ಇಳಿದು ಅಡುಗೆ ಮನೆಯಲ್ಲಿ, ಶುಭದಾ ಬಳಿ ಹೋಗಿ ನಿಂತನು.

"ಅತ್ತೇ, ನಾಳೆ ನಾನು ಚಿಕ್ಕಮ್ಮ ಕಾಶಿಗೆ ಹೋಗುತ್ತೇವೆ."

ಶುಭದಾಗೆ ಈಗಾಗಲೇ ಗೊತ್ತಿತ್ತು.

"ಬರುವುದು ಯಾವಾಗ ?" ಎಂದು ಕೇಳಿದಳು.

"ಹೇಗೆ ಹೇಳುವುದು ಅತ್ತೆ ? ಚಿಕ್ಕಮ್ಮ ದರ್ಶನ ಎಲ್ಲಾ ಮಾಡಿ ಕೊಂಡು, ನಡಿಯಪ್ಪಾ ಅಂದಾಗ ಹೊರಟು ಬರುವುದು ಅಷ್ಟೇ!"

ಶುಭದಾ ದೀರ್ಘನಿಶ್ವಾಸಬಿಟ್ಟು

"ಹಾಗೇ ಮಾಡಪ್ಪ. ಸುಖವಾಗಿ, ನಿಶ್ಚಿಂತೆಯಾಗಿ ಹೋಗಿ ಯಾತ್ರೆ ಮಾಡಿಕೊಂಡು ಬನ್ನಿ" ಎಂದು ಆಶೀರ್ವಾದ ಮಾಡಿದಳು. ಸದಾನಂದನು ಗಟ್ಟಿಯಾಗಿ ನಕ್ಕು ಹೊರಗೆ ಬಂದನು. ಮಾರನೆಯ ದಿನ ಲಲನಾ ಅರ್ಧ ದುಡ್ಡನ್ನು ತನ್ನ ಬಳಿಯೇ ಇಟ್ಟುಕೊಂಡು ಉಳಿದರ್ಧವನ್ನು ತಾಯಿಯ ಬಳಿ ಕೊಟ್ಟು "ಅಮ್ಮಾ ಸದಾನಂದ ಮಾವ ಈ ದುಡ್ಡನ್ನು ಕೊಟ್ಟುಬಿಟ್ಟು ಹೋದ" ಎಂದಳು.

ಶುಭದಾ ಆಶ್ಚರ್ಯದಿಂದ ಕಣ್ಣುಗಳನ್ನರಳಿಸುತ್ತಾ ರೂಪಾಯಿಗಳನ್ನೆಣಿಸಿದಳು. ಮಗಳ ಕಡೆ ನೋಡಿ "ಸದಾನಂದ ನಮ್ಮ ಹಿಂದಿನ ಜನ್ಮದಲ್ಲಿ ಮಗನೋ ಏನೋ ಆಗಿದ್ದನೆಂದು ಕಾಣುತ್ತೆ" ಎಂದಳು.

ಲಲನಾ ತಲೆದೂಗಿ "ಆಹಾ ...ಹಾಗೇ ತೋರುತ್ತೆ" ಎಂದಳು.

"ಎಲ್ಲಾದರೂ ಉಂಟೆ? ಇಷ್ಟೊಂದು ದುಡ್ಡು ಯಾರಾದರೂ ಹೀಗೆ ಕೊಡುವುದುಂಟೆ ?"

ಲಲನಾ ಸುಮ್ಮನಿದ್ದಳು.

"ಲಲನಾ, ಸದಾನಂದನನ್ನ ಹುಚ್ಚ ಅಂತಾರೆ. ಹೌದೇನೇ ?"

"ಏಕಮ್ಮಾ, ಇಲ್ಲದೆ ಹೋದರೆ ಹೀಗೆ ಮಾಡುವುದುಂಟೆ?"....ಅಲ್ಲವೇ ಮತ್ತೆ. ದುಃಖಿಗಳ ದುಃಖದಲ್ಲಿ ಭಾಗವಹಿಸಬೇಕಾದರೆ ಹುಚ್ಚರಲ್ಲದವರು ಮಾಡುತ್ತಾರೆಯೇ ?"

ಶುಭದಾ ಅಂದಳು. "ಇಂತಹವನನ್ನೇ ಜನ ಹುಚ್ಚ ಎನ್ನುವದು ?"

ಲಲನಾ ನಗುತ್ತಾ "ಜನ ಹಾಗೆನ್ನದೇ ಇನ್ನೇನೆನ್ನಬೇಕು? ಅವರ ಸ್ವಭಾವವೇ ಹಾಗೇ" ಎಂದಳು.

* * * *

ಹಾರಾಣ ಮುಖ್ಯೋಪಾಧ್ಯಾಯನ ಮನೆಯಲ್ಲೀ ಹೀಗೆಯೇ ಎಷ್ಟೋ ದಿನ ಸ್ವಚ್ಛಂದವಾಗಿ ಕಳೆಯಿತು. ಊಟ, ಉಡಿಗೆ ಯಥೋಚಿತವಾಗಿ ನಡೆದುಕೊಂಡು ಬರುವುದನ್ನು ನೋಡಿ ಹತ್ತು ಜನ ಹತ್ತು ಬಗೆಯಾಗಿ ಆಡಿಕೊಂಡರು.

ಕೆಲವರು ಅಂದುಕೊಂಡರು. ಹಾರಾಣಚಂದ್ರನು ನಂದೀಬಾಬುಗಳ ಕಛೇರಿಯಿಂದ ಕದ್ದ ಹಣ ಇನ್ನೂ ಬೇಕಾದಷ್ಟು ಉಳಿಸಿಕೊಂಡಿದ್ದಾನೆ,

ಎಂದು. ಇನ್ನು ಕೆಲವರು "ಛೆ... ಎಂದಿಗೂ ಇಲ್ಲ. ಇವತ್ತಿಗೂ ಅವರ ಮನೆಯಲ್ಲಿ ಒಪ್ಪೊತ್ತೇ ಊಟ" ಎಂದರು. ಬಹಳ ಹೊರಗಿನವರಾದವರು "ನಮಗೇಕೆ .. ಎಲ್ಲಾದರೂ ಹೋಗಲಿ" ಎಂದು ಸುಮ್ಮನಾದರು. ಸ್ವಲ್ಪ ಹತ್ತಿರದವವರು ಕುತೂಹಲದಿಂದ ಮುಖೋಪಾಧ್ಯಾಯನ ಸಂಸಾರದ ಸಂಬಂಧವಾಗಿ ಚಿಕ್ಕದು, ದೊಡ್ಡದು ಹುಡುಕಿ ಹೊರ ಹಾಕಬೇಕೆಂದು ತವಕ ಪಟ್ಟರು.

ಒಂದುದಿನ ಮಧ್ಯಾಹ್ನ ಮುದುಕಿ ಕೃಷ್ಣಾ ಠಾಕೂರಣಿಯು ಇದ್ದಕ್ಕಿದ್ದ ಹಾಗೆ ಆವಿರ್ಭೂತಳಾಗಿ "ಏನಮ್ಮಾ, ಸೊಸೆ ಹೇಗಿದ್ದಾಳೆ?—ಊಟ, ಕೆಲಸ ಎಲ್ಲಾ ಆಯಿತೇ ?" ಎಂದು ಒಳಹೊಕ್ಕಳು.

ಶುಭದಾ "ಹೂಂ, ಆಯಿತತ್ತೆ ... ಈಗ ತಾನೇ" ಎಂದಳು. ಕೃಷ್ಣಾ ಠಾಕೂರಣಿಯು ವಿಳ್ಳೇದೆಲೆಯೊಂದಿಗೆ ತಂಬಾಕನ್ನು ಜಗಿಯುತ್ತಾ "ಏನೇ ಮಗು ... ಈ ನಡುವೆ ಹಾರಾಣ ಏನುಮಾಡಿಕೊಂಡು ಇದ್ದಾನೆ ?" ಎಂದಳು.

"ಇನ್ನೇನು ಮಾಡುತಾರೆ? ಚಾಕರಿ ಹುಡುಕುತ್ತಾ ಇದ್ದಾರೆ ?"

"ಮತ್ತೆ ಸಂಸಾರ ಹೇಗೆ ನಡೆಯುತ್ತೆ ?"

ಶುಭದಾ ಏನೂ ಹೇಳಲಾಗಲಿಲ್ಲ.

ಮುದುಕಿ ಹಾಂ ... ಹೂಂ ಎನ್ನುತ್ತಾ "ಇನ್ನೇನಿಲ್ಲ ನೋಡು. ಹೀಗಂತಾಳೆ ಅನ್ನಬೇಡ. ಹತ್ತು ಜನ ಹತ್ತು ವಿಧವಾಗಿ ಅಂತಾರೆ. ಹಾರಾಣಚಂದ್ರ ಜಮೀನ್‌ದಾರರ ಕಛೇರಿಯಲ್ಲಿ ಚೆನ್ನಾಗಿ ದುಡ್ಡು ಹೊಡೆದಿದ್ದಾನೆ. ಈಗ ದೊಡ್ಡ ಮನುಷ್ಯನಾಗಿದಾನೆ .. ಹೀಗೆಲ್ಲಾ ಅನ್ನುತ್ತಾರೆ.... ಅವರ ಮನೆ ಹಾಳಾಯಿತು ಹೋಗು ಅವರ ಮಾತಿಗೇನು? ನನಗೆ ಗೊತ್ತಿಲ್ಲವೇ? ಅದಕ್ಕೇ ಕೇಳಿದೆ—ಹೇಗೆ ನಡೆಯುತ್ತಿದೆಯೋ ಎಂದು" ಎಂದಳು.

ಶುಭದಾ ಏನು ಹೇಳಲೂ ತೋಚದೆ "ನಾನೇ ಅದೂ ಇದೂ ಸವರಿಸಿಕೊಂಡು ಹೇಗೋ ಮಾಡಿಕೊಂಡು ಹೋಗುತ್ತೇನತ್ತೆ" ಎಂದಳು.

"ನೀನೇನಾದರೂ ಅನ್ನಮ್ಮ. ಆ ರಂ ಅಗ್ರಹಾರದ ಕಾತ್ಯಾಯನಿ ಇದ್ದಾಳಲ್ಲಾ....ಅವಳಿಂದ ಇಷ್ಟೆಲ್ಲಾ ಆಯಿತು ಅಂತೇನೆ....ಸಿಕ್ಕಿದರ ಛೀ ಮಾರಿ ಮಾಡಿ ಸೀಳಿ ಹಾಕಿಬಿಡಬೇಕು ಆಕೆಯನ್ನ ಅನ್ನಿಸುತ್ತೆ."

ಶುಭದಾ ಈ ಮಾತನ್ನು ಕಿವಿಯಲ್ಲಿ ಹಾಕಿಕೊಳ್ಳದೆ "ಅತ್ತೇ, ನಿಮ್ಮ

ಊಟ ಕೆಲಸ ಎಲ್ಲಾ ಆಯಿತೇ ?" ಎಂದಳು.

"ಆಯಿತಮ್ಮ...ಎಲ್ಲಾ ಆಯಿತು. ಆ ರಂ....ಯಿಂದಲೇ ಇಷ್ಟು ಸರ್ವನಾಶವಾದದ್ದು. ಏನೆಂದು ಈ ಹಾರಾಣ ಅವಳ ಬಲೆಯಲ್ಲಿ ಬಿದ್ದನೋ ನಾ ಬೇರೆ ಕಾಣೆ. ಮೂರು ಸಾವಿರ ರೂಪಾಯಿ .. ಸುಮ್ಮನೆ ಆಯಿತೇ ? ಎಲ್ಲಾ ಅವಳ ಬಾಯಿಗೇ ?....ನೂರೋ ಇನ್ನೂರೋ ನಿನ್ನ ಕೈಯಲ್ಲಾದರೂ ಕೊಡಬಾರದಾಗಿತ್ತೇ ?....ಇದ್ದರೆ ಸಮಯಕ್ಕೆ ಬರುತ್ತಿರಲಿಲ್ಲವೇ ?"

"ಅತ್ತೇ....ಅಡುಗೆ ಏನು ಮಾಡಿದ್ದೀರಿ ?"

"ಇನ್ನೇನಿದೆ ಹೇಳು ಮಾಡುವುದಕ್ಕೆ ? ಏನೋ ಅದು ಇದು.... ನೋಡುತ್ತಾ ಸುಮ್ಮನೆ ಹೊತ್ತಾಗಿ ಹೋಯಿತು. ಅದಕ್ಕೆ ಬರಿ ಒಂದಿಷ್ಟು ಅನ್ನ ಮಾಡಿ ಉಪ್ಪಿನಕಾಯಿ ಹಾಕಿಕೊಂಡು ತಿಂದದ್ದಾಯಿತು....ಅದಿರಲಿ, ಆ ಚಂಡಾಲಿಗೆ ಪರಲೋಕದ ಯೋಚನೆಯಾದರೂ ಬೇಡವೇ ? ಚೆನ್ನಾಗಿ ಹೀರುವವರೆಗೂ ಹೀರಿಬಿಟ್ಟು ಎಲ್ಲಾ ತೀರಿದ ಮೇಲೆ ಹಾಗೆ ಬೀಸಾಡಿ ಬಿಟ್ಟಳು .. ಆದರೇನು, ದೇವರಿಲ್ಲವೇ ಮೇಲೆ? ಬ್ರಾಹ್ಮಣನಿಗೆ ಎಂತಹ ಅನ್ಯಾಯ ಮಾಡಿದ್ದಾಳೆ, ಲಕ್ಷ್ಮಿಯಂತಹ ಪತಿವ್ರತೆ, ನಿನಗೆ ಎಂತಹ ಸಂಕಟ ತಂದಿದ್ದಾಳೆ .. ಅದಕ್ಕೇನು ಶಿಕ್ಷೆಯಿಲ್ಲ ಅಂದುಕೊಂಡಿದ್ದೀಯೇನು? ನೋಡುತ್ತಾ ಇರು....ನನ್ನ ಮಾತು ನಿಜವಾಗುತ್ತೋ ಇಲ್ಲವೋ ನೋಡುವಿಯಂತೆ !"

ಶುಭದಾ ನಡುವೆ ಬಾಯಿಹಾಕಿ "ಅತ್ತೇ, ಬಿಂದು ಏಕೆ ಇದ್ದಕ್ಕಿದ್ದ ಹಾಗೆ ಅತ್ತೆಯ ಮನೆಗೆ ಹೊರಟು ಹೋದಳಲ್ಲಾ ?" ಎಂದು ಕೇಳಿದಳು.

ಅಯ್ಯೋ, ಅವಳೇ—? ಅವಳ ಮಾವನವರಿಗೆ ಇದ್ದಕ್ಕಿದ್ದ ಹಾಗೆ ರಾತ್ರೋರಾತ್ರಿ ವಾಂತಿ ಭೇದಿಗಿಟ್ಟುಕೊಂಡು ಗಂಡನಿಂದ ತಂತಿ ಬಂತು ಹೊರಡಬೇಕಾಯಿತು ...ಅದು ಹೋಗಲಿ, ನೀನು ಹೇಗೆ ಸವರಿಸುತ್ತಿದ್ದೀಯೇ ಸಂಸಾರವನ್ನ ?"

"ನಾನೇನು ಮಾಡುತ್ತೇನತ್ತೆ! ಎಲ್ಲಾ ದೇವರೇ ಹೇಗೋ ನಡೆಸಿಕೊಂಡು ಹೋಗುತ್ತಾನೆ."

ಕೃಷ್ಣಪ್ರಿಯಾ ದೊಡ್ಡ ನಿಟ್ಟುಸಿರುಬಿಟ್ಟು "ಹಾಗೆಯೇ ಆಗಲಮ್ಮ. ಇನ್ನು ದೇವರೂ ಇಲ್ಲದೆ ಹೋದರೆ ನಮ್ಮ ಪಾಲಿಗೆ! ಅದಲ್ಲ ನನ್ನ ಮನಸ್ಸಿಗೆ

ಬಂದದ್ದು, ನಿನ್ನ ಎರಡನೆ ಮಗಳಿದ್ದಾಳಲ್ಲಾ, ಛಲನಾ, ಅವಳಿಗೆ ಏನು ವ್ಯವಸ್ಥೆ ಮಾಡಿದ್ದೀರಿ? ಹುಡುಗಿಯೋ ದಿನದಿನಕ್ಕೆ ಬೆಳಯುತ್ತಾ ಇದ್ದಾಳೆ. ಬೇಗ ಮದುವೆ ಮಾಡದೆ ಹೋದರೆ ಚೆನ್ನಾಗಿರುವುದಿಲ್ಲ. ಜನಗಳೂ ನಾಲ್ಕು ಮಾತಂತಾರೆ. ಅದಕ್ಕೇನಾದರೂ ದಾರಿ ಯೋಚನೆಮಾಡಿದ್ದೀಯಾ?" ಎಂದಳು.

ಶುಭದಾ ಆಗ ಮುಖ ಒಣಗಿ ನಿಟ್ಟುಸಿರುಬಿಟ್ಟು ಏನು ಹೇಳಲೂ ತೋಚದಿರುವಾಗ ಲಲನಾ ಅಲ್ಲಿಗೆ ಬಂದು ನಿಂತಳು. ಛಲನಾ ವಿಷಯ ಅವಳ ಕಿವಿಗೆ ಬಿದ್ದಿತ್ತು. ಏನಾದರೂ ಆಗಲೆಂದು ಮನಸ್ಸುಮಾಡಿ ತಟಕ್ಕನೆ ಬಾಯಿಗೆ ಬಂದದ್ದು ಆಡಿಬಿಟ್ಟಳು "ಬ್ರಾಹ್ಮಣರ ಮನೆಯಲ್ಲಿ ಒದವಿದ ಹುಡುಗಿಗೆ ಮದುವೆ ಮಾಡದೆ ಇರುವುದಿಲ್ಲ ಯಾರೂ....ಜಾತಿ ಹೋಗಲಿ ಅಂತ ಯಾರಿಗೂ ಇರುವುದಿಲ್ಲ" ಎಂದುಬಿಟ್ಟಳು.

ಮುದುಕಿ ಮಾತಾಡದೆ "ಇನ್ನು ಹೊತ್ತಾಯಿತು, ಬರುತ್ತೇನಮ್ಮಾ, ಕೆಲಸವಿದೆ" ಎಂದು ಹೊರಟುಹೋದಳು,

# ೯

ಶುಕ್ಲ ಏಕಾದಶಿ ರಾತ್ರಿ—ಸುಮಾರು ಹನ್ನೆರಡು ಘಂಟೆಯಾಗಿ ಹೋಗಿದೆ.

ಭಾಗೀರಥೀ ನದೀ ತೀರದಲ್ಲಿ ಅರ್ಧ ವನದಿಂದಾವೃತವಾಗಿದ್ದ ಒಂದು ಭಗ್ನ ಶಿವಮಂದಿರದಲ್ಲಿ ಯಾರನ್ನೋ ಕಾಯುತ್ತಾ ಇಪ್ಪತ್ತೆರಡು ವರ್ಷಗಳ ಯುವಕನು ಬಹಳ ಹೊತ್ತಿನಿಂದ ಕೂತಿದ್ದಾನೆ. ಇದೇ ಹಲೂದ್‌ಪುರದ ಶ್ರೀಮಂತನೊಬ್ಬನ ಒಬ್ಬನೇ ಮಗ. ಹೆಸರು ಶಾರದಾಚರಣರಾಯ್. ಎಲ್ಲಿಯವರಿಗೆ ಓದಿದ್ದಾನೋ ಗೊತ್ತಿಲ್ಲ . ಅದರೂ ಬಹು ಬುದ್ಧಿವಂತ, ವಿಚಕ್ಷಣಯುಕ್ತ ಮತ್ತು ಕರ್ಮನಿಷ್ಠ ಹುಡುಗ ಎಂದು ಎಲ್ಲರಿಗೂ ಗೊತ್ತಿತ್ತು. ಮುದಿ ತಂದೆಯ ಸಮಸ್ತ ಮನೆಯ ವಹಿವಾಟನ್ನೆಲ್ಲಾ ಖುದ್ದಾಗಿ ಒಬ್ಬನೇ ನಡೆಸಿಕೊಂಡು ಬರುತ್ತಾ ಇದ್ದಾನೆ ತಾಯಿ ತೀರಿಹೋಗಿ ಎಷ್ಟೋ ವರ್ಷಗಳಾಗಿವೆ. ಎಲ್ಲಿಯವರಗೆ ಆಕೆ ಇದ್ದಳೋ ಅಲ್ಲಿಯವರೆಗೆ ಹಾರಾಣಮುಖೋಪಾಧ್ಯಾಯನ ಮನೆಗೆ ಹೋಗಿ ಬರುವುದೂ, ಅವರು ಬರುವುದೂ ವಾಡಿಕೆಯಿತ್ತು. ರಾಸಮಣಿಗೂ, ಶಾರದಾಚರಣನ ತಾಯಿಗೂ ವಿಪರೀತ ಸ್ನೇಹ ಸಲಿಗೆಯಿತ್ತು. ಈಗ ಆಕೆ ಹೋದ ಮೇಲೆ ಬಂಧುತ್ವವು ಕ್ಷೀಣವಾಗಿ ಹೋಗಿದೆ. ಹೆಚ್ಚಾಗಿ ಶಾರದಾಚರಣನ ತಂದೆ ರಾಮಮೋಹನನು ದಟ್ಟ ದರಿದ್ರರ ಸಹಿತ ಯಾವ ವಿಧವಾದ ಸಂಬಂಧವಿಡುವುದೂ ಅಯುಕ್ತವೆಂದು ಮನಸ್ಸಿನಲ್ಲಿ ಅಂದುಕೊಂಡಿದ್ದನು

ಮೊದಲು ಲಲನಾ ಶಾರದಾಚರಣನೊಂದಿಗೆ ಲಗ್ನವಾಗಬೇಕೆಂದು ಮಾತುಕಥೆಯಾಗಿತ್ತು. ಯಾವಾಗ ಹಾರಾಣಚಂದ್ರನ ಅವಸ್ಥೆ ವಿಪರೀತ ಕೆಟ್ಟು ಹೋಯಿತೋ ಆಗ ಆ ಮಾತು ನಿಂತುಹೋಯಿತು.

ಹಾರಾಣನು ವಯಸ್ಸು ಬಂದ ಮಗಳಿಗೆ ಬೇರೆ ಯಾವ ವರನನ್ನೋ ಗೊತ್ತುಮಾಡಿ ಯಥಾಶಕ್ತಿ ಲಗ್ನಮಾಡಿದನು. ಆದರೆ ಲಲನಾಳ ದುರದೃಷ್ಟ ....ಎರಡು ವರ್ಷಗಳೊಳಗೇ ವಿಧವೆಯಾದಳು.

ಲಲನಾ ಶಾರದಾಚರಣನನ್ನು ಮೊದಲಿಂದಲೂ ಪ್ರೀತಿಸಿದ್ದಳು ... ಮದುವೆಯಾಗಿ ವಿಧವೆಯಾದ ಮೇಲೂ ಪ್ರೀತಿಸಿದ್ದಳು. ಶಾರದಾಚರಣನ್ನೂ

ಅವಳನ್ನು ಪ್ರೀತಿಸಿದ್ದನು. ಅವರಿಬ್ಬರ ಒಲವು ಒಂದು ವಿಧದಲ್ಲಿ ಹೆಚ್ಚಾಗುತ್ತ ಬಂದಿತ್ತು. ಆದರೆ ಇಬ್ಬರಿಗೂ ಗೊತ್ತು .....ಈ ಪ್ರಣಯ ಹೆಚ್ಚು ದಿನ ಮುಂದುವರಿಯಲಾಗದು. ಇದರಿಂದ ಕ್ಷೇಮವಿಲ್ಲ, ಇಬ್ಬರಿಗೂ ಇಲ್ಲ. ಶಾರದಾಚರಣನಿಗಿಂತಲೂ ಲಲನಾಗೆ ಇದು ಮೊದಲು ಅರಿವಾಯಿತು. ಕ್ರಮಶಃ, ಭಯದಿಂದ ಲಲನಾ ತನ್ನ ಪ್ರೇಮದ ಕಟ್ಟಡದ ಬಾಗಿಲುಗಳನ್ನು ಒಂದೊಂದಾಗಿ ಮುಚ್ಚಲು ತೊಡಗಿದಳು. ಇನ್ನು ಅವನನ್ನು ನೋಡುವುದನ್ನು ನಿಲ್ಲಿಸಿದಳು. ಅವನಿಗೆ ಬರಹೇಳುವುದನ್ನೂ ಬಿಟ್ಟು ಬಿಟ್ಟಳು. ತನ್ನ ಪ್ರೀತಿಯನ್ನು ತೋರಿಸಲು ಗುಟ್ಟಾಗಿ ಪತ್ರ ಬರೆದು ಕಳುಹಿಸುವುದೂ ನಿಂತು ಹೋಯಿತು.

ಶಾರದಾಚರಣನಿಗೆ ವಿಪರೀತ ಸಂಕಟವಾಯಿತು. ಎಷ್ಟೋ ಕೇಳಿಕೊಂಡನು. ಏನೇನೋ ಉಪಾಯಗಳನ್ನು ಹೇಳಿದನು. ಲಲನಾಳ ಮನಸ್ಸನ್ನು ಚಲಿಸಲಾಗಲಿಲ್ಲ.

ಕಡೆಯಲ್ಲಿ ಒಂದು ದಿನ ಅವಳು ಹೇಳಿಬಿಟ್ಟಳು. "ಇವೆಲ್ಲಾ ಇನ್ನು ಮೇಲೆ ನಮಗೆ ಚೆನ್ನಾಗಿ ಕಾಣುವುದಿಲ್ಲ."

ಶಾರದಾಚರಣನು ಕೋಪದಿಂದ ಒಳ್ಳೆಯದಾಗಿಲ್ಲದಿದ್ದರೆ ಇಷ್ಟು ದಿವಸ ಪ್ರೀತಿಸಿದ್ದೇಕೆ?" ಎಂದನು. "ಇಷ್ಟುದಿನ ಹುಡುಗತನ. ಈಗ ದೊಡ್ಡವರಾದೆವಲ್ಲಾ."

"ಓಹೋ ..ಹಾಗೆಯೋ ?"

"ನೀನೇ ಯೋಚನೆ ಮಾಡು ..." ಎಂದು ಲಲನಾ ಅವನ ಜವಾಬಿಗೆ ಎದುರು ನೋಡದೆ "ಇನ್ನು ಯೋಚನೆ ಮಾಡುವುದು ತಾನೇ ಏಕೆ—ನೀನು ಇನ್ನು ನನ್ನನ್ನು ಬೀಳ್ಕೊಡು...." ಎಂದಳು.

ಶಾರದಾಚರಣನು "ನಿನ್ನನ್ನು ಬೀಳ್ಕೊಡುವುದೇ ?" ಎಂದನು.

"ಹೂಂ....ಬೀಳ್ಕೊಡು"

"ಹೇಗೆ ?"

"ಮಾತುಕೊಡಿ, ಇನ್ನು ಮೇಲೆ ನನ್ನ ಜೊತೆಯಲ್ಲಿ ಸೇರುವುದಕ್ಕೆ ಪ್ರಯತ್ನಮಾಡುವುದಿಲ್ಲವೆಂದು."

"ಹಾಗಿದ್ದರೆ ಎಲ್ಲಾ ಮುಗಿದು ಹೋದ ಹಾಗೇ ತಾನೇ?"

"ಅದೇ ಒಳ್ಳೆಯದು."

ಶಾರದಾ ಚರಣನು ಸ್ವಲ್ಪ ಹೊತ್ತು ಅವಳ ಮುಖವನ್ನು ನೀರವವಾಗಿ ದೃಷ್ಟಿಸಿದನು. ಆಮೇಲೆ ತಕ್ಷಣ ಮುಖ ಗಂಟುಹಾಕಿಕೊಂಡು

"ಹಾಗಿದ್ದರೆ.......ಇಕೋ ತೆಗೆದುಕೊ .. .. ಪ್ರತಿಜ್ಞೆ ಮಾಡುತ್ತೇನೆ. ನಾನಿನ್ನು ಮೇಲೆ ನಿನ್ನನ್ನು ನೋಡಲು ಪ್ರಯತ್ನಿಸುವುದಿಲ್ಲ .. ಈ ಜನ್ಮದಲ್ಲಿ ಎಂದಿಗೂ ಇಲ್ಲ."

"ಎಂದಿಗೂ ನೋಡಬೇಡ."

ಅಂದೇ ಕೊನೆ. ಇಬ್ಬರೂ ಅವರವರ ದಾರಿ ಹಿಡಿದು ಹೋದರು. ಶಾರದಾಚರಣನು ದಾರಿಯುದ್ದಕ್ಕೂ ಗರ್ಜಿಸುತ್ತಾ ಹೋದನು. ಲಲನಾ ಅಳುತ್ತಾ ದಾರಿ ಹಿಡಿದಳು.

ಇದು ನಡೆದು ನಾಲ್ಕು ವರುಷಗಳಾಗಿ ಹೋಯಿತು. ನಾಲ್ಕು ವರುಷಗಳಾದಮೇಲೆ ಶಾರದಾಚರಣನು ಲಲನಾಳ ಆಗಮನವನ್ನು ಕಾಯುತ್ತಾ ಕೂತಿದ್ದಾನೆ...ಅವನು ಈ ಹಿಂದಿನ ಕಥೆಯನ್ನು ಒಂದು ರೀತಿಯಾಗಿ ಮರೆತು ಹೋಗಿದ್ದನು ಇಷ್ಟು ದಿನವಾದ ಮೇಲೆ ಇದ್ದಕ್ಕಿದ್ದ ಹಾಗೆ ಲಲನಾ ಕಡೆಯಿಂದ ಅವನಿಗೆ ಪತ್ರ ಬಂದಿತು. ಮತ್ತೆ ಯಥಾ ಸಂಕೇತ ಸ್ಥಳದಲ್ಲಿ ಸಂಧಿಸಲು ಆಹ್ವಾನ ಬಂದಿತು ..ಆಗ ಮತ್ತೆ ಹಿಂದಿನ ಕಥೆಗಳೆಲ್ಲಾ ಒಂದಾದ ಮೇಲೊಂದು ಅವನ ಮನಸ್ಸಿನ ತೆರೆಯ ಮೇಲೆ ಬರಲಾರಂಭಿಸಿದುವು. ಬಾಲ್ಯಪ್ರೇಮ ಶಾಶ್ವತವಾದದ್ದಲ್ಲ ಬರಿ ಭ್ರಮೆಯ ಫಲ ಎಂದು ಕೆಲವರು ಹೇಳುವರು. ಇತರರು ಬಾಲ್ಯಪ್ರೇಮವೇ ಪ್ರೇಮ ... ಅದು ನಿಷ್ಕಪಟ–ಕಾಮವಿರಹಿತ, ಆದ್ದರಿಂದ ಪವಿತ್ರ ಎಂದು. ಅದು ಹೇಗಾದರೂ ಹೋಗಲಿ....ಅದರ ಸ್ಮೃತಿ ಮಾತ್ರ ಚಿರಕಾಲ ನಿಲ್ಲುವಂತಹುದು ...ಎಂದಿಗೂ ಅಳಿಸಲಾಗುವುದಿಲ್ಲ.

ಶಾರದಾಚರಣನಿಗೆ ಏನೇನೋ ವಿಷಯಗಳು ಜ್ಞಾಪಕಕ್ಕೆ ಬಂದುವು. ಇಂದು ನಾಲ್ಕು ವರುಷಗಳಾದನಂತರ ಅವಳು ಪುನಃ ಬರುತ್ತಾಳೆ. ನನ್ನೊಂದಿಗೆ ಮಾತಾಡುತ್ತಾಳೆ .. ನೆನೆದು ರೋಮಾಂಚವಾಯಿತು ...ಮನಸ್ಸಿನಲ್ಲಿ ಒಂದು ಬಗೆಯ ಉದ್ವೇಗವಾಯಿತು.... ಆದರೆ ಏಕೆ....? ಏಕೆ ಬರಹೇಳಿದ್ದಾಳೆ....ಏನು ಮನಸ್ಸುಮಾಡಿದ್ದಾಳೆ.....ಇಂತಹ ರಾತ್ರಿಯ ಸಮಯದಲ್ಲಿ?

....ನನಗೂ ಅವಳಿಗೂ....ಇನ್ನು ಯಾವ ಸಂಬಂಧವಿದೆ?

ಅರ್ಧರಾತ್ರಿ. ಒಂದು ಘಂಟೆ ಹೊಡೆಯಿತು. ನಿರ್ಜನತೆ. ಎದುರು ನೋಡುತ್ತಾ ನೋಡುತ್ತಾ ಯಾರೋ ಹೆಂಗಸು ಮುಖಕ್ಕೆ ಮುಸುಗಿಟ್ಟು ಕೊಂಡು ಬರುತ್ತಿರುವುದು ಕಂಡುಬಂತು .ಇವಳೇ ಲಲನಾ ...? ಇವಳು— ಈ ಹೆಂಗಸು ? ಹೌದು .. ಅವಳೇ....ಲಲನಾ .. ಆದರೆ ಎಷ್ಟು ದೊಡ್ಡವಳಾಗಿದ್ದಾಳೆ. ನಾಲ್ಕು ವರ್ಷಗಳಲ್ಲಿ ?

ಲಲನಾ ಹತ್ತಿರ ಬಂದು ನಿಂತಳು. ಶಾರದಾಚರಣನು ಸಂಕೋಚ ಬಿಟ್ಟು "ಕೂಡು, ಲಲನಾ" ಎಂದನು. ಆಗ ಪೂರ್ವಪ್ರಣಯಿಗಳಿಬ್ಬರೂ ಹಿಂದಿನಂತೆ ಯಥಾಪ್ರಕಾರ ಆ ಹಾಳುಬಿದ್ದ ಶಿವದೇಗುಲದ ಪ್ರಾಕಾರದಲ್ಲಿ, ಆ ಮಸಕು ಮಸಕಾಗಿ ಬರುತ್ತಿದ್ದ ಬೆಳುದಿಂಗಳಲ್ಲಿ, ಅಕ್ಕಪಕ್ಕದಲ್ಲಿ ಕುಳಿತರು· ಬಹಳ ಹೊತ್ತು ಯಾರ ಬಾಯಿಯಲ್ಲೂ ಮಾತು ಹೊರಡಲಿಲ್ಲ. ಆಮೇಲೆ ಶಾರದಾಚರಣನೇ ಸಾಹಸಮಾಡಿ ಕೇಳಿಬಿಟ್ಟನು. "ನನ್ನನ್ನೇಕೆ ಇಂದು ಹೇಳಿ ಕಳುಹಿಸಿದೆ ?"

ಲಲನಾ ಮುಖವೆತ್ತಿ ಅದೇ ಬಗೆಯ ಧೈರ್ಯದಿಂದ "ನನಗೆ ನಿಮ್ಮಿಂದ ಒಂದು ಕೆಲಸವಾಗಬೇಕಾಗಿದೆ." ಎಂದಳು.

"ನಿಮ್ಮಿಂದ!" ನಾಲ್ಕು ವರುಷಗಳಾದ ಮೇಲೆ ಬಹುವಚನಕ್ಕೆ ಬಂದಿತ್ತು.

ಶಾರದಾಚರಣನು ಮನಸ್ಸಿನಲ್ಲಿ ಒಂದು ಬಗೆಯ ನೋವನ್ನನುಭವಿಸಿ "ಏನು ಕೆಲಸ?" ಎಂದನು.

"ಹೇಳುತ್ತೇನೆ" ಎಂದು ಸ್ವಲ್ಪ ಹೊತ್ತು ಸುಮ್ಮನಿದ್ದುದನ್ನು ನೋಡಿ ಶಾರದಾಚರಣನು ಕುತೂಹಲವನ್ನು ತಡೆಯಲಾರದೆ "ಏನು ಕೆಲಸ ಹೇಳಲಿಲ್ಲವಲ್ಲ?" ಎಂದನು.

"ಹೇಳುತ್ತೇನೆ. ಹಿಂದೆ ನೀವು ನನ್ನನ್ನು ಪ್ರೀತಿಸುತ್ತಿದ್ದಿರಿ, ಅಲ್ಲವೇ? ಈಗ ಆ ಪ್ರೀತಿಯಲ್ಲಿ ಸ್ವಲ್ಪವಾದರೂ ಇದೆಯೇ?"

ಪ್ರಶ್ನೆಯ ಭಾವ ಶಾರದಾಚರಣನನ್ನು ವಿಸ್ಮಯಗೊಳಿಸಿತು.

"ಆ ಮಾತು ಏಕೆ ಈಗ?"

"ಉದ್ದೇಶ್ಯವಿದೆ."

"ಇನ್ನೂ ಪ್ರೀತಿಸುತ್ತೇನೆ....ಅನ್ನು. . ಅದರಿಂದ ಏನು ಈಗ?"

ಲಲನಾ ಮೃದುವಾಗಿ ನಕ್ಕು ನಾಚಿಕೆಯಿಂದ ತಲೆ ತಗ್ಗಿಸಿ "ನನ್ನ.... ನನ್ನನ್ನ ಮದುವೆ ಮಾಡಿಕೊಳ್ಳುತ್ತೀರಾ?" ಎಂದಳು.

ಶಾರದಾಚರಣನು ಬೆಚ್ಚಿ ಬಿದ್ದನು........ಹೇಗೋ........ಬಾಯಿಂದ ಮಾತು ಹೊರಬಿದ್ದಿತು. "ಇಲ್ಲ!"

"ಏಕೆ....? ಏಕಿಲ್ಲ?"

"ಏನು ಪ್ರಶ್ನೆ....? ನಿನ್ನನ್ನ ಮದುವೆಯಾದರೆ ಜಾತಿ ಹೋಗುತ್ತದೆ."

"ಹೋದರೆ ಹೋಗಲಿ."

"ಹೋದರೆ ಹೋಗಲಿ! ಬದುಕಿರುವುದು ಹೇಗೆ?"

"ಅದು ನಿಮ್ಮಂತಹವರಿಗೊಂದು ದೊಡ್ಡ ವಿಷಯವೇ?"

"ಅದೊಂದೇ ಅಲ್ಲ. ನಮ್ಮ ಅಪ್ಪ ಒಪ್ಪುವುದಿಲ್ಲ."

"ಒಪ್ಪುತ್ತಾರೆ. ನೀವು ಅವರಿಗೆ ಒಬ್ಬರೇ ಮಗ. ಮನಸ್ಸು ಮಾಡಿದರೆ ಅವರ ಒಪ್ಪಿಗೆಯನ್ನು ಪಡೆಯುವುದು ಕಷ್ಟವಾಗುವುದಿಲ್ಲ."

ಸ್ವಲ್ಪ ಹೊತ್ತು ಸುಮ್ಮನಿದ್ದು ಶಾರದಾಚರಣನು

"ಆದರೂ ಸಾಧ್ಯವಿಲ್ಲ!" ಎಂದನು.

"ಏತಕ್ಕೆ?"

"ಎಷ್ಟೋ ಕಾರಣಗಳಿವೆ. ಮೊದಲನೆಯದು, ಅಪ್ಪ ಒಪ್ಪಿದರೂ ನಿನ್ನನ್ನ ಲಗ್ನವಾದರೆ ಜಾತಿ ಹೋಗುತ್ತದೆ. ಜಾತಿ ಕಳೆದುಕೊಂಡು ಈ ಹಲೂದ್ ಪುರದಲ್ಲಿ ಇರಲು ಸಾಧ್ಯವಿಲ್ಲ—ಹಾಗಾದರೆ—ನನ್ನಲ್ಲಿ ಅಂತಹ ಐಶ್ವರ್ಯವೂ ಇಲ್ಲ. ..ನಿನ್ನನ್ನ ಕರೆದುಕೊಂಡು ವಿದೇಶಕ್ಕೆಲ್ಲಾದರೂ ಹೋಗಿ ಸಂಸಾರ ಮಾಡುವುದಕ್ಕೆ ...ಎರಡನೆಯದು ಯಾವುದು ಎಲ್ಲಾ ಮುಗಿದು ಹೋಗಿದೆಯೋ....ಅದು ಹಾಗೆಯೇ ಮುಗಿದುಹೋಗಿರುವುದು ಒಳ್ಳೆಯದು. ಅದು ನನ್ನ ಇಷ್ಟವೊಂದೇ ಅಲ್ಲ. ನಮ್ಮಿಬ್ಬರ ಶುಭದ ದೃಷ್ಟಿಯಿಂದಲೂ ಕೂಡ."

ಲಲನಾ ಸ್ವಲ್ಪ ಹೊತ್ತು ಮೌನವಾಗಿದ್ದಳು.

"ಹಾಗಾದರೆ ಹಾಗೆಯೇ ಆಗಲಿ. ಆದರೂ ನನಗೆ ಒಂದು ಉಪಕಾರವಾದರೂ ಮಾಡುತ್ತೀರಾ?"

"ಹೇಳು ಸಾಧ್ಯವಾದರೆ ಮಾಡುತ್ತೇನೆ."

"ನಿಮಗೆ ಸಾಧ್ಯವಿದೆ....ಆದರೆ ಮಾಡುತ್ತೀರೋ ಇಲ್ಲವೋ ಹೇಳಲಾರೆ."

"ಹೇಳು. ಕೈಲಾದಷ್ಟು ಪ್ರಯತ್ನ ಮಾಡೋಣ."

"ನನ್ನ ತಂಗಿ ಛಲನಾಳನ್ನು ಮದುವೆ ಮಾಡಿಕೊಳ್ಳಿ."

ಶಾರದಾಚರಣನಿಗೆ ನಗು ಬಂತು.

"ಏಕೆ...ಅವಳಿಗೆ ವರ ಸಿಗುವುದು ಕಷ್ಟವೇನು?"

"ಹೇಗೆ ಸಿಗುತ್ತಾನೆ? ನಾವು ದಟ್ಟ ದರಿದ್ರರು. ದರಿದ್ರರ ಮನೆಯ ಸಂಬಂಧ ಯಾರು ಸುಲಭವಾಗಿ ಮಾಡಿಕೊಳ್ಳುತ್ತಾರೆ? ಅಷ್ಟೇ ಅಲ್ಲ. ನಾವು ಕುಲೀನರು. ಸ್ವಲ್ಪ ಕಡಿಮೆ ವರ್ಗದಲ್ಲಿ ಹುಡುಕಿದರೆ ಸಿಗಬಹುದು. ಆದರೆ ನಮ್ಮ ಜನ ಸುಮ್ಮನೆ ಇರಗೊಡಿಸುವುದಿಲ್ಲವಲ್ಲ. ನಿಮ್ಮ ಮನೆತನವು ನಮ್ಮದಕ್ಕೆ ಏನೂ ಕಡಿಮೆಯಿಲ್ಲ. ಅದಕ್ಕೇ ನೀವು ಮಾಡಿಕೊಂಡರೆ ಎಲ್ಲಾ ವಿಷಯಗಳಲ್ಲಿಯೂ ರಕ್ಷಿಸಿದ ಹಾಗೆ ಆಗುತ್ತದೆ. ಮಾಡಿಕೊಳ್ಳುತ್ತೀರೋ?"

"ನಾನು ತಂದೆಯ ಮಾತಿಗೆ ಪೂರ್ತಿಯಾಗಿ ಕಟ್ಟು ಬಿದ್ದಿರುವವನು. ಅವರ ಅಭಿಪ್ರಾಯ ತಿಳಿದುಕೊಳ್ಳದೆ ಈಗ ಏನು ಹೇಳುವುದಕ್ಕೂ ಸಾಧ್ಯವಿಲ್ಲ."

"ಹಾಗೇ ಆಗಲಿ. ಅವರ ಆಜ್ಞಾನುಸಾರವಾಗಿಯೇ ಅವರನ್ನು ಒಪ್ಪಿಸಿಯೇ ಮಾಡಿಕೊಳ್ಳಿ."

"ನನಗೆ ತಿಳಿದ ಮಟ್ಟಿಗೆ ಅವರು ಈ ಮದುವೆಗೆ ಒಪ್ಪಿಕೊಳ್ಳಲಾರರು."

ಲಲನಾ ಮುಖ ಕಪ್ಪಿಟ್ಟು "ಏಕೆ ಒಪ್ಪುವುದಿಲ್ಲ?" ಎಂದಳು.

"ಹಾಗಾದರೆ ನಿನಗೆ ಮಂದಟ್ಟು ಮಾಡಿ ಹೇಳುತ್ತೇನೆ ಕೇಳು. ನಮ್ಮಪ್ಪನಿಗೆ ಸ್ವಲ್ಪ ದುಡ್ಡಿನಾಸೆಯಿದೆ. ನನ್ನ ಮದುವೆಯಿಂದ ಆದಷ್ಟು ಹಣ ಸಂಪಾದಿಸೋಣವೆಂದಿದ್ದಾನೆ. ನೀವಂತೂ ಬಿಡಿ ಕಾಸು ಕೊಡುವ ಹಾಗಿಲ್ಲ. ಅದಕ್ಕಾಗಿಯೇ...ಮದುವೆಯೂ ಸಾಧ್ಯವಿಲ್ಲ."

ಲಲನಾ ಕಾತರಳಾಗಿ "ನಾವು ದರಿದ್ರರು. ನಮಗೆ ಕೊಡಲು ದುಡ್ಡೆಲ್ಲಿ ಸಿಕ್ಕುತ್ತದೆ?

ಅಲ್ಲದೆ ನಿಮಗೆ ದುಡ್ಡೇನೂ ಆವಶ್ಯಕವಿಲ್ಲವಲ್ಲ? ಯಥೇಷ್ಟವಾಗಿದೆ

ಯಲ್ಲ."

ಶಾರದಾಚರಣನು ದುಃಖಿತ ಭಾವದಿಂದ ಮೃದುವಾಗಿ ನಕ್ಕು "ಆ ಮಾತು ನನಗೆ ಗೊತ್ತು. ಆದರೆ ನಮ್ಮಪ್ಪನಿಗೆ ಅರ್ಥವಾಗುವುದಿಲ್ಲ."

"ನೀವು ತಿಳಿಸಿ ಹೇಳಿದರೆ ಅರ್ಥವಾಗುವುದಿಲ್ಲವೇ?"

"ನಾನೊಂದು ಮಾತು ಹೇಳುತ್ತೇನೆ ನಿನಗೆ. ಅವರಿಗೆ ತಿಳಿಸಿ ಹೇಳಲು ನನ್ನ ಕೈಯಲ್ಲಾಗದ ಕೆಲಸ."

ಲಲನಾ ಬಹಳ ಕಂಗೆಟ್ಟು "ಹಾಗಾದರೆ ಈಗ ಮಾಡುವುದೇನು?" ಎಂದಳು.

"ನಾನೇನು ಮಾಡಲಿ ಹೇಳು."

"ಬಹುಶಃ ನಿಮಗೇ ಮದುವೆ ಮಾಡಿಕೊಳ್ಳಲು ಇಷ್ಟವಿಲ್ಲ."

"ಹಾಗೆಯೇ ಅಂದುಕೋ."

"ಛಲನಾ ಅಂತಹ ಹುಡುಗಿ ಹುಡುಕಿದರೆ ಸಿಗುವವಳಲ್ಲ. ರೂಪು, ಬುದ್ಧಿ, ಕೆಲಸ ಕಾರ್ಯದಲ್ಲಿ ಜಾಣತನ—ಎಲ್ಲಾ ಹೋಗಲಿ .......ಬಡವರಿಗೆ ಉಪಕಾರ ಮಾಡಿದ ಹಾಗೆ ಆಗುತ್ತದೆ. ಒಬ್ಬ ಬ್ರಾಹ್ಮಣ ಕುಟುಂಬದ ಮಾನ ರಕ್ಷಣೆ ಮಾಡಿದ ಹಾಗೆ ಆಗುತ್ತದೆ .ಮತ್ತು ನಾನು ನಿಮಗೆ ಬದುಕಿರುವವರೆಗೆ ಋಣಿಯಾಗಿರುವೆನು....ಹೇಳಿ . .ಮಾಡಿಕೊಳ್ಳುತ್ತೀರಾ?"

"ನಮ್ಮ ತಂದೆ ಹೇಳಿದ ಹಾಗೆ ಮಾಡುತ್ತೇನೆ."

"ಇವತ್ತು ನಿಮಗೆ ಎಲ್ಲಾ ಬಿಚ್ಚಿ ಹೇಳುತ್ತೇನೆ. ಈ ಬದುಕಿನಲ್ಲಿ ಇನ್ನು ಬೇರೆ ಸಮಯ ಬರುವುದಿಲ್ಲ. ನಿಮ್ಮ ಮುಂದೆ ನನಗೆ ಎಂದೂ ನಾಚುಗೆಯಿರಲಿಲ್ಲ. ಇವತ್ತೂ ಇಲ್ಲ. ಎಲ್ಲಾ ವಿಷಯಗಳನ್ನೂ ಬಿಚ್ಚಿ ಹೇಳುತ್ತೇನೆ. ನಿಮ್ಮನ್ನು ಚಿಕ್ಕಂದಿನಿಂದಲೂ ಪ್ರಾಣ ಪ್ರಾಯವಾಗಿ ಪ್ರೀತಿಸಿದೆ. ಈಗಲೂ ಪ್ರೀತಿಸುತ್ತೇನೆ ಈ ಮಾತು ಮುಂಚೆಯೆ ಒಂದು ಸಲ ಹೇಳಿದ್ದೆ. ಇಂದು ಬಹಳ ದಿನಗಳಾದ ಮೇಲೆ ಪುನಃ ಹೇಳುತ್ತೇನೆ. ನೀವು ನನಗೆ ಈ ಜೀವನದಲ್ಲಿ ಏಕ ಮಾತ್ರ ಆಧಾರ, ಅದಕ್ಕೆ ನಿಮ್ಮಲ್ಲಿ ಕೊನೆಯ ಅನುರೋಧ ಇಂದು ವಿಧಿಯಿಲ್ಲದೆ ಮಾಡಬೇಕಾಯಿತು. ಜರುಗಿದುದೇನೋ ಜರುಗಿ ಹೋಯಿತು. ಸುಮ್ಮನೆ ನಿಮಗೆ ಕ್ಲೇಶವುಂಟುಮಾಡಿದೆ. ಮುಂದೆಂದಿಗೂ ಹೀಗೆ ಮಾಡುವುದಿಲ್ಲ. ನನ್ನನ್ನು ಕ್ಷಮಿಸಿಬಿಡಿ."

ಶಾರದಾಚರಣನು ಮನಸ್ಸಿನಲ್ಲಿ ಬಹಳ ಸಂಕಟಪಟ್ಟು ಹೊರಡುತ್ತಿದ್ದ ಲಲನಾಳನ್ನು ನೋಡಿ "ಈ ಮಾತನ್ನು ತಂದೆಯ ಹತ್ತಿರ ಖಂಡಿತ ಕೇಳುತ್ತೇನೆ ಲಲನಾ" ಎಂದನು.

ಹಿಂದೆ ತಿರುಗದೆ ಲಲನಾ "ಕೇಳಿ" ಎಂದಳು.

"ಆದರೂ ಅವರ ಮಾತಿಗೆ ಮಾತ್ರ ವಿರೋಧವಾಗಿ ಹೋಗಲಾರೆ."

ಅವಳು ಮುಂದೆ ಕಾಲು ಹಾಕುತ್ತಾ

"ಅದು ನನಗೆ ಗೊತ್ತು" ಎಂದಳು.

"ನನ್ನ ಕೈಯಲ್ಲಿ ಸಾಧ್ಯವಾದರ ಖಂಡಿತ ಹೇಳಿ ಕಳುಹಿಸುತ್ತೇನೆ."

"ಒಳ್ಳೆಯದು."

"ಲಲನಾ . .ನನ್ನನ್ನ ಕ್ಷಮಿಸುತ್ತೀಯಾ?"

"ಕ್ಷಮಿಸಿದ್ದೇನೆ."

# ೧೦

"ಪಟ್ಟು ನನ್ನದಯ್ಯ ? ಕೊಡಿ ಹೀಗೆ ತಲಾ ನಾಲ್ಕಾಣೆ!" ... ಎಲ್ಲರಿಂದಲೂ ಚಿಲ್ಲರೆ ವಸೂಲು ಮಾಡಿ ಹಾರಾಣಚಂದ್ರನು ಪುನಃ ದುಡ್ಡನ್ನು ಚೆನ್ನಾಗಿ ಎಣಿಸಿದನು.......

"ಕಲಸು ಎಲೆ.... ಹಾಕಿ ಬಾಜಿ ನನ್ನದೆರಡಾಣೆಯಿರಲಿ ..."

ಆ ಪಟ್ಟೂ ಅವನದೇ ಆಯಿತು. ಇವತ್ತು ಶ್ರೀಯುತ ಹಾರಾಣ ಚಂದ್ರ ಮುಖೋಪಾಧ್ಯಾಯರು ದೆಸೆಯಲ್ಲಿದ್ದಾರೆ . ಮತ್ತೆ ಕಲಸಿದ್ದಾಯಿತು. ಈ ಸಲ ನಾಲ್ಕಾಣೆ... ಹಾರಾಣಚಂದ್ರನೇ ದುಡ್ಡೆಣಿಸಿಕೊಂಡನು - ಇವತ್ತು ಇವನಿಗೇನು ಹೀಗೆ ದೆಸೆ ತಿರುಗಿದೆ...?

ಹೊಡಿದ ಆಟವೆಲ್ಲಾ ಗೆಲುವು .

ಬಿಡಿರಪ್ಪಾ ಇನ್ನು .ಎಷ್ಟು ಆಡಿದರೂ ನಮಗೆ ಗಿಟ್ಟುವುದಿಲ್ಲ ಇವತ್ತು. ಸುಮ್ಮನೆ ಹಾರಾಣನ ಜೇಬು ತುಂಬಿಸುವುದೇಕೆ ? ಎಂದು ಎಲ್ಲರೂ ಇಸ್ಪೀಟೆ ನೆಲೆಯನ್ನು ಬಿಸಾಡಿ ಎದ್ದರು. ಹಾರಾಣಚಂದ್ರನು ಎದ್ದಾಗ ಮೊತ್ತ ಹತ್ತು—ಹನ್ನೆರಡು ರೂಪಾಯಿ ಗೆದ್ದಿದ್ದನು.

ಆ ರಾತ್ರಿ ಸೀದಾ ಮನೆಗೆ ಹೋಗುವುದು ಹೇಗೆ? ಸ್ವಲ್ಪ ಖುಷಾಮತ್ ಮಾಡಬೇಡವೇ ? ಗಾಂಜಾ, ಅಫೀಮು, ಇತ್ಯಾದಿ ಇತ್ಯಾದಿ .ರಾತ್ರೆಯೆಲ್ಲಾ ಹಾಗೆ ಕಳೆದು ಬೆಳಗಾಗುತ್ತಲೂ ಚಾಕರಿಗೋಸ್ಕರ ಆ ಅಂಗಡಿ, ಈ ಅಂಗಡಿ ಅಲೆದು ಮಧ್ಯಾಹ್ನ ನಾಲ್ಕು ಘಂಟೆಗೆ ಮನೆಗೆ ಬಿಜಯ ಮಾಡಿದನು. ಶುಭದಾ ಬಾಗಿಲಿನಲ್ಲಿ ನಿಂತಿದ್ದಳು. ಅವನ ಕಣ್ಣುಗಳು ಕೆಂಪಾಗಿದ್ದುವು. ಬಟ್ಟೆಬರೆ ಮಾಸಿಹೋಗಿದೆ. ಮುಖದ ಹತ್ತಿರ ದುರ್ವಾಸನೆ.

ಸ್ನಾನ ಮಾಡಿ ಊಟಕ್ಕೆ ಕೂತು ಹಾರಾಣನು ಬಡಿಸುತ್ತಿದ್ದ ಶುಭದಾಳ ಮುಖವನ್ನು ನೋಡಲಾಗದೆ ಹೋದನು. "ಏಕೆ ಇಷ್ಟು ತಡ" ಎಂದಳು.

"ಏನು ಮಾಡಲಿ ಹೇಳು, ಕೆಲಸಕ್ಕೋಸ್ಕರ ಹೀಗೆ ಅಲೆಯಬೇಕಾಗುತ್ತದೆ. ಹುಡುಕದೆ ಹೋದರೆ ಹೇಗೆ ಸಿಗುತ್ತೆ, ನೀನಿನ್ನೂ ಊಟ ಮಾಡಲಿಲ್ಲವೇ ?"

ಶುಭದಾ ಮಾತಾಡಲಿಲ್ಲ.

"ಮಾಡಲಿಲ್ಲ?"

"ಈಗ ಮಾಡುತ್ತೇನೆ "

ಹಾರಾಣನು ವ್ಯಸನದಿಂದ "ಇದೇನು ಕೆಟ್ಟ ಅಭ್ಯಾಸ ಹೇಳು ಮತ್ತೆ? ನನಗೆ ಇದು ಸ್ವಲ್ಪವೂ ಸರಿಬೀಳುವುದಿಲ್ಲ. ನಾನು ಒಂದು ಸಲ ಹಗಲೆಲ್ಲಾ ಬರದೆ ಹೋದರೆ ಏನು ಮಾಡುತ್ತಿ? ಹಾಗೇ ಉಪವಾಸ ಬಿದ್ದಿರುತ್ತಿ ಅನ್ನು. ಬಹಳ ಚೆನ್ನಾಗಿದೆ ಬಿಡು!" ಎಂದು ಎರಡು ತುತ್ತು ಬಾಯಿಗೆ ಹಾಕಿ ಶುಭದಾ ಕಡೆ ನೋಡಿ "ಮನ್ನೆ ನನ್ನನ್ನ ದುಡ್ಡು ಕೇಳಿದೆ ಅಲ್ಲ?" ಎಂದನು.

"ಇಲ್ಲವಲ್ಲಾ."

"ಕೇಳಲಿಲ್ಲವೇ? ಕೇಳಿದೆ ಅಂದುಕೊಂಡೆ." ಆಮೇಲೆ ಸ್ವಲ್ಪ ನಗುತ್ತಾ "ನಿನ್ನೆ ಕೇಳಲಿಲ್ಲ. ನಾಳೆ, ನಾಡಿದ್ದಾದರೂ ಕೇಳುತ್ತೀಯ. ನನಗೆ ಗೊತ್ತು. ನನ್ನ ವಸ್ತ್ರದ ಅಂಚಿನಲ್ಲಿ ಸ್ವಲ್ಪ ದುಡ್ಡು ಇದೆ ನೋಡು.. ....ಏಳೆಂಟು ರೂಪಾಯಿ ಇರಬೇಕು. ಅದರಲ್ಲಿ ನೀನು ಐದು ರೂಪಾಯಿ ತಗೋ ಬೇಕಾದರೆ."

ಶುಭದಾ ತಲೆ ತೂಗಿ "ಒಳ್ಳೇದು" ಎಂದಳು.

ಅವಳಿಗೆ ವಿಪರೀತ ಆಶ್ಚರ್ಯವಾಯಿತು. ಬಹಳ ದಿನಗಳಿಂದಲೂ ಈ ತರಹೆ ಎಂದಿಗೂ ಆಗಿರಲಿಲ್ಲ. ಬಹಳ ದಿನದಿಂದಲೂ ಕೇಳದೆ ತಾನಾಗಿ ಹೀಗೆ ದುಡ್ಡು ಕೊಟ್ಟಿರಲಿಲ್ಲ!

ಊಟ ಎಲ್ಲಾ ಆದ ಮೇಲೆ ಶುಭದಾ "ದುಡ್ಡೆಲ್ಲಿ ಸಿಕ್ಕಿತು?" ಎಂದು ಕೇಳಿದಳು.

ಹಾರಾಣನು ಹಲ್ಲು ಕಿರಿದು ನಗುತ್ತಾ

"ಅಲ್ಲೇ, ನನಗೆ ದುಡ್ಡಿಗೆ ಕೊರತೆಯೇನೇ? ತಲೆಯಲ್ಲಿ ಮೆದುಳು ಅನ್ನುವ ವಸ್ತುವಿರುವಾಗ ಗಂಡಸಿಗೆ ಬೇಕಾದಾಗ ದುಡ್ಡು ಹತ್ತಿರ ಬಂದು ಬೀಳುತ್ತಾ ಇರುತ್ತೆ. ಗೊತ್ತೇ ನಿನಗೆ?" ಎಂದನು....ಕೇಳಿ ಶುಭದಾಗೆ ಏನೆನ್ನಿಸಿತೋ ಏನೋ ಒಂದು ಮಾತೂ ಆಡಲಿಲ್ಲ.

ಇದಾದ ಎರಡು ತಿಂಗಳ ಮೇಲೆ—

ಒಂದು ದಿನ ಸಾಯಂಕಾಲ ಶುಭದಾ ಲಲನಾ ಹತ್ತಿರ ಬಂದು

ಸಂಕೋಚದಿಂದ "ಲಲನಾ, ಈಹೊತ್ತು ನಿನ್ನ ಹತ್ತಿರ ಏನಾದರೂ ಇದೆಯೇ ?" ಎಂದು ಕೇಳಿದಳು.

"ಏನೂ ಇಲ್ಲವಮ್ಮ ?"

"ನಿತ್ಯವೂ ನೀನು ಹಾಗನ್ನುತ್ತಲೇ ಇರುತ್ತಿ. ಆದರೆ ಆಮೇಲೆ ಹೇಗೆ ನಾಲ್ಕಾಣೆ, ಎಂಟಾಣೆ ತೆಗೆದು ಕೊಡುತ್ತೀಯೊ ಇವತ್ತೂ ಹಾಗೇನಾದರೂ ಇದ್ದರೆ ನೋಡೇ. ಏನೂ ಇಲ್ಲದೆ ಇರುವುದಿಲ್ಲ. ಏನೂ ಇಲ್ಲದೇನೆ ಹೋದರೆ ಈ ರಾತ್ರಿ ನಾವೆಲ್ಲಾ ಉಪವಾಸವೇ !"

ತಾಯಿಯ ದೈನ್ಯ ಮುಖವನ್ನೂ, ಕಣ್ಣೀರನ್ನೂ, ಗದ್ಗದ ಸ್ವರವನ್ನೂ ಗಮನಿಸಿ ಲಲನಾ ಅಳುತ್ತಾ "ನನ್ನ ಹತ್ತಿರ ಏನೂ ಇಲ್ಲವಮ್ಮಾ ! ನಿನ್ನ ಪಾದಗಳಾಣೆ ನನ್ನ ಹತ್ತಿರ ಏನೂ ಇಲ್ಲವಮ್ಮಾ !" ಎಂದಳು.

ಇಬ್ಬರೂ ಅತ್ತರು. ಮಗಳ ಮಾತನ್ನು ನಂಬದಿದ್ದುದಕ್ಕೆ ಶುಭದಾ, ಇದುವರೆಗೆ ಕೇಳಿದಾಗಲೆಲ್ಲಾ ಕೊಡುತ್ತಿದ್ದೆ, ಈಗ ಕೊಡಲಾಗಲಿಲ್ಲವಲ್ಲಾ ಎಂದು ಲಲನಾ.

ಸದಾನಂದನು ಕೊಟ್ಟಿದ್ದ ಐವತ್ತು ರೂಪಾಯಿ ಇಂದು ಮುಗಿದು ಹೋಗಿತ್ತು. ಇನ್ನು ಎಲ್ಲರೂ ತಿನ್ನುವುದೇನು ? ಈ ರಾತ್ರಿ ಕಳೆಯುವುದು ಹೇಗೆ? ಮಕ್ಕಳ ಅನ್ನಕ್ಕಾಗಿ ಅಮ್ಮ ದುಡ್ಡು ಕೇಳಿದರೆ ಕೊಡದಿದ್ದುದಕ್ಕೆ ಅವಳು ಮನಸ್ಸಿನಲ್ಲಿ ಏನೆಂದು ಕೊಂಡಾಳು ? ನಾಳೆ ಬೆಳಗಾದರೆ ಒಂದು ಹಿಡಿ ಅಕ್ಕಿ ಕೂಡ ಯಾರ ಹತ್ತಿರ ಕೇಳುವುದು? ಯಾರು ಕೊಡುತ್ತಾರೆ? ಲಲನಾ ಏನೂ ತೋಚದೆ ಅತ್ತಳು.

ಬಿಂದು ಕೂಡ ಈಗ ಇಲ್ಲ. ಸದಾನಂದನು ಕಾಶಿಗೆ ಹೋಗಿದ್ದಾನೆ. ಎರಡು ದಿನಗಳಿಂದಲೂ ಹಾರಾಣನೂ ಮನೆಗೆ ಬರಲಿಲ್ಲ. ಯಾವ ಅಫೀಮಿನಂಗಡಿಯಲ್ಲಿ, ಯಾವ ಜೂಜಿನ ಕಟ್ಟೆಯಲ್ಲಿ ಬಿದ್ದಿರುತ್ತಾನೋ!

ಯಥಾಪ್ರಕಾರ ಅವನ ಕಥೆ ಹೀಗೆಯೇ ಕಳೆಯುತ್ತಿದೆ. ಗಾಂಜಾ ಸೇದುತ್ತಾನೆ. ಅಫೀಮಿನ ಗುಳಿಗೆ ನುಂಗುತ್ತಾನೆ. ಕೈಯಲ್ಲಿ ದುಡ್ಡಿತ್ತೋ, ಧಾರಾಳವಾಗಿ ಖರ್ಚು ಮಾಡುತ್ತಾನೆ. ಶುಭದಾ ಹತ್ತಿರ ಅದಕ್ಕೆ, ಇದಕ್ಕೆ ಎಂದು ಸುಳ್ಳು ಹೇಳಿ ನಾಲ್ಕಾಣೆ, ಎಂಟಾಣೆ,ತೆಗೆದುಕೊಂಡು ಹೋಗುತ್ತಾನೆ. ಯಾವುದೂ ಸಿಗದೆ ಹೋದಾಗ ವಿಧಿಯಿಲ್ಲದೆ ಬ್ರಾಹ್ಮಣ ಕುಲಕ್ಕೆ ಸುಲಭ

ವಾಗಿರುವ ಭಿಕ್ಷಾಟನೆ ಕೂಡಾ ಮಾಡುತ್ತಾನೆ.

ಹಲೂದ್ ಪುರದಲ್ಲಿರುವುದಕ್ಕೆ ಮೊಟ್ಟಮೊದಲು ಅವನಿಗೆ ಕಷ್ಟ ವಾಗಿತ್ತು. ಈಗ ಬ್ರಾಹ್ಮಣ ಅಗ್ರಹಾರದಲ್ಲಿ ತಲೆಯಿಡುವುದೂ ಕಷ್ಟ ವಾಯಿತು. ಅಲ್ಲಿನ ಅಂಗಡಿಗಳಲ್ಲೆಲ್ಲಾ ಆಣೆ, ಎರಡಾಣೆ, ನಾಲ್ಕಾಣೆ ಇವನು ಕೊಡಬೇಕಾದ ಬಾಕಿಯಿತ್ತು.

ಆದರೂ ಕತ್ತಲಾದ ಮೇಲೆ ಅಫೀಮಿನಂಗಡಿಯಲ್ಲಿ ಹಾಜರು. ಜೂಜಿನ ಕಟ್ಟೆಯಲ್ಲಿ ಅವನಿರದಿದ್ದರೆ ಆಗದು. ದುಡ್ಡಿಲ್ಲವೆ ಅವನು ಸ್ವತಃ ಆಡಲು ಆಗದೆ ಹೋದರೂ ಇತರರಿಗೆ ಸಲಹೆ ಕೊಟ್ಟು ಗೆಲ್ಲಿಸಿ ಅವರಿಂದ ನಾಲ್ಕಾಣೆಯೋ, ಎಂಟಾಣೆಯೋ ಕಸಿದುಕೊಂಡು ಹೋಗುತ್ತಿದ್ದನು.

ಮನೆಗೆ ಹೋದಾಗ ಹೇಗೋ ಅನ್ನ ಇರುತ್ತಿತ್ತು. ಯಾರಿಗೆ ಇಲ್ಲದೆ ಹೋದರೂ ಅವನಿಗೆ ಮಾತ್ರ ಎಂದೂ ಸೊನ್ನೆಯಿಲ್ಲ. ಶುಭದಾ ಕೈ ಎಂದೂ ಖಾಲಿಯಾಗುವುದಿಲ್ಲ. ಅವಳ ಹತ್ತಿರ ಏನೂ ಇಲ್ಲದೆ ಹೋಗುವುದಿಲ್ಲ. ಹೇಗೋ ಸವರಿಸುತ್ತಾಳೆ, ಹೀಗೆ ಅವನ ನಂಬಿಕೆ.

ತಾನು ಏನೂ ತಿನ್ನದಿದ್ದರೂ, ಗಂಡನಿಗೋಸ್ಕರ ಎಷ್ಟು ರಾತ್ರಿಯಾ ದರೂ ಅನ್ನದ ಪಾತ್ರೆ ಮುಂದಿಟ್ಟುಕೊಂಡು ಕಾದಿರುತ್ತಾಳೆನ್ನುವುದು ಅವನ ಅನುಭವದ ವಿಷಯ.

ಈ ನಡುವೆ "ಎಲ್ಲಿ ಹೋಗಿದ್ದಿರಿ? ಏಕೆ ಇಷ್ಟು ತಡ" ಈ ಮಾತು ಗಳನ್ನು ಕೇಳುವುದನ್ನೂ ಬಿಟ್ಟುಬಿಟ್ಟಳು. ಹಾರಾಣನು ಮನಸ್ಸಿನಲ್ಲಿಯೇ "ತಾನು ಅಪರಾಧ ಮಾಡುತ್ತಿದ್ದೇನೆ. ಶುಭದಾ ಅದನ್ನೆಲ್ಲಾ ಇವತ್ತಿನವರೆಗೂ ಮನಸ್ಸಿಗೆ ತಂದುಕೊಳ್ಳದೆ ಇದ್ದಾಳೆ" ಎಂದುಕೊಂಡನು. ಹೀಗೆ ನಿತ್ಯವೂ ಮಾಡುವುದಕ್ಕೆ ಅವನಿಗಾದ ಸಂಕೋಚ, ಅವಮಾನ ಹೇಳಲಾಗದು.

ರಾತ್ರಿ ಬಹಳ ಹೊತ್ತಾದ ಮೇಲೆ ಹಾರಾಣನು ಮನೆಗೆ ಬಂದನು. ಮನೆಯೊಳಗೆ ಪ್ರವೇಶ ಮಾಡಲು ಮುಖ ಬರಲಿಲ್ಲ. ಶುಭದಾ ಎಂದಿನಂತೆ ಕಾಲು ತೊಳೆದುಕೊಳ್ಳಲು ತಂಬಿಗೆಯಲ್ಲಿ ನೀರು ತರಲಿಲ್ಲ. ಅನ್ನದ ಪಾತ್ರೆ ಮುಂದಿಟ್ಟುಕೊಂಡು ಯಾರೂ ಅವನ ಊಟಕ್ಕಾಗಿ ಸಿದ್ಧವಾಗಿಲ್ಲ. ಒಂದು ಮೂಲೆಯಲ್ಲಿ ದೀಪವು ಮಸಕು ಮಸುಕಾಗಿ ಉರಿಯುತ್ತಿದೆ. ದೀಪದ ಬತ್ತಿಯನ್ನು ದೊಡ್ಡದು ಮಾಡೋಣವೆಂದು ಹಾರಾಣನು ಹೋಗಿ ನೋಡು

ತ್ತಾನೆ, ದೀಪದಲ್ಲಿ ಎಣ್ಣೆಯಿಲ್ಲ ಏನೇನೋ ಯೋಚನೆ ಮಾಡುತ್ತಾ ಹೋಗಿ ಮಂಚದ ಮೇಲೆ ಕೂತನು. ನಿದ್ದೆ ಬರಲಿಲ್ಲ ...ಪೂರ್ವದಲ್ಲಿ ಮುಂಬೆಳಗು ಕಾಣ ಬಂದಿತು. ಆದರೂ ಯಾರೂ ಹತ್ತಿರ ಬರುವ ಸೂಚನೆಯಿಲ್ಲ. ಆಮೇಲೆ ಹಠಾತ್ತಾಗಿ ಏನಾಲೋಚಿಸಿದನೋ ಹಾರಾಣನು, ಕಿತ್ತುಹೋಗಿದ್ದ ತನ್ನ ಜೋಡುಗಳನ್ನು ಕೈಯಲ್ಲಿ ಹಿಡಿದುಕೊಂಡು ಮನೆಯಿಂದ ಹೊರಗೆ ಬಿದ್ದನು.

ಮೆಟ್ಟಿಲ ಮೇಲೆ ಛಲನಾಮಯಿ ಕೂತಿದ್ದಳು. ಇಷ್ಟು ಮುಂಜಾನೆಯ ಹೊತ್ತಿನಲ್ಲಿ ಅವಳೆಂದಿಗೂ ಎದ್ದಿರಲಿಲ್ಲ. ಇವತ್ತು ಏಕೆ ಎದ್ದಿದ್ದಳೋ ಆ ಹುಡುಗಿ ಯಾರಿಗೆ ಗೊತ್ತು. ತಂದೆಯನ್ನು ನೋಡಿದೊಡನೆ "ಅಪ್ಪಾ! ನೀನು ಯಾವಾಗ ಬಂದೆ?" ಎಂದು ಗಟ್ಟಿಯಾಗಿ ಕೂಗಿದಳು.

"ರಾತ್ರಿ!" ಎಂದು ನಡುಗುವ ಸ್ವರದಲ್ಲಿಯೇ ಹಾರಾಣನು ಉತ್ತರ ಕೊಟ್ಟನು.

"ಅದು ಹೋಗಲಿ ಅಪ್ಪಾ, ನಿನ್ನದೆಂತಹ ಬುದ್ಧಿ, ನಿನ್ನೆ ಅಮ್ಮ, ಅತ್ತೆ, ಲಲನಾ ಯಾರೂ ಒಂದು ತೊಟ್ಟು ನೀರು ಕೂಡ ಬಾಯಿಗೆ ಹಾಕಿಕೊಳ್ಳಲಿಲ್ಲ. ನೀನು ಮಾತ್ರ ಶಬ್ದ ಮಾಡದೆ ಕೈಯಲ್ಲಿ ಜೋಡು ಹಿಡಿದುಕೊಂಡು ಮನೆ ಬಿಟ್ಟು ಓಡಿಹೋಗುತ್ತಾ ಇದ್ದೀಯಾ! ಇವತ್ತು ನಾವೇನು ಊಟ ಮಾಡುವುದು ಹೇಳು ಮತ್ತೆ!"

ಹಾರಾಣ ಚಂದ್ರನಿಗೆ ಮಗಳು ಕತ್ತು ಕೊಯ್ದು ಹಾಕಿದಂತೆ ಅನುಭವವಾಯಿತು. ಕೈಯಲ್ಲಿದ್ದ ಜೋಡು ತಾನಾಗಿ ನೆಲಕ್ಕೆ ಬಿದ್ದುವು. ದಿಗ್ಭ್ರಮೆ ಹೊಡೆದಂತೆ ಹಾಗೆಯೇ ಎಷ್ಟು ಹೊತ್ತು ನಿಂತಿದ್ದನೋ! ಆಮೇಲೆ "ಛಲನಾ ....ಹಾಗೇನು? ನಿಜವಾಗಿ ಹಾಗೆ ಆಯಿತೇ?" ಎಂದನು.

ಛಲನಾ ಇನ್ನೂ ಗಟ್ಟಿಯಾಗಿ ಕೂಗುತ್ತಾ "ಅತ್ತೆ, ಅತ್ತೇ ...ಅಪ್ಪ ಅನ್ನುವದು ಕೇಳು ಅತ್ತೇ! ನಾನು ಸುಳ್ಳು ಹೇಳುತ್ತೀನಂತೆ. ರಾತ್ರಿಯೆಲ್ಲಾ ಅಮ್ಮ, ಅಕ್ಕಾ ಹೇಗೆ ಅಳುತ್ತಾ ಕಾಲ ಕಳೆದರೋ, ನಿನಗೆ ಹೇಗೆ ಗೊತ್ತಾಗುತ್ತೆ!" ಎಂದಳು.

ಹಾರಾಣನು ಇನ್ನು ಅಲ್ಲಿ ನಿಲ್ಲಲಾರದೆ ಜೋಡು ಹಾಕಿಕೊಂಡು ಬೇಗ ಬೇಗ ಅಲ್ಲಿಂದ ಹೊರಟು ಹೋದನು.

ಛಲನಾ ನೋಡಿ "ಅಕ್ಕಾ....ನೋಡೇ ..ಅಪ್ಪ ಓಡಿಹೋಗುತ್ತಾ ಇದ್ದಾರೆ" ಎಂದು ಮತ್ತೆ ಕೂಗಿದಳು.

ಛಲನಾ ಬುದ್ಧಿಯಿಲ್ಲದ ಹುಡುಗಿ. ಅವಳಿಗೆ ಯಾವಾಗ, ಯಾರಿಗೆ, ಹೇಗೆ ಹೇಳಬೇಕೆಂದು ತಿಳಿಯದು.

ಲಲನಾ ಒಳಗಣಿಂದ ಎಲ್ಲಾ ಕೇಳುತ್ತಿದ್ದಳು. ತಂದೆ ಹೊರಟು ಹೋದ ಮೇಲೆ ಅವಳು ಹೊರಗೆ ಬಂದು "ಏನೇ ಛಲನಾ, ನಿನಗೆ ಸ್ವಲ್ಪವೂ ಬುದ್ಧಿಯಿಲ್ಲ," ಎಂದಳು.

"ಯಾಕೆ ?"

"ಯಾರ ಹತ್ತಿರ ಹೇಗೆ ಮಾತಾಡಬೇಕು ಅನ್ನುವುದು ಇನ್ನೂ ತಿಳಿದು ಕೊಂಡಿಲ್ಲ. ಅಪ್ಪನ್ನ ಹಾಗೆ ಬೈದು ಹೊರಗೆ ಕಳುಹಿಸುವುದು ಸರಿಯೇನೆ? ನಿನಗೆ ಯಾವಾಗ ಬುದ್ಧಿ ಬರುತ್ತೋ ನಾಬೇರ ಕಾಣೆ."

ಛಲನಾ ಕೋಪದಿಂದ "ನಾನು ಬೈದದಕ್ಕಲ್ಲ, ಅಪ್ಪ ಅವರಾಗಿಯೇ ಓಡಹೋದರು ಗೊತ್ತೇ ?" ಎಂದಳು.

"ಛೀ, ನಿನ್ನ ಮುಖಕ್ಕೆ. ಅಪ್ಪನ್ನ ಹಾಗೆಲ್ಲಾ ಅಂತಾರೇನೇ ?"

"ಯಾಕೆ ಅನ್ನಕೂಡದು. ಅಪ್ಪ ಹೇಗಿರಬೇಕೋ ಹಾಗಿದ್ದರೆ ತಾನೇ ಹಾಗೆಲ್ಲಾ ಅನ್ನಕೂಡದು. ಆದರೆ ನಮ್ಮಪ್ಪನಂತಹವರಿಗೆ ಬೇಕಾದದ್ದನ್ನ ಬಹುದು. ಯಾರ ಅಪ್ಪ ಹೀಗೆ ಓಡಿಹೋಗುತ್ತಾರೆ ಮನೆಬಿಟ್ಟು, ನೀನೇ ಹೇಳು. ಯಾರ ಅಪ್ಪ ಹೀಗೆ ಎಷ್ಟು ದಿವಸಗಳಾದರೂ ಮನೆಗೆ ಬಾರದೆ ಗಾಂಜಾ, ಅಫೀಮು ತಿನ್ನುತ್ತಾ ಹೊರಗಡೆ ಬಿದ್ದಿರುತ್ತಾರೆ? ನಾನು ಬೇಕಾದ್ದನ್ನುತ್ತೇನೆ....ಇನ್ನೂ ಅನ್ನುತ್ತೇನೆ, ಬೇಷಾಗಿ."

"ಮುಚ್ಚು ಬಾಯಿ, ನಡಿ, ಹೊರಟುಹೋಗು ಇಲ್ಲಿಂದ।"

"ನಾನೇಕೆ ಹೋಗಲಿ! ನೀನೇ ಹೋಗು. ನನ್ನ ಮೇಲೇನು ಜೋರು ಮಾಡುವುದಕ್ಕೆ ಬರಬೇಡ."

ಲಲನಾ ಸೋಲೊಪ್ಪಿಕೊಂಡು ಆ ಸ್ಥಳ ಬಿಟ್ಟು ಹೊರಟು ಹೋದಳು.

## ೧೧

ಅಂದು ಮಧ್ಯಾಹ್ನ ಎರಡು ಘಂಟೆಯಾಗಿ ಹೋಗಿದೆ. ಶುಭದಾ ರಾಸಮಣಿಯ ಬಳಿ ಬಂದು ಒಂದು ತಾಮ್ರದ ಬಿಂದಿಗೆಯನ್ನು ಹತ್ತಿರಿಟ್ಟು "ಅತ್ತಿಗೇ, ಬಹಳ ಹೊತ್ತು ಆಗಿ ಹೋಯಿತು. ಇವತ್ತು ಇವರೇನು ಬರುವ ಹಾಗೆ ಕಾಣೆ. ಈ ಬಿಂದಿಗೆಯನ್ನು ತೆಗೆದುಕೊಂಡು ಹೋಗಿ ಅಡವಿಟ್ಟು ಏನಾದರೂ ಸಿಕ್ಕುತ್ತೇನೋ ನೋಡಿ. ನೀವೇ ಮಾಡಬೇಕು ಆ ಕೆಲಸ."

ರಾಸಮಣಿಯು ಶುಭದಾ ಮುಖವನ್ನು ಸ್ವಲ್ಪ ನೋಡಿ ವ್ಯಸನದಿಂದ "ಬಹಳ ನಾಚುಗೆಯಾಗುತ್ತೆ ಕಣೆ" ಎಂದಳು.

ಲಲನಾ ಹತ್ತಿರ ನಿಂತಿದ್ದವಳು ಆ ಬಿಂದಿಗೆಯನ್ನು ಕೈಗೆ ತೆಗೆದುಕೊಂಡು "ಅಮ್ಮಾ, ನಾನೇ ಹೋಗಿ ಬರುತ್ತೇನಮ್ಮಾ, ಸಿಗುತ್ತೇನೋ ನೋಡೋಣ." ಎಂದಳು.

ಶುಭದಾ ಮಂಕು ಬಡಿದವಳಂತೆ 'ನೀನು ಎಲ್ಲಿ ಹೋಗುತ್ತೀಯೇ?' ಎಂದಳು.

ಲಲನಾ ತನಗೆ ಎಲ್ಲಾ ಗೊತ್ತಿದೆ ಎಂದು ಸೂಚಿಸುವ ಧ್ವನಿಯಿಂದ ಅತ್ತೆಯ ಕಡೆ ನೋಡಿ "ಅದೇ ಘೋಷ್‌ಬಾಬುಗಳ ಅಂಗಡಿಗೆ" ಎಂದಳು.

"ನೀನು ಹೋಗುತೀಯೇನೇ ?"

"ಅದರಲ್ಲೇನಮ್ಮಾ ನಾಚುಗೆ? ನಾನು ಈ ಊರಿಗೇನು ಹೊಸಬಳಲ್ಲ. ಚಿಕ್ಕವಯಸ್ಸಿನಿಂದಲೂ ಊರಿನವರೆಲ್ಲಾ ನನ್ನನ್ನು ನೋಡಿದ್ದಾರೆ. ಅಂತಹುದರಲ್ಲಿ ನಾಚುಕೆ ಯಾಕೆ? ಕಷ್ಟ, ಕೊರತೆ ಯಾರ ಮನೆಯಲ್ಲಿ ಇರುವುದಿಲ್ಲ ?"

ಲಲನಾ ಹೀಗೆಂದು ಹೇಳಿ ಕೊಡ ಕೆಳಗಿಟ್ಟು ಬಟ್ಟೆ ಬದಲಾಯಿಸಲು ತನ್ನ ಕೊರಡಿಗೆ ಹೋದ ಸಮಯ ನೋಡಿಕೊಂಡು ರಾಸಮಣಿಯು ಮೆಲ್ಲಗೆ "ಈ ಬಿಂದಿಗೆ ಇತ್ತಲಾಗೆ ಕೊಡು. ನಾನೇ ಹೋಗಿಬಿಟ್ಟು ಬಂದು ಬಿಡುತ್ತೇನೆ. ಅವಳನ್ನು ಯಾಕೆ ಕಳುಹಿಸಬೇಕು ಸದ್ಯ" ಎಂದು ಬೇಗ ಬೇಗನೆ ಬಿಂದಿಗೆಯನ್ನು ಕಂಕುಳಲ್ಲಿಟ್ಟುಕೊಂಡು ಹೊರಟು ಹೋದಳು.

ಅವತ್ತು ಮೂರು ಘಂಟೆಯಾದ ಮೇಲೆಯೇ ಊಟ....ಉಳಿದವರೆಲ್ಲಾ ಊಟ ಮಾಡಿದ ಮೇಲೆ ಶುಭದಾ ಲಲನಾಳನ್ನು ಒಂದು ಪಕ್ಕಕ್ಕೆ ಕರೆದು "ಲೇ ಮಗು, ಹೋಗಿ ಬೇಗ ಒಂದಿಷ್ಟು ದಂಟಿನ ಸೊಪ್ಪು ಕೊಯಿದು ಕೊಂಡು ಬಂದುಬಿಡೇ...." ಎಂದಳು.

ಲಲನಾ ವಿಸ್ಮಿತಳಾಗಿ "ಇಷ್ಟು ಹೊತ್ತಿನಲ್ಲಿ ದಂಟಿನ ಸೊಪ್ಪು ಯಾಕಮ್ಮಾ?" ಎಂದಳು.

"ಬೇಕಾಗಿದೆ ಸ್ವಲ್ಪ."

"ಯಾಕೆ ಬೇಕಾಗಿದೆ ಹೇಳಿದರೆ!"

ಶುಭದಾ ಸ್ವಲ್ಪ ನಕ್ಕು "ಹೋಗು, ಅದೆಲ್ಲಾ ನಿನಗೇಕೆ ಹೇಳು." ಎಂದಳು.

ಮಾತಿನ ಭಾವದಿಂದ ಲಲನಾ ಎಲ್ಲಾ ತಿಳಿದುಕೊಂಡು "ತಪ್ಪಲೆಯಲ್ಲಿ ಅನ್ನ ಇಲ್ಲವೇನಮ್ಮಾ?" ಎಂದು ಗಟ್ಟಿಯಾಗಿ ಕೇಳಿದಳು.

"ಅನ್ನ ಯಾಕೆ ಇರೊಲ್ಲ?"

"ಹಾಗಿದ್ದರ ದಂಟಿನ ಸೊಪ್ಪು ಏಕೆ?"

"ಗೃಹಸ್ಥರ ಮನೆ. ಸ್ವಲ್ಪ ಸವರಿಸಿಟ್ಟುಕೊಂಡಿದ್ದರೆ ತಪ್ಪೇನು?"

ಲಲನಾ ಕಾತರಳಾಗಿ "ನಿಜ ಹೇಳಮ್ಮ, ಏನಾಗಿದೆ?" ಎಂದಳು.

"ಬೇರೆ ಏನಾಗಬೇಕು?"

"ನಿನ್ನ ಕಾಲಿಗೆ ಬೀಳುತ್ತೇನೆ. ನನ್ನ ಹತ್ತಿರ ಇನ್ನೇನೂ ಮುಚ್ಚಿಡಬೇಡ." ಎಂದು ತಾಯಿಯ ಕಾಲು ಮುಟ್ಟಲು ಹೋದಳು. ಶುಭದಾ ಅವಳ ಕೈಹಿಡಿದು ತಡೆದು ಹತ್ತಿರ ಕರೆದುಕೊಂಡು ಅವಳ ಮುಂಗುರುಳನ್ನು ಕಿವಿಯ ಮೇಲೆ ಸರಿಮಾಡುತ್ತಾ ಪ್ರಸನ್ನ ಮುಖದಿಂದ "ಒಬ್ಬರಿಗೆ ಅನ್ನ ಸಾಲದು. ಇವತ್ತು ಅವರು ಬರಬಹುದು. ಅದಕ್ಕೇ...." ಎಂದಳು.

"ಅದಕ್ಕೆ ನೀನು ಬರಿ ಸೊಪ್ಪು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತೀಯೇನು?"

"ದಂಟಿನ ಸೊಪ್ಪು ಯಾರೂ ತಿನ್ನುವುದಿಲ್ಲವೇನು ಹಾಗಾದರೆ?"

"ತಿನ್ನಬಾರದ್ದಲ್ಲ, ಸರಿ ಹಾಗೆಂದು ಬರೀ ಅದನ್ನೇ ತಿನ್ನುತ್ತಾರೆಯೇ?"

"ಯಾಕೆ ಆಗಬಾರದು. ಆಗ ನೀನೇ ಹೇಳಲಿಲ್ಲ? ಕಷ್ಟ ಕೊರತೆ

ಯಾರ ಮನೆಯಲ್ಲಿ ಇರೊಲ್ಲ ಅಂತ? ಹಾಗೆಯೇ ಕಷ್ಟ ಕೊರತೆ ಮನಸ್ಸಿಗೆ ತೆಗೆದುಕೊಳ್ಳಬಾರದು. ಪುನಃ ದೇವರಿಗೆ ಮನಸ್ಸಿಗೆ ಬಂದರೆ ಎಲ್ಲಾ ಸರಿ ಹೋಗುತ್ತದೆ....ಆಗ...." ಮುಂದೆ ಹೇಳಲಾಗದೆ ಶುಭದಾ ಕಣ್ಣುಗಳಲ್ಲಿ ನೀರು ತುಂಬಿತು.

ಲಲನಾ ಅಳು ತಡೆಯಲಾಗದೆ ಹೊರಟು ಹೋದಳು. ಸ್ವಲ್ಪ ಹೊತ್ತಿನಲ್ಲಿಯೇ ಹಿಂದಿರುಗಿ ಬಂದು ತಾಯ ಬಳಿ ದಂಟಿನ ಸೊಪ್ಪಿನ ರಾಶಿಯನ್ನು ಹಾಕಿ ಕಣ್ಣೊರಸಿಕೊಳ್ಳುತ್ತಾ ಹೊರಟು ಹೋದಳು.

ಇನ್ನೂ ಸಾಯಂಕಾಲವಾಗಿಲ್ಲ. ಭಿಕ್ಷುಕನೊಬ್ಬ ಅಗ್ರಹಾರದಲ್ಲಿ ಒಂದು ಚಿಕ್ಕ ಕಡಲೆಪುರಿ ಅಂಗಡಿಯ ಹತ್ತಿರ ಬಹಳ ಹೊತ್ತಿನಿಂದ ನಿಂತಿದ್ದಾನೆ. ಅಲ್ಲಲ್ಲಿ ಬೆಳಗಿನಿಂದ ಭಿಕ್ಷೆ ಬೇಡಿ ಕೂಡಿಸಿದ್ದ ಅಕ್ಕಿಯನ್ನು ವಸ್ತ್ರದಲ್ಲಿ ಗಂಟು ಕಟ್ಟಿ ಕಂಕುಳಲ್ಲಿಟ್ಟುಕೊಂಡು ನಿಂತಿದ್ದಾನೆ.

ಕಾಸು, ಮೂರು ಕಾಸು ವ್ಯಾಪಾರ ಮಾಡುವವರು ಹೊರತಾಗಿ ಯಾರೂ ಆ ಚಿಲ್ಲರೆ ಅಂಗಡಿಗೆ ಬಾರರು. ಎಷ್ಟೋ ಜನ ಅಲ್ಲಿಗೆ ಬಂದು ಹೋದರು. ಆದರೆ ಭಿಕ್ಷುಕನು ಮಾತ್ರ ಅಲ್ಲಿಯೇ ನಿಂತಿದ್ದಾನೆ. ಅಂಗಡಿಯವನು ಅವನನ್ನು ನೋಡಿ "ಏನು ಬೇಕಯ್ಯಾ" ಎಂದನು.

"ಏನೂ ಬೇಡ."

"ಮತ್ತೆ ಇಲ್ಲಿ ಏಕೆ ನಿಂತಿದ್ದಿ?"

ಅಲ್ಲಿ ನಿಂತಿದ್ದ ಗಿರಾಕಿಯೊಬ್ಬ "ಭಿಕ್ಷೆ ಬೇಡಲಿಕ್ಕೆ ಬಂದಿದ್ದಾನೇನೋ ?" ಎಂದನು. ಅಂಗಡಿಯವನು ಮೆಲ್ಲಗೆ "ಹೊರಡು, ಇಲ್ಲೇನೂ ಸಿಗುವುದಿಲ್ಲ. ಸಾಯಂಕಾಲದ ಹೊತ್ತು ಭಿಕ್ಷೆಗಿಕ್ಷೆ ಏನೂ ಸಿಗುವುದಿಲ್ಲ" ಎಂದನು.

ಭಿಕ್ಷುಕನು ಹೊರಟು ಹೋದನು ಸ್ವಲ್ಪ ದೂರ ಹೋಗಿ ಮತ್ತೆ ಬಂದು ಅಲ್ಲಿಯೇ ನಿಂತಿದ್ದುದನ್ನು ನೋಡಿ "ಮತ್ತೆ ಬಂಡೆಯಾ" ಎಂದನು.

"ಅಕ್ಕಿ ಕೊಳ್ಳುತ್ತೀಯಾ?"

"ಎಂತಹ ಅಕ್ಕಿ....ಬೆಲೆ ಹೇಗೆ?"

"ದಪ್ಪ ಅಕ್ಕಿ...."

"ಎಲ್ಲಿ...ಹೇಗಿದೆಯೋ ನೋಡೋಣ."

ಅಕ್ಕಿಯನ್ನು ನೋಡಿ "ಇದೆಲ್ಲಾ ಭಿಕ್ಷೆಯ ಅಕ್ಕಿ. ಅದಕ್ಕೇ ಇಷ್ಟು

ರಕಮುಗಳಿವೆ....ಸರಿ. ಎಷ್ಟಕ್ಕೆ ಕೊಡುತ್ತಿ ಹೇಳು."

"ಎರಡಾಣೆ."

"ಹೋಗು ಹೋಗೆಲ್ಲಾದರೂ. ಅಬ್ಬಬ್ಬ ಅಂದರೆ ಒಂದಾಣೆಗೆ ಮೇಲಿಲ್ಲ. ಎರಡಾಣೆ ಕೊಡುತ್ತಾರೆ ನಿನಗೆ?....ಬೇಡ, ಗಾಡಿ ಬಿಡು."

ಭಿಕ್ಷುಕನು ಸೀದಾ ಹೊರಟು ಹೋಗಿ ಒಂದು ಆಲದ ಮರದ ಕೆಳಗೆ ಕೂತಿದ್ದು ಸ್ವಲ್ಪ ಹೊತ್ತಾದ ಮೇಲೆ ಪುತ್ತೆ ಅಂಗಡಿಯವನ ಬಳಿ ಬಂದು "ಹೋಗಲಿ ತೆಗೆದುಕೊಳ್ಳಿ" ಎಂದನು.

"ಒಂದಾಣೆಗೆ ಕೊಡುತ್ತೀಯಾ ?"

"ಮಾಡುವುದೇನು....ತಗೊಳ್ಳಿ."

"ಹಾಗಾದರ ಆ ಡಬ್ಬದಲ್ಲಿ ಸುರಿ."

ಹಾರಾಣನು ಅಕ್ಕಿಯನ್ನು ಡಬ್ಬದಲ್ಲಿ ಸುರಿದು ಅವನಿಂದ ಒಂದಾಣೆಯನ್ನು ತೆಗೆದುಕೊಂಡು "ಬಡ್ಡೀಮಗನಿಗೆ ಸರಿಯಾಗಿ ಕೊಟ್ಟೆ ಕೆಲಸ. ಅರ್ಧವೆಲ್ಲಾ ತಿಂದು ಹಾಕಿದರೂ ಮುಡ್ಡಿ ........ ಮಗನಿಗೆ ಗೊತ್ತಾಗಬೇಕಲ್ಲ... ಅವನ ಹಣೆಯಲ್ಲಿ ಬರೆದಿದ್ದದ್ದಷ್ಟೆ!" ಎಂದು ತನ್ನ ಬೆನ್ನು ತಾನೇ ಚಪ್ಪರಿಸಿ ಕೊಳ್ಳುತ್ತಾ ತನ್ನ ಚಾಣಾಕ್ಷತನದ ಸಂಪೂರ್ಣ ಫಲವನ್ನು ಪಡೆಯಲು ಆಫೀಮಿನಂಗಡಿಯೊಳಗೆ ಹೋದನು.

# ೧೨

"ಇನ್ನು ನನ್ನ ಕೈಯಲ್ಲಾಗುವುದಿಲ್ಲವೇ ತಾಯಿ" ಎಂದು ಶುಭದಾ ಮಗಳನ್ನು ತಬ್ಬಿಕೊಂಡು ಅತ್ತಳು. ಮೂರು ದಿವಸದಿಂದ ಉಪವಾಸ.

ಲಲನಾ ತಾಯಿಯ ಕಣ್ಣೀರೊರಸಿ "ಯಾಕಮ್ಮಾ ಹೀಗೆ ಮಾಡುತ್ತೀ. ದಿನಗಳು ಯಾವಾಗಲೂ ಹೀಗೆಯೇ ಇರುವುದಿಲ್ಲ. ಮತ್ತೆ ಒಳ್ಳೆಯ ದಿನಗಳು ಬಂದೇ ಬರುತ್ತವೆ" ಎಂದಳು.

ಶುಭದಾ ಅಳುತ್ತಾ "ಹಾಗೆಯೇ ಆಗಲಿ ನನ್ನಮ್ಮ! ದೇವರು ಹಾಗೆಯೇ ಮಾಡಲಿ. ಆದರೆ ಇನ್ನು ತಡೆಯುವುದಕ್ಕೆ ನನ್ನ ಕೈಯಲ್ಲಾಗದೇ ....ತಾಯಿಯಾಗಿದ್ದೂ ಕೂಡ ನಿಮ್ಮಗಳಿಗೆಲ್ಲಾ ಈ ತರಹೆ ದುರ್ದಶೆ ಬಂದಿರುವಾಗ ಹೇಗೆ ನೋಡಿಕೊಂಡಿರಲೇ? ನಾನು ಹೋಗಿ ಗಂಗಮ್ಮನ ಮಡಿಲಲ್ಲಿ ಹೋಗಿ ಸೇರಿಕೊಳ್ಳುತ್ತೇನೆ. ನೀನೇ ಈ ತಬ್ಬಲಿ ಮಕ್ಕಳನ್ನ ಹೇಗಾದರೂ ನೋಡಿಕೊಳ್ಳೇ ತಾಯಿ. ಮನೆ ಮನೆಗೂ ಹೋಗಿ ಭಿಕ್ಷೆ ಎತ್ತಿಕೊಂಡು.... ಛೆ ...ಇನ್ನು ನನ್ನ ಕೈಯಲ್ಲಿ ನೋಡಲಿಕ್ಕಾಗದೇ !" ಎಂದಳು.

ಶುಭದಾ ಆಗ ಅಳುತ್ತಿದ್ದುದನ್ನು ನೋಡಿದರೆ ಕಲ್ಲು ಕೂಡ ಕರಗೀತು.

ಇಷ್ಟು ದಿನಗಳಾದ ಮೇಲೆ ತಡೆದು ತಡೆದು ಸಾಕಾಗಿ ನೊಂದು ಹೋಗಿದ್ದಾಳೆ. ಎಷ್ಟೋ ಸಹಿಸಿದ್ದಳು. ಎಷ್ಟೋ ಧೈರ್ಯ ಪಡೆದಿದ್ದಳು. ಈಗ ಮರ್ಯಾದೆಯನ್ನೇ ಕೊಂದುಕೊಂಡು ತನ್ನನ್ನ ಸಮಾಧಾನಕ್ಕೆ ತಂದುಕೊಳ್ಳಲಾರದೆ ಹೋಗಿದ್ದಳು.

ಯಾರು ಎಂದೂ ಕೋಪಗೊಳ್ಳುವುದಿಲ್ಲವೋ ಅವರು ಒಂದು ಸಲ ಕೋಪಗೊಂಡರೆ ಎದುರಿಸುವುದಸಾಧ್ಯ. ಯಾರು ಅತಿ ಶಾಂತಚಿತ್ತರೋ ಅಂತಹವರು ಸಂಕಟದ ಬಿರುಗಾಳಿಗೆ ಸಿಕ್ಕಿಬಿದ್ದು ನೊಂದರೆ ಆಗ ಪ್ರಳಯವೇ ಆಗುತ್ತದೆ. ಅದಕ್ಕಾಗಿಯೇ ಲಲನಾ ನೋಡಿ ಎಂತಹ ವಿಪತ್ತು ಸಂಭವಿಸಿದೆ, ಎಂದು ಭೀತಳಾದಳು. ಯಾವ ರೀತಿಯಲ್ಲಿಯೂ ತಾಯಿಗೆ ಧೈರ್ಯ ಹೇಳಿ ಸಮಾಧಾನ ಮಾಡಲು ಸಾಧ್ಯವಾಗಲಿಲ್ಲ. ತನ್ನ ಸ್ವಂತ ಎದೆಯೇ ಒಡೆದು ಹೋಗುವಷ್ಟು ದುಃಖದಿಂದ ತುಂಬಿದೆ. ಒಡೆದು ಹೋದರೇನೇ ಒಳ್ಳೆಯದು

....ಎನ್ನಿಸುತ್ತಿದೆ. ಇನ್ನು ಸಮಾಧಾನ ಹೇಗೆತಾನೇ ಮಾಡಿಯಾಳು? ತಾಯಿ ಮಗಳಿಬ್ಬರೂ ಆ ಗಭೀರ ರಾತ್ರಿಯನ್ನು ಹೀಗೆಯೇ ಕಳೆದು ಬೆಳಗಿನ ಜಾವದಲ್ಲಿ ಸುಸ್ತಾಗಿ ತಿಳಿಯದೆಯೇ ನಿದ್ದೆ ಮಾಡಿದರು.

ಶುಭದಾಗೆ ಗಂಡನ ವಿಷಯವಾಗಿ ವಿಪರೀತ ಕಳವಳವಾಗಿದೆ. ಈಗ ಆರು ದಿನಗಳಾಗಿವೆ ಅವನು ಮನೆಗೆ ಬಂದು. ಅವಳ ಭಯ .. ಅವ ಮಾನದಿಂದ, ತಡೆಯಲಾಗದ ನೋವಿನಿಂದ, ಅವರು ಆತ್ಮಹತ್ಯೆ ಮಾಡಿ ಕೊಂಡಿದ್ದರೆ ಏನು ಗತಿ? ಸ್ವಂತ ಮಗಳು, ಅಷ್ಟು ಚಿಕ್ಕ ಹುಡುಗಿ ಛಲನಾ ಕೂಡ ಅವರನ್ನು ಆರೀತಿಯಾಗಿ ಹೀನಾಮಾನ ಬೈದಿರಬೇಕಾದರೆ ಯಾರು ತಾನೇ ತಡೆದುಕೊಳ್ಳಬಲ್ಲರು ಹಾಗಿರುವಾಗ ಏನು ಭಯಂಕರ ಯೋಚನೆ ಮನಸ್ಸಿಗೆ ಬಂದಿರುತ್ತೋ, ಹಾಗಾಗದಿರಲಿ ಸಧ್ಯ! ಇಡೀ ರಾತ್ರಿ ಬೆಳಗಿನ ಜಾವದವರೆಗೂ ಇದೇ ದುರ್ಯೋಚನೆಯೇ ಶುಭದಾ ಮನಸ್ಸಿನಲ್ಲಿ... ಮುಂಜಾನೆಯಾಗುವುದೇ ತಡ, ಬೆಚ್ಚಿ ಬಿದ್ದೆದ್ದು ಲಲನಾಳನ್ನು ಮೈತಟ್ಟಿ ಎಬ್ಬಿಸಿ "ಲೇ, ಲಲನಾ....ಏಳೇ...ಅವರು ಇನ್ನಿಲ್ಲವೇ....ನೋಡೆ ಮತ್ತೆ!" ಎಂದು ಗಾಬರಿಯಾಗಿ ಕೂಗಿದಳು.

ರಾತ್ರಿಯೆಲ್ಲಾ ನಿದ್ದೆಯಿಲ್ಲದೆ ಶ್ರಾಂತವಾಗಿದ್ದ ಜೀವ ಬಲವಂತವಾಗಿ ಎದ್ದು ನಿದ್ದೆಯಿಂದ ಭಾರವಾದ ಕಣ್ಣುಗಳನ್ನು ಉಜ್ಜಿಕೊಳ್ಳುತ್ತಾ ಮೊದಲು ಮಾತೇನೂ ಅರ್ಥ ಮಾಡಿಕೊಳ್ಳದೆ ತಾಯಿಯ ಮುಖ ನೋಡಿ "ಯಾರಮ್ಮಾ?" ಎಂದಳು.

"ನನಗೆ ಅವರಿಲ್ಲದ ಹಾಗೆ ಕೆಟ್ಟ ಸ್ವಪ್ನ ಬಿದ್ದಿತ್ತೇ........ನಾನೇನು ಮಾಡಲೇ ಇನ್ನು!"

"ಇದೇನಮ್ಮಾ ಹೀಗೆ ಆಡುತ್ತೀಯಲ್ಲಾ! ಹಾಗೆ ಯಾಕೆ ಅನ್ನಬೇಕು ಸಧ್ಯ!" ಎಂದು ಇದ್ದಕ್ಕಿದ್ದಂತೆ ಅಳುವುದಕ್ಕೆ ಮೊದಲು ಮಾಡಿದಳು. ರಾತ್ರಿಯೆಲ್ಲಾ ಅತ್ತಿದ್ದು ಸಾಲದೆ ಉಳಿದಿದ್ದನ್ನು ಬೆಳಗಾದ ಮೇಲೆ ತಾಯಿ ಮಗಳು ಅತ್ತು ಮುಗಿಸಿದರು.

....ಹೊತ್ತೇರುತ್ತಾ ಬಂತು. ಎಂಟು, ಒಂಬತ್ತು....ಹತ್ತು ಕೂಡ ಆಯಿತು....ಆ ಸಮಯದಲ್ಲಿ ಕೃಷ್ಣಾ ರಾಕೂರಣಿಯು ಸ್ನಾನ ಮುಗಿಸಿ ಕೊಂಡು ಬಂದು ಮನೆಗೆ ಹೋಗುತ್ತಿದ್ದವಳು ಹಾರಾಣ ಮುಖೋಪಾ

ಧ್ಯಾಯನ ಮನೆಯ ಪಾರ್ಶ್ವ ಬಂದು ಏನೋ ತೋಚಿ ಒಳಗೆ ಬಂದಳು. ಅಂಗಳದಿಂದಲೇ ಶುಭದಾ ಹೆಸರು ಹಿಡಿದು ಕೂಗಿದಳು.

ಶುಭದಾ ಕಣ್ಣೊರಸಿಕೊಂಡು ಹೊರಗೆ ಬಂದು "ಏನತ್ತೇ, ಒಳಗೆ ಬನ್ನಿ.... ಕೂಡಿ" ಎಂದಳು.

"ಇಲ್ಲಮ್ಮ, ಕೂಡಲಿಕ್ಕೆ ಹೊತ್ತಿಲ್ಲ. ಹೀಗೇ ಸ್ನಾನ ಮಾಡಿಕೊಂಡು ಹೋಗುತ್ತಾ ಇದ್ದೆ.... ಬಹಳ ದಿನವಾಯಿತು ನೋಡಿಕೊಂಡು ಹೋಗೋಣ ಎನ್ನಿಸಿತು ಬಂದೆ."

ಶುಭದಾ ಮೌನವಾಗಿದ್ದಳು. ಕೃಷ್ಣಪ್ರಿಯಾ ಏನೋ ಹೇಳಲು ಇಂಗಿತ ತೋರಿಸುತ್ತಾ "ಸ್ವಲ್ಪ ಇಲ್ಲಿ ಬಾ, ಶುಭದಾ ಒಂದು ಮಾತು" ಎಂದಳು. ಶುಭದಾ ಹತ್ತಿರ ಬರುತ್ತಲೂ "ಹಾರಾಣನ ಸಮಾಚಾರವೇನೇ?" ಎಂದು ಕೇಳಿದಳು.

"ಏನೂ ಗೊತ್ತಿಲ್ಲವಮ್ಮಾ!"

"ಎಷ್ಟು ದಿವಸವಾಯಿತೇ ಮನೆಗೆ ಬರದೇ?"

"ಆರು ದಿವಸ."

"ಆರು ದಿವಸಗಳಿಂದ ಬರಲಿಲ್ಲವೇ? ಅಗ್ರಹಾರದಲ್ಲಿದಾನೇನೋ, ಯಾರನ್ನಾದರೂ ಹೇಳಿಕಳುಹಿಸಿದೆಯಾ?"

"ಯಾರನ್ನ ಕಳುಹಿಸಲಿ? ಯಾರು ಹೋಗುತ್ತಾರೆ?"

"ಅದು ಸರಿಯೇ, ನನಗೆ ಹೇಳಬಾರದಾಗಿತ್ತೇ?"

ಶುಭದಾ ಮಾತನಾಡಲಿಲ್ಲ. ಕೃಷ್ಣಾರಾಕೂಗಣಿಯು ಕಂಕುಳಲ್ಲಿದ್ದ ನೀರಿನ ಬಿಂದಿಗೆಯನ್ನು ಕೆಳಗಿಟ್ಟು "ಮನೆಯಲ್ಲಿ ದುಡ್ಡೇನಾದರೂ ಇದೆಯೋ, ಅದೂ ಇಲ್ಲವೋ?" ಎಂದಳು.

"ಇಲ್ಲ."

"ಹಾಗಾದರೆ ಸಂಸಾರ ನಡೆಯುವುದು ಹೇಗೇ?"

ಶುಭದಾ ಅದಕ್ಕೂ ಮಾತನಾಡಲಿಲ್ಲ.

"ಮಗು ಹೇಗಿದ್ದಾನೆ?"

"ಅದೇ ರೀತಿ."

"ಹಾಗಾದರೆ ಲಲನಾಳನ್ನು ನಮ್ಮ ಮನೆಗೆ ಸ್ವಲ್ಪ ಕಳುಹಿಸಿಕೊಡು

ಮತ್ತೆ. ನಾನು ಹೋಗುತ್ತೇನೆ ಇನ್ನು" ಎಂದು ಹೊರಟಳು. ಆಕೆ ಹೋದ ತಕ್ಷಣ ಶುಭದಾ ಲಲನಾಳನ್ನು ಕರೆದು

"ಕೃಷ್ಣಾರಾಕೂರಣಿ ನಿನ್ನನ್ನ ಯಾಕೋ ಕರೆದಳು. ಸ್ವಲ್ಪ ಹೋಗಿ ಬಿಟ್ಟು ಬಾಮ್ಮ" ಎಂದಳು.

"ಯಾಕೆ?"

"ನನಗೆ ಗೊತ್ತಿಲ್ಲಮ್ಮ."

ಲಲನಾ ಆಶ್ಚರ್ಯದಿಂದ ಆಕೆಯ ಮನೆಗೆ ಹೋದಳು. ಸ್ವಲ್ಪ ಹೊತ್ತಾದ ಮೇಲೆ ಮರಳಿ ಬಂದು ತಾಯಿಯ ಕೈಯಲ್ಲಿ ಎರಡು ರೂಪಾಯಿಗಳನ್ನಿಡುತ್ತಾ

"ಕೃಷ್ಣಾ ಅತ್ತೆ ಕೊಟ್ಟರು" ಎಂದಳು.

ಶುಭದಾ ಅವನ್ನು ಸೆರಗಿನಲ್ಲಿ ಕಟ್ಟಿಕೊಂಡು "ಏನೂ ಹೇಳಲಿಲ್ಲವೇ?" ಎಂದಳು.

"ಹೂಂ ..ಅಪ್ಪ ಮನೆಗೆ ಬಂದರೆ ಆಕೆಗೆ ಹೇಳಿಕಳುಹಿಸಬೇಕಂತೆ."

ಶುಭದಾ ಅಂದು ದೇವರಿಗೆ ಪ್ರಾರ್ಥನೆ ಮಾಡಿಕೊಂಡಳು. ದೇವಿಯ ಪರದ ಬಳಿ ಬಹಳ ಹೊತ್ತು ಕಣ್ಣುಮುಚ್ಚಿಕೊಂಡು ಕೂತಿದ್ದಳು. ಬೃಂದಾವನಕ್ಕೆ ಬಂದು ತುಳಸಿಯ ಪ್ರದಕ್ಷಿಣೆ ಮಾಡಿ ಏನೇನೋ ಬೇಡಿಕೊಂಡಳು. ಆ ಮೇಲೆ ಹೊರಗಡೆ ಹೋಗಿ ಮನೆಗೆ ಬೇಕಾದ ಸಾಮಾನುಗಳನ್ನು ತಂದು ಸ್ನಾನಕ್ಕಾಗಿ ಗಂಗೆಯ ಕಡೆ ಹೊರಟಳು.

ಅಂದು ಯಥಾಸಮಯಕ್ಕೆ ಹೊಟ್ಟೆ ತುಂಬಾ ಅನ್ನ ತಿಂದು ಛಲನಾ ಮಯಿ ಮನಸ್ಸಿನಲ್ಲಿ ಖುಷಿಯಾಗಿ ಹಾಡು ಹೇಳಿಕೊಳ್ಳುತ್ತಾ ಸ್ನೇಹಿತೆ ಲಲಿತೆಯ ಮನೆಗೆ ಹೋದಳು.

ರಾತ್ರಿ ಬಹಳ ಕತ್ತಲಾದ ಮೇಲೆ ಇಷ್ಟು ದಿವಸಗಳು ತಲೆ ತಪ್ಪಿಸಿ ಕೊಂಡಿದ್ದ ಹಾರಾಣಚಂದ್ರನು ಹೇಗೋ ಮನೆಯನ್ನು ಪ್ರವೇಶ ಮಾಡಿ ದನು. ಆರು ದಿನಗಳ ಹಿಂದೆ ಹೇಗಿದ್ದನೋ ಈಗಲೂ ಹಾಗೆಯೇ ಇದ್ದಾನೆ. ಸ್ವಲ್ಪವೂ ಪರಿವರ್ತನೆಯಿಲ್ಲ. ಬಟ್ಟೆಗಳು ಮಾತ್ರ ಬದಲಾವಣೆಯಾಗಿವೆ. ಮೈ ಬಣ್ಣಕ್ಕೆ ಹೊಂದಿಕೊಳ್ಳುವಷ್ಟು ಕಪ್ಪಗಾಗಿವೆ. ಮತ್ತು ಅಲ್ಲಲ್ಲಿ ಮೈ ಕಾಣಿಸುವಷ್ಟು ಹರಿದೂ ಹೋಗಿವೆ.

ಶುಭದಾ ಅವನಿಗೆ ಯಥೋಚಿತವಾಗಿ ಕೈಕಾಲಿಗೆ ನೀರು ಕೊಟ್ಟು

ಊಟಕ್ಕೆಬ್ಬಿಸಿದಳು. ಅವನ ಊಟವಾದ ಮೇಲೆ ಲಲನಾಳನ್ನು ಕರೆದು ಸ್ವಲ್ಪ ನಗುಮುಖದಿಂದ "ನೋಡೇ, ಇವತ್ತಿನ ಹಾಗೆ ನಿತ್ಯವೂ ನಿನ್ನ ಮುಖ ನೋಡುತ್ತಲೇ ಏಳಬೇಕೆನ್ನಿಸುತ್ತೆ ನನಗೆ" ಎಂದಳು.

"ಯಾಕಮ್ಮಾ?" ಎಂದು ಅವಳೂ ನಗುತ್ತಾ ಕೇಳಿದಳು.

"ಯಾಕೂ ಇಲ್ಲ. ಇವತ್ತು ನನಗಾದ ಸುಖ ಇಡೀ ಜನ್ಮದಲ್ಲಿ ಆಗಿಲ್ಲ ಅನ್ನುವಷ್ಟು ಅನ್ನಿಸಿದೆ." ಎರಡನೆಯ ದಿನ ಬೆಳಗ್ಗೆ ಲಲನಾ ಕೃಷ್ಣ ಪ್ರಿಯಾಳ ಮನೆಗೆ ಹೋಗಿ

"ನಿನ್ನೆ ರಾತ್ರಿ ನಮ್ಮಪ್ಪ ಮನೆಗೆ ಬಂದರು" ಎಂದಳು.

"ಬಂದನೇ? ಆರೋಗ್ಯವಾಗಿದಾನೆ ತಾನೇ?"

"ಹೂಂ."

"ಇಷ್ಟು ದಿವಸಗಳೂ ಎಲ್ಲಿದ್ದನಂತೆ?"

"ಅದು ಗೊತ್ತಿಲ್ಲ."

"ನಿಮ್ಮ ತಾಯಿ ಏನೂ ಕೇಳಲಿಲ್ಲವೇ?"

"ಇಲ್ಲ. ಅಮ್ಮ ಅಪ್ಪನ ಹತ್ತಿರ ಏನೂ ಮಾತಾಡಲಿಲ್ಲ."

"ಮಾತಾಡಲಿಲ್ಲ? ...ಏಕೆ ಮಾತಾಡಲಿಲ್ಲ?"

"ನನಗೆ ತಿಳಿಯದು."

ಹನ್ನೆರಡು ಘಂಟೆಯ ಹೊತ್ತಿಗೆ ಬಾಳೆಯ ಎಲೆಯಿಂದ ಮುಚ್ಚಲ್ಪಟ್ಟಿದ್ದ ಒಂದು ಪಾತ್ರೆಯನ್ನು ಕೈಯಲ್ಲಿ ಹಿಡಿದುಕೊಂಡು ಬಂದು "ಕೊಳ್ಳೇ ಶುಭದಾ, ಒಳ್ಳೆಯ ಬದನೆಕಾಯಿ ಹುಳಿ ಮಾಡಿದ್ದೇನೆ. ಕೋ....ಹಾರಾಣನಿಗೆ ಬಡಿಸು" ಎಂದಳು.

ಶುಭದಾ ಪಾತ್ರೆಯನ್ನು ಆಕೆಯ ಕೈಯಿಂದ ತೆಗೆದುಕೊಂಡು "ಅವರು ಆ ಕೋಣೆಯಲ್ಲಿದ್ದಾರ" ಎಂದಳು.

ಅವಳ ಅರ್ಥವನ್ನು ಗ್ರಹಿಸಿ ಕೃಷ್ಣಾ ರಾಕೂರಣಿಯು "ಇರಲೇಳು. ಈಗ ಬೇಡ. ನಾನು ಮನೆಗೆ ಬಾಗಿಲು ಸರಿಯಾಗಿ ಹಾಕಿ ಬರಲಿಲ್ಲ" ಎಂದಳು.

ಹೊರಗೆ ಹೋಗುತ್ತಾ "ಶುಭದಾ, ನಿನ್ನ ಗಂಡನನ್ನ ಒಂದು ಮಾತು ಕೇಳುತ್ತೀಯಾ?" ಎಂದಳು.

"ಏನು?"

"ಇಷ್ಟು ದಿವಸ ಎಲ್ಲಿದ್ದನೋ ಈ ಸಂಗತಿ ತಪ್ಪದೆ ಕೇಳಬೇಕು."

"ಸರಿ."

ಹಾರಾಣನು ಊಟ ಮಾಡುವಾಗ ಶುಭದಾ "ಇಷ್ಟು ದಿವಸಗಳು ಎಲ್ಲಿದ್ದಿರಿ?" ಎಂದು ಕೇಳಿದಳು.

ಹಾರಾಣನು ಮುಖ ತಗ್ಗಿಸಿ "ಮರಗಳ ಕೆಳಗೆ" ಎಂದನು.

ಶುಭದಾ ಮಾತಾಡಲಿಲ್ಲ.

ಮಾರನೆಯ ದಿನ ಕೃಷ್ಣಾರಾಕೂರಣಿಯು ಬಂದು ಆ ಮಾತು ಈ ಮಾತು ಆಡುತ್ತಾ ಕಡೆಗೆ "ಆ ಸಂಗತಿ ಕೇಳಿದೆಯಾ?" ಎಂದಳು.

"ಹೂಂ."

"ಏನು ಹೇಳಿದ ?"

"ಮರಗಳ ಕೆಳಗೆ ಇದ್ದರಂತೆ !"

ಕೃಷ್ಣಾರಾಕೂರಣಿಯು ಏನೂ ಹೇಳದೆ ಉಡಿಯಿಂದ ಒಂದು ಮಡಿಸಿದ್ದ ಹೊಸ ಬಟ್ಟೆಯನ್ನು ತೆಗೆದು ಶುಭದಾ ಕೈಯಲ್ಲಿಡುತ್ತಾ "ನೋಡು, ಯಾವತ್ತು ತೆಗೆದುಕೊಂಡಿದ್ದೋ ಏನೋ ಯಜಮಾನರು, ಮನೆಯಲ್ಲಿ ಬಿದ್ದಿತ್ತು . .ಹೊಲಿಸಿಕೊಳ್ಳಲೇ ಇಲ್ಲ. ಹಾರಾಣನಿಗೆ ಆದರೆ ಹೊಲಿಸಿಕೋ ಎಂದು ಹೇಳು." ಎಂದಳು.

ಶುಭದಾ ಮಾತಾಡದೆ ತೆಗೆದುಕೊಂಡಳು.

"ಆಮೇಲೆ ಒಂದು ಮಾತು, ಯಾರು ಕೊಟ್ಟರು ಎಂದು ಹಾರಾಣ ಕೇಳಿದರೆ ನನ್ನ ಹೆಸರು ಹೇಳೀಯೆ, ಜೋಕೆ! ಬೇರೆ ಯಾರ ಹೆಸರನ್ನಾದರೂ ಹೇಳಿಕೋ !"

"ಏಕೆ"

"ಯಾಕೂ ಇಲ್ಲ. ನಿನಗೆ ಗೊತ್ತಿಲ್ಲ ಬಿಡು !"

"ಒಂದು ಸಲ ಹೇಳಿದರೆ ಏನು ?" ಎಂದು ಶುಭದಾ ನಕ್ಕಳು.

"ಏನೇ ? ಹೇಳಿದರೆ ನಿಮ್ಮ ಕೃಷ್ಣಾ ಅತ್ತೆಯ ತಲೆಯ ಮೇಲಿನಾಣೆ."

* * * *

ಮತ್ತೆ ಹೇಗೋ ದಿನಗಳು ಕಳೆದವು. ಮನೆಗೆ ಬಂದ ಹಾರಾಣನು ಪುನಃ ಹೊರಗೆ ಕದಲಲಿಲ್ಲ. ಶುಭದಾಗೆ ಈಗ ಚಿಂತೆ ಭಯ ಸ್ವಲ್ಪ ದೂರ

ವಾದುವು. ಆದರೆ ಊಟಕ್ಕೇನು ಮಾಡುವುದು? ಅದೇ ಅವಳಿಗೀಗ ದೊಡ್ಡ ಸಮಸ್ಯೆ....ಆಗಾಗ ಯಾರಾದರೂ ಕನಿಕರ ತೋರಿ ರೂಪಾಯಿಯೋ ಎರಡು ರೂಪಾಯಿಯೋ ಕೊಟ್ಟರೆ ಕೆಲವು ದಿನ ಕಳೆಯುತ್ತವೆ ಆದರೆ ಈ ರೀತಿಯಾಗಿ ಒಂದು ಇಡೀ ಸಂಸಾರದ ಜೀವನ ಕಳೆಯುವುದು ಹೇಗೆ?.... ಯೋಚನೆ ಇಷ್ಟೇ ಅಲ್ಲ! ಮಾಧವನ ಮುಖ ನೋಡಿದರೆ ಅವನ ಮೈಯೊಳಗಿನ ರಕ್ತದಲ್ಲಿ ಅರ್ಧವೆಲ್ಲಾ ನೀರಾಗಿರುವಂತೆ ಕಾಣುತ್ತದೆ........

ಈ ಕಡೆ ಛಲನಾಳಂತೂ ದಿನದಿನಕ್ಕೂ ಬೆಳೆಯುತ್ತಾ ಇದ್ದಾಳೆ.... ಇನ್ನು ಮೂರು ನಾಲ್ಕು ತಿಂಗಳೊಳಗಾಗಿ ಮದುವೆ ಮಾಡದೆ ಹೋದರೆ ಅವಳು ದೊಡ್ಡವಳಾಗಿಬಿಡುತ್ತಾಳೆ. ಆಮೇಲೆ ಗತಿಯೇನು? ಈ ಗ್ರಾಮದ ಜನ ಮೊದಲೇ ಸರಿ! ಶುಭದಾಗೆ ಯಾವ ಕಡೆಯೂ ದಿಕ್ಕು ತೋಚದಾಗಿದೆ. ....ಈ ಬಗೆಯ ಚಿಂತೆಗಳಿಂದ ಶುಭದಾ ಜರ್ಝರಿತಳಾಗಿ ಒಣಗಿ ಹೋಗುತ್ತಿದ್ದಾಳೆ. ಇದು ಇತರರ ಗಮನಕ್ಕೆ ಬಾರದಿದ್ದರೂ ಲಲನಾ ಬೇಗ ಕಂಡುಕೊಂಡಳು. ಗಂಗೆಯಿಂದ ಒಂದು ಕೊಡ ನೀರು ತರಬೇಕಾದರೆ ಅವಳ ಮೈ ನಡುಗುತ್ತದೆ. ತರಕಾರಿ ಕೊಯ್ಯುವಾಗ ಎಲ್ಲಿ ಕೈಬೆರಳುಗಳು ಕುಯಿದುಕೊಳ್ಳುವಳೊ ಎಂದು ಭಯವಾಗುತ್ತದೆ. ಒಲೆಯಿಂದ ಅಡಿಗೆ ತೆಗೆದು ಕೆಳಗಿಡುವಾಗ ಕೈ ಪಾತ್ರೆಯ ಭಾರ ತಡೆಯಲಾಗದೆ ಪಾತ್ರೆ ಕೆಳಗೆ ಬೀಳುತ್ತದೆ. ....ಅವಳಿಗೆ ಊಟ ಸೇರದು. ಯೋಚನೆ ಮಾಡುತ್ತಾ ಸುಮ್ಮನೆ ಘಂಟೆಗಳ ಕಾಲ ಒಂದು ಕಡೆ ಸುಮ್ಮನೆ ನಿಂತುಬಿಡುವಳು. "ಏನಮ್ಮಾ ಊಟಮಾಡುವುದಿಲ್ಲವೇ?" ಎಂದು ಎಚ್ಚರಿಸಿದರೆ "ಬೇಡವೇ, ಹಸಿವಿಲ್ಲ." ಎನ್ನುವಳು ... ಲಲನಾ ಕೇಳಿ ಸಂಕಟ ತಡೆಯಲಾರದೆ ಕಣ್ಣುಮುಚ್ಚಿಕೊಂಡು ಅಳುವಳು.... ಒಂದೊಂದು ಸಲ ಹುಚ್ಚು ಹಿಡಿದಂತಾಗಿ ಮನೆಯ ಬಾಗಿಲಿಗೆ ತಲೆಯನ್ನು ಹೊಡೆದುಕೊಳ್ಳುವಳು....ಪ್ರಯೋಜನವೇನು? ಪ್ರಪಂಚದಲ್ಲಿ ತಲೆ ಬಾಗಿಲಿಗೆ ಕುಟ್ಟಿಕೊಳ್ಳುವುದರಿಂದ ಸಂಕಟಗಳು ದೂರವಾಗುವ ಹಾಗಿದ್ದಿದ್ದರೆ ಎಷ್ಟು ಚೆನ್ನಾಗಿತ್ತು.

# ೧೩

ಇಂದು ಏಕಾದಶಿ. ಈ ಊಟ ಯಾರು ತಿನ್ನುತ್ತಾರೆಂದು ಛಲನಾ ಆಗಾಗ ಮಾಡುವಂತೆ ತಟ್ಟೆಯನ್ನು ಆ ಕಡೆ ನೂಕಿ ಮುಖ ಸಿಂಡ್ರಿಸಿಕೊಂಡು ಹೊರಟುಹೋಗಿದ್ದಾಳೆ. ಲಲನಾ "ಅಮ್ಮಾ, ಸುಮ್ಮನೆ ಅವಳನ್ನು ಹೀಗೆ ಹೆಚ್ಚಿಸಿ ಬಿಟ್ಟಿದ್ದೀಯೆ. ಬರ ಬರುತ್ತಾ ಬಹಳ ಮೊಂಡಾಗುತ್ತಿದ್ದಾಳೆ. ನಾಳೆ ಮದುವೆಯಾಗಿ ಅತ್ತೆಯ ಮನೆಗೆ ಹೋದರೆ ಕೆಟ್ಟ ಹೆಸರು ಯಾರಿಗೆ ಬರುತ್ತೆ ಹೇಳು ...ನಾವು ಯಾರಾದರೂ ಒಂದು ಮಾತೆಂದರೆ ಅವಳು ಹತ್ತು ಮಾತಾಡಿ ಬಾಯಿ ಮುಚ್ಚಿಸಿ ಬಿಡುತ್ತಾಳೆ. ನೀನು ಸುಮ್ಮನೆ ಇರುತ್ತೀಯ" ಎಂದಳು.

ಶುಭದಾ ಸ್ವಲ್ಪ ಯೋಚಿಸಿ "ಹೌದು ಕಣೆ, ನೀನು ಹೇಳಿದುದು ಸರಿಯೇ ... ಆದರೆ ನೋಡು, ಎಲ್ಲ ಹುಡುಗಿಯರೂ ನಿನ್ನ ಹಾಗೆಯೇ ಇರುತ್ತಾರೆಂದು ಕೊಂಡೆಯಾ? ನಿನ್ನ ಕೈಯ ಬೆರಳುಗಳು ಐದೂ ಒಂದೇ ಸಮನಾಗಿವೆಯೇ ಹೇಳು ...ಆ ಮಗೂಗೆ ಹೊಟ್ಟೆ ತುಂಬಾ ತಿಂಡಿ ಹಾಕುವುದಕ್ಕೆ ಶಕ್ತಿಯಿಲ್ಲ. ಬಟ್ಟೆ ತೊಡಿಸುವುದಕ್ಕೆ ಶಕ್ತಿಯಿಲ್ಲ. ಚೆನ್ನಾಗಿ ಬೈಯುವುದಕ್ಕೆ ಮಾತ್ರ ಹೇಗೆ ಮನಸ್ಸು ಬಂದೀತು ನೀನೇ ಹೇಳು ನಿನಗೇನು ತಿಳಿಯದೆ ಇಲ್ಲ."

"ಹಾಗಿದ್ದರೆ ಹೀಗೆಯೇ ಇದ್ದುಕೊಂಡಿದ್ದರೆ ಚೆನ್ನಾಗಿರುತ್ತದೆಯೇ ಹೇಳು."

"ಚೆನ್ನಾಗಿರುತ್ತದೆ ಎಂದು ಹೇಳಿದೆನೆ? ಆದರೆ ಮಾಡುವುದೇನು? ನಿಮ್ಮಗಳ ಮನೆಯ ಸ್ಥಿತಿ ಸರಿಹೋದರೆ ಅವಳೂ ಹೀಗೆಲ್ಲಾ ಅನ್ನುವುದಿಲ್ಲ. ನಾವೂ ಕೇಳಬೇಕಾಗಿಲ್ಲ."

ಲಲನಾ ಮನಸ್ಸಿಗೆ ಅಮ್ಮ ಹೇಳುವುದರಲ್ಲಿ ಸತ್ಯ ಇಲ್ಲದೆ ಇಲ್ಲ ಎಂದು ಎನ್ನಿಸಿತು.

ಮಾರನೆಯ ದಿನ ಇದೇ ಸಮಯದಲ್ಲಿಯೇ ಅವಳು ಬಹು ಬಾಡಿದ ಮುಖದಿಂದ ತಾಯ ಬಳಿ ಬಂದು ನಿಂತಳು.

ಅವಳ ಮುಖ ನೋಡಿ ಶುಭದಾ ಗಾಬರಿಯಾಗಿ "ಏನಾಯಿತೇ ?"

ಎಂದಳು.

ಲಲನಾ ಒಂದು ರೂಪಾಯನ್ನು ಹೊರತೆಗೆದು ತಾಯಿಯ ಕೈಯಲ್ಲಿಡುತ್ತಾ ಕೃಷ್ಣಾ ಅತ್ತೆ ಅಂದರು: "ಇನ್ನು ಹಿಂಡಿದರೂ ಒಂದು ತೊಟ್ಟು ರಕ್ತ ಇಲ್ಲ....ಹೊಡೆದು ಹಾಕಿದರೂ ಒಂದು ಚೂರು ಮಾಂಸ ಇಲ್ಲ. ನಿಮ್ಮಪ್ಪನಿಗೇ ಏನಾದರೂ ಮಾರ್ಗ ನೋಡು ಅಂತ ಹೇಳು: ನಾನು ದಿಕ್ಕಿಲ್ಲದ ಮುದುಕಿ. ನಾನು ಎಷ್ಟೆಂದು ಕೊಡಲಿ?" ಎಂದಳು.

ಶುಭದಾ ಮಾತಿಲ್ಲದೆ ನಾಚುಕೆಯಿಂದ ಅವಮಾನದಿಂದ ಮಗಳಿಗೂ ಮುಖತೋರಿಸಲಾಗದೆ ಬೇಗ ಅಲ್ಲಿಂದ ಹೊರಟುಹೋದಳು.

ಬೆಳಿಗ್ಗೆ ಕೆಲಸವೆಲ್ಲಾ ಮುಗಿಸಿಕೊಂಡು ಲಲನಾ ಮಾಧವನ ಹಾಸಿಗೆಯ ಪಕ್ಕದಲ್ಲಿ ಬಂದು ಕೂತಳು.

ಮಾಧವ "ಅಕ್ಕಾ! ಆ ವಿಷಯ ಏನಾಯಿತು?" ಎಂದನು.

"ಯಾವ ವಿಷಯವೋ?"

ಮಾಧವನು ಸ್ವಲ್ಪ ಸುಮ್ಮನಿದ್ದು

"ಅದೇ ಅಲ್ಲಿಗೆ ಹೋಗುವುದು?"

ಲಲನಾ ಕೂಡ ಸ್ವಲ್ಪ ಸುಮ್ಮನಿದ್ದು ...ಯೋಚನೆ ಮಾಡಿ "ಅದೇ ಹೇಳುವುದಕ್ಕೆ ಬಂದೆ ಕಣೋ" ಎಂದಳು.

ಮಾಧವನು ಕೂಡಲೇ ಉತ್ಸಾಹದಿಂದ ಮೇಲೆದ್ದು ಕೂತು "ಏನಕ್ಕಾ! ಯಾವಾಗ ಹೋಗುವುದು?" ಎಂದನು.

"ನಾನು ನಾಳೆ ಹೋಗುತ್ತೇನೆ."

"ನಾಳೆ ಹೋಗುತ್ತೀಯಾ?....ಮತ್ತೆ ನಾನು....?"

"ನಾನು ಮೊದಲು ಹೋಗುತ್ತೇನೆ–ಆಮೇಲೆ ನೀನು ಬರುವಿಯಂತೆ."

ಮಾಧವನು ವ್ಯಸ್ತನಾಗಿ "ಯಾಕೇ, ಇಬ್ಬರೂ ಒಟ್ಟಿಗೇ ಹೋದರೆ ಏನು?" ಎಂದನು.

"ಬೇಡಪ್ಪಾ, ಅಮ್ಮಾ ಬಹಳ ಅಳುತ್ತಾಳೆ."

ಮಾಧವನು ಕಣ್ಣಲ್ಲಿ ನೀರು ಸುರಿಸುತ್ತಾ "ಅತ್ತರೆ ಅಳಲಿ" ಎಂದನು.

"ಛಿ ...ಹಾಗೆಲ್ಲಾ ಅಂತಾರೇನೋ ..ಒಳ್ಳೆಯ ಹುಡುಗ .. ಹಾಗೆಲ್ಲಾ ಹಠಮಾಡಬಾರದು. ನಾನು ಮೊದಲು ಹೋಗುತ್ತೇನೆ. ಯಾರಿಗೂ

ಹೇಳಬೇಡ."

ಮಾಧವ ಕಣ್ಣೊರಸಿಕೊಳ್ಳುತ್ತಾ "ಮತ್ತೆ ಯಾವಾಗ ಬರುತ್ತಿ ?" ಎಂದನು.

"ನೀನು ಹೊರಡುವಾಗ ಬಂದು ಕರೆದುಕೊಂಡು ಹೋಗುತ್ತೀನಿ."

"ಅದಕ್ಕೆ ಮುಂಚೆ ಒಂದು ಸಲವೂ ಬರುವುದಿಲ್ಲವೇ ?"

"ಇಲ್ಲ."

"ನಾನು ಯಾವಾಗ ಬರಲಿ ?"

"ನಾನು ಯಾವತ್ತು ಬಂದು ಕರೆದುಕೊಂಡು ಹೋಗುತ್ತೀನೊ ಆಗ."

"ಬರುತ್ತೀಯಾ ಖಂಡಿತ ?"

"ಬರದೆ ?"

"ನೀನು ಹೋದರೆ ಅಮ್ಮ ಅಳುತ್ತಾಳಲ್ಲ."

"ಅಳಬಹುದು."

ಮಾಧವನು ಸ್ವಲ್ಪ ನಿರುತ್ತರನಾಗಿ ಆಮೇಲೆ "ಅಕ್ಕಾ ಬೇಡವೇ, ಹೋಗಬೇಡ" ಎಂದನು.

"ಯಾಕೋ, ಹಾಗಂತೀ ?"

"ಅಮ್ಮ ಅತ್ತರೆ ನನಗೆ ಸಹಿಸುವುದಿಲ್ಲ. ಅದಕ್ಕೆ ನಾವು ಹೋಗುವುದು ಬೇಡ."

"ನೀನು ಹೋಗಬೇಡ."

ಮಾಧವನು ಸ್ವಲ್ಪ ಸುಮ್ಮನಿದ್ದು "ಹೂ.....ನಾನು ಹೋಗಬೇಕು" ಎಂದನು.

"ಸರಿ, ಹಾಗಿದ್ದರೆ ನಾಳೆ ನಾನು ಹೋಗಲೇ ?"

"ಹೂಂ.... ಹೋಗು."

"ನಿನ್ನನ್ನ ನೋಡದೆ ಹೋದರೆ ಅಳುವುದಿಲ್ಲವಲ್ಲ?"

"ನನ್ನನ್ನ ಯಾವಾಗ ಬಂದು ಕರೆದುಕೊಂಡು ಹೋಗುತ್ತೀ?"

"ಸ್ವಲ್ಪ ದಿನ ಆದ ಮೇಲೆ."

"ಹಾಗಾದರೆ ಹೋಗು. ನಾನು ಅಳುವುದಿಲ್ಲ".... ಲಲನಾ ಮುಖ ಆಕಡೆ ತಿರುಗಿಸಿಕೊಂಡು ಕಣ್ಣಲ್ಲಿ ನೀರು ಸುರಿಸಿದಳು. ಆ ಮೇಲೆ ಕಣ್ಣೊರಸಿ

ಕೊಂಡು ಪ್ರೀತಿಯಿಂದ ಮುಗುಳ್ನಗೆ ನಗುತ್ತಾ ಅವನ ತಲೆಯನ್ನು ಮೃದುವಾಗಿ ನೇವರಿಸುತ್ತಾ "ನೋಡು ಮಾಧೂ, ನಾನು ಹೋದ ಮೇಲೆ ಈ ಮಾತುಗಳನ್ನು ಅಮ್ಮನಿಗೆ ಹೇಳಕೂಡದು! ಹೇಳುತ್ತೀಯಾ?" ಎಂದಳು.

"ಇಲ್ಲ."

"ಅಮ್ಮ ಹೇಳಿದ ಹಾಗೆ ಕೇಳಿಕೊಂಡು ಇರಬೇಕು. ಹಠ ಮಾಡಕೂಡದು. ಅಮ್ಮನ ಮನಸ್ಸನ್ನು ನೋಯಿಸ ಕೂಡದು. ಔಷಧಿ, ಗಂಜಿ ಸರಿಯಾಗಿ ಕುಡಿಯಬೇಕು."

"ಕುಡಿಯುತ್ತೇನೆ."

ಲಲನಾ ಸ್ವಲ್ಪ ಸುಮ್ಮನಿದ್ದು .ಮಾಧೂ.......ಸದಾನಂದ ಮಾವ ಗೊತ್ತೇನೋ ನಿನಗೆ?" ಎಂದಳು.

"ಗೊತ್ತು."

"ಅವರು ಬಂದಾಗ....ನಿನ್ನನ್ನ ನೋಡಲಿಕ್ಕೆ ಬಂದರೆ...."

"ಬಂದರೆ ಏನು?"

"ಬಂದರೆ ಹೇಳು....ಹೀಗೆ....ಅಕ್ಕ ಹೊರಟು ಹೋದಳು, ಅಂತ ಹೇಳು....ಯಾರೂ ಹತ್ತಿರ ಇಲ್ಲದೆ ಇರುವಾಗ ಹೇಳಬೇಕು."

"ಹೂಂ....ಹೇಳುತ್ತೇನೆ."

ಆ ಸಮಯದಲ್ಲಿ ಶುಭದಾ ಹತ್ತಿರ ಬಂದು "ಹೊತ್ತು ಬಹಳ ಆಯಿತು. ನೀನು ಹೋಗಿ ಮಲಗಿಕೊ ಹೋಗಮ್ಮಾ .." ಎಂದಳು.

ಮಾಧವನು "ಅಮ್ಮಾ, ಇವತ್ತು ಅಕ್ಕ ನನ್ನ ಹತ್ತಿರ ಮಲಗಿಕೊಳ್ಳುತ್ತಾಳೆ" ಎಂದನು.

ಇವತ್ತು ಅಕ್ಕನನ್ನು ಇಷ್ಟು ಬೇಗ ಬೀಳ್ಕೊಡುವುದಕ್ಕೆ ಅವನ ಮನಸ್ಸು ಏನು ಮಾಡಿದರೂ ಒಪ್ಪುವುದಿಲ್ಲ.

ಶುಭದಾ ಏನೆಂದುಕೊಂಡಾಳೋ ಏನೋ "ಸರಿ....ಹಾಗೆಯೇ ಆಗಲಿ ....ಅವಳು ಇಲ್ಲಿಯೇ ಮಲಗಿಕೊಳ್ಳಲಿ, ನಾನು ಹೋಗಿ ಮೇಲೆ ಛಲನಾ ಜೊತೆಯಲ್ಲಿ ಮಲಗಿಕೊಳ್ಳುತ್ತೇನೆ" ಎಂದಳು.

ಶುಭದಾ ಹೊರಟುಹೋದ ಮೇಲೂ ಅಕ್ಕ ತಮ್ಮಂದಿರು ಬಹಳ ಹೊತ್ತು ಮಾತಾಡಿಕೊಂಡರು. ಆಮೇಲೆ ಮಾಧವನಿಗೆ ತೂಕಡಿಕೆ ಬಂದು

ನಿದ್ದೆ ಹೋದನು.

ಮರುದಿನ ಬೆಳಗ್ಗೆ ಲಲನಾ ಯಾರ ಕಣ್ಣಿಗೂ ಬೀಳಲಿಲ್ಲ. ಬೆಳಗ್ಗೆದ್ದು ನಿತ್ಯ ಮಾಡುತ್ತಿದ್ದ ಕೆಲಸವೆಲ್ಲಾ ಹಾಗೆಯೇ ಬಿದ್ದಿದೆ. ಘಂಟೆ ಎಂಟಾಗುವ ಸಮಯಕ್ಕೆ ಶುಭದಾ ಮಾಧವನ ಹತ್ತಿರ ಬಂದು "ಎಲ್ಲೋ ನಿಮ್ಮಕ್ಕ?" ಎಂದಳು. ಅಲ್ಲಿಯೇ ಇದ್ದ ಛಲನಾಳನ್ನು ಕುರಿತು "ಅಕ್ಕ ಎಲ್ಲೇ ಛಲನಾ." ಎಂದು ಕೇಳಿದಳು ...ಅವರಿಬ್ಬರೂ "ಗೊತ್ತಿಲ್ಲ" ಎಂದರು ...

ಒಂಭತ್ತು ಘಂಟೆಯೂ ಹೊಡೆಯಿತು. ಇನ್ನು ಕಾಯಲಾರದೆ ಶುಭದಾ ತಾನೇ ಕೆಲಸವೆಲ್ಲ ಮಾಡಲು ತೊಡಗಿದಳು. ನೋಡಲಾರದೆ ಛಲನಾ ಕೂಡ ಬಂದು ಸಹಾಯ ಮಾಡಿದಳು....ಅಡುಗೆಯಾಯಿತು. ಎಲ್ಲರೂ ಊಟ ಮಾಡಿದರು. ಮಧ್ಯಾಹ್ನವಾಗುತ್ತಾ ಬಂತು....ಇನ್ನೂ ಲಲನಾಳ ಸುಳಿವಿಲ್ಲ ..ಎಲ್ಲಿ ಹೋದಳು ಇವಳಿಗೆಷ್ಟು ಹೊತ್ತು....ಶುಭದಾಗೆ ಕಳವಳವಾಯಿತು.

ರಾಸಮಣಿಯು "ತಡಿ, ನಾನು ನೋಡಿಕೊಂಡು ಬರುತ್ತೇನೆ. ಎಲ್ಲಿಗೆ ಹೋಗಿದ್ದಾಳು." ಎಂದು ಹೊರಗೆ ಕಾಲು ಹಾಕಿದಳು.

ಛಲನಾಮಯಿಯೂ ಊಟ ಮಾಡಿ "ನಾನು ಹೋಗಿ ಅವಳು ಎಲ್ಲಿ ಹೋಗಿದ್ದಾಳೋ ಹುಡುಕಿ ಮನೆಗೆ ಕಳುಹಿಸುತ್ತೇನೆ" ಎಂದು ಹೊರಟಳು.

ಸಂಜೆಯ ಹೊತ್ತಿಗೆ ರಾಸಮಣಿ ಎಲ್ಲೆಲ್ಲೋ ಹುಡುಕಿ ಅಲೆದು ಸುಸ್ತಾಗಿ ಮನೆಗೆ ಬಂದು "ಎಲ್ಲೂ ಸಿಗಲಿಲ್ಲಮ್ಮ ...ಬಂದಳೇನು ಮನೆಗೆ ?" ಎಂದಳು.

ಶುಭದಾ ರಕ್ತವಿಲ್ಲದ ಮುಖವನ್ನು ಅಲ್ಲಾಡಿಸಿದಳು.

ಸಂಜೆಯಾದ ಮೇಲೆ ಛಲನಾ ಕೂಡ ಹಿಂದಿರುಗಿ ಬಂದು "ಊರಲ್ಲಿ ಎಲ್ಲೂ ಇಲ್ಲಮ್ಮ ..ಎಷ್ಟು ಹುಡುಕಿದೆನೋ, ಯಾರಿಗೂ ಗೊತ್ತಿಲ್ಲ" ಎಂದಳು.

ರಾತ್ರಿ ಬಹಳ ಹೊತ್ತಾಗುತ್ತಾ ಬಂತು. ಇನ್ನೂ ಲಲನಾ ಬರಲಿಲ್ಲ.

ಹಾರಾಣಚಂದ್ರ ರಾತ್ರಿ ಮನೆಗೆ ಬರುವ ವೇಳೆ ಬಾಗಿಲಲ್ಲಿ ಕಾಯುತ್ತಿದ್ದ ಲಲನಾ ಕಾಣಬರದೆ, ಅವನೂ ಕೂಡ, .. ತಡಿ....ನಾನು ನೋಡಿಕೊಂಡು ಬರುತೇನೆ....ಎಲ್ಲೋ ಇದ್ದೇ ಇರಬೇಕು ಎಂದು ತಕ್ಷಣ ಹೊರಗೆ ಹೊರಟನು.

ರಾತ್ರಿ ಹನ್ನೆರಡು ಘಂಟೆಗೆ ಹಿಂದಿರುಗಿ ಬಂದು ."ಅಲ್ಲ....ಎಲ್ಲಿ ಹೋದಳು ಈ ಹುಡುಗಿ....ಎಲ್ಲಿಯೂ ಸಿಗಲಿಲ್ಲವಲ್ಲ. ಅಲ್ಲ....ಎಲ್ಲಿ ಹೋದಳು ಈ ಹುಡುಗಿ?" ಎಂದು ಮಂಕು ಬಡಿದವನಂತೆ ಕೆಳಗೆ ಕೂತನು.

ದಿನವೆಲ್ಲಾ ಉಪವಾಸವಿದ್ದ ಶುಭದಾ ಬಿಕ್ಕಿ ಬಿಕ್ಕಿ ಅಳುವುದಕ್ಕೆ ಆರಂಭಿಸಿದಳು. ರಾಸಮಣಿ ಅತ್ತಳು. ಛಲನಾ ಕೂಡ ಅತ್ತಳು. ಮಾಧವ ಮಾತ್ರ ಅಳಲಿಲ್ಲ. ಏನೂ ಹೇಳಲೂ ಕೂಡ ಇಲ್ಲ. ಎಲ್ಲರ ರೋದನವನ್ನೂ ಕೇಳಿ ಹೇಳೋಣವೆಂದು ಅನ್ನಿಸಿ ತಕ್ಷಣ ಅಕ್ಕನಿಗೆ ಮಾತು ಕೊಟ್ಟಿದ್ದುದು ನೆನಪಿಗೆ ಬಂದು ಸುಮ್ಮನಾದನು.

ಆ ರಾತ್ರೆ ಹೇಗೆ ಕಳೆಯಿತೋ ದೇವರಿಗೆ ಗೊತ್ತು. ಮಾರನೆಯ ದಿನ ಯಥಾಪ್ರಕಾರ ಸೂರ್ಯ ಹುಟ್ಟಿದನು....ಮುಳುಗಿದನು .. ರಾತ್ರಿಯಾಯಿತು. ....ಮತ್ತೆ ಬೆಳಗಾಯಿತು. ಸೂರ್ಯೋದಯವಾಯಿತು .. ಅಸ್ತವಾಯಿತು.... ಲಲನಾ ಮಾತ್ರ ಬರಲಿಲ್ಲ.

ಗ್ರಾಮದಲ್ಲಿ ಯಾರ ಬಾಯಲ್ಲಿ ನೋಡು, ಈ ಮಾತೇ, ಗ್ರಾಮಸ್ಥರೆಲ್ಲರಿಗೂ ಲಲನಾ ಬೇಕಾದವಳಾಗಿದ್ದಳು. ಅದಕ್ಕೇ ಎಲ್ಲರಿಗೂ ಈಗ ದುಃಖವಾಯಿತು. ಕೆಲವರು ಅತ್ತರು; ಕೆಲವರು ಶುಭದಾಗೆ ಸಂತೈಸಲು ಬಂದರು. ..ಮತ್ತೆ ಕೆಲವರು ಹತ್ತೂ ವಿಧವಾಗಿ ಅನುಮಾನ ಪಡಲು ಮೊದಲು ಮಾಡಿದರು. ಹೀಗೆಯೇ ಐದಾರು ದಿನಗಳು ಕಳೆದುವು.

ಶುಭದಾ ಮೊದಲು ಮಾಧವಚಂದ್ರನ ಹಾಸುಗೆ ಪಕ್ಕದಲ್ಲಿ ಕೂತು ಚೆನ್ನಾಗಿ ಅತ್ತಿದ್ದಳು. ಆಗ ಅವನು ಕಷ್ಟ ಪಟ್ಟು ತನಗೆ ತಿಳಿದ ವಿಷಯವನ್ನು ಹೇಳದೆ ತಡೆದುಕೊಂಡನು. ಆಮೇಲೆ ಇನ್ನೊಂದು ನಲ ಯೋಚನೆ ಮಾಡಿ 'ಅಮ್ಮನಿಗೆ ಹೇಳಿಬಿಡುತ್ತೇನೆ'ಂದುಕೊಂಡನು. ಆದರೆ ಇನ್ನೊಂದು ಸಲ ಅಮ್ಮ ಹತ್ತಿರ ಬಂದಾಗ ಅವಳು ಅಳಲಿಲ್ಲ. ಸ್ಥೈರಿಸಿಕೊಂಡಿದ್ದಳು. "ಹಾಗಾದರ ಈಗ ಹೇಳುವುದು ಬೇಡ" ಎಂದು ಸುಮ್ಮನಾದನು.

ಆದರೆ ಶುಭದಾಗೆ ವಿಪರೀತ ಆಶ್ಚರ್ಯವಾಯಿತು. "ಇವನೇಕೆ ಅಕ್ಕನ ವಿಷಯವಾಗಿ ಏನೂ ಕೇಳುವುದಿಲ್ಲ? ಅಕ್ಕ ಎಲ್ಲಿ? ಎಂದು ಒಂದು ಸಲವೂ ಕೇಳಲಿಲ್ಲ?"

"ಅಕ್ಕ ಯಾಕೆ ಈ ಕಡೆ ಬರಲಿಲ್ಲವಲ್ಲ?" ಎಂದು ಯಾರನ್ನಾದರೂ

ಕೇಳಬೇಡವೇ? ಶುಭದಾಗೆ ಸ್ವಲ್ಪ ಸಂದೇಹವೂ ಆಯಿತು. "ಇವನಿಗೇನಾದರೂ ಅವಳು ಎಲ್ಲಿಗೆ ಹೋಗಿದ್ದಾಳೆಂಬುದು ಗೊತ್ತಿದೆಯೇ, ಬಹುಶಃ? ಎಂದುಕೊಂಡಳು.

ಆದರೆ ಕೇಳಲು ಧೈರ್ಯ ಬರಲಿಲ್ಲ.

*    *    *    *

ಆರು ದಿವಸಗಳಾದ ಮೇಲೆ ಆ ಊರಿನ ಬೆಸ್ತ ನಂದನು ಮೀನು ಹಿಡಿಯಲು ಗಂಗೆಯಲ್ಲಿ ಬಲೆ ಹರಡಿದ್ದವನು ಬಲೆಗೆ ಸಿಕ್ಕಿಕೊಂಡಿದ್ದ ಕೆಂಪು ಅಂಚಿನ ವಸ್ತ್ರವೊಂದನ್ನು ಕಂಡನು. ಅದು ಅರ್ಧ ನೀರಿನಲ್ಲಿದೆ, ಅರ್ಧ ಬಲೆಯಲ್ಲಿದೆ. ಎಲಾ, ಇದೇನು ಎಂದು ಕೈಗೆ ತೆಗೆದುಕೊಂಡರೆ ...ಅದು ಸೀರೆ ...! ಆ ಸೀರೆ ಲಲನಾ ಉಡುತ್ತಿದ್ದದ್ದು, ಹಾರಾಣನ ಮನೆಯ ಹತ್ತಿರದಲ್ಲೇ ಇದ್ದ ಆ ಬೆಸ್ತರವನೂ ಎಷ್ಟೋ ಸಲ ನೋಡಿದ್ದ. ತಕ್ಷಣ ಗುರುತು ಹಿಡಿದ. ನೋಡಿದ್ದೇ ತಡ, ಬೇಗ ಬಲೆಯನ್ನಲ್ಲೇ ಬಿಸಾಡಿ ಓಡಿಬಂದು ರಾಸಮಣಿಗೆ ಹೇಳಿದನು. ಅವಳೂ ಪೂಜೆಗೆ ತಯಾರುಮಾಡಿಕೊಳ್ಳುತ್ತಿದ್ದವಳು ನದಿಗೆ ಓಡಿಬಂದು ಆ ಸೀರೆಯನ್ನು ನೋಡಿದಳು. ಗುರುತಿಸುವುದಕ್ಕೆ ಅಷ್ಟು ಹೊತ್ತೇನೂ ಆಗಲಿಲ್ಲ. ಅದು ಲಲನಾಳದೇ, ಸಂದೇಹವಿಲ್ಲ. ಅಳುತ್ತಾ ಅಳುತ್ತಾ ಆ ಸೀರೆಯನ್ನು ಮನೆಗೆ ತಂದು ತೋರಿಸಿದಳು. ಶುಭದಾ ಅದನ್ನು ನೋಡಿದಳು, ಹಾರಾಣಚಂದ್ರನೂ ನೋಡಿದನು. ಛಲನಾ ನೋಡಿದಳು. ಆ ಗ್ರಾಮದ ಇನ್ನೂ ಎಂಟು ಹತ್ತು ಜನ ನೋಡಿದರು....

ಹೌದು, ಇದು ಲಲನಾಳದೇ! ಅವಳು ಉಡುತ್ತಿದ್ದುದೇ! ಅದಕ್ಕೆ ಅವಳೇ ಅಂಚನ್ನು ಹೊಲಿದಿದ್ದಳು. ಒಂದು ಪಕ್ಕದಲ್ಲಿ ಕೆಂಪು ದಾರದಲ್ಲಿ ಅವಳ ಹೆಸರು ಕೂಡ ಹೊಲಿದಿದ್ದಳು. ಇನ್ನು ಬೇರೆ ಏನು ಬೇಕು? ಶುಭದಾ ಮೂರ್ಛಿತಳಾಗಿ ಬಿದ್ದಳು. ಗ್ರಾಮದಲ್ಲೆಲ್ಲಾ ಮುಖೋಪಾಧ್ಯಾಯನ ಮಗಳು ನೀರಿನಲ್ಲಿ ಮುಳುಗಿ ನತ್ತುಹೋದಳು ಎಂದು ಸುದ್ದಿ ಹರಡಿತು.

*    *    *    *

# ಎರಡನೆಯ ಭಾಗ

## ೧

ನಾರಾಯಣಪುರದ ಜಮೀನ್ದಾರ್ ಶ್ರೀಯುಕ್ತ ಸುರೇಂದ್ರನಾಥ ಚೌಧುರಿಗೆ ಒಂದು ದಿನ ತನ್ನ ಆರೋಗ್ಯ ಬಹಳ ಕೆಟ್ಟಿರುವಂತೆ ಕಂಡು ಬಂತು. ಹವಾ ಬದಲಾವಣೆ ಮಾಡದೆ ಹೋದರೆ ರೋಗ ಹೆಚ್ಚೀತು ಎಂದು ಅನ್ನಿಸಿತು.

ಸುರೇಂದ್ರಬಾಬುಗಳಿಗೆ ಆದಾಯ ಬಹಳ. ವಯಸ್ಸು ಮಾತ್ರ ಚಿಕ್ಕದು. ಸುಮಾರು ಇಪ್ಪತ್ತೈದು ಇರಬಹುದು. ಈ ವಯಸ್ಸಿನಲ್ಲಿ ಅವರಿಗೆ ಇರಬೇಕಾದ್ದಕ್ಕಿಂತಲೂ ಹೆಚ್ಚು ಅಭ್ಯಾಸಗಳು....ನಾನಾ ವ್ಯಸನಗಳು. ಬೇಕಾದ ಭೋಗಗಳಿಗೆ ಸಲಹೆ, ಸೌಕರ್ಯಗಳನ್ನೊದಗಿಸಿ ಕೊಡುವ ಸ್ನೇಹಿತರೂ ಕಡಿಮೆಯಿಲ್ಲ.

ತನ್ನ ಸ್ನೇಹಿತರನ್ನು ಕರೆದು ಜಮೀನ್ದಾರರು ಕೇಳಿದರು "ನನ್ನ ಆರೋಗ್ಯ ಬಹಳ ಕೆಟ್ಟುಹೋಗಿರುವ ಹಾಗೆ ಕಾಣುವುದಿಲ್ಲ? ನಿಮಗೆ ಹೇಗೆನ್ನಿಸುತ್ತದೆ ?" ಎಂದರು.

ಎಲ್ಲರೂ ಮುಕ್ತಕಂಠದಿಂದ ಸ್ವೀಕಾರ ಮಾಡಿದರು. ಈ ವಿಷಯದಲ್ಲಿ ಸಂದೇಹವೇ ಇಲ್ಲ. ಅವರಿಗೇ ಹೀಗೆಂದು ಮೊದಲೇ ತಿಳಿದಿತ್ತು. ಆದರೆ ಹೇಳಿದರೆ ಮನಸ್ಸು ಕೆಟ್ಟೀತೇನೋ ಎಂದು ಹೇಳಲಿಲ್ಲ.

ಸುರೇಂದ್ರನು "ಇನ್ನು ಡಾಕ್ಟರುಗಳಿಗೆ ಹೇಳಿಕಳುಹಿಸಿ ಅವರಿಂದ ಔಷಧಿ ತೆಗೆದುಕೊಂಡರೆ ಪ್ರಯೋಜನವಿಲ್ಲ. ಹವಾ ಬದಲಾಯಿಸಿದರೆ ಆರೋಗ್ಯ ಸರಿಹೋಗುತ್ತದೆ ಎಂದು ಅನ್ನಿಸುತ್ತೆ ನನಗೆ" ಎಂದನು.

ಆ ಸ್ನೇಹಿತರಿಗೆ ಈ ವಿಷಯದಲ್ಲೂ ಯಾವ ಸಂದೇಹವೂ ಇರಲಿಲ್ಲ.

"ಹವಾ ಬದಲಾವಣೆಗಿಂತ ಒಳ್ಳೆಯ ಔಷಧಿ ಬೇರೆ ಇಲ್ಲವೆಂದರೂ ಸರಿಯೇ ?" ಎಂದರು.

"ನಿಮಗೇನು ಅನ್ನಿಸುತ್ತೆ? ಯಾವ ಸ್ಥಳಕ್ಕೆ ಹೋದರೆ ಒಳ್ಳೆಯ ಹವಾ ಇರುತ್ತದೆ ?"

ಅವರವರ ಇಷ್ಟ ಬಂದಂತೆ ಐದಾರು ಹೆಸರುಗಳನ್ನು ಹೇಳಿದರು.

ಸುರೇಂದ್ರನು "ಎಲ್ಲಕ್ಕಿಂತಲೂ ನೀರಿನ ಮೇಲೆಯೇ ಕೆಲವು ದಿವಸ ವಾಸಮಾಡಿಕೊಂಡಿದ್ದರೆ ಅದರ ಹವಾದ ಸಮಾನ ಬೇರೆಯಿಲ್ಲ ಅನ್ನಿಸುತ್ತದೆ" ಎಂದನು.

"ಇದಂತೂ ಭೇಷಾದ ಯೋಚನೆ!" ಎಂದು ಎಲ್ಲರೂ ತಲೆದೂಗಿದರು.

ಜಲ ವಿಹಾರಕ್ಕೆ ಬೇಕಾದ ಸಾಮಾನು, ಸರಂಜಾಮು ಎಲ್ಲವೂ ಸಿದ್ಧವಾಯಿತು. ಎರಡು ತಿಂಗಳಿಗೆ ಬೇಕಾದ ವಸ್ತುಗಳೆಲ್ಲವನ್ನೂ ತಯಾರು ಮಾಡಿ ಒಂದು ದೊಡ್ಡ ದೋಣಿಯನ್ನು ಬಾಡಿಗೆಗೆ ತೆಗೆದುಕೊಂಡದ್ದಾಯಿತು. ಅದನ್ನು ನಾನಾ ಪ್ರಕಾರವಾಗಿ ಅಲಂಕಾರ ಮಾಡಿ ಸಜ್ಜು ಮಾಡಿದರು.

ಒಂದು ಒಳ್ಳೆಯ ದಿನ ನೋಡಿಕೊಂಡು ಜಮೀನ್ದಾರ್ ಸುರೇಂದ್ರನಾಥನು ನೌಕೆಯನ್ನೇರಿದನು. ಸಂಗಡ ಆಪ್ತ ಮಿತ್ರರೂ, ನೌಕರರೂ .. ಸಿಬ್ಬಂದಿಯೆಲ್ಲಾ ಹೊರಟರು. ಅವರಲ್ಲಿ ಸಂಗೀತಗಾರರೂ ವಾದ್ಯಗಾರರೂ ಇದ್ದರು. ..ಚೆಲುವೆಯಾದ ಗಾಯಕಿಯೊಬ್ಬಳು ಕೂಡ ಆ ಗುಂಪಿನಲ್ಲಿದ್ದಳು. ನೌಕೆಯು ಅನುಕೂಲವಾದ ಗಾಳಿಯಲ್ಲಿ ರಾಜಹಂಸವಂತೆ ನಿಧಾನವಾಗಿ, ಗಂಭೀರವಾಗಿ ರೂಪನಾರಾಯಣ ನದಿಯಲ್ಲಿ ತೇಲುತ್ತಾ ಹೊರಟಿತು. ಬೇಕಾದ ಸ್ಥಳಗಳಲ್ಲಿ ಇಳಿದು ಸುತ್ತುವರು. ಷಿಕಾರಿ ಮಾಡುವರು. ಮತ್ತೆ ನೌಕೆಯೇರುವರು. ಹೀಗೆ ಪ್ರಯಾಣ ಮಾಡುತ್ತಾ ಎಷ್ಟೋ ಪ್ರದೇಶಗಳನ್ನು ಸುತ್ತಿದರು. ಸುರೇಂದ್ರಬಾಬು ಮಿತ್ರರೊಂದಿಗೆ ವಯೋನುಗುಣವಾಗಿ ಸ್ಥಳಸ್ಥಳಗಳಲ್ಲಿ ವಿಹಾರ ಮಾಡಿದನು. ಹೀಗೆ ಬಹಳ ದಿನವಾದ ಮೇಲೆ ನೌಕೆ ಕಲಿಕತ್ತೆಗೆ ಬಂತು. ಎಲ್ಲರಿಗೂ ಈ ಷಹರಿನಲ್ಲಿ ಸ್ವಲ್ಪ ಹೆಚ್ಚು ದಿನ ಇರಬೇಕೆನ್ನಿಸಿತು, ಆದರೆ ಸುರೇಂದ್ರನು "ಥೂ, ಕಲಿಕತ್ತೆಯ ಹವಾ ಇಲ್ಲದ ರೋಗ ಬರಿಸುವ ಹವಾ. ಇಲ್ಲಿರುವುದು ಬೇಡಾ ...ನೌಕೆಯನ್ನು ಉತ್ತರ ದಿಕ್ಕಿಗೆ ತಿರುಗಿಸಿ. ಒಂದೇ ಒಂದು ದಿನ ಮಾತ್ರ ಕಲಿಕತ್ತೆಯಲ್ಲಿ ತಂಗಿ ತಿರುಗಿ ಉತ್ತರದಿಕ್ಕಿಗೆ ತಿರುಗಿಸಿ ದೋಣಿಯನ್ನು" ಎಂದನು.

ದೋಣಿ ಕಲಿಕತ್ತೆಯನ್ನು ಬಿಟ್ಟು ಹೊರಡುತ್ತಿರುವ ಸಮಯ ಸ್ನೇಹಿತರಿಗೆ ಬೇಜಾರಾಗಿ ಹೋಯಿತು. ಎಡಬಿಡವೆ ಇಷ್ಟು ದಿವಸ ನೀರಿನಲ್ಲಿ ಪ್ರಯಾಣಮಾಡಿ ಜಮೀನ್ದಾರರ ಆರೋಗ್ಯ ಎಷ್ಟೋ ಗುಣಮುಖವಾಗಿವೆ.

ಇನ್ನು ನಾವುಗಳು, ನಮ್ಮ ಹೆಂಡತಿ, ಮಕ್ಕಳ ಯೋಚನೆ ಮಾಡುವುದೊಳ್ಳೆಯದು, ಎಂಬ ಯೋಚನೆ ಬಂತು.

ಹೀಗೆಂದು ಅವರಲ್ಲಿ ಕೆಲವರು ಸುರೇಂದ್ರನಾಥನಿಗೆ ಬಾಯಿಬಿಟ್ಟು ಹೇಳಿಯೂ ಬಿಟ್ಟರು. "ಇನ್ನು ನಿಮ್ಮ ಆರೋಗ್ಯ ಸರಿಹೋಯಿತಲ್ಲ. ಇನ್ನು ಹಿಂದಿರುಗುವುದರಲ್ಲಿ ಹಾನಿಯೇನು ?" ಎಂದರು.

ಸುರೇಂದ್ರನು ಮೃದುನಗೆಯಿಂದ "ಹಾನಿ ಏನೂ ಇಲ್ಲ.. ಆದರೆ ನಾನಂತೂ ಈಗಲೇ ಹಿಂದಿರುಗುವುದಿಲ್ಲ. ನಿಮಗಾದರೆ ಹೆಂಡತಿ ಮಕ್ಕಳ ಚಿಂತೆ. ನೀವು ಬೇಕಾದರ ಹೋಗಿ."

ಸಾಮಾನ್ಯವಾದ ಮನೆ ಮಠದ ಚಿಂತೆ, ತುಚ್ಛವಾದ ಹೆಂಡತಿ ಮಕ್ಕಳ ಯೋಚನೆ ಕಟ್ಟಿಕೊಂಡು ಮನಸ್ಸು ಕೆಡಿಸಿಕೊಳ್ಳುವುದು ಹೇಡಿಗಳ ಲಕ್ಷಣ ಎಂದುಕೊಂಡು ಯಾರು ಆ ಮಾತು ಮೊದಲು ಆಡಿದ್ದರೋ ಅವರು ಬಾಯಿಮುಚ್ಚಿಕೊಂಡು ಸುಮ್ಮನಾದರು. ಸುರೇಂದ್ರನೂ ಆಮೇಲೆ ಆ ಸುದ್ದಿಯನ್ನು ಎತ್ತಲಿಲ್ಲ.

ನೌಕೆಯು ಅಲ್ಲಲ್ಲಿ ನಿಲ್ಲುತ್ತಾ ಮುಂದೆ ಹೊರಟಿತು. ನೌಕೆಯೊಳಗೆ ಮುಂಚಿನ ಸುಖವಿಲ್ಲ. ಎಲ್ಲರ ಮನಸ್ಸೂ ಒಂದು ಬಗೆಯಾಗಿ ಆಗಿತ್ತು.... ಸುರೇಂದ್ರಬಾಬುವೂ ಅವನ ಸ್ನೇಹಿತರೂ ಹೇಗೋ ಒಂದು ಬಗೆಯಾಗಿ ಕಾಲ ಕಳಯಲಾರಂಭಿಸಿದರು. ಆಮೋದ ಪ್ರಮೋದಗಳು ಬೇಡದ ಮನಸ್ಸಿಗೆ ಹಳಸಿ ಹೋಗಿದ್ದುವು..ಮೊದಲು ಹೇಡಿತನವೆಂದು ಸುಮ್ಮನಾದವರಲ್ಲ ಮತ್ತೆ ಧೈರ್ಯ ಮಾಡಿ ಇನ್ನು ಹೋಗುತ್ತೇವೆಂದರು. ಸುರೇಂದ್ರನು ಅಡ್ಡಿ ಮಾಡಲಿಲ್ಲ. ಉಳಿದ ಅಲ್ಪಸ್ವಲ್ಪ ಮಂದಿಯನ್ನೇ ಜೊತೆಯಾಗಿಟ್ಟುಕೊಂಡು ನೌಕೆ ನಡೆಸಿಕೊಂಡು ಹೋದನು. ಮನೆಗೆ ಹೋಗಬೇಕೆಂಬ ಯೋಚನೆ ಅವನಿಗೆ ಮಾತ್ರ ಒಂದು ಸಲವೂ ಬರಲಿಲ್ಲ. ಈಗ ಅವನ ಸಂಗಡ ಒಬ್ಬ ಸಂಗೀತದ ಗುರು, ಒಬ್ಬ ಗಾಯಕಿ ಮತ್ತು ನೌಕರರು ಇಷ್ಟೇ ಇದ್ದುದು. ಆ ಗಾಯಕಿ ಜಮೀಂದಾರರ ವಿಶ್ವಾಸ ಪಾತ್ರಿಯಾಗಿದ್ದಳು, ಕೆಲವು ವರ್ಷಗಳಿಂದ.

ಒಂದು ದಿನ ಸಂಜೆ ಪಶ್ಚಿಮದಲ್ಲಿ ಮೇಘಗಳು ವಿಪರೀತವಾಗಿ ಶೇಖರಿಸಿದ್ದುವು. ಸುರೇಂದ್ರನು ನೌಕೆಯ ಮುಖ್ಯ ನಾವಿಕನನ್ನು ಕರೆದು "ಹರಿ

ಚರಣ್, ಮೋಡಗಳು ಕೂಡಿರುವುದು ನೋಡಿದೆಯಾ ?" ಎಂದನು.

"ನೋಡಿದೆ, ಸ್ವಾಮೀ" ಎಂದನು.

"ದೊಡ್ಡ ಮಳೆ ಬರುವ ಹಾಗೆ ಇದೆಯಲ್ಲವೇ ?"

"ವೈಶಾಖ ಜ್ಯೇಷ್ಠ ಮಾಸಗಳಲ್ಲಿ ಮಳೆ ಬರುವುದು ಆಶ್ಚರ್ಯವೇ ಸ್ವಾಮಿ ?"

"ಹಾಗಾದರೆ ಹಡಗನ್ನು ನಿಲ್ಲಿಸು."

"ನದಿಯ ಮಧ್ಯೆ ನಿಲ್ಲಿಸುವುದು ಹೇಗೆ ಸ್ವಾಮಿ ತೀರದಲ್ಲಿ ಹಳ್ಳಿ, ಗ್ರಾಮ ಯಾವುದೂ ಕಂಡುಬರುವುದಿಲ್ಲ."

"ಹಾಗಾದರೆ ಮಳೆ ಬಂದರೆ ಮುಳುಗಿ ಸಾಯೋಣವೇನು ?"

ಹರಿಚರಣನು ಸ್ವಲ್ಪ ನಕ್ಕು "ನಾವಿರುವಾಗ ನಿಮ್ಮನ್ನು ಸಾಯಲು ಬಿಡುತ್ತೇವೆಯೇ ಸ್ವಾಮಿ. ನೀವು ಹೆದರಬೇಡಿ. ಮಳೆ ಬರುತ್ತೆ ಎಂದು ತಿಳಿದ ತಕ್ಷಣ ಲಂಗರು ಕಟ್ಟುತ್ತೇವೆ," ಎಂದನು.

ಸುರೇಂದ್ರನು ಸ್ವಲ್ಪ ಕೋಪದಿಂದ "ನಿನ್ನ ಸಾಹಸ ಪ್ರದರ್ಶನ ಮಾಡ ಬೇಕಾಗಿಲ್ಲ. ತೀರದಲ್ಲಿ ಯಾವುದಾದರೂ ಸರಿಯಾದ ಸ್ಥಳ ಸಿಕ್ಕಿದರೆ ಅಲ್ಲಿ ನೌಕೆಯನ್ನು ಕಟ್ಟಿಹಾಕು" ಎಂದನು.

ಹರಿಚರಣನು ಹಾಗೆಯೇ ಆಗಲೆಂದು ಒಂದು ಪರಿಷ್ಕಾರವಾದ ಜಾಗ ತೀರದಲ್ಲಿ ಕಂಡು ಬಂದಾಗ ಅಲ್ಲಿಗೆ ನೌಕೆಯನ್ನು ನಡೆಸಿಕೊಂಡು ಹೋಗಿ ಕಟ್ಟಿಹಾಕಿದನು.

ಸುರೇಂದ್ರನು ನೌಕೆಯ ಮೇಲಂತಸ್ತಿನ ತನ್ನ ಕೊಠಡಿಯಲ್ಲಿ ಬಂದು ಕೂತನು. ನೌಕರನೊಬ್ಬ ಹುಕ್ಕಾವನ್ನು ಸಿದ್ಧ ಮಾಡಿ ಕೊಟ್ಟನು. ಸುರೇಂದ್ರನು ಹುಕ್ಕಾ ಕೊಳವೆಯನ್ನು ಬಾಯಲ್ಲಿಟ್ಟುಕೊಳ್ಳುತ್ತಾ ಸಂಗೀತದ ವುಸ್ತಾದರಿಗೆ ಹೇಳಿಕಳುಹಿಸಿದನು. ಸ್ವಲ್ಪ ಹೊತ್ತಿಗೆ ಒಬ್ಬ ಹಿಂದೂಸ್ತಾನಿ ಯವನು ಮೀಸೆ ಗಡ್ಡಗಳಿಂದ ಸಂಶೋಧಿತನಾಗಿ ತಲೆಯ ಮೇಲೆ ಪಗಡಿ ಸಮೇತ ಬಂದು ಮುಸಲ್ಮಾನರಂತೆ 'ಕುರ್ನೀಷ್' ಮಾಡಿ "ಹುಜೂರ್" ಎಂದನು.

ಸುರೇಂದ್ರಬಾಬುವು ನದಿಯ ಆ ಪಕ್ಕದಲ್ಲಿ ತೀರದ ಸಮೀಪದಲ್ಲಿಯೇ ನೀರಿನ ಮೇಲೆ ಕಪ್ಪನೆಯ ಪದಾರ್ಥವೊಂದು ತೇಲುತ್ತಿದ್ದದ್ದನ್ನೇ ನೋಡುತ್ತಾ

ಇದ್ದನು....

ಆ ಪದಾರ್ಥವು ಯಾವುದೋ ಮನುಷ್ಯರ ತಲೆಯಂತೆ ಬೋಧವಾಯಿತು. ಕುತೂಹಲದಿಂದ ಅದನ್ನೇ ನೋಡುತ್ತಿದ್ದನು ವುಸ್ತಾದರ ಸಂಬೋಧನೆ ಮೊದಲು ಅವನ ಕಿವಿಗೆ ಬೀಳಲಿಲ್ಲ.

ವುಸ್ತಾದನು ಮತ್ತೆ ಕುರ್ನೀಷ್ ಮಾಡಿ "ಹುಜೂರ್" ಎಂದನು.

ಸುರೇಂದ ಪಕ್ಕಕ್ಕೆ ತಿರುಗಿ ವುಸ್ತಾದನನ್ನು ನೋಡಿ "ವುಸ್ತಾದರೇ, ಇವತ್ತು ಬಹುಶಃ ಮಳೆ ಬರುವುದಿಲ್ಲವೆಂದು ತೋರುತ್ತೆ. ಸ್ವಲ್ಪ ಸಂಗೀತವಾಗಲಿ...ಏನಂತೀರಿ." ಎಂದನು.

ಆತನು ತಲೆದೂಗಿ "ಅಪ್ಪಣೆಯಂತೆ" ಎಂದು ಹೊರಗೆ ಹೊರಟನು. ಸುರೇಂದ್ರನು ಪುನಃ ಆ ಕಪ್ಪು ಪದಾರ್ಥವನ್ನೇ ನೋಡುತ್ತಾ ಕೂತನು.

ಸ್ವಲ್ಪ ಹೊತ್ತಾದ ಮೇಲೆ ಒಬ್ಬ ಪ್ರಾಯದ ಹೆಂಗಸು ಹತ್ತಿರ ಬಂದು ಅಲ್ಲಿದ್ದ ಒಂದು ಪೀಠದ ಮೇಲೆ ಕೂತಳು. ಹಿಂದಿನಿಂದಲೇ ವುಸ್ತಾದನು ತಬಲಾ ಕೈಯಲ್ಲಿ ಹಿಡಿದುಕೊಂಡು ಬಂದನು. ಅದನ್ನು ನೋಡಿ "ಉಸ್ತಾದರೇ, ನೀವು ಕೆಳಗೆ ಹೋಗಿ, ಪಕ್ಕವಾದ್ಯವೇನೂ ಬೇಡ. ಹಾಗೆಯೇ ಹಾಡುತ್ತಾಳೆ" ಎಂದನು.

ವುಸ್ತಾದನು ತನಗೆ ತಾನೇ ನಗುತ್ತಾ ಹೊರಟುಹೋದನು. ಆ ಯುವತಿಯ ಹೆಸರು ಜಯಾವತಿ. ಸುಮಾರು ಇಪ್ಪತ್ತು ವರುಷಗಳಿರಬಹುದು. ಇವಳು ಸುರೇಂದ್ರನ ಅನುಗ್ರಹಕ್ಕೆ ಪಾತ್ರಳಾದವಳು.

ಮೈಮೇಲೆ ಒಡವೆಗಳೇನೂ ಇಲ್ಲ. ಸಾಧಾರಣ ಸೀರೆಯನ್ನೇ ಕಟ್ಟಿಕೊಂಡಿದ್ದಾಳೆ.

ಸುರೇಂದ್ರನು ಅವಳನ್ನು ನೋಡಿ

"ಜಯಾ, ಇವತ್ತು ಬೆಳಗ್ಗೆಯಿಲ್ಲಾ ಕಂಡು ಬರಲಿಲ್ಲವಲ್ಲ?" ಎಂದನು.

"ತಲೆ ನೋಯುತ್ತಾ ಇತ್ತು.. ಮಲಗಿದ್ದೆ."

"ಈಗ ಸರಿಹೋಗಿದೆಯೇ ?"

"ಸ್ವಲ್ಪ."

"ಏನಾದರೂ ಹಾಡು ಹೇಳುತ್ತೀಯಾ ?"

"ಅಪ್ಪಣೆಯಾದರೆ."

"ಅಪ್ಪಣೆಯೇನು ಬಂತು. ನಿನ್ನಿಷ್ಟ."

ಜಯಾವತಿ ಹಾಡಲು ಮೊದಲು ಮಾಡಿದಳು. ಸುರೇಂದ್ರನು ಎದುರು ತೀರದ ಬಳಿ ನೀರಿನ ಮೇಲೆ ಕಂಡುಬರುತ್ತಿದ್ದ ಕಪ್ಪು ಪದಾರ್ಥವನ್ನು ನೋಡುವುದರಲ್ಲಿ ಮಗ್ನನಾದನು. ಸ್ವಲ್ಪ ಹೊತ್ತು ನೋಡಿ "ಜಯಾ, ಅದು ಆಕಡೆ ಈಕಡೆ ಕದಲುತ್ತಿರುವಂತೆ ಕಾಣುತ್ತದೆ ಅಲ್ಲವೇ ?" ಎಂದನು.

ಜಯಾ ನೋಡಿ "ಹೌದು, ಹಾಗೆಯೇ ಕಾಣುತ್ತಿದೆ." ಎಂದಳು.

"ತಡಿ, ಹಾಗಾದರೆ ದುರ್ಬೀನಿನಲ್ಲಿ ನೋಡೋಣ -- ಯಾರೋ ಅಲ್ಲಿ.... ಕೆಳಗಣಿಂದ ನನ್ನ ದುರ್ಬೀನನ್ನು ತೆಗೆದುಕೊಂಡು ಬಾ....ಬೇಗ."

ದುರ್ಬೀನು ಬಂತು. ಪೆಟ್ಟಿಗೆ ತೆಗೆದು ಬಹಳ ಹೊತ್ತು ದುರ್ಬೀನಿನಲ್ಲಿ ಆ ಪದಾರ್ಥವನ್ನು ನೋಡುತ್ತಾ ಇದ್ದು ತಕ್ಷಣ ಅದನ್ನು ತೆಗೆದು ಪೆಟ್ಟಿಗೆಯಲ್ಲಿಟ್ಟು ಮುಚ್ಚಿಟ್ಟು ಮೇಲಕ್ಕೆದ್ದು ನಿಂತನು, ಜಯಾವತಿ ಚಕಿತಳಾಗಿ "ಏನು ಅದು ?" ಎಂದು ಕೇಳಿದಳು.

"ಯಾರೋ ಮನುಷ್ಯರು. .ಹೀಗೆ ಎಂದು ಹೇಳಲಿಕ್ಕಾಗದು."

"ಇಷ್ಟು ಹೊತ್ತು ನೀರಿನಲ್ಲಿ ನಿಂತು ಏನು ಮಾಡುತ್ತಾರೆ?"

"ಏನೂ ಗೊತ್ತಾಗುವುದಿಲ್ಲ. ಹತ್ತಿರ ಹೋಗಿ ನೋಡಬೇಕು."

"ಯಾರಿಗಾದರೂ ಹೇಳಿಕಳುಹಿಸಿ, ನೋಡಿಕೊಂಡು ಬರಲಿ."

"ಬೇಡ. ನಾನೇ ಖುದ್ದಾಗಿ ನೋಡಿಕೊಂಡು ಬರುತ್ತೇನೆ" ಎಂದು ಒಬ್ಬ ಆಳನ್ನು ಕರೆದು "ಲೋ ಒಂದು ಸಣ್ಣ ದೋಣಿಯನ್ನು ಸಿದ್ಧ ಮಾಡೋ—ಆಚೆ ದಡಕ್ಕೆ ಹೋಗಬೇಕಾಗಿದೆ" ಎಂದು ಆಜ್ಞೆ ಮಾಡಿದನು.... ಸ್ವಲ್ಪ ಹೊತ್ತಾದ ಮೇಲೆ ಆಳು ಬಂದು ಸಿದ್ಧವಾಗಿದೆ ಸ್ವಾಮಿ" ಎಂದನು. ಸುರೇಂದ್ರನು .. ದೋಣಿಯಲ್ಲಿ ಕೂತು ನೌಕರನಿಗೆ "ಆ ದಡಕ್ಕೆ ದೋಣಿಯನ್ನು ಬಿಡು" ಎಂದನು. ದೋಣಿ ಹತ್ತಿರ ಬರುತ್ತಲೂ ಸುರೇಂದ್ರನು ನೋಡಿದನು.

ಕಮಲದ ಹೂವಿನಂತೆ ಅತಿ ಚೆಲುವೆಯಾದ ಹೆಂಗುಸೊಬ್ಬಳು ಕತ್ತಿನವರೆಗೂ ನೀರಿನಲ್ಲಿ ಮುಳುಗಿ ಕಾಲಮೇಘದಂತಿದ್ದ ಕಪ್ಪನೆಯ ಕೇಶರಾಶಿಯನ್ನು ನಾಲ್ಕು ದಿಕ್ಕಿಗೂ ನೀರಿನಲ್ಲಿ ಪಸರಿಸಿಕೊಂಡು ನಿಂತಿದ್ದಾಳೆ.

ಸುರೇಂದ್ರನು ಮತ್ತೂ ಹತ್ತಿರಕ್ಕೆ ದೋಣಿ ನಡೆಯಿಸಿಕೊಂಡು

ಬಂದರೂ ಆ ಹೆಂಗಸು ಮೇಲಕ್ಕೇಳಲಿಲ್ಲ—ಏಳುವ ಪ್ರಯತ್ನವನ್ನೂ ಮಾಡ ಲಿಲ್ಲ. ಅದೇ ಸ್ಥಿರ, ಗಂಭೀರಭಾವದಿಂದ ನಿಂತಿದ್ದಾಳೆ.

ಸುರೇಂದ್ರನು ಸ್ವಲ್ಪ ಅನುಮಾನದಿಂದ ಹಾಗೆ ಹೀಗೆ ನೋಡಿ "ಹತ್ತಿರ ದಲ್ಲಿ ಗ್ರಾಮ ಯಾವುದಾದರೂ ಇದೆಯೇ?" ಎಂದನು.

ಹೆಂಗಸು "ನನಗೆ ಗೊತ್ತಿಲ್ಲ. ಬಹುಶಃ ಇಲ್ಲ" ಎಂದಳು.

"ಹಾಗಾದರೆ ನೀನು ಹೇಗೆ ಇಲ್ಲಿಗೆ ಬಂದೆ?"

ಹೆಂಗಸು ಸುಮ್ಮನಿದ್ದಳು.

"ನಿಮ್ಮ ಮನೆ ಇಲ್ಲಿಗೆ ಹತ್ತಿರವಿದೆಯೇ?"

"ಇಲ್ಲ. ಬಹಳ ದೂರ."

"ಮತ್ತೆ ಇಲ್ಲೇನು ಮಾಡುತ್ತಿ? ಇಷ್ಟು ಹೊತ್ತಿನಲ್ಲಿ?"

"ನಮ್ಮ ದೋಣಿ ಮುಳುಗಿ ಹೋಯಿತು."

"ಯಾವಾಗ."

"ನಿನ್ನೆ ರಾತ್ರಿ."

"ನಿನ್ನ ಸಂಗಡಿಗರು ಎಲ್ಲಿ ?"

"ಗೊತ್ತಿಲ್ಲ."

"ನೀನು ಇಷ್ಟುಹೊತ್ತಿನಿಂದ ನೀರಿನಲ್ಲೇಕೆ ನಿಂತಿದ್ದಿಯೆ? ಹತ್ತಿರ ದಲ್ಲೇನಾದರೂ ಗ್ರಾಮವಿದೆಯೋ ಇಲ್ಲವೋ, ಯಾಕೆ ಹುಡುಕಲಿಲ್ಲ ?"

ಹೆಂಗಸು ಮಾತಾಡಲಿಲ್ಲ.

"ನಿಮ್ಮ ಮನೆ ಇಲ್ಲಿಗೆ ಎಷ್ಟು ದೂರವಾಗುತ್ತದೆ ?"

"ಹತ್ತು, ಹನ್ನೆರಡು ಮೈಲಿ."

"ಯಾವ ದಿಕ್ಕಿನಲ್ಲಿ ?"

ಸುರೇಂದ್ರನ ದೋಣಿಯು ಯಾವ ದಿಕ್ಕಿನಲ್ಲಿ ಹೋಗುತ್ತಿತ್ತೋ ಹೆಂಗುಸೂ ಆ ದಿಕ್ಕನ್ನೇ ತೋರಿಸಿದಳು.

ಸುರೇಂದ್ರನು ಸ್ವಲ್ಪ ಯೋಚಿಸಿ

"ನಾವು ಆ ದಿಕ್ಕಿಗೇ ಹೋಗುತ್ತಿದ್ದೇವೆ. ನಮ್ಮ ನೌಕೆಯ ಮೇಲೆ ಹೆಂಗುಸೊಬ್ಬಳು ಇದಾಳೆ. ನಿನಗೇನೂ ಆಕ್ಷೇಪಣೆ ಇಲ್ಲದೆ ಹೋದರೆ ನನ್ನ ಜೊತೆಯಲ್ಲಿ ಬರಬಹುದು. ನಿನಗೆ ಮನೆ ತಲುಪಿಸುತ್ತೇನೆ ಬೇಕಾದರೆ."

ಅವಳು ಪುನಃ ಮಾತಾಡದೆ ಸುಮ್ಮನಿದ್ದಳು.

ಸುರೇಂದ್ರನು ಅರ್ಥಮಾಡಿಕೊಳ್ಳಲಾಗದೆ "ಏನು, ಬರುತ್ತೀಯಾ?" ಎಂದು ಮತ್ತೆ ಕೇಳಿದನು.

"ಆಗಲಿ, ಬರುತ್ತೇನೆ."

"ಸರಿ ... ನಡಿ .ಈ ದೋಣಿಯಲ್ಲಿ ಕೂಡು" ಎಂದನು.

ಹೆಂಗಸು ಸ್ವಲ್ಪ ಹೊತ್ತು ಏನೂ ಹೇಳದೆ ಆಮೇಲೆ "ನನ್ನ ವಸ್ತ್ರ ಕಳೆದು ಹೋಗಿದೆ" ಎಂದಳು.

ಸುರೇಂದ್ರನಿಗೆ ಆಗ ಅರ್ಥವಾಯಿತು, ಹೆಂಗಸು ಏಕೆ ನೀರಿನಲ್ಲಿ ಅಷ್ಟು ಹೊತ್ತು ನಿಂತಿದ್ದಳೆಂದು. ದೋಣಿಯಿಂದ ದಡಕ್ಕೆ ಇಳಿದು ದೋಣಿಯವನಿಗೆ ಬೇಗ ನೌಕೆಗೆ ಮರಳಿ ಅವಳು ಉಡುವಂತಹ ಬಟ್ಟೆಗಳನ್ನು ಜಯಾವತಿಯನ್ನು ಕೇಳಿ ತೆಗೆದುಕೊಂಡು ಬರುವಂತೆ ಹೇಳಿಕಳುಹಿಸಿ "ಬಟ್ಟೆಗಳು ಬಂದರೆ ನನ್ನ ಜೊತೆಯಲ್ಲಿ ಬರುತ್ತೀಯಾ ?" ಎಂದನು.

"ಹೂಂ.... ಬರುತ್ತೇನೆ."

ನಾವಿಕನು ಬಟ್ಟೆಗಳನ್ನು ತಂದನು.

ಸ್ವಲ್ಪ ಹೊತ್ತಾದ ಮೇಲೆ ಹೆಂಗುಸನ್ನು ದೋಣಿಯಲ್ಲಿ ಕೂಡಿಸಿಕೊಂಡು ಸುರೇಂದ್ರನು ನೌಕೆಯನ್ನು ಬಂದು ಸೇರಿದನು.

ಮೇಲಕ್ಕೆ ಬಂದ ತಕ್ಷಣ ಸುರೇಂದ್ರನಾಥನು ಹೊಸಬಳನ್ನು ಜಯಾವತಿಗೆ ಗುರುತುಮಾಡಿಸಿದನು. ಆಕೆ ಇವಳೊಂದಿಗೆ ಒಳ್ಳೆಯ ಮಾತುಗಳಾಡಿ ಹತ್ತಿರ ಕರೆದು ತನ್ನ ಕೊಠಡಿಗೆ ಕರೆದುಕೊಂಡು ಹೋದಳು. ಅವಳಿಗೆ ಊಟಮಾಡಿಸಿ ಎಲೆ ಅಡಿಕೆ ಕೊಟ್ಟು ಹತ್ತಿರ ಕೂಡಿಸಿಕೊಂಡು ಜಯಾವತಿ ಕೇಳಿದಳು.

"ನಿನ್ನ ಹೆಸರೇನೇ ತಂಗಿ?"

"ನನ್ನ ಹೆಸರು ಮಾಲತಿ. ನಿಮ್ಮ ಊರಾವುದು?"

"ಮಹೇಶಪುರ."

"ಇಲ್ಲಿಂದ ಎಷ್ಟು ದೂರ?"

"ಸುಮಾರು ಹತ್ತಿಪ್ಪತ್ತು ಮೈಲಿಗಳಾದೀತು."

"ನಿಮ್ಮತ್ತೆ ಮನೆಯೆಲ್ಲಿ?"

ಮಾಲತಿಯು ಸ್ವಲ್ಪ ನಕ್ಕು "ಎಲ್ಲಿಯೂ ಇಲ್ಲ" ಎಂದಳು.

"ಹಾಗೆಂದರೇನು? ಮದುವೆಯಾಗಲಿಲ್ಲ?"

"ಆಗಿತ್ತು .. ಆದರೆ ಈಗೆಲ್ಲಾ ಮುಗಿದು ಹೋಯಿತು."

ಜಯಾವತಿ ಮುಖದಲ್ಲಿ ಅನುಕಂಪ ತೋರಿಸುತ್ತಾ "ಎಷ್ಟು ದಿವಸ ವಾಯಿತು?" ಎಂದಳು.

"ಬಹಳ ದಿನವಾಯಿತು. ಈಗ ನನಗೆ ಅದು ಯಾವುದೂ ಸರಿಯಾಗಿ ಜ್ಞಾಪಕವಿಲ್ಲ."

ಜಯಾವತಿಯು ಮತ್ತೂ ಕನಿಕರದಿಂದ

"ನಿಮ್ಮ ಯಜಮಾನರ ಮನೆಯಲ್ಲಿ ಯಾರೂ ಇಲ್ಲವೇ ?" ಎಂದಳು.

"ಯಾರೂ ಇಲ್ಲ. ಒಬ್ಬ ಅತ್ತೆಯಿದ್ದಳು. ಆಕೆಯೂ ತೀರಿ ಕೊಂಡಳು."

ನೌಕೆಯು ಮುಳುಗಿ ಈ ಸ್ಥಿತಿಯಲ್ಲಿದ್ದಾಳೆಂಬ ಸಂಗತಿ ಮನಸ್ಸಿಗೆ ಬಂದು ಜಯಾವತಿಯು

"ನೀವೆಲ್ಲಾ ನೌಕೆಯಲ್ಲಿ ಎಲ್ಲಿಗೆ ಹೋಗುತ್ತಿದ್ದಿರಿ ?" ಎಂದಳು.

ಮಾಲತಿಯು ಸ್ವಲ್ಪ ಯೋಚಿಸಿ "ಸಾಗರ ದ್ವೀಪಕ್ಕೆ" ಎಂದಳು.

"ನಿಮ್ಮ ಜತೆಯಲ್ಲಿದ್ದವರೆಲ್ಲಾ ಎಲ್ಲಿ ?"

"ಗೊತ್ತಿಲ್ಲ."

"ಈಗ ಮನೆಗೆ ವಾವಸು ಹೋಗುತ್ತೀಯೇನು ?"

"ಹಾಗೆಂದು ಕೊಂಡಿದ್ದೇನೆ."

ಜಯಾವತಿಯು ಸ್ವಲ್ಪ ಯೋಚಿಸುತ್ತಿದ್ದು ಆಮೇಲೆ ಒಂದು ಬಗೆ ಯಾಗಿ ನಕ್ಕು

"ನನ್ನ ಜೊತೆಯಲ್ಲಿ ಬರುತ್ತೀಯಾ?" ಎಂದಳು.

"ಕರದುಕೊಂಡು ಹೋದರ ಬರುತ್ತೇನೆ ನಿಮ್ಮ ಯಜಮಾನರು ನನಗೆ ಎಷ್ಟೋ ಉಪಕಾರ ಮಾಡಿದ್ದಾರೆ. ನನಗೆ ಮನೆಯಲ್ಲೂ ಯಾರೂ ದಿಕ್ಕಿಲ್ಲ. ಊರಿಗೆ ಹೋದರೂ ಯಾರ ಬಳಿ ಇರುವುದೋ ಗೊತ್ತಿಲ್ಲ."

ಅವಳ ಮಾತು ಕೇಳುತ್ತಾ ಜಯಾವತಿ ಏಕೆ ಕೇಳಿದೆ ಎಂದು ನಾಲಗೆ ಕಚ್ಚಿಕೊಂಡಳು. ಮನಸ್ಸಿನಲ್ಲಿ ಸಂದೇಹವಾಯಿತು. ಮಾಲತಿಯನ್ನು

ಸಂಗಡ ಕರೆದುಕೊಂಡು ಹೋದರೆ ಕ್ಷೇಮವಲ್ಲ ಎಂದುಕೊಂಡಳು. ಸುರೇಂದ್ರನಾಧನ ಸಂಗಡ ಒಂದು ಪಕ್ಷ........

"ನಿಮ್ಮ ಊರಾವುದು ?" ಎಂದು ಮಾಲತಿ ಪ್ರಶ್ನಿಸಿದಳು.

"ನಾರಾಯಣಪುರ."

"ಎಲ್ಲಿಗೆ ಹೋಗುತ್ತಿದ್ದಿರಿ ?"

"ನುಮ್ಮನೆ ಸುತ್ತಾಡುವುದಕ್ಕೆ. ಯಜಮಾನರ ಆರೋಗ್ಯ ಚೆನ್ನಾಗಿರಲಿಲ್ಲ. ಅದಕ್ಕೆ."

ಹೀಗೇ ಮಾತಾಡುತ್ತಾ ಆಡುತ್ತಾ ಇಬ್ಬರೂ ನಿದ್ದೆ ಹೋದರು.

## ೨

ರಾತ್ರಿ ಬಹಳ ಚೆನ್ನಾಗಿ ನಿದ್ದೆ ಮಾಡಿ ಸುರೇಂದ್ರ ಬೆಳಗಿನಝಾವ ಬೇಗಲೇ ಎದ್ದು ಬಿಟ್ಟಿದ್ದನು. ಮುಖ ತೊಳೆದು ಗುಡುಗುಡಿಯನ್ನು ಸೇದುತ್ತಾ ಮೇಲೆ ಬಂದು ಕುಳಿತನು. ಗಾಳಿ ಜೋರಾಗಿ ಬೀಸುತ್ತಿತ್ತು. ಲಂಗರೆತ್ತಿ ನಾವಿಕರು ನೌಕೆಯನ್ನು ವೇಗವಾಗಿ ನಡೆಸುತ್ತಿದ್ದರು. ಸುರೇಂದ್ರನು ಜಯಾವತಿಗೆ ಹೇಳಿ ಕಳುಹಿಸಿ

"ಆ ಹೆಂಗಸಿನ ಊರು, ಮನೆ ಎಲ್ಲಾ ವಿಚಾರಿಸಿದೆಯಾ ?" ಎಂದು ಕೇಳಿದನು.

"ಏನೋ ಸ್ವಲ್ಪ ಸ್ವಲ್ಪ."

"ಯಾವ ಊರಂತೆ ?"

"ಮಹೇಶಪುರ."

"ಮಹೇಶಪುರ? ಎಲ್ಲಿದೆ ಅದು ?"

"ನನಗೆ ಗೊತ್ತಿಲ್ಲ. ಇಲ್ಲಿಗೆ ಹತ್ತಿಪ್ಪತ್ತು ಮೈಲಿಗಳಾಗುತ್ತವಂತೆ."

"ತಂದೆಯ ಹೆಸರು ಹೇಳಿದಳೇ ?"

"ನಾನು ಕೇಳಲಿಲ್ಲ."

"ಮತ್ತೆ ಏನು ಕೇಳಿದೆ ಹಾಗಾದರೆ? ಗಂಡನ ಹೆಸರು ?"

"ಗಂಡನಿಲ್ಲವಂತೆ."

"ಅತ್ತೆಯ ಮನೆ ಎಲ್ಲಿ ?"

"ಅದೂ ಹೇಳಲಿಲ್ಲ"

"ಹೋಗಲಿ .. ಅವಳ ಜಾತಿ ಯಾವುದು? ಹೇಳಿದಳೆ ?"

"ಇಲ್ಲ."

"ಹೆಸರು ಗೊತ್ತೇ?"

"ಗೊತ್ತು, ಮಾಲತಿ."

"ಮಾಲತಿಗೆ ಆಕ್ಷೇಪಣೆಯಿಲ್ಲದಿದ್ದರೆ ನನ್ನ ಕೊಠಡಿಗೆ ಕಳುಹಿಸು. ನಾನು ಕೇಳಿ ಎಲ್ಲ ವಿಚಾರವನ್ನೂ ತಿಳಿದುಕೊಳ್ಳುತ್ತೇನೆ."

ಸ್ವಲ್ಪ ಹೊತ್ತಾದ ಮೇಲೆ ಭೃತ್ಯನೊಬ್ಬ ಬಂದು "ಕೊರಡಿಗೆ ಬರಬೇಕಂತೆ" ಎಂದು ಕರೆದನು. ಸುರೇಂದ್ರನು ಹೋಗಿ ನೋಡಿದನು. ಮಾಲತಿಯು ಕೆಳಗೆ ಜಮಖಾನದ ಮೇಲೆ ತಲೆ ತಗ್ಗಿಸಿಕೊಂಡು ಕೂತಿದ್ದಾಳೆ. ಜಯಾವತಿಯೂ ಹತ್ತಿರ ಕೂತಿದ್ದವಳು ಸುರೇಂದ್ರನು ಪ್ರವೇಶ ಮಾಡಿದ ತಕ್ಷಣ ಅವಳು ಹೊರಟುಹೋದಳು. ಅವಳಿಗೆ ಗೊತ್ತು. ನಾನು ಎದುರಿಗಿದ್ದರೆ ಈ ಹೆಂಗಸು ಯಾವುದೂ ಬಿಚ್ಚಿಹೇಳುವುದಿಲ್ಲ ...ಅವಳ ಮನಸ್ಸಿನಲ್ಲಿ ಏನಿದೆಯೋ ಯಾರಿಗೆ ಗೊತ್ತು. ಎಂದು ಅವಳು ಹೊರಗೆ ಹೊರಟುಹೋಗಿದ್ದಳು.......ಆದರೂ ಸ್ತ್ರೀಸಹಜವಾದ ಕುತೂಹಲದಿಂದ ಬಾಗಿಲ ಹೊರಗೆ ನಿಂತುಕೊಂಡು ಮಾತುಕೇಳಿಸಿಕೊಳ್ಳುವ ಪ್ರಯತ್ನ ಮಾಡಿದಳು.

ಸುರೇಂದ್ರನು ಬಂದು ಸೋಫಾದ ಮೇಲೆ ಕೂತನು. ಮಾತಿಲ್ಲದೆ ಸ್ವಲ್ಪ ಹೊತ್ತು ಅವಳ ಮುಖವನ್ನೇ ನೋಡುತ್ತಾ ಕೂತನು. ಬಹಳ ಮ್ಲಾನವಾದ, ಬಹಳ ವಿಷಣ್ಣದಿಂದ ಕೂಡಿದ ಮುಖ. ಆದರೆ ಅವಳ ಚೆಲುವು ಮನಸ್ಸನ್ನು ಸೆರೆಹಿಡಿಯುವಂತಹುದು. ಅತಿ ಸುಂದರವಾದ ಮೈಬಣ್ಣ. ಕೋಮಲವಾದರೂ ಪುಷ್ಟವಾಗಿರುವ ಅಂಗಸೌಷ್ಠವ. ಇಂತಹ ರೂಪವತಿಯನ್ನು ಅವನು ಹಿಂದೆಂದೂ ನೋಡಿರಲಿಲ್ಲ. ವಿಧವೆ? ಆದರೆ ಜಾತಿ ಯಾವುದೋ? ಸುರೇಂದ್ರನು ತಲೆಯೆತ್ತಿ "ನಿಮ್ಮ ತಂದೆಯ ಹೆಸರೇನು ?" ಎಂದನು.

ಮಾಲತಿಯು "ಹಾರಾಣಚಂದ್ರ ಮುಖೋಪಾಧ್ಯಾಯ" ಎಂದಳು.

"ಅವರು ಮನೆಯಲ್ಲಿರುತ್ತಾರೆಯೇ? ಮಾಲತಿ ಸ್ವಲ್ಪ ಯೋಚಿಸಿ "ಇಲ್ಲ. ಅವರೀಗ ಇಲ್ಲ" ಎಂದಳು. ಅಂದರ ಸತ್ತುಹೋಗಿದ್ದಾರೆಂದುಕೊಂಡನು. "ಮನೆಯಲ್ಲಿ ಬೇರೆ ಯಾರಿದ್ದಾರೆ ?" ಎಂದು ಕೇಳಿದನು.

ಮಾಲತಿಯು ಆಗಲೂ ಚಟ್ಟೆಂದು ಉತ್ತರ ಕೊಡದೆ ಸ್ವಲ್ಪ ಹಾಗೆ ಹೀಗೆ ನೋಡಿ "ಈಗ ಬೇರೆ ಯಾರೂ .. ಇಲ್ಲ" ಎಂದಳು.

"ಇದುವರಗೆ ನೀನು ಎಲ್ಲಿದ್ದೆ ?"

"ಅಲ್ಲಿಯೇ ಇದ್ದೆ. ಆದರ ನಾವು ನಾಗರಗ್ರಾಮಕ್ಕೆ ಹೋಗುತ್ತಿದ್ದೆವು. ದಾರಿಯಲ್ಲಿ ನೌಕೆ ಮುಳುಗಿ ಹೋಯಿತು."

"ನಿಮ್ಮ ಅತ್ತೆಯ ಮನೆಯೆಲ್ಲಿ ?"

"ಕಾಳೀಪಾಡಾ."

"ಅಲ್ಲಿ ನಿಮ್ಮ ಗಂಡನ ಕಡೆಯವರು ಯಾರುಇದ್ದಾರೆ ?"

"ಯಾರಾದರೂ ಇರಬಹುದು. ಆದರೆ ಅವರು ಯಾರೂ ನನಗೆ ಗುರುತಿಲ್ಲ."

"ನೀನು ಹಿಂದೆ ಯಾವಾಗಲೂ ಅಲ್ಲಿಗೆ ಹೋಗಲಿಲ್ಲವೇ ?"

"ಮದುವೆಯ ಸಮಯದಲ್ಲಿ ಮಾತ್ರ ಹೋಗಿದ್ದದ್ದು."

ಸುರೇಂದ್ರನು ಯೋಚನೆ ಮಾಡುತ್ತಾ ಮಾಡುತ್ತಾ "ನಿಮ್ಮ ತಂದೆಯ ಮನೆಯಲ್ಲಿ ಯಾರೂ ಇಲ್ಲ. ಅತ್ತೆಯ ಮನೆಯಲ್ಲಿ ಯಾರೂ ಇಲ್ಲ. ಸರಿ ಹಾಗಾದರೆ, ನೀನು ಎಲ್ಲಿಗೆ ಹೋಗಬೇಕೆಂದಿದ್ದೀಯಾ, ಅದಾದರೂ ಗೊತ್ತೇ ?"

"ಕಲಿಕತ್ತೆಗೆ."

"ಕಲಿಕತ್ತೆ! ಅಲ್ಲಿ ನಿನಗೆ ಯಾರಿದ್ದಾರೆ ?"

"ಯಾರೂ ಇಲ್ಲ."

"ಯಾರೂ ಇಲ್ಲ? ಮತ್ತೆ ಹೋಗಿ ಎಲ್ಲಿ ಇರುತ್ತೀಯ ?"

"ಯಾರ ಮನೆಯಲ್ಲಾದರೂ ಊಳಿಗಮಾಡಿಕೊಂಡಿರುತ್ತೇನೆ."

"ನಿನಗೆ ಅಡುಗೆ ಬರುತ್ತದೆಯೇ ?"

"ಚೆನ್ನಾಗಿ ಬರುತ್ತದೆ."

"ಕಲಿಕತ್ತೆಯಲ್ಲಿ ಎಲ್ಲಾದರೂ ಪರಿಚಾರಿಕೆ ಕೆಲಸ ಸಿಕ್ಕಿದರೆ ಮಾಡುತ್ತೀಯಾ ?"

"ಮಾಡುತ್ತೇನೆ."

ಸುರೇಂದ್ರನು ಸ್ವಲ್ಪ ಹೊತ್ತು ಮಾತಾಡದೆ ಆಮೇಲೆ ಮೆಲ್ಲಗೆ "ಮಾಲತಿ, ಕಲಿಕತ್ತೆಯಲ್ಲದೆ ಬೇರೆ ಯಾವ ಊರಿನಲ್ಲಾದರೂ ಆ ಕೆಲಸ ಸಿಕ್ಕಿದರೆ ಮಾಡುತ್ತೀಯಾ ?" ಎಂದನು.

ಮಾಲತಿ ತಲೆಯಲ್ಲಾಡಿಸಿ "ಇಲ್ಲ. ಮಾಡಲಾರೆ" ಎಂದಳು.

ಅವಳ ಮಾತಿನಿಂದ ಸುರೇಂದ್ರನ ಪ್ರಶ್ನೆಯು ಬಹಳ ಕ್ಲೇಶವುಂಟು ಮಾಡಿದ್ದಂತೆ ತೋರಿತು. ಸುರೇಂದ್ರನು ಮತ್ತೆ "ಮಾಲತಿ ಕಲಿಕತ್ತೆಯಲ್ಲಿ

ನೀನು ಏನು ಬಯಸಿದ್ದೀಯೋ ಅದಕ್ಕಿಂತಲೂ ಎರಡರಷ್ಟು ನಾಲ್ಕರಷ್ಟು ಸಿಕ್ಕಿದರೂ ಮಾಡುವುದಿಲ್ಲವೇ ?" ಎಂದನು. ಮಾಲತಿಯು ಮೊದಲಿನಂತೆಯೇ ತಲೆಯಲ್ಲಾಡಿಸಿದಳು. "ಕಲಿಕತ್ತೆಯನ್ನು ಬಿಟ್ಟು ನಾನು ಬೇರೆ ಎಲ್ಲಿಗೂ ಹೋಗಲಾರೆ."

ಸುರೇಂದ್ರನಾಥನು ದೊಡ್ಡ ನಿಟ್ಟುಸಿರುಬಿಟ್ಟನು. ಅವನ ಮ್ಲಾನ ಮುಖವನ್ನು ನೋಡಿ ಮಾಲತಿಯು ತನ್ನ ಮಾತುಗಳಿಂದ ಅವನಿಗೆ ಬಹಳ ನಿರಾಸೆಯಾಗಿರುವುದೆಂದು ತಿಳಿದುಕೊಂಡಳು.

ಸುರೇಂದ್ರನು ಬೇರೆ ಎಲ್ಲೋ ನೋಡುತ್ತಾ "ನೋಡಿದವರು ಹೇಳುತ್ತಾರೆ. ಕಲಿಕತ್ತೆ ಬಲು ಕೆಟ್ಟ ಊರು. ನಿನಗೆ ಇಷ್ಟಬಂದಂತೆ ಮಾಡು. ಆದರೆ ಸ್ವಲ್ಪ ಯೋಚನೆ ಮಾಡಿ ನಿಷ್ಕರ್ಷೆ ಮಾಡು. ಇನ್ನೊಂದು ಮಾತು. ನನ್ನ ಹೆಸರು ಸುರೇಂದ್ರನಾಥ ಚೌಧುರಿ. ನಮ್ಮ ಊರು ನಾರಾಯಣಪುರ. ಯಾವಾಗಲಾದರೂ ಆವಶ್ಯಕಬಿದ್ದರೆ ನನಗೆ ಹೇಳಿಕಳುಹಿಸು. ಅಥವಾ ನೀನೇ ನಮ್ಮ ಮನೆಗೆ ಆಗತ್ಯವಾಗಿ ಬಾ. ಏನು ಕಷ್ಟಬಂದರೂ ನಾನು ಕೈಲಾದ ಸಹಾಯ ಮಾಡುತ್ತೇನೆ" ಎಂದನು.

ಮಾಲತಿಯು ಮಾತಿಲ್ಲದೆ ತಲೆ ತಗ್ಗಿಸಿಕೊಂಡೇ ಕೂತಿದ್ದಳು.

"ನಾವು ಇನ್ನೊಂದು ವಾರಕ್ಕೆ ಕಲಿಕತ್ತೆಯ ಕಡೆ ವಾಪಸು ಹೋಗುತ್ತೇವೆ. ಈಗ ಸದ್ಯಕ್ಕೆ ಈ ನೌಕೆಯಲ್ಲಿಯೇ ಇರು. ಕಲಿಕತ್ತೆ ತಲುಪಿದಾಗ ಅಲ್ಲಿ ಇಳಿದು ಬಿಡುವಿಯಂತೆ "

ಸುರೇಂದ್ರಬಾಬುವು ಹೀಗೆ ಹೇಳಿ ಹೊರಗೆ ಹೋದನು. ಮಾಲತಿಯು ತನ್ನ ಕೊಠಡಿಗೆ ಹೋಗಿ ಅತ್ತಳು. ಸುರೇಂದ್ರನ ಮಾತುಗಳಿಂದ ಅವಳಿಗೆ ಸ್ವಲ್ಪ ನೋವೇನೋ ಆಗಿತ್ತು. ಆದರೆ ಅಳುವುದಕ್ಕೆ ಇದಲ್ಲದೆ ಬೇರೆ ನೂರು ಕಾರಣಗಳಿದ್ದುವು.

ಸುರೇಂದ್ರನು ಅವಳ ಮಾನವನ್ನು ಕಾಪಾಡಿದ್ದನು. ನೌಕೆಯಲ್ಲಿ ಆಶ್ರಯ ಕೊಟ್ಟಿದ್ದನು. ಇನ್ನೂ ಎಷ್ಟೋ ಉಪಕಾರಮಾಡಿದ್ದನು. ಮುಂದೆಯೂ ಮಾಡುವವನಾಗಿದ್ದನು. ಆದರೆ ಅವಳು ಕೇವಲ ಅಡುಗೆ ಕೆಲಸಮಾಡುವುದಕ್ಕಾಗಿಯೇ ಕಲಿಕತ್ತೆಗೆ ಹೊರಟಿರುವುದು ? ಅಂತಹ ಪ್ರಾಣಕ್ಕೆ ಪ್ರಾಣ ಕೊಡುವ ತಾಯಿ, ಕಾಹಿಲೆ ಬಿದ್ದಿರುವ ಪ್ರೀತಿ ಪಾತ್ರನಾದ

ತಮ್ಮ, ನಿಃಸಹಾಯವಾದ ದರಿದ್ರ ಸಂಸಾರ ...ಇವೆಲ್ಲವನ್ನೂ ಕಲಿಕತ್ತೆಗೆ ಹೋಗಿ ಅಡುಗೆಮಾಡಿ ಜೀವನ ಕಳೆಯಲೋಸುಗವೇ ಬಿಟ್ಟು ಬಂದಿರ್ರುವುದು? ಅಡುಗೆ ಮಾಡುವೆನೆಂಬ ಮಾತು ನೆಪಕ್ಕೆ ಮಾತ್ರ. ಅವಳಿಗೀಗ ಸಂಪಾದನೆ ಬೇಕು....ಆ ಸಂಪಾದನೆ ಕಲಿಕತ್ತೆ ಬಿಟ್ಟರೆ ಬೇರೆಲ್ಲಿ ಸಾಧ್ಯ. ಹಣ ಸಂಪಾದನೆಯ ಮಾರ್ಗವನ್ನೂ ಅವಳು ಯೋಚಿಸಿ ನಿಷ್ಕರ್ಷೆ ಮಾಡಿದ್ದಾಳೆ. ಮಾಲತಿ ರೂಪವತಿ. ಈ ರೂಪ ತನ್ನ ಶರೀರದಲ್ಲಿ ಶಾಶ್ವತವಾಗೇನೂ ಇರುವುದಿಲ್ಲ. ಅದು ಅವಳಿಗೆ ಗೊತ್ತು. ಕಲಿಕತ್ತೆ ದೊಡ್ಡ ಷಹರು. ಅಲ್ಲಿ ಈ ತನ್ನ ರೂಪವನ್ನು ವಿಕ್ರಯಮಾಡುವುದು—ಛೆ! ಎಷ್ಟು ನಾಚುಗೆಗೇಡು!....ವಿಧಿಯಿಲ್ಲ ಅವಳು ಮನಸ್ಸನ್ನು ಕಲ್ಲುಮಾಡಿಕೊಂಡು ಮಾನ ಮರ್ಯಾದೆಯನ್ನೂ ಸ್ವಭಾವ ಜನ್ಯವಾದ ಪಾಪಭೀತಿಯನ್ನೂ ಗಂಗೆಯಲ್ಲಿ ವಿಸರ್ಜಿಸಿ ಹೊಸವ್ಯಕ್ತಿ ಮಾಲತಿಯಾಗಿ ಜನ್ಮ ತಾಳಿದ್ದಳು.

....ಕಲಿಕತ್ತೆಗೆ ಹೋದರ ತಾನು ಆಸೆಪಟ್ಟದ್ದುದಕ್ಕಿಂತಲೂ ಹೆಚ್ಚು ಹಣ ಸಂಪಾದನೆ ಮಾಡಬಹುದು. ಅಲ್ಲಿ ಅವಳಿಗೆ ಆದರೋಪಚಾರಗಳು ಸಿಗುತ್ತವೆ.

ದರಿದ್ರರ ಹುಡುಗಿ ಐಶ್ವರ್ಯವಂತಳಾಗುತ್ತಾಳೆ. ಇಷ್ಟುದಿನ ಸಂಕಟ ಪಟ್ಟದ್ದು ಮರೆತು ಸುಖದಿಂದ ಜೀವನ ಕಳೆಯುವಳು ...ಇಷ್ಟು ದೃಢ ಪ್ರತಿಜ್ಞೆ ಮಾಡಿದ್ದರೂ ಮತ್ತೆ ಅಳುವುದೇಕೆ?....ಅದು ಅವಳಿಗೇ ಗೊತ್ತು.

* * * *

ಮರುದಿನ ಬೆಳಿಗ್ಗೆ ನೌಕೆಯು ಹಲೂದ್‌ಪುರ ಗಡಿಯನ್ನು ದಾಟಿ ಹೊರಟಿತು. ಮಾಲತಿ ಕಿಟಕಿಯ ಬಾಗಿಲನ್ನು ತೆಗೆದು ನದೀ ಘಟ್ಟದ ಕಡೆ ಕಾತರಳಾಗಿ ನೋಡಿದಳು. ಘಟ್ಟದಲ್ಲಿ ಒಂದು ನರಪ್ರಾಣಿಯಿಲ್ಲ. ಯಾವ ಆಸೆಯಿಂದ ಅವಳು ಆ ಕಡೆ ನೋಡಿದಳೋ ಆ ಆಸೆಯು ಸಫಲವಾಗಲಿಲ್ಲ. ಗ್ರಾಮವನ್ನು ಬಿಟ್ಟು ನೌಕೆಯು ಬಹುದೂರ ಬಂದುಬಿಟ್ಟಿತು. ಅವಳು ಕಿಟಕಿಯನ್ನು ಮುಚ್ಚಿ ಕೆಳಗೆ ಕುಳಿತು ಅಳುವುದಕ್ಕೆ ಮೊದಲು ಮಾಡಿದಳು.

ಜಯಾವತಿ ಹತ್ತಿರ ಬಂದು ಮೈಮೇಲೆ ಕೈಯಿಟ್ಟು "ಇನ್ನು ಅತ್ತೇನು ಬರುತ್ತೆ, ತಂಗಿ, ಅವರಿಗೆ ಕಾಲಬಂದಿತ್ತು. ಗಂಗಾಮಾತೆ ಮಡಿಲಲ್ಲಿತೆಗೆದುಕೊಂಡಳು" ಎಂದು ಸಮಾಧಾನ ಮಾಡಿದಳು. ಅವಳು

ಮಾಲತಿ ಮುಳುಗಿ ಹೋದ ತನ್ನ ಸಂಗಾತಿಯರಿಗಾಗಿ ಅಳುತ್ತಾಳೆ ಎಂದು ಕೊಂಡಿದ್ದಳು. ಮಾಲತಿಯು ಕಣ್ಣೊರಸಿಕೊಂಡು ಎದ್ದುನಿಂತಳು. ಜಯಾವತಿಯು ಅವಳಿಗಿಂತಲೂ ವಯಸ್ಸಿನಲ್ಲಿ ದೊಡ್ಡವಳು. ಮಾಲತಿಯನ್ನು ತಂಗಿಯಂತೆ ಸಂಬೋಧಿಸಿ ಪ್ರೀತಿಸುವಳು. ಅವಳ ಕಷ್ಟದ ಕಥೆಯನ್ನು ಕೇಳಿ ಅವಳಿಗೆ ವಿಪರೀತ ಕನಿಕರವಾಯಿತು. ಈಗಂತೂ ಅವಳು ಕಲಿಕತ್ತೆಯಲ್ಲಿ ಇಳಿದು ಹೋಗುತ್ತಾಳೆಂದು ತಿಳಿದಮೇಲೆ ಅವಳಿಗೆ ಇದ್ದ ವಿಶ್ವಾಸವೂ ಹೆಚ್ಚಿತು.......ಮಾಲತಿಯು ಎದ್ದು ಹೊರಟು ಹೋಗಲು ಪ್ರಯತ್ನಪಟ್ಟಾಗ ಜಯಾವತಿಯು ಅವಳನ್ನು ಹತ್ತಿರ ಕೂಡಿಸಿಕೊಂಡು ಇನ್ನೂ ಆದರದ ಮಾತುಗಳನ್ನಾಡುತ್ತ ಸಂತೈಸಲು ಪ್ರಯತ್ನಪಟ್ಟಳು.

## ೩

ಶ್ರೀ ಕಾಶೀಧಾಮದಲ್ಲಿ ಸಾವಾದರೆ ಶಿವಲೋಕ ಪ್ರಾಪ್ತವಾಗುವು ದೆಂದು ಹಿಂದುಗಳ ನಂಬಿಕೆ. ಅದಕ್ಕಾಗಿಯೇ ಚಿಕ್ಕಮ್ಮ ಕಾಶಿಗೆ ಹೋದಳು. ಮರಳಿ ಬರಲಿಲ್ಲ. ಸದಾನಂದನು ಚಿಕ್ಕಮ್ಮನ ಪುಣ್ಯಶರೀರವನ್ನು ಆ ವಾರಾಣಸೀ ಪ್ರಾಂತದಲ್ಲಿಯೇ ಗಂಗೆಯ ದಡದಲ್ಲಿ ದಹನಮಾಡಿ ಆಕೆಗೆ ಶಿವಲೋಕದಲ್ಲಿ ಚಿರಜೀವನ ಮಾಡಲು ಸುವ್ಯವಸ್ಥೆಮಾಡಿ ಹಲೂದ್‌ಪುರಕೆ ಹಿಂದಿರುಗಿದನು.

ಶೂನ್ಯವಾದ ಮನೆಗೆ ರಾತ್ರಿ ಬಹಳ ಹೊತ್ತಾದ ಮೇಲೆ ಕಾಲಿಟ್ಟು ಹುಚ್ಚು ಸದಾನಂದನು ತಾನೇ ಒಂದಿಷ್ಟು ಅಡುಗೆ ಮಾಡಿಕೊಂಡು ತಿಂದನು. ಹಾರಾಣಮುಖೋಪಾಧ್ಯಾಯರ ಮನೆಗೆ ಹೋಗಿ ಅಲ್ಲಿನ ಸ್ಥಿತಿ ಹೇಗಿ ದೆಯೋ ತಿಳಿದು ಬರೋಣವೆನ್ನಿಸಿತು. ಆದರೆ ಸರಿ ರಾತ್ರಿ. ಎಲ್ಲರೂ ನಿದ್ದೆ ಹೋಗಿರುತ್ತಾರೆ. ಬೆಳಗ್ಗೆ ಬೇಗ ಎದ್ದು ಹೋಗಿ ಬಂದರಾಯಿತು ಎಂದು ಮಲಗಿ ನಿದ್ದೆಮಾಡಿದನು.

ಕಾಶಿಯಲ್ಲಿದ್ದಾಗ ಅವನಿಗೆ ಎಷ್ಟೋ ಸಲ ಅವರ ಮನೆಯ ವಿಷಯ ಜ್ಞಾಪಕಕ್ಕೆ ಬಂದಿತ್ತು. ಹಾರಾಣನ ದುಶ್ಚರಿತ್ರೆ, ಶುಭದಾಳ ಸೌಮ್ಯ ದೂರ ದೃಷ್ಟಿ, ಹತಭಾಗ್ಯೆ ಲಲನಾಳ ಅವಸ್ಥೆ ಎಲ್ಲವೂ ಮನಸ್ಸಿಗೆ ಬಂದು ವ್ಯಾಕುಲ ಪಡಿಸುತ್ತಿದ್ದುವು. ರೋಗಪೀಡಿತಳಾದ ಚಿಕ್ಕಮ್ಮನ ಸೇವೆಮಾಡಿ ಸುಸ್ತಾಗಿ ದ್ದಾಗಲೂ ಈ ನಿರ್ಭಾಗ್ಯರ ಯೋಚನೆ ಮಾಡದೆ ಇರುತ್ತಿರಲಿಲ್ಲ.

ಮಧ್ಯೆ ಒಂದು ಸಲ ಕಾಗದ ಬರೆದು ಸಮಾಚಾರ ತಿಳಿದುಕೊಂಡಿ ದ್ದನು .. ಆ ಮೇಲೆ ಕಾಗದ ಯಾರಿಂದಲೂ ಬರಲಿಲ್ಲ. ಸುಮಾರು ಒಂದು ತಿಂಗಳಾಗಿತ್ತು, ಅವರ ಯಾವ ಸಮಾಚಾರವೂ ಅವನಿಗೆ ತಿಳಿಯದೆ. ಊರಿಗೆ ಹಿಂದಿರುಗಿ ಬಂದು ಮತ್ತೆ ಅವರ ವಿಷಯವಾಗಿ ಯೋಚನೆ ಮಾಡಲು ಶುರುಮಾಡಿದನು. ರಾತ್ರಿ ಬಹಳ ಹೊತ್ತಿನವರೆಗೂ ನಿದ್ದೆ ಯಿಲ್ಲದೆ ಹೊರಳಾಡಿದನು.

ಮರುದಿನ ಬೆಳಿಗ್ಗೆ ಸದಾನಂದಚಕ್ರವರ್ತಿಯು ಗಂಗೆಯ ನೀರು, ಬಿಲ್ವ

ಪತ್ರಾದಿ ವಿಶ್ವೇಶ್ವರನ ನಿರ್ಮಾಲ್ಯ, ಇತರ ಪ್ರಸಾದ ಮುಂತಾದುವುಗಳನ್ನು ತೆಗೆದುಕೊಂಡು ಹಾರಾಣ ಬಾಬುಗಳ ಮನೆಗೆ ಬಂದನು.

ಪ್ರವೇಶಮಾಡುತ್ತಲೂ ದ್ವಾರದಲ್ಲಿಯೇ ಶುಭದಾ ಕಂಡಳು. ಅವಳು ಗುಡಿಸಲು ಪರಕೆಯನ್ನು ಕೈಯಲ್ಲಿ ಹಿಡಿದಿದ್ದಳು. ಸದಾನಂದನನ್ನು ನೋಡಿದೊಡನೆ ಅದನ್ನ ಕೆಳಗೆ ಹಾಕಿ ತಲೆಗೆ ಮುಸುಕನ್ನು ಎಳೆದು ಮೃದುಸ್ವರದಿಂದ "ಯಾವಾಗ ಬಂದೆ, ಸದಾನಂದ" ಎಂದಳು.

"ನಿನ್ನೆ ರಾತ್ರಿ."

"ಎಲ್ಲರೂ ಚೆನ್ನಾಗಿದಾರೆ ತಾನೆ ?"

ಸದಾನಂದನು ದುಃಖಿತಭಾವದಿಂದ ಸ್ವಲ್ಪ ಮಂದವಾಗಿ ನಕ್ಕು "ಎಲ್ಲರೂ ಅಂದರೆ ...ಚಿಕ್ಕಮ್ಮನನ್ನು ಹೊರತು. ಆಕೆ ಕಾಶಿಯಲ್ಲಿಯೇ ಶಾಂತಿ ಪಡೆದಳು" ಎಂದನು.

ಶುಭದಾಗೆ ಅರ್ಥವಾಗದೆ "ಏನು ಪಡೆದಳು ?" ಎಂದಳು.

"ಚಿಕ್ಕಮ್ಮ ಕಾಶೀಧಾಮದಲ್ಲಿಯೇ ಮೃತಳಾದಳು."

ಶುಭದಾಗೆ ಈ ವಿಷಯ ಗೊತ್ತಿರಲಿಲ್ಲ. ಮೊದಲೇ ದುಃಖಿತಳಾಗಿದ್ದ ಅವಳಿಗೆ ಹೊಸವೊಂದು ಶೋಕ ಬಂದಿತು. ಅವಳು ಕಣ್ಣಲ್ಲಿ ನೀರು ಸುರಿಸಿದಳು .ಆಮೇಲೆ ಕಣ್ಣೊರಸಿಕೊಳ್ಳುತ್ತಾ "ಅಪ್ಪಾ . ಸದಾನಂದ .. ನಮ್ಮ .. ಲಲನಾ ಕೂಡ ಇಲ್ಲ " ಎಂದಳು.

ಸದಾನಂದನು ವಿಸ್ಮಿತನಾಗಿ "ಇಲ್ಲ . .?....ಎಲ್ಲಿಗೆ ಹೋದಳು ?" ಎಂದನು.

ಶುಭದಾ ಅಳುತ್ತಲೇ "ಇನ್ನೆಲ್ಲಿಗೆ ಹೋಗುತ್ತಾಳೆ. ಹುಡುಗಿ— ಸಂಸಾರದ ಕಷ್ಟ, ದುಃಖಗಳಿಂದ ದೂರವಾಗಿ ಹೋಗಿದ್ದಾಳೆ. ಈಗ ಐದು ದಿನದ ಹಿಂದೆ ಅವಳು ಉಡುತ್ತಿದ್ದ ಸೀರೆ ಸಿಕ್ಕಿತು .. " ಶುಭದಾ ತಡೆಯಲಾರದೆ ಬಿಕ್ಕಿ ಬಿಕ್ಕಿ ಅಳಲು ಮೊದಲು ಮಾಡಿದಳು.

ಸದಾನಂದನ ಕಣ್ಣುಗಳಲ್ಲಿ ತಕ್ಷಣ ನೀರು ತುಂಬಿತು....ಆದರೆ ಒಂದೆರಡು ಹನಿ ಮಾತ್ರ. ಶುಭದಾ ಶಾಂತಳಾಗುವವರೆಗೂ ಮಾತಾಡದೆ ಗಂಭೀರವಾಗಿ ಕೂತಿದ್ದನು.

ಅವಳು ಅಳು ನಿಲ್ಲಿಸಿ ಕಣ್ಣೊರಸಿಕೊಂಡಮೇಲೆ "ಹೋಗುವ ಮುಂಚೆ

ಏನೂ ಹೇಳಲಿಲ್ಲವೇ ?" ಎಂದನು.

"ಇಲ್ಲ."

"ಹಾರಾಣ ಮಾವ ಎಲ್ಲಿ ?"

ಶುಭದಾ ಪುನಃ ಕಣ್ಣೊರಸಿಕೊಂಡು "ಗೊತ್ತಿಲ್ಲ. ಮೊದಲಿನ ಹಾಗೇ ....ಆಗಾಗ ಮನೆಗೆ ಬರದೇ ಇರುವುದು ನಿನಗೇ ಗೊತ್ತಲ್ಲ."

"ಈಗ ಅವರೇನು ಮಾಡಿಕೊಂಡಿದ್ದಾರೆ ?"

"ಅದೂ ಗೊತ್ತಿಲ್ಲಪ್ಪ."

"ಮಾಧೂ ಹೇಗಿದ್ದಾನೆ ?"

"ಮುಂಚಿನ ಹಾಗೆಯೇ."

"ಉಳಿದವರೆಲ್ಲ ?"

"ಕ್ಷೇಮ."

ಸದಾನಂದನು ಮೇಲಕ್ಕೆದ್ದನು. ಶುಭದಾ "ಈಗ ಮನೆಯಲ್ಲಿ ಅಡುಗೆಗೆ ಯಾರು ?" ಎಂದಳು.

"ನಾನೇ ಮಾಡಿಕೊಳ್ಳುತ್ತೇನೆ."

ಶುಭದಾ ಸ್ವಲ್ಪ ಯೋಚಿಸಿ "ಯಾಕೆ, ಇಲ್ಲೇ ಊಟಮಾಡುವುದಕ್ಕಾಗುವುದಿಲ್ಲವೇ ?" ಎಂದಳು.

"ಯಾಕಾಗುವುದಿಲ್ಲ? ಆದರೆ ಅವಶ್ಯಕವಿಲ್ಲ. ಅಡುಗೆ ಮಾಡುವುದು ನನಗೇನೂ ಕಷ್ಟವಿಲ್ಲ."

"ಹೇಗಾದರೂ ಆಗಲಿ, ನೀನು ಇಲ್ಲಿಯೇ ಊಟಮಾಡು."

ಸದಾನಂದನು ಸ್ವಲ್ಪ ಯೋಚಿಸಿ "ಆದರೆ ಈವತ್ತು ಬೇಡ. ಈವತ್ತು ನಾನು ಚಿಕ್ಕಮ್ಮನಿಗೆ ತರ್ಪಣ ಕೊಡಬೇಕು."

ಶುಭದಾ "ಹೌದು, ಮರೆತೇ ಹೋದೆ" ಎಂದು ಬೇರೆ ಮಾತಾಡಲಿಲ್ಲ.

* * * *

ಸದಾನಂದನು ಮನೆಗೆ ಬಂದು ತನ್ನ ಕೋಣೆಯನ್ನು ಪ್ರವೇಶಿಸಿ ಬಾಗಿಲು ಮುಚ್ಚಿಕೊಂಡು ನೆಲದ ಮೇಲೆಯೇ ಸುಮ್ಮನೆ ಮಲಗಿದನು. ಆಗ ಬೆಳಿಗ್ಗೆ ಎಂಟು ಘಂಟೆ. ಪುನಃ ಅವನು ಎದ್ದಾಗ ಸಾಯಂಕಾಲವಾಗಿತ್ತು. ಹೊರಗೆ ಚಂದ್ರ ಮೂಡಿ ಬೆಳದಿಂಗಳು ಹರಡಿತ್ತು.

ಸದಾನಂದನು ಎದ್ದು—ಏನು ತೋಚಿತೋ ಏನು ಕಥೆಯೋ, ಹೊರಗೆ ಬಂದು ನೆಟ್ಟಗೆ ಒಂದು ಚಿಕ್ಕ ತೋಟವನ್ನು ಹಾದು ಶಾರದಾ ಚರಣನ ಮನೆಗೆ ಬಂದನು. ಬಂದು ಅವನ ಕೊಠಡಿಯ ಕಿಟಕಿಯ ಬಳಿ ನಿಂತು ಸ್ವಲ್ಪ ಹೊತ್ತು ಸುಮ್ಮನೆ ಆ ಕಡೆ ನೋಡುತ್ತಾ ಇದ್ದನು. ಆ ಮೇಲೆ ಮನಸ್ಸು ಮಾಡಿ "ಶಾರದಾ" ಎಂದು ಕೂಗಿದನು.

ಶಾರದಾಚಂದ್ರನು ಮನೆಯಲ್ಲಿದ್ದನು. ಇವನ ಕೂಗು ಕೇಳಿಸಿತು. ಕಿಟಕಿಯ ಬಳಿ ಬಂದು "ಯಾರು ?" ಎಂದನು.

"ನಾನು !"

"ಯಾರು, ಸದಾನಂದನೇ?"

"ಹೌದು, ಸದಾನಂದ."

"ಯಾವಾಗ ಬಂದೆ ?"

"ನಿನ್ನೆ ರಾತ್ರಿ."

"ಅಲ್ಲೇಕೆ ನಿಂತಿದ್ದೀಯ ಬಾ; ಮನೆಯೊಳಕ್ಕೆ ಬಾ."

"ಇಲ್ಲ, ನಾನು ಬರುವುದಿಲ್ಲ. ನೀನೇ ಹೊರಗೆ ಬಾ."

ಶಾರದಾಚರಣನು ಹೊರಗೆ ಬರುತ್ತಲೂ ಸದಾನಂದನು "ಲಲನಾ ಸತ್ತುಹೋದಳು, ಗೊತ್ತೇ ?" ಎಂದನು.

ಶಾರದಾಚಂದ್ರನು ವಿಷಣ್ಣಭಾವದಿಂದ "ಗೊತ್ತು" ಎಂದನು.

"ಏಕೆ ಸತ್ತು ಹೋದಳು ಎಂದೇನಾದರೂ ಗೊತ್ತೇ ?"

"ಗೊತ್ತಿಲ್ಲ. ಆದರೆ ಮನೆಯಲ್ಲಿನ ದುಃಖ ಬಡತನ ನೋಡಲಾರದೆ ಆತ್ಮಹತ್ಯೆ ಮಾಡಿಕೊಂಡಿರಬಹುದು ಅಂದುಕೊಂಡಿದ್ದೇನೆ."

"ಬೇರೆ ಏನೂ ಗೊತ್ತಿಲ್ಲವೇ ?"

"ಏನೂ ಗೊತ್ತಿಲ್ಲ."

ಸದಾನಂದನು ಕಣ್ಣಲ್ಲಿ ಬೆಂಕಿ ಸುರಿಸುತ್ತಾ "ನೀನು ಪಾಷಂಡ. ಕಲ್ಲಾದರೂ ವಾಸಿ. ಮನೆಯಲ್ಲಿನ ಬಡತನ, ದುಃಖ ತಾಳಲಾರದೆ ಒಂದು ಜೀವ ತಾನಾಗಿ ಸತ್ತರೆ ನೀನು ಎದುರಿಗಿದ್ದು ನೋಡುತ್ತಾ ಇದ್ದೆಯಾ ?"

"ಹುಚ್ಚು" ಸದಾನಂದನ ಭಾವಭಂಗಿಗಳನ್ನು ನೋಡಿ ಶಾರದಾ ಚರಣನು ಸ್ವಲ್ಪ ಹೆದರಿದನು. ಅದಕ್ಕೆ ಕಾರಣವಿತ್ತು. ಅವರಿಬ್ಬರೂ

ಚಿಕ್ಕಂದಿನಿಂದಲೂ ಒಡನಾಡಿಗಳು. ಒಬ್ಬರನ್ನೊಬ್ಬರು ಚೆನ್ನಾಗಿ ತಿಳಿದಿದ್ದರು ಶಾರದಾಚರಣನ ಬಾಲ್ಯದ ವಿಷಯಗಳೆಷ್ಟೋ ಸದಾನಂದನಿಗೆ ಗೊತ್ತು. ಆ ವಿಷಯಗಳನ್ನು ಕುರಿತೇ ಸದಾನಂದ ಎತ್ತಿ ಆಡಿ ಬೈಯಲು ಬಂದಿದ್ದಾನೆಂದು ತಿಳಿದು, "ಹಿಂದೆ ನಡೆದಿದ್ದೆಲ್ಲಾ ಈಗ ಎತ್ತಿ ಆಡಿ ಪ್ರಯೋಜನವೇನು, ಸದಾನಂದ? ಆದದ್ದೆಲ್ಲಾ ಆಗಿಹೋಯಿತು. ನಮ್ಮಪ್ಪ ಇನ್ನೂ ಬದುಕಿದ್ದಾನೆ ಎನ್ನುವುದನ್ನು ಮರೆಯಬೇಡ. ಅವನ ಆಜ್ಞೆಯಿಲ್ಲದೆ ನಾನು ನನ್ನ ಇಷ್ಟಬಂದವರಿಗೆ ಸಹಾಯಮಾಡುವುದಕ್ಕಾಗುತ್ತದೆಯೇ, ನೀನೇ ಹೇಳು. ಅಲ್ಲದೆ, ತನ್ನ ಸ್ಥಿತಿ ಹೇಗಿದೆ ಎಂದು ಅವಳು ನನ್ನ ಹತ್ತಿರ ಏನೂ ಹೇಳಲಿಲ್ಲ" ಎಂದನು.

ಸದಾನಂದನು ವಿಸ್ಮಿತನಾದನು.

"ಏನೂ ಹೇಳಲಿಲ್ಲವೇ? ಏನು ಹೇಳುವುದಕ್ಕೂ ನಿನ್ನ ಬಳಿ ಬರಲಿಲ್ಲವೇ ?"

"ಆಗ ಬರಲಿಲ್ಲ. ಆದರೆ ಅದಕ್ಕೆ ಬಹಳ ದಿನದ ಹಿಂದೆ ಒಂದು ಸಲ ಬಂದಿದ್ದಳು."

"ಏಕೆ? ಎಲ್ಲಿಗೆ ಬಂದಿದ್ದಳು ?"

"ಸುಮಾರು ಒಂದು ತಿಂಗಳ ಹಿಂದೆ ಬಹಳ ಹೊತ್ತಾದ ಮೇಲೆ ನನ್ನನ್ನು ಶಿವಾಲಯಕ್ಕೆ ಬರಹೇಳಿ ಅವಳು ಹೇಳಿ ಕಳುಹಿಸಿದಳು. ಮನಸ್ಸಿಲ್ಲದಿದ್ದರೂ ನಾನು ಹೋದೆ."

"ಮನಸ್ಸಿರಲಿಲ್ಲವೇ ?"

"ಹೌದು. ಕಳೆದು ಹೋದದ್ದನ್ನು ಇನ್ನು ಏಕೆ ಕೆದಕಬೇಕೆಂದು."

"ಆ ಮೇಲೆ ?"

"ಮದುವೆ ಮಾಡಿಕೊಳ್ಳುತ್ತೀಯಾ? ಎಂದು ಕೇಳಿದಳು."

"ಯಾರನ್ನ ?"

"ತನ್ನನ್ನೇ."

"ತನ್ನನ್ನೇ? ಲಲನಾಳನ್ನೆ? ನೀನು ಏನು ಹೇಳಿದೆ ?"

ಚಿಕ್ಕ ವಯಸ್ಸಿನ ವಿಷಯಗಳನ್ನು ನೆನಪಿಗೆ ತಂದುಕೊಂಡು ಶಾರದಾಚರಣನು ಬಹಳ ವ್ಯಥೆಪಟ್ಟನು. "ನಾನು....ನಾನೇನು ಮಾಡಲಿ ಹೇಳು ...

ಅಪ್ಪ ಇನ್ನೂ ಬದುಕಿದ್ದಾರೆ..." ಎಂದನು.

ಕೋಪದಿಂದ, ಸಂಕಟದಿಂದ ತಡೆಯಲಾರದೆ ಸದಾನಂದನು "ಆಹಾ, ನಿಮ್ಮಪ್ಪ ಇನ್ನೂ ಬದುಕಿದ್ದಾರೆ, ಲಾಭವೇನು ?" ಎಂದನು.

ಆಗ ಶಾರದಾಚರಣನಿಗೆ ಕೋಪ ಬಂತು. ತಂದೆಯ ವಿಷಯವಾಗಿ ಯಾವ ನಿಂದೆಯನ್ನೂ ಅವನು ಸಹಿಸುತ್ತಿರಲಿಲ್ಲ. "ಲಾಭವೋ ಇಲ್ಲವೋ ಅದು ಅವರಿಗೆ ಗೊತ್ತು. ಆ ವಿಷಯದಲ್ಲಿ ಪ್ರವೇಶಮಾಡುವುದಕ್ಕೆ ನಮಗಾರಿಗೂ ಅಧಿಕಾರವಿಲ್ಲ. ಅದು ಸರಿಯೂ ಅಲ್ಲ. ಅದು ಹೇಗಾದರೂ ಇರಲಿ. ನಾನು ಅವಳಿಗೆ ಹೇಳಬೇಕಾಯಿತು. ಮದುವೆ ಮಾಡಿಕೊಳ್ಳು ವುದಕ್ಕೆ ಸಾಧ್ಯವಿಲ್ಲವೆಂದು."

"ಅದು ಕೇಳಿ ಅವಳು ಹೊರಟು ಹೋದಳೇ ?"

"ಇಲ್ಲ. ಛಲನಾಳನ್ನು ಮದುವೆ ಮಾಡಿಕೋ ಎಂದಳು "

"ನೀನು ಒಪ್ಪಿಕೊಳ್ಳಲಿಲ್ಲ ?"

ಶಾರದಾಚರಣನು ಸದಾನಂದನ ಮುಖವನ್ನು ನೋಡಿ ಅವನ ಮನಸ್ಸಿನ ಭಾವವನ್ನು ಊಹಿಸಿ ಸ್ವಲ್ಪ ನಕ್ಕು "ಒಪ್ಪದೇನೂ ಇಲ್ಲ. ಅಪ್ಪ ಆಗಲಿ ಅಂದರೆ ಮಾಡಿಕೊಳ್ಳುತ್ತೇನೆ ಅಂದೆ."

"ನಿಮ್ಮಪ್ಪ ಒಪ್ಪಿಕೊಳ್ಳಲಿಲ್ಲ."

"ಇಲ್ಲ."

"ಏಕೆ ?"

"ಅದು ಹೇಳುವುದಕ್ಕೆ ನನಗೆ ಇಷ್ಟವಿಲ್ಲದಿದ್ದರೂ ನೀನು ಕೇಳಿದೆ ಎಂದು ಹೇಳುತ್ತೇನೆ, ಕೇಳು. ಅಪ್ಪನಿಗೆ ನನ್ನ ಮದುವೆಯಿಂದ ಆದಷ್ಟು ದುಡ್ಡು ಸಂಪಾದನೆ ಮಾಡುವ ಆಸೆಯಿದೆ. ಹಾರಾಣಬಾಬು ಹಾಗೆ ದುಡ್ಡು ಕೊಡಲು ತಯಾರಿದ್ದನೇನು ?"

ಸದಾನಂದನು ಮುಖವನ್ನು ಕಠಿಣ ಮಾಡಿಕೊಂಡು "ನಿಮ್ಮಪ್ಪನಿಗೆ ಎಷ್ಟು ದುಡ್ಡು ಬೇಕು ?" ಎಂದನು.

"ಅದು ನನಗೆ ಗೊತ್ತಿಲ್ಲ."

"ದುಡ್ಡಿನಾಸೆ ತೀರಿಸಿದರೆ ಬೇರೆ ಏನೂ ಆಕ್ಷೇಪಣೆ ಇಲ್ಲವಲ್ಲ ?"

"ಬಹುಶಃ ಇರಲಾರದು."

"ನಿನ್ನ ಸ್ವಂತ ಆಕ್ಷೇಪಣೆ ಏನೂ ಇಲ್ಲವಲ್ಲ ?"

"ಸ್ವಲ್ಪವೂ ಇಲ್ಲ."

"ಹಾಗಾದರೆ ನೋಡೋಣ" ಎಂದು ಸದಾನಂದನು ಹೊರಡಲು ದ್ಯುಕ್ತನಾದನು. ಶಾರದಾಚರಣನು "ಎಲ್ಲಿಗೆ ಹೊರಟೆ? ಸ್ವಲ್ಪ ಕೂಡುವು ದಿಲ್ಲವೆ ?" ಎಂದನು

"ಇಲ್ಲ."

"ಸದಾನಂದ, ನನ್ನದೇನೂ ತಪ್ಪಿಲ್ಲವಯ್ಯಾ, ನಂಬಿದರೆ ನಂಬು, ಬಿಟ್ಟರೆ ಬಿಡು."

"ಇಲ್ಲದೇ ಇರಬಹುದು. ಅದು ದೇವರಿಗೆ ಗೊತ್ತು. ನಾನು ಹೇಳಲಾರೆ."

"ನಿನಗೆ ನನ್ನ ಮೇಲೆ ಕೋಪವೇ ?"

"ಇಲ್ಲ."

* * * *

ಸದಾನಂದನು ಮನೆಗೆ ಹಿಂದಿರುಗಿ ಬಹಳ ಹೊತ್ತು ಕೋಣೆಯಿಂದ ಕೋಣೆಗೆ ಸುತ್ತಾಡಿದನು. ಆ ಮೇಲೆ ಮತ್ತೆ ಹೊರಗೆ ಬಂದನು. ನದಿಯ ದಿಕ್ಕಿಗೆ ಹೊರಟನು. ಭಾಗೀರಥಿಯ ಚಿಕ್ಕ ಚಿಕ್ಕ ಅಲೆಗಳು ಘಟ್ಟದ ಸೋಪಾನಗಳಿಗೆ ಓಡಿ ಬಂದು ಹೊಡೆದು ಮತ್ತೆ ಓಡಿಹೋಗುತ್ತವೆ; ಮತ್ತೆ ಬಂದು ಹೊಡೆಯುತ್ತವೆ; ಹಿಂದೆ ಹೋಗುತ್ತವೆ. ಅವುಗಳ ಈ ಚಿನ್ನಾಟ ವನ್ನು ಸೋಪಾನದ ಮೇಲೆ ಕುಳಿತು ಸದಾನಂದನು ನೋಡುತ್ತಿದ್ದನು. ಎಷ್ಟು ಹೊತ್ತು ಹೀಗೆ ನೋಡುತ್ತಿದ್ದನೋ ತಿಳಿಯದು. ದೂರದಲ್ಲಿ ನೌಕೆಯೊಂದು ಗಾಳಿಗೆ ಪಟಗಳನ್ನು ಬಡಿಯುತ್ತಾ ಪ್ರಶಾಂತವಾದ ಗಂಗೆಯ ವಕ್ಷದಲ್ಲಿ ಗಂಭೀರವಾಗಿ ಬರುತ್ತಿದೆ. ಸದಾನಂದನು ಅನ್ಯಮನಸ್ಕನಾಗಿ ಆ ಕಡೆ ಸ್ವಲ್ಪ ಹೊತ್ತು ನೋಡುತ್ತಿದ್ದು ಆ ಮೇಲೆ ಎದ್ದು ಸೋಪಾನಗಳ ನ್ನಿಳಿದು ಕಡೆಯ ಮೆಟ್ಟಲಿನ ಮೇಲೆ ಕೂತು ಕಾಲುಗಳನ್ನು ನೀರಿನಲ್ಲಿ ಇಳಿಯಬಿಟ್ಟು ಲಕ್ಷ್ಯವನ್ನು ಆಕಾಶದ ಕಡೆ ತಿರುಗಿಸಿ ಹಾಡಲು ಆರಂಭಿಸಿದನು.

* * * *

# ೪

ಮಲ್ಲಿಗೆಯ ರಾಶಿಯಂತೆ ಚೆಲ್ಲಿದ್ದ ಆ ಬೆಳದಿಂಗಳ ರಾತ್ರಿಯಲ್ಲಿ, ಗಂಗಾ ಪ್ರವಾಹದಲ್ಲಿ ಸುರೇಂದ್ರನಾಥನ ನೌಕೆಯು ಉತ್ತರದಿಂದ ದಕ್ಷಿಣಕ್ಕೆ ತಿರುಗಿ ಸಾಗಿ ಹೋಗುತ್ತಿದೆ. ಮೇಲಂತಸ್ತಿನಲ್ಲಿ ಸುರೇಂದ್ರನಾಥನೂ ಜಯಾವತಿಯೂ ಮಾತಾಡಿಕೊಳ್ಳುತ್ತಿದ್ದಾರೆ. ಕೆಳಗಡೆ ಕಿಟಕಿಯನ್ನು ತೆರೆದು ಮಾಲತಿಯು ಗಂಗಾ ನದಿಯ ಅಲೆಗಳನ್ನು ನೋಡುತ್ತಾ ಕಣ್ಣೊರಸಿಕೊಳ್ಳುತ್ತಾ ಇದ್ದಾಳೆ. ಇನ್ನು ಸ್ವಲ್ಪ ಮುಂದೆ ಹೋದರೆ ಹಲೂದ್‌ಪುರ ಸಿಕ್ಕುತ್ತದೆ....ಊರಿಗೆ ಹೊರಗೆ ಇದ್ದ ನಾಗಕೇಸರದ ಹೂವಿನ ಗಿಡ ಕಣ್ಣಿಗೆ ಬೀಳುತ್ತಿದೆ. ಪಕ್ಕದಲ್ಲಿಯೇ ನದಿಯ ಅಲೆಗಳ ಹೊಡೆತದಿಂದ ಸೋಪಾನಗಳೂ ಟಪಕ್, ಟಪಕ್ ಎಂದು ಶಬ್ದಮಾಡುತ್ತಿವೆ. ಅದರ ಹಿಂದೆಯೇ ಹಲೂದ್ ಪುರ ಗ್ರಾಮವು ನಿಶ್ಶಬ್ದವಾಗಿ ನಿದ್ರೆಮಾಡುತ್ತಿದೆ.

ಮಾಲತಿಯು ನಿದ್ರೆ ಮಾಡುತ್ತಿದ್ದ ಆ ಊರಿನ ಪ್ರತಿಯೊಬ್ಬ ಹೆಂಗಸು, ಗಂಡಸನ್ನೂ ಮನಸ್ಸಿಗೆ ತಂದುಕೊಂಡು ಕೂತಿದ್ದಾಳೆ. ಸ್ನಾನ ಮಾಡಿ ಮೆಟ್ಟಲುಗಳ ಮೇಲೆ ಬಟ್ಟೆಗಳನ್ನೊಗೆಯುತ್ತಿದ್ದುದು ಅವಳಿಗೆ ಜ್ಞಾಪಕಕ್ಕೆ ಬಂತು. ಲಲನಾ ಹೋದಳು. ಈಗ ಇರುವುದು ಮಾಲತಿ.

ಆದರೂ ಶುಭದಾಳನ್ನೂ, ಮಾಧವನನ್ನೂ, ಛಲನಾಳನ್ನೂ ಅವಳು ಮರೆಯಲಾಗಲಿಲ್ಲ. ಸದಾನಂದನು ಅವಳ ಮನಸ್ಸಿನ ಅರ್ಧಭಾಗವನ್ನು ಆಕ್ರಮಿಸಿಕೊಂಡು ಕೂತಿದ್ದಾನೆ. ಅವನ ಹಾಡು ಕಿವಿಗಳಲ್ಲಿ ಪ್ರತಿಧ್ವನಿಸುತ್ತಿದೆ. ಹಾಗೆ ಸದಾನಂದನಲ್ಲದೆ ಬೇರೆ ಯಾರು ಹಾಡಬಲ್ಲರು. ಸ್ವಲ್ಪ ಮುಂದೆ ಹೋಗುತ್ತಲೂ ದಡದ ಮೆಟ್ಟಲ ಮೇಲೆ ಯಾರೋ ಕೂತು ನೀರಲ್ಲಿ ಕಾಲಾಡಿಸುತ್ತಿರುವಂತೆ ಕಂಡಿತು ...ಆಗ ಹಾಡೂ ನಿಂತಿತು. ಅವನು ಯಾರಾಗಿರಬಹುದು? ಖಂಡಿತ ಸದಾನಂದನೇ... ಬೇರೆ ಯಾರೂ ಅಲ್ಲ!

ಆ 'ಹುಚ್ಚ'ನಲ್ಲವೆ ಇಂತಹ ಸರಿ ರಾತ್ರಿಯಲ್ಲಿ ಗಂಗೆಯ ಬಳಿ ಹಾಡಲು ಯಾರು ಬರುತ್ತಾರೆ? ಮಾಲತಿಗೆ ಅಳು ಬಂದಿತು. ರಾತ್ರಿ ಬಹಳ ಹೊತ್ತಿನವರೆಗೂ ಅವಳು ಅತ್ತಳು. ಆ ಮೇಲೆ ನಿದ್ದೆ ಹೋದಳು .

ಎಚ್ಚತ್ತಾಗ ಸೂರ್ಯ ಬಹಳ ಮೇಲಕ್ಕೆ ಬಂದಿದ್ದನು. ಅವಳಿಗೆ ಮೇಲಕ್ಕೇಳಲಾಗಲಿಲ್ಲ. ತಲೆ ನೋಯುತ್ತಿತ್ತು. ಮೈ ಸುಡುತ್ತಿತ್ತು. ದಾಸಿಯು ಹತ್ತಿರ ಬಂದು ಮೈ ಮುಟ್ಟಿ "ನಿಮಗೆ ಜ್ವರ ಬಂದಿದೆಯಮ್ಮಾ?" ಎಂದಳು.

ಮಾಲತಿ ಉತ್ತರ ಕೊಡಲಿಲ್ಲ.

ಜಯಾವತಿಯು ಬಂದು ತಲೆ ಮುಟ್ಟಿ ಕಿಟಕಿಯ ಬಾಗಿಲು ತೆಗೆದಿದ್ದುದನ್ನು ನೋಡಿ "ಹೀಗೆ ಕಿಟಕಿ ತೆಗೆದು ಮಲಗಿದರೆ ಚಳಿ ಗಾಳಿ ಬೀಸಿ ಜ್ವರ ಬರದೆ ಹೋಗುತ್ತದೆಯೇ?" ಎಂದಳು.

"ನಿದ್ದೆ ಬಂದು ಬಿಟ್ಟಿತು. ಕಿಟಕಿ ಮುಚ್ಚಲು ಮರೆತು ಹೋದೆ" ಎಂದು ಮಾಲತಿಯೆಂದಳು.

ಸುರೇಂದ್ರನು ಬಂದು ನೋಡಿ ತನ್ನ ಹತ್ತಿರಿದ್ದ ಹೋಮೋಪಥಿ ಗುಳಿಗೆಗಳನ್ನು ಕೊಟ್ಟು ಜಯಾವತಿಯನ್ನು ಹತ್ತಿರವೇ ಕೂತು ನೋಡಿಕೊಳ್ಳೆಂದು ಹೇಳಿದನು. ಕಿಟಕಿಗಳ ಬಾಗಿಲುಗಳೆಲ್ಲಾ ಮುಚ್ಚಿವೆ. ನೌಕೆಯು ಹೋಗುತ್ತಿದೆಯೋ, ಸ್ಥಿರವಾಗಿ ನಿಂತುಕೊಂಡೇ ಇದೆಯೋ ಮಾಲತಿ ತಿಳಿಯುವಂತೆಯೇ ಇಲ್ಲ.

ಜಯಾವತಿ ಹೊರತು ಕೊರಡಿಯಲ್ಲಿ ಯಾರೂ ಇಲ್ಲದ್ದನ್ನು ನೋಡಿ "ಅಕ್ಕಾ, ನಾವು ಎಷ್ಟು ದೂರ ಬಂದಿದ್ದೇವೆ?" ಎಂದು ಮಾಲತಿ ಕೇಳಿದಳು.

"ಸುಮಾರು ಎಂಟು ಮೈಲಿ ಬಂದಿದ್ದೇವೆ."

"ಕಲಿಕತ್ತೆಗೆ ಇನ್ನೂ ಎಷ್ಟು ದೂರ ಹೋಗಬೇಕು?"

"ಇನ್ನೆರಡು ದಿನದ ಪ್ರಯಾಣ."

ಮಾಲತಿಯು ಏನೋ ಯೋಚಿಸಿ "ಆದರೆ ಅಕ್ಕಾ, ಅಷ್ಟರಲ್ಲಿ ನನ್ನ ಜ್ವರ ವಾಸಿಯಾಗದೆ ಹೋದರೆ?" ಎಂದಳು.

ಜಯಾವತಿ ಅವಳ ಅರ್ಥವನ್ನು ಗ್ರಹಿಸಿ

"ಆಗದೆ ಹೋದರೆ? ಆಗದೇ ಹೋದರ ಏನು? ನಾವು ನಿನ್ನನ್ನು ಈ ನೀರಿನಲ್ಲಿ ಬಿಸಾಡಿ ಮುಂದೆ ಹೋಗುತ್ತೇವೆ" ಎಂದು ನಕ್ಕಳು. ಆದರೆ ಅವರಿಬ್ಬರ ನಗುವಿಗೂ ಬಹಳ ವ್ಯತ್ಯಾಸವಿತ್ತು. ಮಾಲತಿಯೆಂದಳು—

"ಅಕ್ಕಾ,....ಹಾಗೆ ಬಿಸಾಡಿದರೆ ಎಲ್ಲರಿಗೂ ಕ್ಷೇಮ."

ಜಯಾವತಿಯು ಮುಖ ಕಪ್ಪಾಗಿ "ಛೀ, ಎಂತಹ ಮಾತಾಡುತ್ತೀ?" ಎಂದು ಗದರಿಸಿದಳು. ತನ್ನ ಹಾಸ್ಯದ ಮಾತನ್ನು ಇವಳು ಹೀಗೆ ತಿರುಗಿ ಸುತ್ತಾಳೆಂದು ಅವಳು ಅಂದುಕೊಂಡಿರಲಿಲ್ಲ.

ಮಾಲತಿಯು ಸುಮ್ಮನಿದ್ದಳು. ನಿಶ್ಶಬ್ದವಾಗಿ ಅವಳು ಅದೇ ಯೋಚನೆ ಮಾಡುತ್ತಿದ್ದಳು. ಜಯಾವತಿಯ ಮಾತು ಸತ್ಯವಾದರೆ ಹೇಗೆ ಇರುತ್ತದೆ? ಒಳ್ಳೆಯದೇ, ಇಲ್ಲವೇ? ಸಾಯಲು ಅವಳಿಗೆ ಸಾಹಸ ಬರಲಿಲ್ಲ. ಅವಳನ್ನು ಚೆನ್ನಾಗಿ ಪ್ರಶ್ನೆ ಮಾಡಿದರೆ ನಾವಿಗಿಂತಲೂ ಹೆಚ್ಚು ನೋವನ್ನನುಭವಿಸುತ್ತಿದ್ದಾಳೆ. ಆದರೂ ಸಾಯಲು ಮನಸ್ಸು ಬರುವುದಿಲ್ಲ. ಅವಳು ಆಗ ಏನು ಮಾಡಬೇಕೆಂದಿದ್ದಾಳೋ ಅದರಿಂದಾಗುವ ದುಃಖವು ಬಹುಶಃ ಅಷ್ಟು ಇರಲಾರದು. ಅವಳ ಕಣ್ಣಿಂದ ಒಂದು ತೊಟ್ಟು ನೀರು ಬಿತ್ತು

ಜಯಾವತಿಯು ಕನಿಕರದಿಂದ ಅವಳ ಕಣ್ಣೊರಸಿ "ಯಾಕಮ್ಮಾ ಹಾಗೆಲ್ಲ ಯೋಚನೆ ಮಾಡುತ್ತಿ? ಚಳಿ ಗಾಳಿ ತಗುಲಿ ಮೈ ಸ್ವಲ್ಪ ಬೆಚ್ಚಗಾಗಿ ಇರಸುಮುರಸಾಗಿದೆಯೋ ಏನೋ. ಅದು ಹೊರತು ಬೇರೆ ಗಾಬರಿ ಪಡಬೇಕಾದಂತಹುದೇನೂ ಆಗಿಲ್ಲ" ಎಂದು ಸ್ವಲ್ಪ ತಡೆದು ಯೋಚಿಸಿ, "ಒಂದು ವಕ್ಷ ಹೆಚ್ಚಿದರೂ ಹತ್ತಿರವೇ ಕಲಿಕತ್ತೆ ಇದೆ. ಅಲ್ಲಿ ಡಾಕ್ಟರುಗಳಿಗೆ ಅಭಾವವೇನೂ ಇಲ್ಲವಲ್ಲ!" ಎಂದಳು.

"ಅಭಾವವಿಲ್ಲ ನಿಜ, ಆದರೆ ಪ್ರಯೋಜನವೂ ಇಲ್ಲ" ನೌಕೆಯು ಕಲಿಕತ್ತೆಯ ರೇವಿಗೆ ಬಂದಾಗ ಮಾಲತಿಗೆ ಜ್ವರ ಪೂರ್ತಿಯಾಗಿ ನಿಂತಿತ್ತು. ಆದರೆ ಮೈಯಲ್ಲಿ ತುಂಬಾ ಸುಸ್ತು. ಊಟ ಇನ್ನೂ ಸರಿಯಾಗಿ ಸೇರುವುದಿಲ್ಲ. ನೌಕೆ ಕಲಿಕತ್ತೆಗೆ ಸ್ವಲ್ಪ ದೂರದಲ್ಲಿ ಎದುರು ತೀರದಲ್ಲಿ ಲಂಗರು ಬಿಟ್ಟಿತ್ತು. ಕಿಟಕಿಯ ಬಾಗಿಲು ತೆಗೆದು ಮಾಲತಿ ಹೊರಗೆ ನೋಡಿದಳು. ಆ ನೌಕೆಗಳ, ದೊಡ್ಡ ಪುಟ್ಟ ಜಹಜುಗಳ ಸಮೂಹ, ಆ ಕಾರ್ಖಾನೆಗಳ ಸಂದಣಿ, ಆ ಅಂತರಿಕ್ಷಕ್ಕೇರಿದ್ದ ಮಹಾ ಸೌಧಗಳ ಅಂತಸ್ತುಗಳ ಸಮುದ್ರ . .ಇವುಗಳನ್ನು ನೋಡಿ ಅವಳಿಗೆ ದಿಗ್ಭ್ರಮೆಯಾಯಿತು. ಇದೇ ಏನು ಕಲಿಕತ್ತೆ? ಅವಳಿಗೆ ಭಯವಾಯಿತು. ಹಾಗಾದರೆ ಇಂತಹ ಅರಮನೆಗಳ ಅರಣ್ಯದಲ್ಲಿ, ಇಷ್ಟು ನಾನಾ ಶಬ್ದಗಳ ಕೋಲಾಹಲದಲ್ಲಿ ನನ್ನ ಕಥೆಯನ್ನು

ಕೇಳುವವರು ಯಾರು? ಇಂತಹ ಕರ್ತವ್ಯನಿರತ ನಿಬಿಡವಾದ ಜನ ಜಂಗುಳಿಯಲ್ಲಿ ಯಾರು ಅವಳ ಕಡೆ ನೋಡುವವರು?....ಇಲ್ಲ ...ಹಾಗೆ ಯೋಚಿಸಿ ಫಲವಿಲ್ಲ. ಅವಳು ಏನಾದರೂ ಮಾಡಿ ಹೋಗಲೇಬೇಕು. ಯಾರಿಗೋಸ್ಕರ ಈ ದುಸ್ಸಾಹಸಕ್ಕೆ ಈ ಭಯಂಕರ ಮಾನಹೀನ ಸಲಹೆಗೆ ಮನಸ್ಸು ಮಾಡಿದ್ದಾಳೋ, ಯಾರ ಮುಖಗಳನ್ನು ನೋಡಿ ಈ ರುದ್ರನರಕದಲ್ಲಿ ಮುಳುಗಲು ತೊಡಗಿದ್ದಾಳೋ, ಇಹಪರಗಳೆರಡರ ಯೋಚನೆಯನ್ನೂ ತ್ಯಜಿಸಿದ್ದಾಳೋ, ಆ ಮುಖಗಳನ್ನು ಇಷ್ಟು ಬೇಗ, ಇಷ್ಟು ಸುಲಭವಾಗಿ ಮರೆಯಲು ಸಾಧ್ಯವಿಲ್ಲ. ಇವತ್ತಿಲ್ಲದಿದ್ದರೂ, ಈ ಸದ್ಯದ ಆಶ್ರಯವನ್ನು ಎಂದಾದರೂ ಬಿಟ್ಟು ಹೋಗಲೇಬೇಕಾಗುತ್ತದೆ ಹಾಗೆ ಆಗಲೇ ಬೇಕಾಗಿರುವಾಗ, ಬೇರೆ ಭಯವೇನು ಬಂತು?

ಅವಳು ಹೊರಡಲು ಸಂಕಲ್ಪಮಾಡಿ ಬಿಟ್ಟಿದ್ದಳು. ಆದರೆ ಸುರೇಂದ್ರನು ನೌಕೆ ಈ ರೇವಿನಲ್ಲಿ ಮೂರು ನಾಲ್ಕು ದಿನಗಳು ಇರುತ್ತದೆ ಎಂದು ಪ್ರಕಟ ಮಾಡಿದನು.

ಮಾಲತಿಯ ಆರೋಗ್ಯ ಮೊದಲಿನಂತೆ ಆದಮೇಲೆ ಅವಳಿಗೆ ಎಲ್ಲಿಗೆ ಇಷ್ಟವೋ ಅಲ್ಲಿಗೆ ಹೋಗಬಹುದು. ಅಲ್ಲಿಯವರೆಗೆ ನೌಕೆ ಇಲ್ಲಿಯೇ ಇರುತ್ತದೆ.

ಮಾಲತಿ ಈ ಮಾತು ಕೇಳಿ ಮನಸ್ಸಿನಲ್ಲಿ ಅವನಿಗೆ ಬಾರಿಬಾರಿಗೂ ಧನ್ಯವಾದ ಮಾಡಿದಳು. ಆಂತರಿಕವಾಗಿ ಅವಳು ಇದನ್ನೆಲ್ಲ ಆಶಿಸಿದ್ದಳು. ಆದರೂ .. ಎಷ್ಟೇ ಪ್ರಯೋಜನೀಯವಾದರೂ, ಕರ್ತವ್ಯವಾದರೂ ಆಶ್ರಯ ಪಡೆದಿದ್ದವಳು ಅಷ್ಟು ಸುಲಭವಾಗಿ ನಿರಾಶ್ರಯಳಾಗುವುದು ಹೇಗೆ?

ಮರುದಿನ ಮಧ್ಯಾಹ್ನ ಜಯಾವತಿಯು ಕಲಿಕತ್ತೆಯ ಊರು ನೋಡಿಕೊಂಡು ಬರೋಣವೆಂದು ಕಾರ್ಯಕ್ರಮ ಹಾಕಿದಳು. ಗಾಡಿ ಗೊತ್ತು ಮಾಡಿ ಭೃತ್ಯನು ಸೂಚನೆ ಕೊಟ್ಟನು. ಜಯಾವತಿಯು ಸುರೇಂದ್ರನನ್ನು ಸಂಗಡ ಬಾರೆಂದು ಕರೆದಳು. ಅವನಿಗೆ ಇಷ್ಟವಿರಲಿಲ್ಲ. ಮಾಲತಿಯಾದರೂ ಬರಲಿ ಎಂದಳು. "ಬೇಡ, ಗಾಳಿಯಲ್ಲಿ ಅಲೆದಾಡಿದರೆ ಅವಳಿಗೆ ಪುನಃ ಜ್ವರ ಬಂದೀತು" ಎಂದನು. ಜಯಾವತಿಯು ಒಬ್ಬಳೇ ನೌಕರನ ಸಂಗಡ ಅಲೆದಾಡಲು ಹೊರಟಳು.

ಮಾಲತಿ ತನ್ನ ಕೊಠಡಿಯಲ್ಲಿ ಮಲಗಿದ್ದಳು. ಸುರೇಂದ್ರನು ಬಾಗಿಲು ತೆಗೆದು ಒಳಗೆ ಬಂದನು. ಮಾಲತಿ ಸ್ವಲ್ಪ ಅನುಮಾನದಿಂದ ಭಯದಿಂದ ಅವನ ಕಡೆಗೆ ನೋಡಿದಳು. ಸುರೇಂದ್ರನು ಸ್ವಲ್ಪ ದೂರವಾಗಿ ಕೂತು ಸ್ವಲ್ಪ ಹೊತ್ತು ಏನೂ ಮಾತನಾಡದೆ ಅವಳನ್ನೇ ನೋಡುತ್ತಿದ್ದು ಆಮೇಲೆ "ನಿಜವಾಗಿ ನೀನು ಇಲ್ಲೇ ಇಳಿದು ಬಿಡುತ್ತೀಯಾ?" ಎಂದನು.

ಮಾಲತಿ ತಲೆದೂಗುತ್ತಾ "ಹೂಂ" ಎಂದಳು.

"ಚೆನ್ನಾಗಿ ಆಲೋಚನೆ ಮಾಡಿದ್ದೀಯಾ?"

"ಹೂಂ"

"ಹಾಗಾದರೆ ಎಲ್ಲಿಗೆ ಹೋಗಬೇಕೆಂದು ನಿಷ್ಕರ್ಷೆ ಮಾಡಿದ್ದೀಯಾ?"

"ಅದಿನ್ನೂ ಆಲೋಚನೆ ಮಾಡಿಲ್ಲ."

ಸುರೇಂದ್ರನು ನಗುತ್ತಾ ಎದ್ದನು. ಮತ್ತೆ ಎಂತಹ ಆಲೋಚನೆ ನಿನ್ನದು? ಇವತ್ತು ಬೇಡ. ನಾಳೆ ಕಲಿಕತ್ತೆಯನ್ನು ಒಂದು ಸಲ ಒಳಗೆಲ್ಲಾ ಸುತ್ತಿ ನೋಡಿಕೊಂಡು ಬಾ. ಆಗ ನಿನ್ನ ಮೊದಲ ನಿಶ್ಚಿತವನ್ನು ಬಿಟ್ಟು ಅನಿಶ್ಚಿತವಾಗಿರುವುದೇ ಒಳ್ಳೆಯದೆಂದು ಗೊತ್ತಾಗದೆ ಹೋಗುವುದಿಲ್ಲ. ಆಗಲೂ ಹೋಗಲೇಬೇಕೆಂದರೆ ನಾನು ಅಡ್ಡಿ ಬರುವುದಿಲ್ಲ ಎಂದನು. ಮಾಲತಿ ಸುಮ್ಮನಿದ್ದಳು. ಸುರೇಂದ್ರನು ಸ್ವಲ್ಪ ಯೋಚಿಸಿ ಆ ಮೇಲೆ ಬಹಳ ಕಂದಿದ ಮುಖದಿಂದ "ನೀನು ಯಾವುದನ್ನು ಯೋಚಿಸಿಲ್ಲವೋ ನಾನು ಅದೆಲ್ಲವನ್ನೂ ಯೋಚಿಸಿ ನೋಡಿದ್ದೇನೆ. ನೀನು ಬ್ರಾಹ್ಮಣರ ಹುಡುಗಿ. ಹೀನವೃತ್ತಿ ಮಾಡಲು ನಿನ್ನ ಕೈಯಲ್ಲಿ ಸಾಧ್ಯವಿಲ್ಲ. ದೊಡ್ಡ ಮನೆತನಸ್ಥರ ಹುಡುಗಿ; ದೊಡ್ಡ ಮನೆತನಸ್ಥರ ಆಶ್ರಯ ಸಿಕ್ಕದೆ ಹೋದರೆ ಬೇರೆಲ್ಲೂ ನೀನು ಹೋಗಲಾರೆ. ಇಂತಹ ಅವಸ್ಥೆಯಲ್ಲಿ ನಿಃಸಹಾಯಳಾಗಿ, ಇಂತಹ ದೊಡ್ಡ ಮಹಾ ನಗರಿಯಲ್ಲಿ ನಿನಗೆ ಬೇಕಾದಂತಹ ಆಶ್ರಯವನ್ನು ಹೇಗೆ ಹುಡುಕಬಲ್ಲೆಯೋ ನಾನು ಬೇರೆ ಕಾಣೆ" ಎಂದನು. ಮಾಲತಿ ಇನ್ನೂ ಸುಮ್ಮನಿದ್ದಳು.

ಸುರೇಂದ್ರನು ಮತ್ತೆ ಹೇಳತೊಡಗಿದನು. "ಇನ್ನೂ ಯೋಚನೆ ಮಾಡಿ ನೋಡು. ಇಂತಹ ಚಿಕ್ಕ ವಯಸ್ಸಿನಲ್ಲಿ ಮಾನ, ಮರ್ಯಾದೆ ಕಾಪಾಡಿಕೊಂಡು, ನಿನ್ನ ಯೋಗಕ್ಷೇಮ ನೋಡಿಕೊಂಡು ಹೋಗಬಲ್ಲೆಯಾ,

ಒಬ್ಬಳೇ? ಹೆಜ್ಜೆಹೆಜ್ಜೆಗೆ ವಿಪತ್ತಿನಲ್ಲಿ ಬಿದ್ದೀಯೆಂದು ನನಗೆ ಭಯವಾಗುತ್ತದೆ."

ಮಾಲತಿ ನಿಶ್ಶಬ್ದವಾಗಿ ಅಳುತ್ತಿದ್ದಳು. ಈ ಭಯಗಳೆಲ್ಲಾ ಅವಳಿಗೆ ಮುಂಚೆಯೇ ಬಂದಿದ್ದುವು. ಆದರೆ ಬೇರೆ ದಾರಿಯಿಲ್ಲವಲ್ಲ!

ಅವಳು ಅಳುತ್ತಿದ್ದುದನ್ನು ಅವನು ನೋಡಿದನು. ಹಿಂದೆಯೂ ಅವಳು ಅತ್ತಿದ್ದನ್ನು ನೋಡಿದ್ದನು. ಆದರೆ ಈಗ ಬೇರೊಂದು ಭಾವದಿಂದ ನೋಡಿದನು.

"ಹಾಗಾದರೆ ನಿಶ್ಚಯ ಮಾಡಿದ್ದೀಯಾ ?"

ಮಾಲತಿ ಕಣ್ಣೊರಸಿಕೊಳ್ಳುತ್ತಾ "ಹೂಂ" ಎಂದಳು.

ನಾರಾಯಣಪುರದ ಜಮೀಂದಾರ ಸುರೇಂದ್ರನಾಥಚೌಧುರಿಯನ್ನು ಮೂರ್ಖನೆಂದು ಎಲ್ಲರೂ ಅನ್ನುತ್ತಿದ್ದರು. ಆದರೆ ಅವನು ನಿಜವಾಗಿ ಅಷ್ಟು ಮೂರ್ಖನಲ್ಲ. ಅವನು ಮೂರ್ಖನಂತೆ ಎಷ್ಟೋ ಸಲ ಕೆಲಸ ಮಾಡಿದ್ದರೂ ಅವನನ್ನು ಟೀಕಿಸಿದವರಿಗಿಂತಲೂ ಬುದ್ಧಿವಂತ. ಮಾಲತಿಯ ಮನಸ್ಸಿನಲ್ಲೇನಾಗುತ್ತಿತ್ತೆಂದು ಅವನು ಚೆನ್ನಾಗಿ ಊಹಿಸಿಬಿಟ್ಟಿದ್ದನು. ಮನಸ್ಸಿನೊಳಗೇ ನಕ್ಕನು. ಆಮೇಲೆ ಮಾಲತಿಯ ಹತ್ತಿರ ಬಂದು ಅವಳು ಅಳು ನಿಲ್ಲಿಸಿ ಸುಮ್ಮನಾಗಿದ್ದಾಗ

"ಮಾಲತೀ, ನಿನಗೆ ದುಡ್ಡಿನ ಆವಶ್ಯಕತೆ ಬಹಳ ಇದೆಯಲ್ಲವೇ ?" ಎಂದನು.

ಅವಳ ಕಣ್ಣು ಪುನಃ ನೀರು ತುಂಬಿತು. ಹೌದು .. ಎಷ್ಟು ಆವಶ್ಯಕತೆಯೆಂದರೆ ಪ್ರಪಂಚದಲ್ಲಿ ಇನ್ನು ಯಾರಿಗೂ ಅಷ್ಟು ಆವಶ್ಯಕತೆಯಿರಲಾರದು. ಆದರೂ ಅವಳು ಸುಮ್ಮನಿದ್ದಳು. "ಬಹಳ ಅಗತ್ಯವಿರಬೇಕು, ಅಲ್ಲವೇ ?"

ಮಾಲತಿ ಆಗ ಅಳುತ್ತಲೇ ಗದ್ಗದ ಸ್ವರದಲ್ಲಿ "....ಬಹಳ.... ಅಗತ್ಯ....ಹೌದು" ಎಂದಳು

ಸುರೇಂದ್ರನು ಫಕ್ಕನೆ ನಕ್ಕನು. "ಈಗ ಗೊತ್ತಾಯಿತು....ಹೋ ಹೋ ಹೋ ... ಈಗ ಗೊತ್ತಾಯಿತು. ಬೇರೆ ಹೇಳಬೇಕಾದ್ದಿಲ್ಲ .. "

ಪರರ ದುಃಖವನ್ನು ನೋಡಿ ಅವನಿಗೆ ನಗು ಬಂದದ್ದು ಆಶ್ಚರ್ಯ ! ಇತರರಿಗೆ ಅಳು ಬಂದರೆ ಅದಕ್ಕೆ ಏನೊ ಪ್ರಬಲ ಕಾರಣವಿರುತ್ತದೆ. ಆದರೆ

ಕೆಲವರು ಮಾತ್ರ ಮನಸ್ಸು ಮರೆಯಿಸಲು ಅಳುತ್ತಾರೆ. ಹೀಗೆ ಕೆಟ್ಟ ಅನು ಮಾನಪಟ್ಟು ಅವನು ನಗುವನ್ನು ತಡೆದುಕೊಳ್ಳುತ್ತಾ "ಇನ್ನು ಅಳುವುದು ಯಾಕೆ? ನಿನಗೆ ಬಹಳ ದುಡ್ಡು ಬೇಕಲ್ಲವೇ? ನೀನು ಪ್ರಾಯದ ಹುಡುಗಿ.... ಚೆಲುವೆ. ಕಲಿಕತ್ತೆಗೆ ಹೋಗುತ್ತಿದ್ದೀಯೆ! ಇನ್ನು ನಿನಗೆ ದುಡ್ಡಿನ ಅಭಾವ ಇರುವುದಿಲ್ಲ. ಕಲಿಕತ್ತೆಯಲ್ಲಿ ನಿನಗೆ ಸಮೃದ್ಧಿಯಾಗಿ ದುಡ್ಡು ಸುರಿಮಳೆ ಯಾಗುತ್ತೆ, ನೋಡುತ್ತಿರು," ಎಂದನು.

ಮಾಲತಿಗೆ ತಲೆಯ ಮೇಲೆ ಸಿಡಿಲು ಬಡಿದಂತೆ ಅನ್ನಿಸಿತು. ತಲೆ ಯನ್ನು ಕತ್ತರಿಸಿ ಹಾಕಿದಂತೆ ಆಯಿತು. ಇದು ಏನು ವ್ಯಂಗ್ಯ! ಇನ್ನು ಆ ಕಿಟಿಕಿ ತೆರೆದು ನೀರಿನಲ್ಲಿ ಮುಳುಗಿದರೂ ಒಳ್ಳೆಯದೇ! ಮಾಲತಿಯು ಹೀಗೆಂದುಕೊಂಡ ತಕ್ಷಣ ತಲೆ ಸುತ್ತಿದಂತಾಗಿ ಹಾಸುಗೆಯ ಮೇಲೆ ಕೂತಿದ್ದವಳು ಹಾಗೆಯೇ ಬಿದ್ದುಬಿಟ್ಟಳು ...ಅವಳಿಗೆ ಅನ್ನಿಸಿತು. ಮೂರ್ಛಿತ ಳಾಗಿ ಯಾರದೋ ಎದೆಯ ಮೇಲೆ ಬಿದ್ದಿದ್ದೇನೆ. ಆದರೆ ಆ ಎದೆ ಬೆಂಕಿ ಯಿಂದ ತುಂಬಿ ಸುಡುತ್ತಿದೆ. ವಿಪರೀತ ಕಠಿಣ. ವಿಪರೀತ ತೀಕ್ಷ್ಣ. ಅದ ರೊಳಗೆ ಒಂದು ಚೂರು ಮನುಷ್ಯಮಾಂಸವಿಲ್ಲ. ಒಂದು ಹನಿ ಮನುಷ್ಯ ರಕ್ತವಿಲ್ಲ. ಕೋಮಲತೆ ಸ್ವಲ್ಪವೂ ಇಲ್ಲ. ಬರೀ ಕಲ್ಲು; ಬೆಂಕಿ.

ಮೂರ್ಛಿತಾವಸ್ಥೆಯಿಂದ ಎಚ್ಚೆತ್ತು ನೋಡಿದಳು. ಅವಳು ಯಾರ ಎದೆಯ ಮೇಲೂ ತಲೆಯಿಟ್ಟಿಲ್ಲ. ತನ್ನ ಹಾಸುಗೆಯ ಮೇಲೆಯೇ ಮಲಗಿ ದ್ದಾಳೆ. ಆದರ ತಲೆಯ ಹತ್ತಿರ ಸುರೇಂದ್ರನಾಥನು ಅವಳ ಮುಖದ ಕಡೆಯೇ ಕನಿಕರದಿಂದ ನೋಡುತ್ತಿದ್ದಾನೆ. ನಾಚುಗೆಯಿಂದ ಅವಳ ಮುಖವು ಕೆಂಪಗಾಯಿತು. ಎರಡು ಕೈಗಳಿಂದಲೂ ಮುಖ ಮುಚ್ಚಿಕೊಂಡು ಪಕ್ಕಕ್ಕೆ ತಿರುಗಿದಳು.

ಸ್ವಲ್ಪಹೊತ್ತು ಸುಮ್ಮನಿದ್ದು ಸುರೇಂದ್ರನು "ಮಾಲತೀ, ನಾಳೆಯೇ ಬೆಳಿಗ್ಗೆ ನಾನು ನೌಕೆಯನ್ನು ಬಿಟ್ಟ ಪ್ರಯಾಣಕ್ಕೆ ಸಿದ್ಧಮಾಡುತ್ತೇನೆ. ಆದರೆ ನಿನ್ನನ್ನು ಮಾತ್ರ ಇಳಿಯ ಬಿಡುವುದಿಲ್ಲ. ನಿನ್ನನ್ನು ನನ್ನ ಸಂಗಡ ಕರೆದುಕೊಂಡು ಹೋಗುತ್ತೇನೆ" ಎಂದನು.

ನಿಶ್ವಾಸವನ್ನು ತಡೆದುಕೊಂಡು ಮಾಲತಿ ಕೇಳತೊಡಗಿದಳು.

"ನೀನು ಯಾವುದಕ್ಕೋಸ್ಕರ ಕಲಿಕತ್ತೆಗೆ ಹೋಗಬೇಕೆಂದಿದ್ದೀಯೋ

ಅದು ನಿನಗೆ ಸಿಕ್ಕುವುದಿಲ್ಲ. ಈ ವೃತ್ತಿಯನ್ನು, ನನ್ನ ಅಂದಾಜಿನಲ್ಲಿ, ನೀನು ಹಿಂದೆಂದೂ ಮಾಡಿಲ್ಲ. ಈಗಲೂ ಮಾಡಲಾರೆ. ನಿನಗೆ ಎಷ್ಟು ಹಣ ಆವಶ್ಯಕವಿದೆಯೋ, ಯಾವ ಸುಖ ಸ್ವಚ್ಛಂದ ಬೇಕಾಗಿದೆಯೋ, ಎಲ್ಲಾ ನಾನು ಕೊಡುತ್ತೇನೆ."

ಹಿಡಿದಿಟ್ಟ ಶ್ವಾಸದಿಂದ ಮಾಲತಿಯ ಎದೆಯು ಹೊಡೆದುಕೊಳ್ಳಲಾರಂಭಿಸಿತು. ಕಣ್ಣಲ್ಲಿ ನೀರು ಸುರಿಯಲಾರಂಭವಾಯಿತು. ಸುರೇಂದ್ರನು ಏನು ಅರ್ಥಮಾಡಿಕೊಂಡನೋ ಏನೋ, ಬಲಾತ್ಕಾರವಾಗಿ ಅವಳನ್ನು ಹಿಡಿದು ಎದೆಯ ಮೇಲೆ ಎಳೆದುಕೊಂಡನು.

"ಹೇಳು ಮಾಲತೀ, ನನ್ನ ಸಂಗಡ ಬರುತ್ತೀಯಾ ಹೇಳು ...ನಾನು ಅಷ್ಟು ಐಶ್ವರ್ಯವಂತನಲ್ಲದಿದ್ದರೂ ನಾಕಾದಷ್ಟು ಇದೆ. ನನ್ನ ನಿನ್ನ ಸುಖಕ್ಕೆ ಬೇಕಾದ ಹಾಗೆ ಖರ್ಚು ಮಾಡಬಲ್ಲೆ. ಇಲ್ಲದೆ ಹೋದರೆ, ನಾನು ಇಲ್ಲೇ ನಿನ್ನನ್ನು ಬಿಸಾಡಿ ಹೊರಟು ಹೋದರೆ ನೀನು ಹೇಗೆ ಬದುಕುತ್ತೀಯ? ನಾನು ಹೇಗೆ ತಾನೇ ಶಾಂತಿಯಿಂದ ಊರಿಗೆ ವಾಪಸ್ಸು ಹೋಗಲಿ?"

ಸುರೇಂದ್ರನು ಚೇತನ ಉಡುಗಿಹೋಗಿದ್ದ ಅವಳನ್ನು ಇನ್ನೂ ಹತ್ತಿರ ಎಳೆದುಕೊಂಡು ಪ್ರೀತಿಯಿಂದ ಅವಳ ಕಣ್ಣೊರಸುತ್ತಾ ನಾಚುಗೆಯಿಂದ ಸಂಕುಚಿತವಾಗುತ್ತಿದ್ದ ಅವಳ ಅಧರಗಳನ್ನು ಮೋಹಾವೇಶದಿಂದ ಮುತ್ತಿಟ್ಟು "ಏನು?—ಬರುತ್ತೀಯಾ ನನ್ನ ಸಂಗಡ ?" ಎಂದನು.

ಮಾಲತಿಯ ಮೈ ರೋಮಾಂಚಿತವಾಯಿತು, ಕೈಕಾಲುಗಳು ನಡುಗಲಾರಂಭಿಸಿದುವು. ಅವಳು ಮೊದಲಿನವಳಲ್ಲ—ಲಲನಾ ಅಲ್ಲ; ಮಾಲತಿಯೂ ಅಲ್ಲ. ಅವಳು ಯಾರೂ ಅಲ್ಲ. ಇದು ಬೇರೆ ಯಾರೋ ಹೆಂಗಸು. ಅವಳಿಗೇ ಅವಳ ಪರಿಚಯವಿಲ್ಲದಾಯಿತು ...

ಈಗ ಅವಳು ಹೇಗಿದ್ದಾಳೋ, ಹಾಗೆಯೇ.... ...ಅವಳು ಸುರೇಂದ್ರನಾಥನ ಪ್ರೇಯಸಿ. ಅನಂಗನ ರತಿ. ಅವಳು ರಾಧೆ, ಅವಳು ಸಾವಿತ್ರಿ, ಶಕುಂತಲೆ! ಅವಳು ದಮಯಂತಿ. ಸೀತಾ, ಸಾವಿತ್ರಿಯರ ಹೆಸರೇಕೆ? ಅವಳು ತಾರೆ, ಅವಳು ಚಂದ್ರಾವಳಿ! ಅವಳು ಚಿರಪ್ರಣಯಿನಿ.

ಸುಖ ಶಾಂತಿ ಸ್ವರ್ಗದ ವಕ್ಷಸ್ಥಳದಲ್ಲಿ ಇನ್ನು ಮಾನಾಪಮಾನ

ವೆಂತಹುದು?

ಲಲನಾ ನಿಷ್ಪಂದಳಾಗಿ, ಅಚೇತನಳಾಗಿ ಬಂಗಾರದ ಪ್ರತಿಮೆಯಂತೆ ಸುರೇಂದ್ರನಾಥನ ವಕ್ಷಸ್ಥಳದಲ್ಲಿ ತಲೆಯಿಟ್ಟು ಮೈಮರೆತಳು. ಈ ಎದೆ ಯೀಗ ಆಗಿನಂತೆ ಕಠಿಣವಿಲ್ಲ ಆಗಿನಂತೆ ಕಲ್ಲಲ್ಲ, ಬೆಂಕಿಯಲ್ಲ. ರಕ್ತ, ಮಾಂಸ ವಿರಹಿತವಲ್ಲ. ಈಗದು ಕೋಮಲ...... ಆದರೂ ಬಲಯುತ. ಶಾಂತ, ಸ್ನಿಗ್ಧ, ಸ್ನೇಹಮಯ!

ಅವಳಿಗೆ ಅನ್ನಿಸಿತು. ಅದುವರಿಗೆ ಅವಳು ಶಾಪಗ್ರಸ್ತಳಾಗಿದ್ದಳು. ಈಗ ಪುನಃ ಸ್ವರ್ಗ ಪ್ರಾಪ್ತಿಯಾಗಿದೆ. ಅವಳ ಸಂಕುಚಿತವಾಗಿದ್ದ ಓಷ್ಠಾಧರ ಗಳು ಈಗ ನೂತನ ಶಕ್ತಿ ಸಂಚಾರದಿಂದ ಹೊಸ ಹೂವಿನಂತೆ ಅರಳುತ್ತಿವೆ. ನೋಡಿ ಮುಗ್ಧನಾಗಿ ಸುರೇಂದ್ರನು ಬಾರಿಬಾರಿಗೂ ಅವುಗಳನ್ನು ಚುಂಬನ ಮಾಡಿದನು ...ಲಲನಾದೇವಿಯು ಆಗ ಪಾಪದ ಮೊದಲ ಮೆಟ್ಟಲಿಳಿದು ಮೈ ಮರೆತು ಸ್ವರ್ಗ ಸುಖದ ಭೋಗವನ್ನು ಆಸ್ವಾದಿಸುತ್ತಿದ್ದಾಳೆ. ಸೂರ್ಯನು ಮುಳುಗುತ್ತಿದ್ದವನು, ಕಿಟಕಿಯ ದ್ವಾರದಿಂದ ಈ ಪಾಪದೃಶ್ಯವನ್ನು ನೋಡಿ ಕೊಂಡು ಹೋದನು. ಆ ಸಂಜೆಯ ಕೆಂಬೆಳಕಿನಲ್ಲಿ ಲಲನಾಳ ಮುಖ ಮಂಡಲವು ಸುರೇಂದ್ರನ ಕಣ್ಣಿಗೆ ಮೊದಲಿಗಿಂತಲೂ ಸಾವಿರ ಪಾಲು ಹೆಚ್ಚಾಗಿ ಮನೋಹರವಾದ ಬೆಳಕಿನಿಂದ ಹೊಳೆಯುತ್ತಿದೆ. ಅವನು ಸಾವಿರ ಆವೇಶಗಳಿಂದ, ಸಾವಿರ ತೃಷ್ಣೆಗಳಿಂದ ಹೊಡೆಯಲ್ಪಟ್ಟು ತನ್ನನ್ನ ತಾನೇ ಮರೆತು ಅವಳ ಮುಖವನ್ನು ಮುತ್ತಿನ ಮಳೆಯಿಂದ ತುಂಬಿದನು. "ಮಾಲತಿ, ಏನು, ನನ್ನ ಸಂಗಡ ಬರುತ್ತೀಯ" ಎಂದು ಅವಳ ಕೋಮಲ ವಾದ ಕಿವಿಯಲ್ಲಿ ಬಾಯಿಟ್ಟು ಮೃದುವಾಗಿ ಕೇಳಿದನು.

"ಹೂಂ."

ಸುರೇಂದ್ರನು ಉನ್ಮತ್ತನಾಗಿ ಹೋದನು.

"ಹಾಗಾದರೆ ನಡಿ, ಈಗಲೇ ಹೋಗೋಣ."

"ಆದರೆ ಅಕ್ಕ ?"

"ಅಕ್ಕ ಯಾರು ?"

"ನಿಮ್ಮ ಹೆಂಡತಿ."

ಸುರೇಂದ್ರನು ಆಶ್ಚರ್ಯದಿಂದ "ನನ್ನ ಹೆಂಡತಿ? ಅವಳು ಹೋಗಿ

ಎಷ್ಟೋ ದಿವಸಗಳಾಯಿತು" ಎಂದನು.

"ಜಯಾವತಿ ?"

ಆಗ ಅವನಿಗೆ ಅರ್ಥವಾಯಿತು, ನಕ್ಕನು.

"ಜಯಾ ನನ್ನ ಹೆಂಡತಿಯೆಂದು ಹೇಳಿದವರು ಯಾರು ನಿನಗೆ?.... ಅವಳನ್ನು ನಾನು ಮದುವೆಯಾಗಿಲ್ಲ."

"ಹಾಗಾದರೆ ಅವಳು ಯಾರು ?"

"ಯಾರೂ ಅಲ್ಲ, ಯಾರೂ ಅಲ್ಲ, ನೀನು . ನೀನೇ ನನಗೆ ಎಲ್ಲಾ.... ಅವಳು ಯಾರೂ ಅಲ್ಲ .ನೀನೇ ನನ್ನ ಎಲ್ಲಾ ..ನನ್ನ ಆಸ್ತಿ, ಒಡವೆ.... ಎಲ್ಲಾ ನೀನೆ !"

ಆಗ ಮಾಲತಿ ತನ್ನ ತೋಳುಗಳಿಂದ ಅವನ ಕಂಠವನ್ನು ಸುತ್ತಿದಳು ಮುಕ್ತ ಕಂಠದಿಂದ "ನಾನು ನಿಮ್ಮ ಚಿರದಾಸಿ, ನನ್ನನ್ನು ಬಿಟ್ಟು ಹೋಗ ಬೇಡಿ" ಎಂದಳು.

"ಇಲ್ಲ. ಎಂದಿಗೂ ಇಲ್ಲ."

"ಹಾಗಾದರೆ ನನ್ನನ್ನು ಕರದುಕೊಂಡು ಹೋಗಿ."

"ನಡಿ, ಹಾಗಾದರೆ."

"ಇವತ್ತೇ?"

"ಓ ಇವತ್ತೇ !"

"ಈಗಲೇ."

"ಈಗಲೇ !"

ಈ ಸಮಯದಲ್ಲಿ ಹೊರಗಿನಿಂದ ಇದ್ದಕ್ಕಿದ್ದ ಹಾಗೆ ಕೋಲಾಹಲ ವಾಯಿತು. ಸಾಖಿರ ಧ್ವನಿಗಳಲ್ಲಿ "ಹಿಡಿದುಕೋ....ಹಿಡಿದುಕೋ........ ಅಯ್ಯೋ....ಮುಳುಗಿತು, ಮುಳುಗಿತು !....ಓಡು........ಹಿಡಿದುಕೋ........ ಹೋಯಿತು ...ಹೋಯಿತು........ಮುಳುಗಿ ಹೋಯಿತು....ಅಯ್ಯೋ........ ಅಯ್ಯೋ........!"

ಸುರೇಂದ್ರ ಓಡಿ ಹಡಗಿನ ಮೇಲಕ್ಕೆ ಬಂದನು. ಹಿಂದೆಯೇ ಮಾಲ ತಿಯೂ ಅವನನ್ನು ಅನುಸರಿಸಿ ಬಂದಳು. ಸ್ವಲ್ಪ ದೂರದಲ್ಲಿ ಅವರ ನೌಕೆಗೆ ಅಭಿಮುಖವಾಗಿ ಬರುತ್ತಿದ್ದ ದೋಣಿಯೊಂದು ಸ್ಟೀಮರಿಗೆ ಡಿಕಿ

ಹೊಡೆದು ಮುಳುಗಿ ಹೋಗುತ್ತಿದೆ!

"ಅಯ್ಯೋ....ಅದರಲ್ಲಿ ಜಯಾವತಿ ಇದ್ದಾಳೆ" ಎಂದು ಚೀತ್ಕಾರ ಮಾಡುತ್ತಾ ಸುರೇಂದ್ರನು ನೀರಿನಲ್ಲಿ ಧುಮುಕಲು ಹೋದನು. ಮಾಲತಿ ಅವನನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಅವನು ಅರಚುತ್ತಾ "ಬಿಡು....ಬಿಡು. ..ಹಿಡಿಯಬೇಡ....ಅದರಲ್ಲಿ ಜಯಾ ಇದ್ದಾಳೆ....ಬಿಡು" ಎಂದನು.

ವಿಶಾಲವಾದ ಆ ದೊಡ್ಡ ಸ್ಟೀಮರಿನ ಕೆಳಗೆ ಸಣ್ಣ ದೋಣಿಯೊಂದು ಮುಳುಗಿಹೋಯಿತು. ಸುರೇಂದ್ರನು ಜ್ಞಾನ ತಪ್ಪಿ ಬಿದ್ದು ಹೋದನು.

* * * *

## ೨೫

"ಜಯಾ!"—ಜ್ಞಾನ ಬಂದ ತಕ್ಷಣ ಸುರೇಂದ್ರನಾಥನ ಬಾಯಿಂದ ಬಂದದ್ದು ಆರ್ತಸ್ವರವಿದೊಂದೇ.

"ಜಯಾ!" ವ್ಯಾಕುಲದಿಂದ ಕೂಗುತ್ತಾ ಸುರೇಂದ್ರನು ಮೇಲಕ್ಕೆದ್ದನು. ಪಕ್ಕದಲ್ಲಿ ಕೂತು ಕಣ್ಣೀರು ಸುರಿಸುತ್ತಾ ಇದ್ದ ಮಾಲತಿಯು ಮತ್ತೂ ಅಳಲು ಆರಂಭಿಸಿದಳು. ಸುರೇಂದ್ರನ ಕಣ್ಣಿಗೆ ಅವಳು ಬೀಳಲಿಲ್ಲ. ಒಂದು ಸಲ, ಒಂದೇ ಒಂದು ಸಲ ನೋಡಿದನು. ಆ ಮೇಲೆ ಕಣ್ಣು ಮುಚ್ಚಿದನು.

ಬಹಳ ಹೊತ್ತು ಹೀಗೆಯೇ ಇದ್ದು ದೊಡ್ಡ ನಿಟ್ಟುಸಿರು ಬಿಟ್ಟು "ಜಯಾಗೆ ಏನಾಯಿತು....?ಯಾರಿಗೂ ಗೊತ್ತಿಲ್ಲವೇ?" ಎಂದನು. ಹತ್ತಿರಿದ್ದ ಮುದುಕ ನೌಕರನೊಬ್ಬ ಕಾತರ ಭಾವದಿಂದ "ಗೊತ್ತಿಲ್ಲ ಪ್ರಭುವೇ" ಎಂದನು.

"ಗೊತ್ತಿಲ್ಲ! ಹಾಗಾದರೆ ಅವಳಿನ್ನು ಬದುಕಿಲ್ಲ?"

ನೌಕರನು ಸ್ವಲ್ಪ ಯೋಚಿಸಿ "ಹಾಗೆಯೇ ತೋರುತ್ತದೆ" ಎಂದನು.

ಸುರೇಂದ್ರನು ಸುಮ್ಮನಿದ್ದು ಆ ಮೇಲೆ "ಹೊತ್ತೆಷ್ಟಾಗಿದೆ?" ಎಂದನು.

"ಬಹುಶಃ ಹತ್ತು ಘಂಟೆ ಹೊಡೆದಿದೆ."

"ಹತ್ತು ಘಂಟೆ....? ಇನ್ನೂ ಅವಳ ಸಮಾಚಾರ ಗೊತ್ತಿಲ್ಲವೇ ?"

ನೌಕರನು ಉತ್ತರ ಕೊಡಲಿಲ್ಲ.

ಸುರೇಂದ್ರನು ಹತಾಶನಾಗಿ ಹಣೆಯ ಮೇಲೆ ಕೈಯಿಂದ ಹೊಡೆದು ಕೊಂಡನು. ಆ ಮೇಲೆ "ನೀವೆಲ್ಲಾ ಹೋಗಿ ...ಈಗಲೇ ಹೋಗಿ ಕಲಿಕತ್ತೆ ಯೆಲ್ಲಾ ಹುಡುಕಿ....ನದಿಯೆಲ್ಲಾ ಹುಡುಕಿ .. ಅವಳನ್ನು ಏನಾದರೂ ಮಾಡಿ ಕರೆದುಕೊಂಡು ಬನ್ನಿ" ಎಂದನು.

ನೌಕರನು ಮನಸ್ಸಿನಲ್ಲಿ ಅಂದುಕೊಂಡನು "ಬಹು ಸುಲಭವಾದ ಕೆಲಸ. ಬಾಯಲ್ಲಿ ಬಂದದ್ದೇ ಅಪ್ಪಣೆ" .

ನಂತರ ಅಲ್ಲಿಂದ ಎದ್ದು ಬಂದು ತನ್ನ ಪಾಡಿಗೆ ತಾನು ಮಲಗಿ ನಿದ್ದೆ ಮಾಡಿದನು.

ಇತ್ತ ಸುರೇಂದ್ರನ ಬಳಿ ಮಾಲತಿಯಲ್ಲದೆ ಬೇರೆ ಯಾರೂ ಇಲ್ಲ. ಆದರೂ ಅವನು ಯಾವ ಮಾತೂ ಆಡಲಿಲ್ಲ. ಮನಸ್ಸಿನೊಳಗೇ ರೋದನ ಮಾಡಿದನು. ಹೀಗೆಯೇ ಎಷ್ಟು ಹೊತ್ತು ಕಳೆದು ಹೋಯಿತೋ. ಹೊರಗೆ ಹಾಕಿದ್ದ ದೊಡ್ಡ ಗಡಿಯಾರ ಅದರ ಪಾಡಿಗೆ ಅದು 'ಟಿಕ್, ಟಿಕ್' ಎಂದುಕೊಂಡು ಹನ್ನೊಂದು, ಹನ್ನೆರಡು ಆ ಮೇಲೆ ಒಂದು, ಆಮೇಲೆ ಎರಡು, ಮೂರು, ನಾಲ್ಕು ಹೀಗೆ ಹೊಡೆದುಕೊಂಡು ಹೋಯಿತು. ಯಾರೂ ಅದರ ಕಡೆ ಗಮನ ಕೊಡಲಿಲ್ಲ. ಸುರೇಂದ್ರನು ಆ ಪಕ್ಕದಿಂದ ಈಪಕ್ಕ, ಈ ಪಕ್ಕದಿಂದ ಆ ಪಕ್ಕ ಹೊರಳಾಡುತ್ತಾ ಕಳೆದನು.

ಮಾಲತಿಯು ಕೂತಿದ್ದ ಸ್ಥಳವನ್ನು ಬಿಟ್ಟೇಳದೆ ಕಣ್ಣೀರು ಸುರಿಸುತ್ತಲೇ ಇದ್ದಳು...ಅವನ ಯಾತನೆಯನ್ನು ನೋಡಲಾರದೆ ಹೋದಳು. ಅವಳಿಗೂ ವಿಪರೀತ ದುಃಖವಾಗಿದೆ....ವಿಪರೀತ ನಾಚುಗೆಯಾಗಿದೆ .. ಎಲ್ಲಕ್ಕಿಂತಲೂ ಹೆಚ್ಚಾಗಿ ತನ್ನ ಮೇಲೆ ತನಗೇ ಅಸಹ್ಯ, ದ್ವೇಷ ಹುಟ್ಟಿಕೊಂಡಿವೆ. ಭೂತ, ಭವಿಷ್ಯತ್ತು, ವರ್ತಮಾನಗಳೆಲ್ಲಾ ಕಲಸಿ ಅವಳ ಮನಸ್ಸಿನಲ್ಲಿ ಕಲ್ಲೋಲವಾಗುತ್ತಿದೆ.

ಇದ್ದಕ್ಕಿದ್ದ ಹಾಗೆ ಸುಮಾರು ನಾಲ್ಕು ಘಂಟೆಯ ಹೊತ್ತಿಗೆ ಸುರೇಂದ್ರನು ಎದ್ದು ಕಣ್ಣು ತೆರೆದು ನೋಡುತ್ತಾನೆ: ಮಾಲತಿಯು ಹಿಂದೆ ಹೇಗೆ ಕೂತಿದ್ದಳೋ ಹಾಗೆಯೇ ಕೂತಿದ್ದಾಳೆ. ಕಣ್ಣು ಮುಚ್ಚಿಲ್ಲ. ಮುಖವೆಲ್ಲಾ ಕಣ್ಣೀರಿನಿಂದ ತೊಯ್ದು ಹೋಗಿದೆ. ಸುರೇಂದ್ರನು "ರಾತ್ರಿಯೆಲ್ಲಾ ಸುಮ್ಮನೆ ಜಾಗರಣೆ ಮಾಡಿ ಫಲವೇನು. ಹೋಗಿ ಮಲಗಿಕೋ" ಎಂದನು.

ಮಾಲತಿಎದ್ದು ಹೋಗಬೇಕೆಂದಿರುವಾಗ ಅವನು ಅವಳನ್ನು ಮತ್ತೆ ಕೂಗಿ "ಕೂಡು, ಹೋಗಬೇಡ, ನಿನ್ನ ಹತ್ತಿರ ಮಾತಾಡುವುದಿದೆ" ಎಂದನು.

ಅವಳು ಎರಡು ಹೆಜ್ಜೆ ಹಾಕಿದ್ದವಳು ಮರಳಿ ಬಂದು ಅದೇ ಜಾಗದಲ್ಲಿ ಕೂತಳು.

ಸುರೇಂದ್ರನು ಕಣ್ಣುಗಳನ್ನು ಚೆನ್ನಾಗಿ ಒರಸಿಕೊಂಡನು. ಆ ಮೇಲೆ ಹೇಳಬೇಕೆಂದಿದ್ದುದನ್ನು ಚೆನ್ನಾಗಿ ಜ್ಞಾಪಿಸಿಕೊಂಡು, ಯೋಚಿಸಿ, ಗಂಭೀರ

ಭಾವನಿಂದ "ಮಾಲತೀ, ಯಾರ ಪಾಪದಿಂದ ಹೀಗಾಯಿತು ?" ಎಂದನು.

ಮಾಲತಿಯ ತಲೆಯ ಮೇಲೆ ಆಕಾಶವೇ ಕಳಚಿಬಿದ್ದಂತಾಯಿತು. ಈ ಮಾತನ್ನು ಅವಳೇ ತನ್ನ ಮನಸ್ಸಿನಲ್ಲಿ ಇಷ್ಟುಹೊತ್ತೂ ಅಂದುಕೊಳ್ಳುತ್ತಿದ್ದಳು. ಈ ಪ್ರಶ್ನೆಗೆ ತಾನೇ ಜವಾಬನ್ನು ಹೇಳಿಕೊಂಡಿದ್ದಳು. ಆದರೆ ಆ ಮಾತನ್ನು ಬಾಯಿಬಿಟ್ಟು ಹೇಳಲಾರದೆ ಮತ್ತೆ ಕಣ್ಣೀರು ಸುರಿಸುತ್ತಾ ತಲೆ ತಗ್ಗಿಸಿ ಕೂತಿದ್ದಳು. ಸುರೇಂದ್ರನಾಥನು ಏನು ಹೇಳಬೇಕೆಂದು ಮನಸ್ಸು ಮಾಡಿದ್ದನೋ ಅದನ್ನು ಹೇಳದೆ "ಹೋಗಲಿ... ಈ ಮಾತೆಲ್ಲಾ ಆಮೇಲೆ ಆಡೋಣ ಈಗ ನೀನು ಹೋಗಿ ಮಲಗು" ಎಂದನು.

ಮಾಲತಿ ಎದ್ದು ತನ್ನ ಕೋಣೆಗೆ ಹೋಗಿ ಮಲಗಿದಳು. ನಿದ್ದೆ ಮಾಡಲಿಲ್ಲ. ಬೆಳಗಿನ ಜಾವದವರಗೂ ಹಾಗೆಯೇ ಹೊರಳಾಡುತ್ತ ಮಲಗಿದಳು. ಸ್ವಲ್ಪ ಹೊತ್ತು ಎದ್ದು ಕೂಡುವಳು, ಮತ್ತೆ ಮಲಗುವಳು, ಮತ್ತೆ ಎದ್ದು ಕೂಡುವಳು... ತನಗೆ ತಿಳಿದ ಇಷ್ಟ ದೇವತೆಗಳನ್ನೆಲ್ಲಾ ಸ್ಮರಿಸಿದಳು. ಯಾವ ಯಾವ ವಿಷಯಗಳೆಲ್ಲಾ ನೆನಪಿಗೆ ಬಂದುವು. ಬೆಳಗಿನ ಝಾವದ ಮೇಲೆ ಶ್ರಮದಿಂದ ಮಂಪರು ಹತ್ತಿ ವಿಧವಿಧವಾದ ಸ್ವಪ್ನಗಳನ್ನು ಕಂಡಳು. ಒಂದು ಸಲ ಜಯಾವತಿಯು ಕಣ್ಣು ಕೆಂಪಗೆ ಮಾಡಿಕೊಂಡು ನಿಂತು ದುರುಗಟ್ಟಿಕೊಂಡು ನೋಡುತ್ತಾಳೆ; ಒಂದು ಸಲ ಸದಾನಂದನು ಮನಸ್ಸಿನ ಹುಚ್ಚಿನಿಂದ, ಆನಂದದಿಂದ ಗಾನ ಮಾಡುತ್ತಾನೆ ಮತ್ತೊಂದುಸಲ ತಾಯಿ ಶುಭದಾ ಕಾತರದಿಂದ ಅಳುತ್ತಿದ್ದಾಳೆ—ಕಡೆಗೆ ಎಲ್ಲವೂ ಅದೃಶ್ಯವಾಗಿ ಹೋಗಿಷ್ಟು ತಮ್ಮ ಮಾಧವನು ತಲೆಯ ಹತ್ತಿರ ಬಂದು ಕೂತು ಎಲ್ಲಿಗೋ ಹೋಗೋಣವೆಂದು ಕರೆಯುತ್ತಿದ್ದಾನೆ. 'ಬೇಡ, ಹೋಗು ಎಂದರೂ ಹಠ ಹಿಡಿದು ಕೂತಿದ್ದಾನೆ....ವಿಪರೀತ ಬೇಸರದಿಂದ ನಿದ್ದೆಯೊಡೆದು ಕಣ್ಣು ತೆರೆದು ನೋಡಿದರ ಯಾರೂ ಇಲ್ಲ. ಬೆಳಗಿನ ಸೂರ್ಯನ ಕಿರಣಗಳು ಕಿಟಕಿಯ ಹೊರಗಿನಿಂದ ಬಂದು ಅವಳ ಮುಖವನ್ನು ಸುಡುತ್ತಿವೆ. ಮಾಲತಿಯು ಹಾಸುಗೆ ಬಿಟ್ಟೆದ್ದು ಕೂತಳು.

ಆ ದಿನವೆಲ್ಲಾ ಸುರೇಂದ್ರನಾಥನ ಕಣ್ಣಿಗೆ ಬೀಳಲಿಲ್ಲ ಮಾಲತಿ. ಸುರೇಂದ್ರನೇ ಬೆಳಗೆದ್ದ ತಕ್ಷಣ ನೌಕೆಯನ್ನು ಬಿಟ್ಟು ಎಲ್ಲೋ ಹೊರಗೆ ಹೊರಟುಹೋಗಿದ್ದನು. ಮರುದಿನವೂ ಅವನು ಹಿಂದಿರುಗಲಿಲ್ಲ. ಮಾರನೆಯ

ದಿನ ಸಾಯಂಕಾಲ ಬಹಳ ಹೊತ್ತಾದ ಮೇಲೆ ಬಂದು ತನ್ನ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡು ಯಾರನ್ನೂ ಕರೆಯದೆ ರಾತ್ರಿಯೆಲ್ಲಾ ಹಾಗೆಯೇ ಕಳೆದನು....

ಅದರ ಮರುದಿನ ಬೆಳಿಗ್ಗೆ ಮಾಲತಿಗೆ ಹೇಳಿಕಳುಹಿಸಿದನು. ಅವಳು ಬಂದು ತಲೆ ತಗ್ಗಿಸಿಕೊಂಡು ಸ್ವಲ್ಪ ದೂರದಲ್ಲಿ ನಿಂತಳು. ಸುರೇಂದ್ರನು ಯಾವುದೋ ಕಾಗದದಲ್ಲಿ ಏನೋ ಬರೆಯುತ್ತಿದ್ದವನು ಮುಖವೆತ್ತಿ ನೋಡಿ ಹತ್ತಿರ ಬಾರೆಂದು ಸಂಜ್ಞೆ ಮಾಡಿದನು. ಮಾಲತಿಯು ಹತ್ತಿರ ಮೆಲ್ಲಗೆ ಹೋಗಿ ನೋಡಿದಳು. ಅವನ ಮುಖ ವಿಪರೀತ ಬಾಡಿ ಹೋಗಿದೆ. ಕಣ್ಣು ಗಳು ಕೆಂಪಗಿವೆ. ತಲೆಯ ಕೂದಲು ಕೆದರಿ ಅಸ್ತವ್ಯಸ್ತವಾಗಿದೆ. ಹಾಕಿದ್ದ ಜುಬ್ಬ ಎಲ್ಲಾ ಅಲ್ಲಲ್ಲಿ ಹರಿದುಹೋಗಿದೆ. ಬೇಕೆಂದು ರೋಷದಿಂದ ಹರಿ ದಂತಿದೆ. ಮಾಲತಿ ಅಂದುಕೊಂಡಳು. "ಇವರು ಬಹುಶಃ ವಿಪರೀತ ಸಂಕಟದಿಂದ ತಮ್ಮ ಮೇಲೆಯೇ ಅಪರಾಧ ಹೊರಿಸಿಕೊಂಡು ದಂಡಿಸಿ ಕೊಂಡಂತಿವೆ" ಎಂದು ಅವಳಿಗೆ ಸಹಿಸಲಾಗದ ಯಾತನೆಯಾಯಿತು.

ಸುರೇಂದ್ರನು ಅರ್ಧ ಬರೆದಿದ್ದ ಕಾಗದವನ್ನು ಪಕ್ಕದಲ್ಲಿಟ್ಟು ಮಾಲ ತಿಯ ಕಡೆ ನೋಡಿ "ನಿನ್ನ ಆರೋಗ್ಯ ಈಗ ಸರಿ ಹೋಗಿದೆಯೇ?" ಎಂದನು.

ಮಾಲತಿ ತಲೆಯಲ್ಲಾಡಿಸಿ 'ಸರಿ ಹೋಗಿದೆ' ಎಂದು ಸೂಚಿಸಿದಳು.

"ನಾನು ಇವತ್ತು ನೌಕೆಯನ್ನು ಬಿಚ್ಚಿ ಬಿಡುವೆನು.. ಆಚೆ ದಡ ದಲ್ಲಿಯೇ ಕಲಿಕತ್ತೆ ನೀನು ಇಷ್ಟಪಟ್ಟರೆ ಹೋಗಬಹುದು."

ಈ ಮಾತು ಕೇಳಿ ಮಾಲತಿಯ ಕಣ್ಣುಗಳಲ್ಲಿ ನೀರು ತುಂಬಿತು. ಉತ್ತರವೇನೂ ಹೇಳಲಿಲ್ಲ.

ಸುರೇಂದ್ರನು ಪಕ್ಕದಲ್ಲಿದ್ದ ಕಾಗದವನ್ನು ಮತ್ತೆ ಕೈಗೆ ತೆಗೆದುಕೊಂಡು "ಕಲಿಕತ್ತೆಯಲ್ಲಿ ನನಗೆ ಬೇಕಾದವನೊಬ್ಬನಿದ್ದಾನೆ. ಈ ಕಾಗದದಲ್ಲಿ ಅವನ ವಿಳಾಸ ಬರೆದಿದೆ- ಇದನ್ನು ತೆಗೆದುಕೊಂಡು ಅವನ ಮನೆ ಹುಡುಕಿಕೊಂಡು ಹೋಗು. ನಿನಗೆ ಅವನು ಬೇಕಾದ ಸಹಾಯವನ್ನು ಮಾಡುತ್ತಾನೆ."

ಟಪ್ಪೆಂದು ಒಂದು ತೊಟ್ಟು ನೀರು ಮಾಲತಿಯ ಕಣ್ಣಿಂದ ಕಾಲಬಳಿ ಜಮಖಾನದ ಮೇಲೆ ಬಿತ್ತು.

ಸುರೇಂದ್ರನೂ ಅದನ್ನು ನೋಡಿದನು. ಸ್ವಲ್ಪ ತಡೆದು "ನಿನ್ನ

ಹತ್ತಿರ, ಬಹುಶಃ ಹಣವೇನೂ ಇದ್ದಂತೆ ಇಲ್ಲ" ಎಂದನು. ಮಾಲತಿ ತಲೆಯಲ್ಲಾಡಿಸಿದಳು.

"ಅದು ನನಗೆ ಗೊತ್ತು. ಇದನ್ನು ತೆಗೆದುಕೋ" ಎಂದು ಹಣದ 'ಪರ್ಸ್' ಒಂದನ್ನು ಅವಳ ಕೈಗೆ ಕೊಟ್ಟು "ಇದರಲ್ಲಿ ಇರುವಷ್ಟು, ಬೇರೆ ಯಾವ ಮಾರ್ಗವೂ ಇಲ್ಲದಿರುವಾಗ, ಒಂದು ವರ್ಷದವರೆಗೂ ನಿರಾತಂಕ ವಾಗಿ ಇರಲು ಸಾಕಾಗುತ್ತೆ. ಇದಾದ ಮೇಲೆ ದೇವರ ಕೃಪೆ" ಎಂದನು.

ಇನ್ನೊಂದು ತೊಟ್ಟು ನೀರು ಮಾಲತಿಯ ಕಣ್ಣಿಂದ ಬಿತ್ತು.

"ಆ ದಿನ ನನಗೆ ಹುಚ್ಚು ಹಿಡಿದಿತ್ತು. ಅದಕ್ಕೇ ನಾನು ಆ ಪ್ರಶ್ನೆ ಹಾಕಿದ್ದು. ಯಾರ ಪಾಪದಿಂದ ಹೀಗಾಯಿತು? ಎಂದು. ಆದರೆ ಈಗ ಜ್ಞಾನ ಬಂದಿದೆ. ಈಗ ನನಗೆ ಗೊತ್ತಾಗಿದೆ. ನನ್ನ ಪಾಪದಿಂದಲೇ ನನಗೆ ಈಗ ಹೀಗಾಗಿದೆ. ನೀನು, ಪಾಪ, ನಿರ್ದೋಷಿ! ನಾನೇ ಜಯಾಳನ್ನು ನನ್ನ ಕೈಯಾರೆ ಕೊಂದು ಹಾಕಿದೆ."

ಅವನ ಕಣ್ಣುಗಳಲ್ಲಿ ನೀರು ತುಂಬಿತು. ಅವನ್ನೊರಸಿಕೊಂಡು ಸುರೇಂದ್ರನು "ಬೇಕಾದಷ್ಟು ಪಾಪ ಮಾಡಿದೆ. ಇನ್ನು ಮಾಡುವುದಿಲ್ಲ. ಸ್ವಲ್ಪ ದಿನ ಒಳ್ಳೆಯ ಮಾರ್ಗದಲ್ಲಿ ನಡೆದು ನೋಡುತ್ತೇನೆ. ಅದರಿಂದ ಸುಖವಾಗಬಹುದೇನೋ!"

ಮಾಲತಿ ನಿಂತೇ ಇದ್ದಳು. ಸುರೇಂದ್ರ ಪತ್ರ ಬರೆದು ಮುಗಿಸಿದನು. ಅದನ್ನು ಒಂದು ಲಕೋಟೆಯಲ್ಲಿಟ್ಟು ಅಂಟಿಸಿ ಮೇಲೆ ವಿಳಾಸವನ್ನು ಬರೆದನು. ಆಮೇಲೆ ಲಕೋಟೆಯನ್ನು ಅವಳ ಕಡೆ ತೋರಿ "ಇದನ್ನು ತೆಗೆದುಕೋ ...ಶಾಂಬಜಾರಿನಲ್ಲಿ ಅವನಿದ್ದಾನೆ. ಹುಡುಕಲು ಕಷ್ಟವಾಗುವುದಿಲ್ಲ ....ಆಮೇಲೆ ನಿನಗೆ ಎಷ್ಟೋ ಉಪಕಾರವಾಗುತ್ತದೆ" ಎಂದನು. ನಡುಗುವ ಕೈಗಳಿಂದ ಮಾಲತಿಯು ಪತ್ರವನ್ನು ತೆಗೆದುಕೊಂಡಳು. ಸುರೇಂದ್ರನು "ಆ 'ಪರ್ಸ'ನ್ನೂ ತೆಗೆದುಕೋ" ಎಂದನು.

ಅವಳು ಅದನ್ನೂ ತೆಗೆದಿಟ್ಟುಕೊಂಡಳು. ಹೋಗುತ್ತಾ ಬಾಗಿಲ ಬಳಿ ಕ್ಷಣಕಾಲ ನಿಂತಳು. ಸುರೇಂದ್ರನು ಮನಸ್ಸಿನ ಸಂಕಟವನ್ನು ತಡೆದಿಟ್ಟುಕೊಂಡು "ಧರ್ಮ ಮಾರ್ಗದಲ್ಲಿಯೇ ಇರು" ಎಂದು ಕೂಗಿದನು.

ಮಾಲತಿಯು ಇನ್ನೂ ಮುಂದೆ ಒಂದು ಹೆಜ್ಜೆ ಹಾಕಿದಳು. ಆಗ

ಸುರೇಂದ್ರನಾಥನು "ಮಾಲತೀ ಆದಿನದ ವಿಷಯವನ್ನು ಮರೆತು ಬಿಡು" ಎಂದನು.

ಮಾಲತಿಯು ಬಾಗಿಲನ್ನು ದಾಟಿ ಗೋಡೆಯನ್ನು ಹಿಡಿದುಕೊಂಡು ಹಾಗೆಯೇ ನಿಂತಕೊಂಡಳು. ಮತ್ತೆ ಒಳಗಣಿಂದ ಸುರೇಂದ್ರನು "ಮಾಲತೀ ಆಸಂದರ್ಭದಲ್ಲಿ, ಕಷ್ಟದಲ್ಲಿ ಬಿದ್ದಾಗ ನನ್ನನ್ನು ಜ್ಞಾಪಿಸಿಕೊಂಡು ಬರಿ...." ಎಂದು ಕೂಗಿದನು.

ಮಾಲತಿ ಹೊರಗೆ ನಿಂತು ಅತ್ತಳು. ಬಿಕ್ಕಿ ಬಿಕ್ಕಿ ಅತ್ತಳು. ಮುಂದೆ ಹೆಜ್ಜೆಯಿಡಲಾಗಲಿಲ್ಲ. ಆಗ ಒಳಗಣಿಂದ ಸುರೇಂದ್ರನು ಆರ್ತನಾಗಿ ಕೂಗಿದನು "ಮಾಲತೀ!"

ಮಾಲತಿ ಅಲ್ಲೇ ನಿಂತಿದ್ದಳು.

ಮತ್ತೆ ಕೂಗು ಬಂತು "ಮಾಲತೀ !"

ಅವಳು ತಡೆಯಲಾರದೆ ಹೆಜ್ಜೆ ಹಿಂದೆ ಹಾಕಿ ಕೋಣೆಯೊಳಹೊಕ್ಕು ನಿಂತಳು. ಕಣ್ಣುಗಳನ್ನು ಕೈಗಳಿಂದ ಮುಚ್ಚಿಕೊಂಡು ಸುರೇಂದ್ರನು "ಜಯಾಳ ಶೋಕ ಇನ್ನೂ ಮರೆಯಲಾಗುವುದಿಲ್ಲ, ಮಾಲತೀ !" ಎಂದನು.

ಮಾಲತಿಯು ಹತ್ತಿರ ಬಂದು ಕೂತಳು. ಅವಳ ಕಾಲುಗಳು ನಡುಗುತ್ತಿದ್ದುವು.

"ಮಾಲತೀ....ಇನ್ನು ಯಾವ ಆಧಾರದ ಮೇಲೆ ಬದುಕಿರಲಿ ?" ಸುರೇಂದ್ರನು ಮಗುವಿನಂತೆ ನಾಚುಗೆ ಬಿಟ್ಟು ಅಳತೊಡಗಿದನು. "ನೀನೂ ನನ್ನನ್ನು ಬಿಟ್ಟುಹೋದರ ನಾನು ಬದುಕಿರುವುದಿಲ್ಲ, ಮಾಲತೀ !" ಹೀಗೆಂದವನೇ ಕೆಳಗೆ ಬಿದ್ದನು.

ಮಾಲತಿಯು ಹತ್ತಿರ ಬಂದು ಅವನ ತಲೆಯನ್ನು ಸ್ನೇಹದಿಂದ ಎತ್ತಿ ತನ್ನ ವಕ್ಷಸ್ಥಳದ ಮೇಲೆ ಇರಿಸಿಕೊಂಡು ಕಣ್ಣೊರಸುತ್ತಾ "ನಾನು ಹೋಗುವುದಿಲ್ಲ" ಎಂದು ಮೃದುವಾಗಿ ಹೇಳಿದಳು.

ಅವರಿಬ್ಬರೂ ಹಾಗೆಯೇ ಕೂತಿದ್ದು ಅತ್ತರು. ಮಾಲತಿಯು ಪುನಃ ತನ್ನ ಸೆರಗಿನಿಂದ ಅವನ ಕಣ್ಣೊರಸಿದಳು. ಸುರೇಂದ್ರನು ಕಣ್ಣುಗಳನ್ನು ಮುಚ್ಚಿಕೊಂಡೇ ಇದ್ದನು. ಅದೇ ಭಾವದಲ್ಲಿ ಭಗ್ನಸ್ವರದಲ್ಲಿ "ಅವತ್ತು ನೀನು ಏನು ಹೇಳಿದ್ದೆ, ಜ್ಞಾಪಕವಿದೆಯೇ ?" ಎಂದನು.

“ಏನು ?”

“ಚಿರದಾಸಿಯಾಗಿರುತ್ತೇನೆ, ಎಂದು.”

“ಹೌದು ... ಹಾಗೆಯೇ ಇರುತ್ತೇನೆ.”

ಸುರೇಂದ್ರನಾಥನು ತಕ್ಷಣ ಎದ್ದು ಉಚ್ಚಸ್ವರದಲ್ಲಿ ಕೂಗಿದನು.

“ಹರಿಚರಣ್ !”

“ಸ್ವಾಮೀ, ಅಪ್ಪಣೆ.”

“ನೌಕೆ ಬಿಚ್ಚಿಹಾಕು, ಹೊರಡಲಿ.”

“ಈಗಲೇ ?”

“ಹೂಂ, ಈಗಲೇ ?”

* * * *

# ೬

ಎಲ್ಲಿಯವರೆಗೆ ನೌಕೆಯು ಕಣ್ಣಿಗೆ ಬೀಳುತ್ತಿತ್ತೋ ಅಲ್ಲಿಯವರೆಗೆ ಸದಾನಂದನು ಹಾಡು ನಿಲ್ಲಿಸಿ ನೋಡುತ್ತಿದ್ದು ಆ ಮೇಲೆ ಮನೆಗೆ ಬಂದು ಮಲಗಿದನು. ಮನಸ್ಸು ಕೆಟ್ಟು ಹೋಗಿತ್ತು. ನಿದ್ದೆ ಬರಲಿಲ್ಲ.

ಬೆಳಗೆದ್ದು ಶುಭದಾ ಬಳಿ ಬಂದು "ನಾನು ಇಲ್ಲಿಯೇ ಊಟಮಾಡಿ ಕೊಂಡಿರಲಾಗುವುದಿಲ್ಲವೇ ?" ಎಂದನು.

ಶುಭದಾ ಒಣಮುಖದಿಂದ "ಏಕಾಗುವುದಿಲ್ಲ, ಅಗತ್ಯವಾಗಿ" ಎಂದಳು.

"ನಾನು ಹಾಗೆಯೇ ಮನಸ್ಸು ಮಾಡಿದ್ದೇನೆ. ನನಗೆ ಬೇರೆ ಯಾರೂ ಇಲ್ಲ. ಎರಡು ಹೊತ್ತೂ ಇಲ್ಲಿಯೇ ಊಟಮಾಡುತ್ತೇನೆ "

ಶುಭದಾ ಸ್ವಲ್ಪ ಯೋಚಿಸಿ "ಹಾಗೇ ಆಗಲಿ, ಅಗತ್ಯವಾಗಿ" ಎಂದಳು.

"ಚಿಕ್ಕಮ್ಮನಿಗೆ ಅಲ್ಪ ಸ್ವಲ್ಪ ಜಮೀನಿದೆ, ಅವರ ಅತ್ತೆಯ ಮನೆಯ ವಶದಲ್ಲಿ. ಅದು ನನಗೇ ಸಿಕ್ಕಿದೆ. ಒಂದೆರಡು ದಿನಗಳಾದ ಮೇಲೆ ಅಲ್ಲಿಗೆ ವ್ಯವಸ್ಥೆ ಮಾಡಲು ಹೋಗಬೇಕಾಗಿದೆ."

ಶುಭದಾ "ಹಾಗೇ ಆಗಲಿ, ನೀನಲ್ಲದೆ, ಇನ್ನು ಯಾರು ನೋಡ ಬೇಕು ಅದೆಲ್ಲಾ ?" ಎಂದಳು.

"ಅದಕ್ಕೋಸ್ಕರವೇ ನನ್ನ ಮನೆಯಲ್ಲಿರುವ ಅಲ್ಪ ಸ್ವಲ್ಪ ಸಾಮಾನೆಲ್ಲಾ ಇಲ್ಲಿ ತಂದಿಡುತ್ತೇನೆ ಇಲ್ಲದೆ ಹೋದರ ಕಳ್ಳರು ಇದ್ದಬದ್ದದ್ದೆಲ್ಲಾ ತೆಗೆದು ಕೊಂಡು ಹೋಗಿ ಬಿಟ್ಟಾರು."

ಶುಭದಾ ಅವನ ಮಾತಿನ ಹಿಂದೆ ಇದ್ದ ಉದ್ದೇಶ್ಯವನ್ನು ಗ್ರಹಿಸ ಲಾರದೆ

"ಅದೇನು? ಹಿಂದೆ ಯಾವಾಗ ಕಳ್ಳತನವಾಯಿತು ?" ಎಂದಳು.

"ಹಿಂದೆ ಇಲ್ಲದೆ ಇರಬಹುದು. ಈಗ ಆಗಬಹುದು."

ಶುಭದಾ ಸುಮ್ಮನಿದ್ದಳು.

ಇದಾದ ಎರಡು ದಿನಗಳಿಗೆ ಸದಾನಂದನು ತನ್ನ ಮನೆಯಲ್ಲಿದ್ದ ಧಾನ್ಯದ ಡಬ್ಬಗಳು ಇತ್ಯಾದಿಯಾಗಿ ವಿಶಿಷ್ಟವನ್ನೂ ಒಂದೊಂದಾಗಿ

ಮುಖೋಪಾಧ್ಯಾಯನ ಮನೆಗೆ ಸಾಗಿಸಿದನು. ಇದನ್ನು ನೋಡಿ ಶುಭದಾ "ಸದಾನಂದ, ಇದೇನು ನಿನ್ನ ಕೆಲಸ? ಜನ ಏನೆಂದು ಕೊಂಡಾರು?" ಎಂದು ಆಶ್ಚರ್ಯದಿಂದಲೂ ಕಳವಳದಿಂದಲೂ ಕೇಳಿದಳು.

ಸದಾನಂದನು ನಕ್ಕು "ಸಾಮಾನುಗಳು ನನ್ನವು. ಜನದ್ದಲ್ಲ. ನಾನು ಇಲ್ಲಿಯೇ ಊಟ ಮಾಡುತ್ತೇನೆ. ಇಲ್ಲಿಯೇ ಇರುತ್ತೇನೆ. ನನ್ನ ಸಾಮಾನು ಗಳೂ ಇಲ್ಲಿಯೇ ಇರುತ್ತವೆ." ಎಂದನು.

ಗ್ರಾಮದ ಜನ ನಿಜವಾಗಿ ನಾನಾ ವಿಧವಾಗಿ ಆಡಲು ಆರಂಭಿಸಿದರು. ಹಾರಾಣನ ಹೆಂಡತಿ ಹುಚ್ಚು ಸದಾನಂದನ ಮೇಲೆ ಮಂತ್ರ ಹಾಕಿದ್ದಾಳೆಂದು ಕೆಲವರು, ಸದಾನಂದನು ಪೂರ್ತಿಯಾಗಿ ಹುಚ್ಚಾಗಿ ಬಿಟ್ಟಿದ್ದಾನೆ ಎಂದು ಇತರರು, ಇನ್ನೂ ಕೆಲವರು ಸದಾನಂದ ಛಲನಾಳನ್ನು ಮದುವೆಯಾಗು ತ್ತಾನೆ, ಅದಕ್ಕೇ ಇದೆಲ್ಲಾ ...ಹೀಗೆ ಮನಸ್ಸಿಗೆ ಬಂದಂತೆ ಮಾತನಾಡಿ ಕೊಂಡರು.

ಸದಾನಂದನು ಎಲ್ಲವನ್ನೂ ಕೇಳಿ ನಕ್ಕನು. ಯಾರಾದರೂ ಹತ್ತಿರ ಬಂದು ಈ ವಿಷಯ ಪ್ರಶ್ನೆಮಾಡಿದರೆ ತಕ್ಷಣ ಕೀರ್ತನೆಯೊಂದನ್ನು ಹಾಡಿ ಮಾತು ಮರೆಸಿಬಿಡುತ್ತಿದ್ದನು—ಇನ್ನು ಕೆಲವರಿಗೆ ಹುಡುಗಾಟಿಕೆ ಮಾಡಿ "ಹೋಗಲಿ ಬಿಡು, ನಾನು ಸತ್ತರೆ ನಿನ್ನ ಹೆಸರಿಗೆ ಎರಡೆಕರೆ ಹೊಲ ಬಿಡು ವಂತೆ ಮಾಡಿ ಹೋಗುತ್ತೇನೆ" ಎಂದನು. ಬೇರೆಯೊಬ್ಬರಿಗೆ "ನಾನು ಹುಚ್ಚ ನಿಮಗೇ ಗೊತ್ತಿಲ್ಲ? ಹುಚ್ಚ, ಹುಚ್ಚು ಕೆಲಸವಲ್ಲದೆ ಬೇರೇನು ಮಾಡಬಲ್ಲ?" ಎಂದು ಬಾಯಿ ಮುಚ್ಚಿಸುತ್ತಿದ್ದನು.

ಕ್ರಮೇಣ ಜನದ ಮಾತು ನಿಂತಿತು. ಆದರೂ ಅವರಲ್ಲಿ ಅಸೂಯಾ ಪರರಾದವರು ಒಳಗೊಳಗೇ ಉರಿಯಲು ತೊಡಗಿದರು. ಭವತಾರಣ ಗಂಗುಲಿಯು ಸದಾನಂದನನ್ನು ಮನೆಗೆ ಬರಮಾಡಿಕೊಂಡು "ಏನೋ ಸದೂ, ಇಂತಹ ಕೆಲಸಮಾಡಿದೆ....? ಯಾರು ಹೇಳಿಕೊಟ್ಟರೋ?" ಎಂದು ಉಪದೇಶ ಮಾಡಿದನು.

ಸದಾನಂದನು ದುಃಖಿತನಾದವನಂತೆ ನಟಿಸುತ್ತಾ "ಆದದ್ದಾಗಿ ಹೋಯಿತು ಮಾವ. ಈಗೇನಾಯಿತು ಬಿಡು. ನಾಳೆ ಚಿಕ್ಕಮ್ಮನ ಅತ್ತೆಯ ಮನೆಗೆ ಹೋಗುತ್ತೇನಲ್ಲ, ಬರುವಾಗ ಅಲ್ಲಿಂದ ಒಂದೆರಡು ಅಕ್ಕಿ, ಬೇಳೆ

ಮೂಟೆಗಳನ್ನು ನಿಮ್ಮ ಮನೆಯಲ್ಲಿ ತಂದು ಹಾಕಿಬಿಡುತ್ತೇನೆ....ಆಯಿತೋ ಇಲ್ಲವೋ ?" ಎಂದನು.

ಗಂಗುಲಿ ಮಹಾಶಯರು ವಿಪರೀತ ಕೋಪದಿಂದ "ಲೋ ಸದಾನಂದ, ನಿಮ್ಮಪ್ಪ ನನ್ನ ಮೇಲೆ ಎಷ್ಟು ಗೌರವ ಇಟ್ಟಿದ್ದ ಗೊತ್ತಿದೆಯೇ ನಿನಗೆ ?" ಎಂದನು.

"ಗೊತ್ತಿಲ್ಲದೆ ಏನು? ನಾನು ತಾನೇ ಅಗೌರವ ಮಾಡಿದೆನೇ ನಿಮಗೆ ?"

"ಮತ್ತೆ ಇಂತಹ ಮಾತೇ ಆಡುವುದು ನನಗೆ ?"

ಸದಾನಂದನು ಅಪ್ರತಿಭಭಾವದಿಂದ "ನನ್ನ ಬುದ್ಧಿಯೇ ಹಾಗೇ.... ಯಾವಾಗಲೂ ಚೆನ್ನಾಗಿರುವುದಿಲ್ಲ" ಎಂದನು.

ಗಂಗುಲಿಗೆ ಇನ್ನೂ ಕೋಪ ಬಂದು "ಬರುತಾ ಬರುತಾ ಬುದ್ಧಿ ಕೆಟ್ಟು ಹೋಗುತಾ ಇದೆ ನಿನಗೆ" ಎಂದನು.

ಸದಾನಂದನು ಮೃದುವಾಗಿ ನಗುತ್ತಾ "ನೀವು ಮನಸ್ಸು ಮಾಡಿದರೆ ಹಾಗೆ ಆಗದ ಹಾಗೆ ನೋಡಿಕೊಳ್ಳಬಹುದು" ಎಂದನು.

"ಹೊರಟು ಹೋಗು. ನನ್ನೆದುರಿಗಿರಬೇಡ." ಎಂದು ಗಂಗುಲಿ ಗರ್ಜಿಸಿದನು.

"ಅಪ್ಪಣೆ" ಎಂದು ನಗುತ್ತಲೇ ಸದಾನಂದನು ರಾಮನಾಮ ಗಾನ ಮಾಡುತ್ತಾ ಹೊರಗೆ ಬಂದು ಒಂದು ಸಲ ಗಟ್ಟಿಯಾಗಿ ಗಹಗಹಿಸಿ ನಕ್ಕನು.

ಹತ್ತಿರದಲ್ಲಿ ಹೋಗುತ್ತಿದ್ದ ಕಂಗಾಳೀಚರಣನು ತಲೆಯ ಮೇಲೆ ಪಡುವಲಕಾಯಿಯ ಹೊರೆಯನ್ನು ಸಂತೆಗೆಂದುಕೊಂಡು ಹೋಗುತ್ತಿದ್ದವನು ಸದಾನಂದನ ನಗುವನ್ನು ನೋಡಿ "ಏನೂ ಸದಾನಂದಪ್ಪಾ, ಯಾಕಿಷ್ಟು ಮಜ ಇವತ್ತು ?" ಎಂದನು.

ಸದಾನಂದನು ನಗುತ್ತಲೇ "ಇವತ್ತು ನನಗೆ ಗಂಗುಲಿಬಾಬುಗಳ ಮನೆಯಲ್ಲಿ ಔತಣವಾಯಿತು. ಮಜವಾಗಿತ್ತು. ಚೆನ್ನಾಗಿ ತಿಂದೆ" ಎಂದನು.

"ಓಹೋ ಹಾಗೇನು ...? ನೀವು ಬ್ರಾಹ್ಮಣರಲ್ಲವೇ ?"

ಸದಾನಂದನು ಅವನ ಹತ್ತಿರ ಈ ನಡುವೆ ಪಡುವಲಕಾಯಿಯ ಬೆಲೆ ಹೇಗೆಂದು ವಿಚಾರಮಾಡಿ, ಮತ್ತೆರಡು ಮಾತುಕಥೆಯಾಡಿ, ನಿಲ್ಲಿಸಿದ್ದ

ಹಾಡಿನ ಚರಣವನ್ನು ಮತ್ತೆ ಹಿಡಿದು ಹಾಡಿಕೊಂಡು ಹೋದನು.

* * * *

ಒಂದು ದಿನ ಮಧ್ಯಾಹ್ನ ಊಟ ಮಾಡುತ್ತ, ಬಡಿಸುತ್ತ ಇದ್ದ ಶುಭದಾಳ ಬಾಡಿದ ಮುಖವನ್ನು ಕಂಡು "ಛಲನಾ ತುಂಬಾ ಬೆಳೆದುಬಿಟ್ಟಿದ್ದಾಳೆ, ಅಲ್ಲವೇ ಅತ್ತೆ ?" ಎಂದನು

ಶುಭದಾ ಉದಾಸೀನದಿಂದ ನಿಟ್ಟುಸಿರು ಬಿಡುತ್ತಾ "ಹೌದಪ್ಪಾ !" ಎಂದಳು.

"ಇನ್ನು ಅವಳನ್ನು ಹಾಗೆಯೇ ಬಿಟ್ಟರೆ ನಾಲ್ಕು ಜನ ನಾಲ್ಕು ಮಾತಂತಾರೆ. ನಮಗೂ ಚೆನ್ನಾಗಿ ಕಾಣುವುದಿಲ್ಲ."

"ಆ ಭಾರವೆಲ್ಲಾ ದುರ್ಗಾಮಾತೆಯ ಮೇಲೆಯೇ ಹಾಕಿಬಿಟ್ಟಿದ್ದೇನೆ."

"ದುರ್ಗಾದೇವಿ ಬಂದು ಛಲನಾ ಮದುವೆ ಮಾಡುತ್ತಾಳೆಯೇ ಅತ್ತೆ?"

ಶುಭದಾ ಸುಮ್ಮನಿದ್ದಳು.

"ಹರಮೋಹನ್ ಬಾಬುಗಳ ಮಗ ಶಾರದಾಚರಣನಿಗೆ ಛಲನಾಳನ್ನು ಕೊಟ್ಟು ಲಗ್ನಮಾಡಿದರೆ ಹೇಗಿರುತ್ತೆ ಅತ್ತೇ ?"

ಶುಭದಾ ಸರಿಯಾಗಿ ಅರ್ಥಮಾಡಿಕೊಳ್ಳದೆ "ಶಾರದಾಚರಣನೊಂದಿಗೇ ?" ಎಂದು ಕೇಳಿದಳು.

"ಹೌದು."

"ಹೇಗೆ ಸಾಧ್ಯ ಹೇಳು ?"

"ಏಕೆ ಸಾಧ್ಯವಿಲ್ಲ? ಪ್ರಸ್ತಾಪ ಏಕೆ ಮಾಡಕೂಡದು ?"

"ಏನೋಪ್ಪ !"—ಶುಭದಾ ಏನೂ ತೋಚದೆ ಅಷ್ಟು ಮಾತ್ರ ಅಂದು ಸುಮ್ಮನಿದ್ದಳು.

ಅವಳ ನಿರಾಸೆಯನ್ನು ಗ್ರಹಿಸಿ ಮೆಲ್ಲಗೆ ನಕ್ಕು ಸದಾನಂದನು "ಒಂದು ದಿನ ಈ ವಿಷಯವಾಗಿ ಶಾರದಾಚರಣನೊಂದಿಗೆ ಮಾತಾಡಿದೆ. ಅವನೇನೂ ಆಕ್ಷೇಪಣೆ ಹೇಳಲಿಲ್ಲ" ಎಂದನು

ಶುಭದಾ ಮುಖದಲ್ಲಿ ಒಂದು ಬಗೆಯ ಮೆರುಗು ಕಾಣಿಸಿ ಕೂಡಲೇ ಮಾಯವಾಯಿತು.

"ಆದರೂ ಅವನ ತಂದೆಗೆ ಇಷ್ಟವಾಗುತ್ತೋ ಇಲ್ಲವೋ. ಅವನ

ಬಳಿ ಯಾರು ಪ್ರಸ್ತಾಪಮಾಡುತ್ತಾರೆ ಹೇಳು !"

"ಏಕೆ ಇಷ್ಟವಾಗಕೂಡದು? ನಾನೇ ಹೋಗಿ ಮಾತಾಡಿ ಇಷ್ಟಪಡುವಂತೆ ಮಾಡುತ್ತೇನೆ. ಏಕೆಂದರೆ ಮುಖ್ಯವಾಗಿ ಭಲನಾಳಿಗೆ ಮದುವೆ ಮಾಡಬೇಕು ಹೇಗಾದರೂ."

ಶುಭದಾ ಭಯದಿಂದ ಆಸೆ ನಿರಾಸೆಗಳ ಮಧ್ಯೆ ತೂಗಾಡುತ್ತಾ ಮೆಲ್ಲಗೆ "ಆತ ಇಷ್ಟಪಡುತ್ತಾರೆಯೇ !" ಎಂದಳು.

"ಓಹೋ, ತಪ್ಪದೆ !"

"ನಿನಗೆ ಹೇಗೆ ಗೊತ್ತು ?"

ಹುಚ್ಚ ಸದಾನಂದನು ನಕ್ಕು "ನನಗೆ ಗೊತ್ತು, ನೀವೇನೂ ಆ ವಿಚಾರ ಯೋಚಿಸಬೇಡಿ. ನಾನವನನ್ನು ತಪ್ಪದೆ ಒಪ್ಪಿಸುತ್ತೇನೆ" ಎಂದನು.

ವೃದ್ಧನಾದ ಹರಮೋಹನನನ್ನು ಹೇಗೆ ಒಪ್ಪಿಸಬೇಕೋ ಏನು ಮಾಡಿದರೆ ಅವನು ಒಪ್ಪಿಕೊಳ್ಳುತ್ತಾನೋ ಅದು ಕೂಡ ಸದಾನಂದನಿಗೆ ಗೊತ್ತು.

ಸಂತೋಷವನ್ನು ತಡೆಯಲಾಗದೆ ಶುಭದಾ ಹಾಲು ತರುವುದಕ್ಕೆ ಅಡುಗೆ ಮನೆಗೆ ಹೋದಳು. ಹಾಲಿನ ಬಟ್ಟಲನ್ನು ಕೈಗೆ ತೆಗೆದುಕೊಂಡಾಗ ಕಣ್ಣು ನೀರು ತುಂಬಿ ಒಂದು ತೊಟ್ಟು ಅವಳ ಕೈಮೇಲೆ ಬಿತ್ತು. ಆಕೆ ಮತ್ತೆ ಊಟದ ಮನೆಗೆ ಬಂದು "ಸದಾನಂದ, ಸ್ವಲ್ಪ ಇರೋ, ತಂದೇ.... ಹಾಲು ಕಾಸಿಕೊಡುತ್ತೇನೆ....ಕುಡಿದು ಹೋಗುವೆಯಂತೆ" ಎಂದು ಹೇಳಿ ಮತ್ತೆ ಒಳಗೆ ಹೋದಳು.

ಊಟವಾದ ಮೇಲೆ ಸದಾನಂದನು ತನ್ನ ಹೊಲದ ಕಡೆ ಹೊರಟನು. ಅಲ್ಲಿ ಅವನ ರೈತರು ಕೆಲಸಮಾಡುತ್ತಿದ್ದರು. ಅವರೊಂದಿಗೆ ಅದೂ ಇದೂ ಮಾತಾಡಿ ಹತ್ತಿರದಲ್ಲಿಯೇ ಇದ್ದ ಗುಡ್ಡವೊಂದನ್ನು ಹತ್ತಿ ದುರ್ಗಾದೇವಿಯ ನಾಮಸ್ಮರಣೆ ಮಾಡಿ ಸ್ವಲ್ಪ ಹೊಗೆಸೊಪ್ಪನ್ನು ಚಿಲುಮೆಯೊಳಗೆ ಹಾಕಿ ಸೇದುತ್ತಾ ಕೂತನು.

ಆ ಮೇಲೆ ನೆಟ್ಟಗೆ ಹರಮೋಹನ ಬಾಬುಗಳ ಮನೆಗೆ ಬಂದನು. ಸದಾನಂದನನ್ನು ನೋಡುತ್ತಲೇ ಹುಕ್ಕಾ ಸೇದುತ್ತಿದ್ದ ವೃದ್ಧ ಹರಮೋಹನನು "ಅರೇ, ನೀನು ಬಹಳ ದಿವಸಗಳಿಂದ ಕಾಣಿಸಲಿಲ್ಲವಲ್ಲೋ," ಎಂದು ಕೇಳಿ "ಅರೇ...ಮರೆತುಹೋದೆ. ನಿಮ್ಮ ಚಿಕ್ಕಮ್ಮ ಕಾಶಿಯಲ್ಲಿ ಕಾಲವಾದ

ರಂತೆ? ಅನ್ಯಾಯ, ಪಾಪ! ಛೆ ಛೆ! ನೀನು ಯಾವಾಗ ಬಂದೆ?" ಎಂದನು.

ಸದಾನಂದನು ಸಂಕೋಚಪಡದೆ ಹತ್ತಿರ ಹೋಗಿ ಕೂತುಕೊಂಡು "ನಿಮ್ಮ ಹತ್ತಿರ ಮದುವೆ ವಿಷಯ ಮಾತಾಡುವುದಕ್ಕೆ ಬಂದೆ" ಎಂದನು.

"ಯಾರ ಮದುವೆ?"

"ನಿಮ್ಮ ಮಗ, ಶಾರದಾಚರಣನ ಮದುವೆಯನ್ನು ಕುರಿತು."

ಆ ಮಾತು ಕೇಳಿದ ತಕ್ಷಣ ಮುದುಕನು ಗಂಭೀರ ರೂಪವನ್ನು ತಾಳಿದನು. ನರೆತ ಕೂದಲಿನವರ ಸಂಗಡ ಹೊರತು, ಆಗತಾನೇ ಚಿಗುರುತ್ತಿದ್ದ ಮೀಸೆಯುವರೊಂದಿಗೆ ಇಂತಹ ಮಾತುಗಳು ಕುದುರುವುದಿಲ್ಲವೆಂದು ಅವನ ನಂಬಿಕೆ. ಸದಾನಂದನಿಗೆ ಬುದ್ಧಿ ಸರಿಯಿಲ್ಲವೆಂದು ಕೆಲವು ದಿವಸಗಳಿಂದ ಕೇಳಿದ್ದನಷ್ಟೆ!

ಮತ್ತೆ "ಯಾರ ಮದುವೆ? ಶಾರದಾಚರಣನ ಮದುವೆಯೇ?" ಎಂದನು.

"ಹೌದು ಸ್ವಾಮಿ. ಶಾರದಾಚರಣನ ಮದುವೆ."

ಮುದುಕನು ಅಸ್ಥಿರವಾದ ಮನಸ್ಸಿನಿಂದ ಮನೆಯೊಳಗೆ ಬೆರಳು ತೋರಿಸುತ್ತಾ "ಅಲ್ಲಿ ಶಾರದಾಚರಣನು ಇರಬಹುದು. ಹೋಗು" ಎಂದನು. ಅವನ ಆಕೃತಿಯನ್ನೂ ಭಂಗಿಯನ್ನೂ ಗ್ರಹಿಸಿ ಸದಾನಂದನು "ಶಾರದನೊಂದಿಗೆ ನನ್ನ ಕೆಲಸವಿಲ್ಲ. ನಾನು ನಿಮ್ಮ ಬಳಿಯೇ ಬಂದೆ" ಎಂದನು.

"ನನ್ನ ಹತ್ತಿರವೇ?"

"ಹೌದು, ಈಗಲೇ ಹೇಳಲಿಲ್ಲವೇ. ಶಾರದಾಚರಣನಿಗೆ ಮದುವೆ ಮಾಡುವುದಿಲ್ಲವೇ?"

"ಏಕೆ, ಮಾಡುವುದಿಲ್ಲ. ಅದಿರಲಿ, ಶಾರದಾನ ಮದುವೆಗೂ ನಿನಗೂ ಏನು ಸಂಬಂಧ?"

"ನನಗೇನೂ ಸಂಬಂಧವಿಲ್ಲದೇನೇ ಸುಮ್ಮನೆ ನಿಮ್ಮ ಬಳಿ ಬಂದೆನೆಂದು ಕೊಂಡಿದ್ದೀರಾ?"

"ಈ ವಿಷಯ ನೀನು ಮಾತಾಡುತ್ತೀಯಾ?, ನನ್ನೊಂದಿಗೆ? "

"ಆಹಾ!"

"ಏಕೆ....ನಿನಗೆ ಹೇಗೆ ಗೊತ್ತಾಗುತ್ತೆ ..ಈ ವ್ಯವಹಾರದ ವಿಷಯ?"

"ಏಕೆ ಗೊತ್ತಾಗುವುದಿಲ್ಲ. ನಮ್ಮ ತಂದೆ ಕಾಲವಾದ ಲಾಗಾಯಿತು ನಾನೇ ಅಲ್ಲವೇ ಹೊಲ, ಗದ್ದೆ ನೋಡಿಕೊಳ್ಳುತ್ತಿರುವುದು? ಸಂಸಾರದ ಆಗುಹೋಗು, ಹಣಕಾಸು ವಹಿವಾಟು ಈ ವಿಷಯವಾಗಿ ನನ್ನ ಬಳಿಯೂ ಮಾತನಾಡುವವರು ಆಡಿಯೇ ಆಡುತ್ತಾರೆ. ಮದುವೆ ವಿಷಯಕ್ಕೆ ಮುಂಚೆ ಪರಸ್ಪರ ಕೊಡುವುದು, ತೆಗೆದುಕೊಳ್ಳುವುದು ಈ ನಿಯಮ ನಮ್ಮ ಜನಗಳಲ್ಲಿರುವುದು ಗೊತ್ತು. ಅದು ನಿಮಗೆ ಎಷ್ಟು ತಿಳಿಯುತ್ತೋ ನನಗೂ ಅಷ್ಟೇ ತಿಳಿಯುತ್ತೆ. ಹಾಗೆಂದೇ ನಿಮ್ಮ ಬಳಿ ನಾನು ಬಂದಿರುವುದು."

ಆಗ ಮುದುಕ ಹರಮೋಹನನಿಗೆ ಅನ್ನಿಸಿತು. "ಇವನು ನಿಜವಾಗಿ ಹುಚ್ಚನೆ!...ಎಂದಿಗೂ ಅಲ್ಲ. ಇಷ್ಟು ಚೆನ್ನಾಗಿ ಮಾತನಾಡುತ್ತಾನೆ!" ಎಂದು ಅವನ ಮುಖವನ್ನು ಸ್ವಲ್ಪ ಆಶ್ಚರ್ಯದಿಂದ ನೋಡಿ ಸ್ವಲ್ಪ ನಗೆ ಮುಖ ಹಾಕಿ ತಕ್ಷಣ ಏನೋ ತೋಚಿ ಮುಖ ಮೊದಲಂತೆ ಗಂಟು ಹಾಕಿಕೊಂಡು "ಹೌದು ಕೊಡುವುದು ತೆಗೆದುಕೊಳ್ಳುವುದು ಪದ್ಧತಿಯೇ...ಆ ವಿಷಯದಲ್ಲಿ ಅವಶ್ಯವಾಗಿ ಸೂತು ಕಥೆಯಾಗಲೇಬೇಕು" ಎಂದನು.

ಸದಾನಂದನು ನಗುವನ್ನು ಮುಚ್ಚಲಾರದೆ ಗಟ್ಟಿಯಾಗಿ ಒಂದು ಸಲ ನಕ್ಕು "ಮೊದಲೇ ಹೇಳಿದ್ದೇನಲ್ಲಾ ಸ್ವಾಮೀ, ಆ ವಿಷಯವೇ ನಾನು ಮಾತಾಡಲಿಕ್ಕೆ ಬಂದಿರುವುದು " ಎಂದನು.

ಹರಮೋಹನನು ಸ್ವಲ್ಪ ಮೆತ್ತಗಾಗಿ "ಯಾರ ಮಗಳು? ಎಲ್ಲಿದಾಳೆ?" ಎಂದನು.

"ಇದೇ ಗ್ರಾಮದಲ್ಲಿ ಶ್ರೀಯುಕ್ತ ಹಾರಾಣಚಂದ್ರ ಮುಖೋಪಾಧ್ಯಾಯರ ಎರಡನೆಯ ಮಗಳು "

"ಹಾರಾಣನ ಮಗಳೇ ?"

"ಆಹಾ .. ಹೌದು !"

"ಅರೆ! ಅವನೇನು ಕೊಡಬಲ್ಲ ?"

"ನಿಮಗೇನು ಬೇಕೋ ಅದು."

ಮುದುಕನು ಸ್ವಲ್ಪ ಯೋಚಿಸಿದನು. ಆಮೇಲೆ "ಹುಡುಗಿ ಹೇಗಿದ್ದಾಳೆ ?" ಎಂದನು.

"ನೀವು ಅವಳನ್ನು ನೋಡಿದ್ದೀರಿ, ಆದರೆ ಜ್ಞಾಪಕವಿರಲಾರದು.

ಹೋಗಲಿ....ನನ್ನ ಅಂದಾಜಿನಲ್ಲಿ ಹುಡುಗಿ ಲಕ್ಷಣವಾಗಿಯೇ ಇದಾಳೆ. ನಿಮ್ಮ ಮಗನೂ ಅವಳನ್ನು ನೋಡಿದಾನೆ. ಮದುವೆ ಮಾಡಿಕೊಳ್ಳಲು ಆಕ್ಷೇಪಣೆಯೂ ಅವನಿಗಿಲ್ಲ."

ಮುದುಕನು ಆಗ ಸ್ವಲ್ಪ ನಕ್ಕನು. "ಹಾಗಾದರೆ ಒಳ್ಳೆಯದೇ ಆಯಿತು. ನಮ್ಮಗಳ ಮನೆಗೆ ಸಂಸಾರ ಮಾಡುವುದಕ್ಕೆ ಸ್ವರ್ಗದಿಂದ ಇಳಿದು ಬರಬೇಕಾಗಿಲ್ಲ ಏನೋ ಮನೆ ಕೆಲಸ ಕಲಿತಿದ್ದು ನೋಡಲಿಕ್ಕೆ ಅವಲಕ್ಷಣ ವಿಲ್ಲದಿದ್ದರೆ ಯಥೇಷ್ಟವಾದ ಹಾಗೇ. ಹಾಗಿದ್ದರ ಒಳ್ಳೆಯವೇ ಆಯಿತು."

"ಸರಿ, ಹಾಗಾದರೆ . .ನೀವೂ ಒಪ್ಪಿದ ಹಾಗಾಯಿತು."

"ಆದರೆ ಹಾರಾಣ ಏನು ಕೊಡಬಲ್ಲ? ಅವನ ಅವಸ್ಥೆ ಈಗ ಹೇಗಿದೆ ಎನ್ನುವುದು ನನಗೆ ಗೊತ್ತಿದೆ."

"ಅವರ ಅವಸ್ಥೆ ಚೆನ್ನಾಗಿಲ್ಲ. ಅದು ಸ್ವಲ್ಪ ಮನಸ್ಸಿಟ್ಟುಕೊಂಡು ನೀವು ಏನು ಅಪ್ಪಣೆ ಕೊಡಿಸುತ್ತೀರೋ ಅದನ್ನು ಹೇಗೋ ಕೊಡಬಲ್ಲರು."

ಮುದುಕನು ಸಂದಿಗ್ಧದಲ್ಲಿ ಬಿದ್ದನು. "ಎಲಾ, ನಾನು ಈಗ ಈ ಮಾತು ಆಡಬಾರದಾಗಿತ್ತು !" ಎಂದುಕೊಂಡನು. ಆಮೇಲೆ ಬಹಳ ಬೇಗ ಉಪಾಯವಾದ ದಾರಿಯನ್ನು ಕಂಡುಕೊಂಡು ಒಂದು ಬಗೆಯಾಗಿ ಕನಿಕರ ವನ್ನು ನಟಿಸುತ್ತಾ "ನೀನು ಹೇಳುವುದು ನಿಜವೇ ..ಆದರೂ ನೋಡು.... ನನಗೂ ನೆರದ ಮಗಳಿದಾಳೆ .. ಮದುವೆ ಮಾಡಬೇಕು, ಸುಮ್ಮನೆ ಆಗುತ್ತ ದೆಯೇ ? ಖರ್ಚು ನಿನಗೇ ಗೊತ್ತು" ಎಂದನು.

"ಆಹಾ ಅಗತ್ಯವಾಗಿ .."

ಆಗ ಹರಮೋಹನನು ಸ್ವಭಾವ ರೀತಿಯಾಗಿ ತುಟಿಗಳಲ್ಲಿ ಕ್ಷೀಣವಾದ ಹುಸಿನಗೆಯನ್ನು ತೋರುತ್ತಾ ಕಲ್ಲನ್ನು ಹೃದಯವಾಗಿ ತೋರಿಸಿಕೊಂಡು "ಒಂದು ಸಾವಿರ ರೂಪಾಯಿ ನಗದು ಕೊಟ್ಟ ಹೊರತು, ನೋಡು, ಈ ಮದುವೆ ಸಾಧ್ಯವಿಲ್ಲ." ಎಂದನು.

ಸದಾನಂದನು ನಗುತ್ತಾ "ಹಾಗೇ ಆಗಲಿ" ಎಂದನು.

ಕೂಡಲೆ ಹರಮೋಹನನು ನಾಲಗೆ ಕಚ್ಚಿಕೊಂಡನು "ಎಂತಹ ಹುಚ್ಚು ಮುಂಡೆ ನಾನು....! ಒಂದೂವರೆ ಸಾವಿರ ಕೇಳಿದ್ದಿದ್ದರೆ ಏನಾಗು ತ್ತಿತ್ತು....! ಇನ್ನು ಹೊರಗೆ ಬಂದ ಮಾತು ಹಿಂದೆ ತೆಗೆದುಕೊಳ್ಳುವ

ಹಾಗೆಯೂ ಇಲ್ಲ ಆಗಲಿ ...ಆದಷ್ಟು ಮಟ್ಟಿಗೆ ಅದರಲ್ಲೂ ಲಾಭವಾಗುವ ಹಾಗೆ ಮಾಡಿಕೊಳ್ಳೋಣ" ಎಂದುಕೊಂಡು "ಅಲ್ಲದೆ ಹುಡುಗಿಯ ಮೈ ಮೇಲೆ ಒಡವೆ, ವಸ್ತು ಇರಲೇಬೇಕಾಗುತ್ತದೆ."

"ಹಾಗೇ ಆಗಲಿ...."

"ಮತ್ತೆ ವರೋಪಚಾರ ಯಥಾವತ್ತಾಗಿ....?"

"ನೀವೇನೂ ಯೋಚಿಸಬೇಡಿ. ಎಲ್ಲಾ ವ್ಯವಸ್ಥೆಯಾಗುತ್ತೆ."

"ಸರಿ, ಇನ್ನೇನು ಹಾಗಾದರೆ. ನಾನೂ ಒಪ್ಪಿದ ಹಾಗೇ "

"ಹಾಗಾದರೆ ದಿನ ಗೊತ್ತು ಮಾಡಿಬಿಡಿ."

ವೃದ್ಧನು ಸ್ವಲ್ಪ ಹಾಗೆ ಹೀಗೆ ನೋಡಿ "ನೋಡು ಸದಾನಂದ.... ಅದೇನೋ ಆಗುತ್ತೆ ಬಿಡು ..ಒಂದು ವಿಷಯ ...ಈ ಮದುವೆ ಮಾತುಕಥೆ ನಮ್ಮ ನಮ್ಮಲ್ಲಿ ನಡೆದಿದ್ದು .. ಹಾರಾಣನೇನು ನಮಗೆ ಹೊರಗಿನವನಲ್ಲ ದಿದ್ದರೂ ಮದುವೆಯಂತೂ ಕ್ರಮಬದ್ಧವಾಗಿ ನಡೆಯಬೇಕಾಗುತ್ತೆ. ತಿಳಿ ಯಿತೇ ?" ಎಂದನು.

ಸದಾನಂದನು ಅರ್ಥವಾಗದೆ ವಿಸ್ಮಿತನಾಗಿ "ಇನ್ನು ಕ್ರಮವೆಂತಹುದು? ಎಲ್ಲಾ ಒಪ್ಪಿಗೆಯಾಯಿತಲ್ಲ ?"

"ಕ್ರಮ ಬೇರೆ ಏನೂ ಇಲ್ಲ ... ಯಾವುದು ಮಾತಾಗಿದೆ ಅದು ಕಾಗದ ಪತ್ರದಲ್ಲಿಡುವುದು ಒಳ್ಳೆಯದು. ವ್ಯವಹಾರ ನೋಡು."

"ಸರಿ, ಅದಕ್ಕೇನು, ಆಗಲಿ."

"ಆದರೆ ಯಾರು ... ಯಾರೊಂದಿಗೆ ?"

"ನಾನು ... ನನ್ನೊಂದಿಗೇ ಆಗಲಿ."

"ಯಾವಾಗ ?"

ಸದಾನಂದನು ಸ್ವಲ್ಪ ಯೋಚಿಸಿ "ಇನ್ನು ಒಂದು ತಿಂಗಳಿಗೆ ಸರಿಯಾಗಿ."

ಹರಮೋಹನನು "ಸರಿ" ಎಂದನು.

ಆಗ ಸದಾನಂದನು "ನನ್ನದೊಂದು ಅರಿಕೆ ನಿಮ್ಮ ಹತ್ತಿರ" ಎಂದನು.

"ಏನದು, ಹೇಳು ಅಗತ್ಯವಾಗಿ."

"ಈ ವ್ಯವಹಾರದ ಬಾಬ್ತು ಮೂರನೆಯವರ ಕಿವಿಗೆ ಬೀಳಕೂಡದು."

"ಯಾಕೆ ?"

"ಕಾರಣವಿದೆ."

ಹರಮೋಹನ ಲೌಕಿಕ ಮನುಷ್ಯ. ಸದಾನಂದನ ಮನಸ್ಸಿನ ಭಾವವನ್ನು ಗ್ರಹಿಸಿ "ನಿಶ್ಶಬ್ದವಾಗಿ ದಾನಮಾಡಬೇಕೆಂಬ ಉದ್ದೇಶ್ಯವೇ ?" ಎಂದನು.

ಸದಾನಂದನು ಉತ್ತರ ಕೊಡಲಿಲ್ಲ. ವೃದ್ಧ ಹರಮೋಹನನು ಅವನ ಮುಖವನ್ನು ನೋಡಿ, ಅವನ ನಿಸ್ವಾರ್ಥ ದಯೆಯನ್ನು ಗಮನಿಸಿ, ತನ್ನ ಮೇಲೆ ತನಗೇ ನಿಕೃಷ್ಟಭಾವವನ್ನನುಭವಿಸಿ ನಾಚುಗೆವಟ್ಟನು .. ಆದರೆ ಹಿಂದೆಯೇ ಹೇಳಿದ ಹಾಗೆ ಮುದುಕ ಮೊದಲಿನಿಂದ ಲೌಕಿಕ ಪ್ರವೃತ್ತಿಯವನು. ಆದ್ದರಿಂದ ಈ ನಾಚುಗೆಯು ಅವನನ್ನ ಹೆಚ್ಚು ಪೀಡಿಸಗೊಡದೆ ಕ್ಷಣದಲ್ಲಿ ಸಹಜ ಸ್ವಭಾವವನ್ನು ಹೊಂದಿದನು. ಒಂದು ಬಗೆಯಾಗಿ ಒಣ ನಗೆ ನಕ್ಕು "ನೋಡು ಮರಿ, ನನಗೆ ವಯಸ್ಸಾಯಿತು. ಅಂತಹ ಸಂಕೋಚ ಪ್ರವೃತ್ತಿಯವನಲ್ಲ—ಆದರೂ ಹಾರಾಣನ ದರಿದ್ರಾವಸ್ಥೆ ನನಗೆ ಗೊತ್ತು. ಅಂತಹುದರಲ್ಲಿ ನಿನ್ನಂತಹವನು ಗುಟ್ಟಾಗಿ ದಾನ ಮಾಡಬೇಕೆಂದಿರುವಾಗ ಸ್ವೀಕರಿಸುವುದರಲ್ಲಿ ನಾನು ಗುಟ್ಟಾಗಿರಲಾರೆನೇ ? ಆ ವಿಷಯದಲ್ಲಿ ನೀನು ಯೋಚಿಸಬೇಡ."

ಸದಾನಂದನು ಪ್ರಫುಲ್ಲ ಮುಖದಿಂದ ಅವನಿಗೆ ನಮಸ್ಕಾರ ಮಾಡಿ ಅಲ್ಲಿಂದ ಹೊರಟನು.

## ೭

ಶುಭದಾಗೆ ಸಮಾಚಾರ ಗೊತ್ತಾಯಿತು. ಹಾರಾಣನಿಗೆ ಗೊತ್ತಾಯಿತು. ಛಲನಾಳೂ ಕೇಳಿದಳು—ಶಾರದಾಚರಣನೊಂದಿಗೆ ಅವಳ ಲಗ್ನವಾಗುತ್ತದೆಂದು. ರಾಸಮಣಿಯು ಕೇಳಿದ್ದೇ ತಕ್ಷಣ ಅಂದಳು—"ಈ ಸದಾನಂದ ನಮ್ಮ ಶುಭದಾಗೆ ಹಿಂದಿನ ಜನ್ಮದಲ್ಲಿ ಖಂಡಿತ ಮಗನಾಗಿದ್ದ." ಸದಾನಂದ ಎದುರಿಗೇ ಇದ್ದವನು ಉತ್ತರಕೊಡದೆ ಸುಮ್ಮನಿದ್ದನು.

ಅವನ ಚಿಕ್ಕಮ್ಮನ ಆಸ್ತಿಪಾಸ್ತಿಯ ವಿಚಾರ ವ್ಯವಸ್ಥೆಮಾಡಲು ಹೊರಡುವ ದಿನ ಬಂತು. ಗಂಟುಮೂಟೆ ಕಟ್ಟಿ ಹೊರಡಲು ಸಿದ್ಧಮಾಡಿಕೊಂಡು ಶುಭದಾಗೆ ತಾನಿಲ್ಲದಿರುವಾಗ ಏನೇನು ಏರ್ಪಾಡುಮಾಡಬೇಕೋ ಎಲ್ಲಾ ಹೇಳಿದನು. ಈಗ ಹಾರಾಣನ ಸಂಸಾರವೇ ಅವನ ಸಂಸಾರವಾಗಿತ್ತು. ಮದುವೆಗೆ ಆವಶ್ಯಕವಾದ ಸಾಮಾನು, ಸರಂಜಾಮು ಯಾವತ್ತೂ ವಿಧವಾದ ದಿನಸುಗಳನ್ನು ವ್ಯವಸ್ಥೆಮಾಡಿಡಲು ಹಣ ಕೊಟ್ಟು ಸ್ವೇಚ್ಛೆಯಾಗಿ ಖರ್ಚು ಮಾಡಲು ಹೇಳಿ ಹೋದನು.. ಅವನು ತನ್ನ ಚಿಕ್ಕಮ್ಮನ ಊರಿಗೆ ಹೋಗಿ ಹದಿನೈದು ದಿವಸಗಳಿದ್ದನು. ಅಲ್ಲಿ ಮಾಡಬೇಕಾದ ಏರ್ಪಾಡೆಲ್ಲಾ ಮಾಡಿ ಆಕೆಯ ಆಸ್ತಿಯಲ್ಲಿ ತನಗೆ ಬರಬೇಕಾದದ್ದು ನೋಡಿಕೊಳ್ಳಲು ಕಷ್ಟವಾಗುವುದೆಂದು ಬೇರೊಬ್ಬನಿಗೆ ಅದನ್ನು ಭೋಗ್ಯ ಮಾಡಿ ಕೈಯಲ್ಲಿ ನಾಕಷ್ಟು ಹಣ ತೆಗೆದುಕೊಂಡು ಬಂದನು.

ಊರಿಗೆ ಬಂದ ಮೇಲೆ ಹರಮೋಹನನೊಂದಿಗೆ ಆಗಬೇಕಾದ ಮಾತುಕಥೆ, ಕಾಗದ ಪತ್ರ ಎಲ್ಲಾ ಮುಗಿಸಿದನು. ಒಡವೆಗಳನ್ನು ಮಾಡಿಸಲು ಅಕ್ಕಸಾಲೆಗೆ ಹೇಳಿದ್ದೂ ಆಯಿತು. ಸಾಮಾನುಗಳೆಲ್ಲಾ ತರಿಸಿದ್ದೂ ಆಯಿತು. ಮದುವೆಯ ಲಗ್ನ ಸ್ಥಿರಮಾಡಿದರು ಎಲ್ಲಾ ಆದಮೇಲೆ ಒಂದು ದಿನ ಶಾರದಾಚರಣನನ್ನು ನೋಡಿ ಮಾತುಕಥೆಯಾಡಿಕೊಂಡು ಬರಲು ಹೋದನು. ಇದುವರೆಗೂ ಆರಾಮವಾಗಿ ಅವನೊಂದಿಗೆ ಮಾತಾಡಲು ಸಮಯ ದೊರತಿರಲಿಲ್ಲ.. ಇಂದು ಬಹಳ ದಿನಗಳ ಮೇಲೆ ಇಬ್ಬರು

ಬಾಲ್ಯಸ್ನೇಹಿತರೂ ಪರಸ್ಪರ ಭುಜದ ಮೇಲೆ ಕೈ ಹಾಕಿಕೊಂಡು ನದೀ ತೀರದ ಬಳಿ ಹೋಗಿ ಸುತ್ತಾಡಿದರು ...ಮರಳಿನ ಮೇಲೆ ಒಂದು ಕಡೆ ಕುಳಿತು ಶಾರದಾಚರಣನು "ಜ್ಞಾಪಕವಿದೆಯೇ, ಸದಾನಂದ, ಚಿಕ್ಕ ವಯಸ್ಸಿನಲ್ಲಿ ನಾವು ಹೇಗೆ ಕಾಲ ಕಳೆದೆವು ?"

"ಹೂಂ—ಆಗಾಗ ಸ್ವಲ್ಪ ಸ್ವಲ್ಪ ಜ್ಞಾಪಕ ಬರುತ್ತದೆ."

"ನಾನು ಹಿಂದೆ ಯಾರನ್ನು ಮನಸಾರೆ ಪ್ರೀತಿಸಿದ್ದೆ ಅವಳ ವಿಷಯವೇ ನನಗೆ ಆಗಾಗ ಮನಸ್ಸಿಗೆ ಬರುತ್ತಿರುತ್ತೆ. ನಿನ್ನ ಹತ್ತಿರ ಎಲ್ಲಾ ಹೇಗೆ ಹೇಳಿಕೊಳ್ಳುತ್ತಿದ್ದೆ ...ನನ್ನ ಆಸೆಗಳು, ಕಲ್ಪನೆ, ಕನಸುಗಳು.....ಒಂದೊಂದು ಸಲ ದುಃಖದಿಂದ ಅತ್ತಿದ್ದೂ ಉಂಟು ನೀನೆಷ್ಟೋ ಸಲ ಹಾಸ್ಯ ಮಾಡಿ ತೇಲಿಸಿಬಿಡುತ್ತಿದ್ದೆ ಇಲ್ಲದಿದ್ದರ ಏನಾದರೂ ಹುಚ್ಚು ಮಾತಾಡಿ ಕೆಡಿಸಿ ಬಿಡುತ್ತಿದ್ದೆ ...ಎಲ್ಲಾ ಜ್ಞಾಪಕವಿದೆಯೇ ?"

"ಎಲ್ಲಾ ಹೇಗೆ ಜ್ಞಾಪಕವಿದ್ದೀತು? ಅವೆಲ್ಲಾ ಹಿಂದಿನ ಕಥೆ... ಬಹುಶಃ ಏಳೆಂಟು ವರುಷಗಳ ಹಿಂದಿನದು ...ಆದರೆ ಎಂದೂ ಹುಚ್ಚು ಮಾತಾಡಿ ಕೆಡಿಸಲಿಲ್ಲ ..."

"ನನಗೆ ಅನ್ನಿಸುತ್ತದೆ. ನೀನು ಹುಚ್ಚಾಗಿ ಮಾಡಿವೆ ಒಂದೆರಡು ಸಲ .....ಅದು ಹೋಗಲಿ . ಎಂದಿನಿಂದ ಅವಳು ನಮ್ಮ ಪ್ರಣಯವನ್ನು ಕೊನೆಗಾಣಿಸಿ ಬಿಟ್ಟಳೋ, ಎಂದಿನಿಂದ ನಾವು ಮಾತನಾಡುವುದೇ ತಪ್ಪಿ ಹೋಯಿತೋ, ಆಗ ಎಷ್ಟು ರಾತ್ರಿಗಳು ನಿನ್ನ ಬಳಿ ನಾನು ಅತ್ತುಕೊಂಡಿಲ್ಲ? ಜ್ಞಾಪಕವಿದೆಯೇ ?"

"ಇಲ್ಲದೆ ಏನು? ಇದೆ."

ಸದಾನಂದನು ಅನ್ಯಮನಸ್ಕನಾಗಿದ್ದನು. ಶಾರದಾಚರಣನು ಅದನ್ನು ಲಕ್ಷ್ಯಮಾಡದೆ ನದಿಯ ಒಂದು ಅಂಚಿನ ಕಡೆ ಬೆರಳು ತೋರಿಸುತ್ತಾ "ಅಲ್ಲೇ ಅವಳು ಮುಳುಗಿ ಸತ್ತಿದ್ದು" ಎಂದನು.

ಸದಾನಂದನು ಆ ಮಾತನ್ನು ಕೇಳಲಿಷ್ಟಪಡಲಿಲ್ಲ ಅವನ ಮನಸ್ಸಿನಲ್ಲಿ ಗಂಗೆಯಲ್ಲಿ ಗಂಭೀರವಾಗಿ ಹೋಗುತ್ತಿದ್ದ ನೌಕೆಯೊಂದು ಚಿತ್ರಿತವಾಗಿತ್ತು. ಏಕೋ ಏನೋ ಅದು ಮರಳಿ, ಮರಳಿ ಬರುತ್ತಿತ್ತು. ಅವನು ತದೇಕ ಧ್ಯಾನದಿಂದ ಅದರ ಕಡೆಯೇ ನೋಡುತ್ತಾ ಇದ್ದನು. ಶಾರದಾಚರಣನು

ಮತ್ತೆ "ಅಲ್ಲೇ ಲಲನಾ ಮುಳುಗಿ ಹೋದದ್ದು" ಎಂದನು.

ಆಗ ಸದಾನಂದನು ಅವನ ಕಡೆ ಮುಖ ತಿರುಗಿಸಿ "ಯಾವ ಕಡೆ ?" ಎಂದನು.

"ಅಕೋ....ಅಲ್ಲಿ."

"ನಿನಗೆ ಹೇಗೆ ಗೊತ್ತಾಯಿತು ?"

"ಅಲ್ಲಿಯೇ ಅವಳ ಸೀರೆಯು ಸಿಕ್ಕಿದ್ದು."

ಸದಾನಂದನು ಎದ್ದು ನಿಂತು "ನಡಿ ಹಾಗಾದರೆ ಆ ಸೀರೆ ಒಂದು ಸಲ ನೋಡಿ ಬರೋಣ" ಎಂದನು.

ಶಾರದಾಚರಣನು ಸ್ವಲ್ಪ ನಕ್ಕು "ಸೀರೆ ಇನ್ನೂ ಅಲ್ಲಿಯೇ ಇರುತ್ತೆಯೇ ಎಲ್ಲಾದರೂ ?" ಎಂದನು.

"ಹಾಗಾದರೆ ನಡಿ, ಸ್ಥಳವಾದರೂ ನೋಡಿ ಬರೋಣ."

ಇಬ್ಬರೂ ಆ ಸ್ಥಳಕ್ಕೆ ಬಂದು ನಿಂತರು. ಸದಾನಂದನು ಎರಡು ಕೈಗಳಲ್ಲೂ ನೀರುತೆಗೆದುಕೊಂಡು ಮುಖ, ಕಣ್ಣುಗಳನ್ನುತೊಳೆದುಕೊಂಡನು. ಆ ಮೇಲೆ ಹೋಗಿ ಹತ್ತಿರ ಮರಳಲ್ಲಿ ಕೂತನು. ಶಾರದಾಚಂದ್ರನೂ ಹತ್ತಿರ ಕೂತು "ಸದಾನಂದ, ನನಗೆ ಬಹಳ ಸಂಕಟವಾಗುತ್ತೋ" ಎಂದನು.

"ಯಾತಕ್ಕೆ ?"

"ಆಗಾಗ ಅನ್ನಿಸುತ್ತೆ, ನಾನೇ ಕೈಯಾರೆ ಅವಳನ್ನ ಕೊಂದು ಹಾಕಿದ ಹಾಗೆಂದು."

"ಅದು ಯಾಕೆ ?"

"ದೇವರಿಗೆ ಗೊತ್ತು. ಅವಳಿಗೆ ಆಯುಸ್ಸು ಮುಗಿದಿತ್ತೋ ಇಲ್ಲವೋ! ಆದರೆ ನನಗೆ ಅನ್ನಿಸುತ್ತೆ ನಾನು ಅವಳನ್ನ ಲಗ್ನವಾಗಿದ್ದಿದ್ದರೆ ಅವಳಿನ್ನೂ ಬದುಕಿರುತ್ತಿದ್ದಳು."

ಸದಾನಂದನು ದೀರ್ಘ ನಿಶ್ವಾಸವನ್ನು ಬಿಟ್ಟನು. "ಸಾಯಬೇಕಾಗಿದ್ದವಳು ಹೇಗೋ ಸಾಯುತ್ತಿದ್ದಳು. ನೀನು ಏನು ತಾನೇ ಮಾಡಬಲ್ಲೆ ?" ಎಂದನು.

ಶಾರದಾಚರಣನಿಗೆ ಕಣ್ಣಲ್ಲಿ ನೀರು ತುಂಬಿತು. "ಬೇರೆ ಏನು ಮಾಡುತ್ತಿದ್ದೆ ? ಆದರೆ ಇಷ್ಟು ಸಂಕಟವಾಗುತ್ತಿರಲಿಲ್ಲ."

ಸದಾನಂದನು ಎಲ್ಲೋ ನೋಡುತ್ತಾ "ಕ್ರಮೇಣ ಅದೂ ಹೊರಟು ಹೋಗುತ್ತೆ" ಎಂದನು.

"ಅಯ್ಯೋ, ಅವಳ ಕಡೆಯ ಪ್ರಾರ್ಥನೆಯನ್ನಾದರೂ ನಡೆಸಿಕೊಟ್ಟಿದ್ದರೆ ?"

"ಏನು ಪ್ರಾರ್ಥನೆ ?"

"ಏನೂ ಇಲ್ಲ....ಒಂದು ಬಡವರ ಮನೆಯ ಮಾನ ಕಾಪಾಡಿ .... ಛಲನಾಳನ್ನು ಮದುವೆ ಮಾಡಿಕೊಳ್ಳಿ ಎಂದು ಕೇಳಿಕೊಂಡಿದ್ದಳು."

ಸದಾನಂದನು ಅವನ ಮುಖವನ್ನು ದೃಷ್ಟಿಸಿ ನೋಡುತ್ತಾ "ಹಾಗಾದರೆ ಛಲನಾಳನ್ನು ಮದುವೆಯಾಗುವುದಿಲ್ಲವೇನು ?" ಎಂದನು.

"ಮಾಡಿಕೊಳ್ಳುತ್ತೇನೆ. ಅದಕ್ಕಲ್ಲ, ಅವಳ ಪ್ರಾರ್ಥನೆ ನಡೆಸಿಕೊಡಲಿಲ್ಲವಲ್ಲ."

"ಏಕೆ ಆಗಲಿಲ್ಲ ?" ಈಗ ಆದಹಾಗೇ ತಾನೇ ?"

"ಎಲ್ಲಾ ಆದಮೇಲೆ ತಾನೇ ! ಆಗಲೇ ಮಾಡಿಕೊಂಡಿದ್ದರೆ ? ಒಳ್ಳೇದು ಸದಾನಂದ, ನಮ್ಮಪ್ಪನನ್ನು ನೀನು ಹೇಗೆ ಒಪ್ಪಿಸಿದೆ ?"

ಸದಾನಂದನು ಮೃದುವಾಗಿ ನಕ್ಕನು, "ಅವರೇ ಹೇಳಿದರು. ನಿನಗೆ ಮದುವೆ ಮಾಡಲು ಅವರೇ ಅಂದುಕೊಂಡಿದ್ದರಂತೆ." ಎಂದನು.

"ಅಷ್ಟೇನೆ ಮಾತು ?"

"ಮತ್ತಿನ್ನೇನು ?"

"ನನಗೆ ನಮ್ಮಪ್ಪನ ವಿಷಯ ಗೊತ್ತಿಲ್ಲವೇ ಬಿಡು."

ಸದಾನಂದನು ಪುನಃ ನಕ್ಕನು.

ಆ ಮೇಲೆ "ಗೊತ್ತಿದ್ದರೆ ಕೇಳುವುದು ಯಾಕೆ ಮತ್ತೆ ?" ಎಂದನು.

"ಯಾಕೆ 'ಕೇಳುತ್ತೇನೆಂದರೆ ಎಷ್ಟು ದುಡ್ಡು ಕೊಡಬೇಕಾಗುತ್ತದೆ ಆತನಿಗೆ, ತಿಳಿದುಕೊಳ್ಳೋಣವೆಂದು."

"ಆ ವಿಷಯ ತಿಳಿದು ನಿನಗೆ ಏನೂ ಪ್ರಯೋಜನವಿಲ್ಲ."

"ಸದಾನಂದ, ಅದು ಪಾಪದ ಹಣ."

"ಶಾರದಾಚರಣ, ಆ ಮಾತು ಬಿಡು. ನಾನು ಹರಸುತ್ತೇನೆ, ನೀವಿಬ್ಬರೂ ಸುಖವಾಗಿರಬೇಕೆಂದು."

"ಸಮಯ ಬಂದಾಗ ನಾನೆಲ್ಲಾ ತೀರಿಸಿಬಿಡುತ್ತೇನೋ, ಸದಾನಂದ."

"ತೀರಿಸುವೆಯಂತೆ" ಹೀಗೆಂದು ಸದಾನಂದನು ಮೇಲೆದ್ದು ಎಲ್ಲಿ ಲಲನಾಳ ವಸ್ತ್ರ ಸಿಕ್ಕಿತು ಎಂದು ಹೇಳಿದ್ದನೋ ಅಲ್ಲಿಗೆ ಬಂದು ಆ ಸ್ಥಳದ ಮಣ್ಣನ್ನು ಸ್ವಲ್ಪ ಕೈಯಲ್ಲಿ ತೆಗೆದುಕೊಂಡನು.

ಶಾರದಾಚರಣನು ವಿಸ್ಮಿತನಾಗಿ "ಇದೇನು ಮಾಡುತ್ತೀಯೋ, ಸಾಯಂಕಾಲದ ಹೊತ್ತು ಆ ಮಣ್ಣನ್ನು ತೆಗೆದುಕೊಂಡು ಹೋಗಿ ಏನು ಮಾಡುತ್ತಿ ?"

ಸದಾನಂದನು ದೊಡ್ಡದಾಗಿ ನಕ್ಕು "ಗೊತ್ತಿಲ್ಲವೇ ......ಹುಚ್ಚು ಕೆಲಸ." ಎಂದನು. ಶಾರದಾಚರಣನಿಗೂ ನಿಜವಾಗಿ ಹಾಗೆಯೇ ಅನ್ನಿಸಿತ್ತು. ಆದರೂ "ಹುಚ್ಚು ಕೆಲಸ ಎಂದು ನಾನೇನಾದರೂ ಅಂದೆನೆ ? ಎಂದನು.

"ನೀನೇಕೆನ್ನಬೇಕು. ನಾನೇ ಅನ್ನುತ್ತೇನೆ."

"ಇಲ್ಲ, ನಿಜವಾಗಿ ಹೇಳು, ಆ ಮಣ್ಣು ತೆಗೆದುಕೊಂಡು ಏನು ಮಾಡುತ್ತಿ ?"

"ನಾನು ಈ ನಡುವೆ ಶಿವಪೂಜೆ ಮಾಡುತ್ತೇನೆ. ಮನೆಯಲ್ಲಿ ಗಂಗೆಯ ಮಣ್ಣಿಲ್ಲ. ತೆಗೆದುಕೊಂಡು ಹೋಗುತ್ತಿದ್ದೇನೆ."

ಶಾರದಾಚರಣನು ನಿಂತುಕೊಂಡು ನೋಡುತ್ತಿದ್ದನು. ಸದಾನಂದನು ಮಣ್ಣನ್ನು ತೆಗೆದುಕೊಂಡು ಅದನ್ನು ಅಲ್ಲೇ ಬಿದ್ದಿದ್ದ ಒಂದು ಒಣಗಿದ ತಾಳೆಯ ಎಲೆಯ ಮೇಲಿಟ್ಟು ಪುನಃ ಆ ಎಲೆಯನ್ನು ಗಂಗೆಯ ಪ್ರವಾಹದ ಮೇಲೆ ತೇಲಿಬಿಟ್ಟು, ಮುಖ, ಕೈಕಾಲು ತೊಳೆದುಕೊಂಡು ಶಾರದಾಚರಣನ ಬಳಿ ಬಂದು ನಿಂತನು. "ನಡಿ ಶಾರದಾ, ಮನೆಗೆ ಹೋಗೋಣ" ಎಂದನು.

"ನೀನು ಅದನ್ನೇನು ಮಾಡಿದೆ ?"

"ನೀನೇ ಕಣ್ಣಲ್ಲಿ ನೋಡಿದೆಯಲ್ಲಾ ?"

"ಆದರೆ ಶಿವಪೂಜೆಗೆಂದು ಮಣ್ಣು ತೆಗೆದುಕೊಂಡು ಬರಲಿಲ್ಲವಲ್ಲ ?"

"ಇಲ್ಲ, ಇನ್ನು ಶಿವಪೂಜೆ ಮಾಡುವುದಿಲ್ಲ."

"ಯಾಕೆ ?"

"ಇನ್ನೊಂದು ದಿನ ಹೇಳುತ್ತೇನೆ."

ಆಗಿಬ್ಬರೂ ಗ್ರಾಮವನ್ನು ಪ್ರವೇಶಮಾಡಿ ತಂತಮ್ಮ ಮನೆಗಳಿಗೆ ಹೊರಟರು. ಮನೆಗೆ ಬಂದು ಸದಾನಂದನು ಹಿಂದಿನ ರಾತ್ರಿಯಂತೆ ಬಾಗಿಲು ಹಾಕಿಕೊಂಡು ಮಲಗಿಬಿಟ್ಟನು.

ರಾತ್ರಿ ಊಟಕ್ಕಾಗಿ ಛಲನಾ ಬಂದು ಕರೆದಳು, ರಾಸಮಣಿ ಕರೆದಳು, ಕಡೆಗೆ ಶುಭದಾ ಕೂಡಾ ಕರೆದಳು. ಅವನು ಬಾಗಿಲು ತೆಗೆಯದೆ ಹಾಗೆಯೇ ನಿದ್ದೆ ಮಾಡಿಬಿಟ್ಟನು.

ಮರುದಿನ ಬೆಳಿಗ್ಗೆ ಎದ್ದು ಹೊಲಕ್ಕೆ ಹೋಗಿ ಬಂದು ಸ್ನಾನ ಮಾಡಿ ಬಂದು ಊಟ ಮಾಡಿದನು. ಊಟ ಮಾಡಿ ಯಥಾಪ್ರಕಾರ ನಗುತ್ತ ರಾಮಗಾನ ಮಾಡಿದನು.

ಆದರೂ ನೋಡುವವರಿಗೆ ಇವನಲ್ಲಿ ಏನೋ ಬದಲಾವಣೆಯಾಗಿದೆ ಯೆಂದು ತಿಳಿಯುತ್ತಿತ್ತು. ನಿನ್ನೆ ಇದ್ದ ಹಾಗೆ ಇಲ್ಲ ಇವನು, ಖಂಡಿತ! ... ದಿನಗಳು ಕಳೆಯುತ್ತಾ ಕಳೆಯುತ್ತಾ ಆಷಾಢ ಮಾಸ ಬಂತು. ಛಲನಾಳ ಲಗ್ನದ ದಿವಸ. ಇಂದು ಎಲ್ಲರ ಮುಖವೂ ಆನಂದವಾಗಿದೆ ...ಎಲ್ಲರ ಮನಸ್ಸಿನಲ್ಲಿಯೂ ಉತ್ಸಾಹ. ಸದಾನಂದನಿಗೆ ಕೂಡಲು ಪುರಸೊತ್ತಿಲ್ಲ. ಹಾರಾಣಮುಖೋಪಾಧ್ಯಾಯನ ಕೂಗಾಟ, ಆರ್ಭಟಗಳಿಗೆ ಎಲ್ಲೆಯಿಲ್ಲ. ನೋಡಿದರತ್ತ ರಾಸಮಣಿಯ ಕಣ್ಣೀರಿಗೆ ಕೊನೆಯಿಲ್ಲ. ಮನೆಗೆ ಹೋಗಿ ಬಂದವರ ಬಳಿಯೆಲ್ಲಾ ಲಲನಾಳನ್ನು ನೆನಪಿಗೆ ತಂದುಕೊಂಡ. "ಅಂತಹ ಬಂಗಾರದಂತಹ ಹುಡುಗಿ ...ಈ ಸಮಯಕ್ಕೆ ಅವಳು ಇಲ್ಲ ..ನಮ್ಮ ಮನೆಗೆ ಇಟ್ಟುಕೊಳ್ಳಲು ಲಭ್ಯವಿಲ್ಲ" ಎಂದು ಅಳುವಳು. ಕೇಳುವವರೂ "ಅಯ್ಯೋ, ಪಾಪ, ಅಲ್ಲವೇ ಮತ್ತೆ ?" ಎಂದು ಅನುತಾಪಪಡುವರು.

....ಆದರೆ ಕೇವಲ ಶುಭದಾ ಮಾತ್ರ ವಿಪರೀತ ಶಾಂತತೆ . ವಿಪರೀತ ಧೈರ್ಯದಿಂದ ಕೆಲಸಗಳೆಲ್ಲವನ್ನೂ ಚಾಚೂ ತಪ್ಪದೆ ಯಾರಿಗೂ ಕೊರತೆ ಯಾಗದಂತೆ ನೆರವೇರಿಸಿಕೊಂಡು ಹೋದಳು. ಎಲ್ಲರೂ ಅವಳನ್ನು ಹೊಗಳುವವರೇ!

ಸಂಜೆಯಾಯಿತು. ಗಾನ, ವಾದ್ಯಗಳು ಬಂದವರನ್ನು ತಣಿಸಿದುವು. ಊಟ, ಉಪಚಾರಗಳು, ಬಾಗಿನ ...ಬಹುಮಾನಗಳು ...ಎಲ್ಲವೂ ಅಚ್ಚು ಕಟ್ಟಾಗಿ, ಬಂದವರ ಮನಸ್ಸಿಗೆ ತೃಪ್ತಿಯಾಗಿ ನಡೆದುವು....ಶುಭ ಲಗ್ನದಲ್ಲಿ

ಶುಭ ಮುಹೂರ್ತದಲ್ಲಿ ಛಲನಾಮಯಿ ಶಾರದಾಚಂದ್ರನ ಗೃಹಿಣಿಯಾದಳು.

ಇಂದು ಗ್ರಾಮದ ಜನರೆಲ್ಲಾ ವೃದ್ಧ ಹರಮೋಹನನ ಉದಾರತೆಯನ್ನು ಕೊಂಡಾಡತೊಡಗಿದರು. ಶತ್ರುವಾದವನೂ ಕೂಡ "ಮುದುಕನಿಗೂ ಕನಿಕರವಿದೆಯೆಂದು ಕಾಣುತ್ತದೆ" ಎಂದುಕೊಂಡನು. ಎದುರಿಗೆ ಗುಣಗಾನ ಮಾಡಿದಾಗ ಹರಮೋಹನನು ಸಂಕೋಚದಿಂದ "ಇನ್ನೇನು ಮಾಡುವುದು ಹೇಳು....ನಾವು ನಾವು ನಂಟರು ...ಇನ್ನು ನಾವೇ ಸುಮ್ಮನೇ ನೋಡುತ್ತಾ ಇರುವುದು ಹೇಗೆ?" ಎಂದನು.

ಶಾರದಾಚರಣನು ಈ ಮಾತು ಕೇಳಿ ತನ್ನಲ್ಲಿ ತಾನೇ ತಂದೆಗಾಗಿ ನಾಚುಗೆಪಟ್ಟುಕೊಂಡನು.

* * * *

## ೮

ಎಷ್ಟೋ ಪ್ರಯಾಸದಿಂದ ಕೆಲಸಗಳೆಲ್ಲವನ್ನೂ ನೆರವೇರಿಸಿದ್ದಾಯಿತು. ಇನ್ನು ಸ್ವಲ್ಪ ಹಾಯಾಗಿ ಆರಾಮವಾಗಿ ಕಾಲಕಳೆಯಬಹುದು. ಆದರೆ ನಾಲ್ಕೈದು ದಿನಗಳೇ....ಆ ಮೇಲೆ ಆ ಆರಾಮವೂ ಬೇಜಾರಾಗುತ್ತದೆ.

ಛಲನಾಮಯಿಯ ಮದುವೆ ಪೂರೈಸಿತು. ಗುಟ್ಟುಗುಟ್ಟಾಗಿ ಲೋಭಿ ಹರಮೋಹನನಿಗೆ ಕೊಡಬೇಕಾದ ಹಣವೆಲ್ಲ ಕೊಟ್ಟಾಯಿತು .......ಇನ್ನೇನಿದೆ ...? ಹತ್ಯಾಪರಾಧದಿಂದ ವಿಮುಕ್ತನಾದ ಖೈದಿಯಂತೆ ಹಾಸುಗೆಯ ಮೇಲೆ ಮಲಗಿಕೊಂಡು ಆ ಪಕ್ಕದ ಈ ಪಕ್ಕದ ಒಳ್ಳೆಯ ಮೆತ್ತನೆಯ ದಿಂಬುಗಳ ಮೇಲೆ ವಿಶ್ರಾಂತಿ ತೆಗೆದುಕೊಳ್ಳುತ್ತಾ ಮನಸ್ಸಿನ ಆನಂದದಿಂದ ನಾಲ್ಕೈದು ದಿನಗಳನ್ನು ಕಳೆದಿದ್ದಾಯಿತು. ಆ ಮೇಲೆ ಹಾಸುಗೆಯು ಬಹಳ ಸೆಕೆಯಾದಂತೆ ತೋರಿತು. ದಿಂಬುಗಳು ಕಠಿಣವಾದುವು. ಮನೆಯೊಳಗೇ ಏನೋ ಒಂದು ಕತ್ತಲೆ ಕವಿಯಿತು. ಸದಾನಂದನು ಎದ್ದು ಹೊರಗೆ ಬಂದನು. ಆಗ ಸುಮಾರು ಸಂಜೆಯಾಗುವ ಸಮಯ. ಬೆಳಗಿನಿಂದ ನೋನೆ ಮಳೆ ಬಿದ್ದು ಇನ್ನೂ ನಿಂತಿಲ್ಲ. ಹಿಂದಿನ ದಿನ ಇದ್ದಷ್ಟು ಮೇಘಗಳಿಲ್ಲ. ಆದರೂ ಮಳೆ ಏನೋ ಹನಿಯುತ್ತಲೇ ಇದೆ. ನಿಲ್ಲುವ ಹಾಗೆಯೂ ಇಲ್ಲ ...

ಮಳೆಯಲ್ಲಿ ನೆನೆದುಕೊಂಡೇ ಸದಾನಂದನು ಹಾರಾಣನ ಮನೆಗೆ ಬಂದನು. ಶುಭದಾ ಅಡುಗೆಮನೆಯಲ್ಲಿದ್ದಳೆಂದು ಕಾಣುತ್ತದೆ. ಸದಾನಂದನು ಆ ಕಡೆ ಹೋಗಲಿಲ್ಲ. ಅತ್ತೆ ರಾಸಮಣಿ ಅವರ ಮನೆ ಇವರ ಮನೆ ತಿರುಗಾಡಲು ಹೋಗಿದ್ದಳೇನೋ, ಆಕೆಯನ್ನೂ ಇವನು ಕೂಗಲು ಹೋಗಲಿಲ್ಲ. ಕೈಕಾಲು ತೊಳೆದುಕೊಂಡು ಆ ಪಕ್ಕ ಈ ಪಕ್ಕ ನೋಡಿ ಮಾಧವಚಂದ್ರನಿದ್ದ ಕೋಣೆಗೆ ಬಂದನು.

ಬಹಳ ದಿನಗಳಿಂದಲೂ ಮಾಧವನನ್ನು ನೋಡಲಾಗಲಿಲ್ಲ. ಇವತ್ತು ಅವನೊಂದಿಗೆ ಒಂದೆರಡು ಮಾತಾಡೋಣ ಎಂದುಕೊಂಡನು.

ಲಲನಾ ಹೋದಲಾಗಾಯಿತು ಮಾಧವನ ಪ್ರಕೃತಿಯೆ ವಿಚಿತ್ರ

ವಾಗಿತ್ತು. ಯಾರೊಂದಿಗೂ ಹೆಚ್ಚು ಮಾತಿಲ್ಲ. ಯಾರೇನಾದರೂ ಕೇಳಿದರೆ ಬಹಳ ವಯಸ್ಕರ ಹಾಗೆ ಎಲ್ಲೋ ನೋಡುತ್ತಾ ನಿದಾನವಾಗಿ ಉತ್ತರ ಕೊಡುವನು. ತಿಂಡಿತೀರ್ಥದ ವಿಚಾರವಾಗಿ ಹರವಿಲ್ಲ. ಏನು ಕೊಟ್ಟರದು ತಿನ್ನುವನು. ಒಂದೊಂದು ಸಲ ಪ್ರಶ್ನೆಗೆ ಉತ್ತರವನ್ನೇ ಕೊಡದೇ ಏನೋ ಗಾಢವಾದ ಯೋಚನೆ ಮಾಡುತ್ತಿರುವವನಂತೆ ಭ್ರೂಕ್ಷೇಪಮಾಡುವನು. ಯಾರಾದರೂ ಹತ್ತಿರ ಬಂದರೂ ಅವರ ಮೇಲೆ ಗಮನವಿಲ್ಲ. ಇಂದು ಸದಾನಂದ ಹತ್ತಿರ ಬಂದು ಕೂತಿದ್ದನ್ನು ನೋಡಿ ಆ ಪಾರ್ಶ್ವ ತಿರುಗಿ "ಸದೂ ಮಾಮು, ನೀನೇಕೆ ನನ್ನ ಹತ್ತಿರ ಬರುವುದು ಬಿಟ್ಟು ಬಿಟ್ಟೆ ?" ಎಂದನು.

"ಹೇಗೋ ಮಗು ? ನೋಡುತ್ತಾ ಇದ್ದೆ. ಎಷ್ಟು ಕೆಲಸವಿತ್ತು ?"

"ಈಗ ಎಲ್ಲಾ ಆಗಿಹೋಯಿತೋ ?"

"ಆಯಿತಪ್ಪ ಸದ್ಯ."

"ಫಲನಾ ಅಕ್ಕ ಮತ್ತೆ ಯಾವಾಗ ಬರುತ್ತಾಳೆ ?"

"ಇನ್ನು ಮೂರು ನಾಲ್ಕು ದಿನ ಆದ ಮೇಲೆ."

"ಸದೂ ಮಾಮು, ಬಹಳ ದಿವಸಗಳಿಂದಲೂ ನಿಮ್ಮೊಬ್ಬರ ಹತ್ತಿರವೇ ಏನೋ ಹೇಳಬೇಕೆಂದಿದ್ದೆ, ಆಗಲೇ ಇಲ್ಲ "

"ಅದೇನೋ ಅದು ? ಯಾಕೆ ಹೇಳಲಿಲ್ಲ ?"

"ನೀವೊಬ್ಬರೇ ಯಾವಾಗಲೂ ಈ ಕಡೆ ಬರಲಿಲ್ಲ. ಅದಕ್ಕೆ."

ಸದಾನಂದ ಇನ್ನೂ ಹತ್ತಿರ ಸರಿದು ಕೂತು "ಒಬ್ಬನೇ ಏಕೋ, ಮಾಧೂ?" ಎಂದನು.

"ಏನೂ ಇಲ್ಲ .......ಸುಮ್ಮನೆ ... . ನಿಮ್ಮೊಬ್ಬರ ಹತ್ತಿರವೇ ಹೇಳಬೇಕೆಂದು ಅಕ್ಕ ನನಗೆ ಹೇಳಿದ್ದಳು."

"ಯಾವ ಅಕ್ಕನೋ ?"

"ಅಕ್ಕ! ದೊಡ್ಡ ಅಕ್ಕ! ಅವತ್ತು ರಾತ್ರಿ ಹೊರಟುಹೋದಳಲ್ಲಾ? ಆಗ ನೀವು ಇಲ್ಲಿ ಇರಲಿಲ್ಲವಲ್ಲಾ? ನೀವು ವಾಪಸು ಬಂದ ಮೇಲೆ ನಿಮಗೆ ಹೇಳಬೇಕೆಂದು ಹೇಳಿ ಹೋಗಿದ್ದಳು."

ಸದಾನಂದನ ಮುಖ ಕಪ್ಪಿಟ್ಟಿತು. ಇನ್ನೂ ಹತ್ತಿರ ಸರಿದು ಮಾಧವನ

ಮೈ ಮೇಲೆ ಕೈಯಿಟ್ಟು "ಎಲ್ಲಿಗೆ ಹೋದಳೋ ಮಾಧೂ, ಯಾಕೆ ಹೋದಳೋ....? ಯಾರಾದರೂ ಬೈದರೇ ?" ಎಂದನು.

"ಇಲ್ಲ. ಯಾರೂ ಬೈಯಲಿಲ್ಲ."

"ಮತ್ತೆ ಯಾಕೆ ಹೋದಳೋ ?"

"ನಾನೂ ಹೋಗುತ್ತೇನೆ."

"ಛೀ, ಎಂತಹ ಮಾತೋ ?"

ಮಾಧವನು ಸ್ವಲ್ಪ ನಕ್ಕನು. ಆ ಮೇಲೆ "ಯಾರಿಗೂ ಗೊತ್ತಿಲ್ಲ. ಅಕ್ಕನಿಗೆ ಗೊತ್ತು. ನನಗೆ ಗೊತ್ತು. ಅಷ್ಟೇ. ಅವಳು ನನಗಿಂತ ಮುಂಚೆ ಹೋದಳು. ನನೆಗೋಸ್ಕರ ಅಲ್ಲಿ ಎಲ್ಲಾ ಸರಿಮಾಡಿ ನನ್ನನ್ನ ಕರೆದು ಕೊಂಡು ಹೋಗುವುದಕ್ಕೆ ಬರುತಾಳೆ. ನಾವಿಬ್ಬರೂ ಅಲ್ಲಿ ಸುಖವಾಗಿ ಇರುತ್ತೇವೆ." ಎಂದನು.

ಮಾಧವನ ಮುಖ ಸಂತೋಷದಿಂದ ಹೊಳೆಯಿತು. ಆ ಮೇಲೆ ಪಕ್ಕಕ್ಕೆ ಹೊರಳಿ "ಅಕ್ಕ ಬಂದು ನನ್ನನ್ನು ಕರೆದುಕೊಂಡು ಹೋಗುತ್ತಾಳೆ" ಎಂದನು.

ಸದಾನಂದನು ಸ್ವಲ್ಪ ಹೊತ್ತು ಏನೂ ಹೇಳದೆ ಆ ಮೇಲೆ "ಯಾವಾಗ ಬರುತ್ತಾಳೆ ?" ಎಂದನು.

"ನನಗೆ ಸಮಯ ಬಂದಾಗ."

"ಇದೆಲ್ಲಾ ಯಾರು ಹೇಳಿದರೋ ನಿನಗೆ ಮಾಧೂ ?"

"ದೊಡ್ಡಕ್ಕನೇ !"

"ಅವಳು ಬಂದು ನಿನ್ನನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳಿ ದಳೇ ?"

"ಹೂಂ"

"ಕರದುಕೊಂಡು ಹೋಗಲು ಬರದಿದ್ದರೆ ?"

"ಯಾಕೆ ಬರುವುದಿಲ್ಲ ? ಬಂದೇ ಬರುತ್ತಾಳೆ."

"ಅವಳು ಬರದೇ ಹೋದರೆ ?....ನೀನೊಬ್ಬನೇ ಹೋಗುತ್ತೀಯಾ ?"

ಮಾಧವನ ಮುಖ ಕಂಗೆಟ್ಟಿತು. ಸ್ವಲ್ಪ ಯೋಚಿಸಿ........"ನನಗೆ ಗೊತ್ತಿಲ್ಲ" ಎಂದನು.

ಸದಾನಂದನು ಸ್ವಲ್ಪ ಹೊತ್ತು ಸುಮ್ಮನಿದ್ದು ಎಲ್ಲೋ ನೋಡು ತ್ತಿದ್ದನು.

"ಸದೂ ಮಾವ, ಅಲ್ಲಿಗೆ ಒಬ್ಬರೇ ಹೋಗುವುದಕ್ಕಾಗುವುದಿಲ್ಲವೇ ?"

"ಯಾಕೆ ಆಗುವುದಿಲ್ಲ? ನಿಮ್ಮಕ್ಕ ಹೇಗೆ ಹೋದಳು ?"

"ಹಾಗಾದರೆ ನಾನೂ ಹೋಗಬಹುದೇ ಒಬ್ಬನೇ ?"

"ಹೋಗಬಹುದು "

ಮಾಧವನು ಸ್ವಲ್ಪ ಯೋಚಿಸಿ, ಬಹಳ ದುಃಖಿತಭಾವದಿಂದ "ಆದರೆ ಹೇಗೆ ಹೋಗಲಿ? ಎದ್ದು ನಿಂತುಕೊಳ್ಳುವುದಕ್ಕೂ ಬಲ ಇಲ್ಲವಲ್ಲ?" ಎಂದನು. ಸದಾನಂದನು ಕನಿಕರದಿಂದ ಅವನ ಕಡೆಯೇ ನೋಡುತ್ತಾ ಇದ್ದನು. ಏನೂ ಹೇಳಲಿಲ್ಲ. ಮಾಧವನು ಪುನಃ "ಅಕ್ಕನಿಗೆ ಚೆನ್ನಾಗಿ ಬಲ ಇತ್ತು. ಅದಕ್ಕೆ ಅಕ್ಕ ಒಬ್ಬಳೇ ಹೋದಳು. ನಾನು ಹೇಗೆ ಹೋಗಲಿ? ನಿಂತುಕೊಳ್ಳುವುದಕ್ಕೂ ಆಗುವುದಿಲ್ಲ. ಅಷ್ಟು ದೂರ ಹೋಗುವುದಕ್ಕಾಗು ತ್ತದೆಯೆ ?" ಎಂದನು.

ಸದಾನಂದನ ಕಣ್ಣುಗಳಲ್ಲಿ ನೀರು ತುಂಬಿತು. ಆ ಕತ್ತಲಲ್ಲಿ ಮಾಧವನಿಗೆ ಅದು ಕಂಡು ಬರಲಿಲ್ಲ. ಸದಾನಂದನಿಗೆ ಆಗ ವೇದ್ಯವಾಗಿತ್ತು, ಈ ಮಾಧವನ ಅಂತ್ಯ ಪತ್ತಿರ ಬರುತ್ತಿದೆಯೆಂದು. ಇನ್ನು ಕೆಲವು ದಿವಸ. ಆ ಮೇಲೆ ಎಲ್ಲಾ ಮುಗಿದ ಹಾಗೆಯೇ!

ಅವನಿಗೆ ಶುಭದಾಳ ನೆನಪು ಬಂತು. ಲಲನಾಳ ಯೋಚನೆ ಬಂತು. ಇವರೆಲ್ಲರ ಯೋಗಕ್ಷೇಮ ಭಾರವನ್ನು ಹೊತ್ತುಕೊಂಡು ಇನ್ನು ಹಿಂದಿನಂತೆ ನಿರಾತಂಕವಾಗಿ ಆನಂದವಾಗಿರಲು ಸಾಧ್ಯವಿಲ್ಲ. ಕಾಳೀಸ್ತೋತ್ರಮಾಡಿ ಕೊಂಡು ಕಾಲ ಕಳೆಯುವ ಹಾಗಿಲ್ಲ. ಹುಚ್ಚು ಹುಚ್ಚಾಗಿ ಊರೆಲ್ಲಾ ಅಲೆ ಯುವ ಹಾಗಿಲ್ಲ. ಅವನು ನಿಶ್ಚಿಂತೆಯಾಗಿ, ಸುಖವಾಗಿದ್ದ. ಈಗ ಆ ಸುಖ ಸಾಧ್ಯವಿಲ್ಲ. ಆಗ ಎಲ್ಲಾ ಬಿಟ್ಟು ಸನ್ಯಾಸಿಯಾಗಿದ್ದ. ಈಗ ಸಂಸಾರಿ ಯಾಗಿದ್ದಾನೆ.

ಕಣ್ಣೊರಸಿಕೊಂಡು ಸದಾನಂದನು ಅಂದು ಮೊದಲನೆ ಸಲ ಮನಸ್ಸಿ ನಲ್ಲಿ ಅಂದುಕೊಂಡನು. "ಬದುಕಿರುವ ಯಾರಿಗೂ ಆ ಬಗೆಯ ಸುಖ ಸಾಧ್ಯವಿಲ್ಲ. ಜೀವ ಇರುವವರೆಲ್ಲರಿಗೂ ಆ ಬಗೆಯ ಕಷ್ಟಗಳು ಅಂಟಿ

ಕೊಂಡಿರುತ್ತವೆ. ಸತ್ತುಹೋಗಿರುವವರು ಮಾತ್ರ ಈ ಸಂಸಾರದ ಜ್ವಾಲೆಯಿಂದ ತಪ್ಪಿಸಿಕೊಳ್ಳುತ್ತಾರೆ."

ಅಂದು ರಾತ್ರಿ ಸದಾನಂದನು ಬಹಳ ಯೋಚಿಸಿದನು. ಹೋಗುವ ಮುಂಚೆ ಲಲನಾ ಅವನನ್ನು ಮರೆತಿರಲಿಲ್ಲ. ಅದು ಒಂದು ಮನಸ್ಸಿನಲ್ಲಿ ನಿಂತಿತು. ಮಾಧವ ಸಾಯುತ್ತಿದ್ದಾನೆ. ಇದೂ ಮನಸ್ಸಿಗೆ ಬಂತು. ಆ ಮೇಲೆ ಶುಭದಾ—ಅವನಿಗೆ ಆಗ ಅನ್ನಿಸಿತು: ಈ ಲಲನಾ ಸಾಯುವ ಮುಂಚೆ ತನ್ನ ಸಮಸ್ತ ದುಃಖ ಕೋಟಲೆಗಳನ್ನೂ ತನ್ನ ತಲೆಯ ಮೇಲೆ ಹಾಕಿ ಹೊರಟು ಹೋಗಿದ್ದಾಳೆಂದು.

ಮಾಧವನಿಗೂ ಆ ರಾತ್ರಿ ವೇದನೆಯಲ್ಲಿ ಕಳೆಯಿತು. ಈಗ ಹೊಸದಾಗಿ ಅವನ ಮನಸ್ಸಿಗೆ ದುಶ್ಚಿಂತೆಯೊಂದು ಹುಟ್ಟಿಕೊಂಡಿದೆ. ಇದುವರೆಗೂ ನಿಶ್ಚಿಂತೆಯಾಗಿದ್ದನು, ಸಮಯ ಬಂದಾಗ ಲಲನಾ ಕರೆದುಕೊಂಡು ಹೋಗಲು ಬರುವಳೆಂದು. ಆದರೆ ಈ ಸದೂ ಮಾವ ಬೇರೆ ಏನೋ ಹೇಳುತ್ತಾನೆ. ಅವನ ಮೈಯಲ್ಲಿ ತ್ರಾಣವಿಲ್ಲದಿರುವಾಗ ಒಬ್ಬನೇ ಅಲ್ಲಿಗೆ ಹೇಗೆ ಹೋಗುವುದು?....ಯೋಚಿಸಿ ಯೋಚಿಸಿ ಮಾಧವನು ಒಂದು ನಿರ್ಧಾರಕ್ಕೆ ಬಂದಿದ್ದನು. "ಇಲ್ಲ .ಅಕ್ಕ ಸುಳ್ಳು ಯಾಕೆ ಹೇಳುತ್ತಾಳೆ. ಬಂದೇ ಬರುತ್ತಾಳೆ. ಸಮಯ ಬಂದಾಗ ಬಂದು ಕರೆದುಕೊಂಡು ಹೋಗುತ್ತಾಳೆ" ಹೀಗೆಂದು ಸ್ಥಿರಮಾಡಿಕೊಂಡು ಮಾಧವನು ಸುಖವಾಗಿ ನಿದ್ದೆಮಾಡಿದನು.

## ೯

ಇನ್ನೂ ಕೆಲವು ದಿನಗಳು ಹಾಗೆಯೇ ಕಳೆದುವು. ಛಲನಾ ತೌರು ಮನೆಗೆ ಹಿಂದಿರುಗಿ ಬಂದಳು. ಅಳಿಯನೂ ಬಂದನು. ಗ್ರಾಮದ ಹೆಣ್ಣು ಮಕ್ಕಳು ಪುನಃ ಹೊಸ ದಂಪತಿಗಳು ಹಸೆಯಮೇಲೆ ಕೂತಿದ್ದನ್ನು ನೋಡಿ ತೃಪ್ತರಾದರು. ಆರತಿ, ಅಕ್ಷತೆಗಳಿಂದ ತಣಿದರು. ಹಾಡು, ಹಾಸ್ಯ, ಕೋಲಾಹಲ ಮತ್ತೆ ಮನೆಯಲ್ಲಿ, ಸ್ವಲ್ಪ ಕಾಲ ಮೆರದುವು. ಮುದುಕ ಹರ ಮೋಹನನು ಬಂದು ಎಲ್ಲರನ್ನೂ ಪ್ರಿಯವಾಗಿ ಮಾತನಾಡಿಸಿ, ಬೀಗ, ಬೀಗಿತಿಯರನ್ನು ಗೌರವಿಸಿ, ಮುದುಕಿ ರಾಸಮಣಿಯ ಧನ್ಯವಾದಗಳನ್ನು ನಿಸ್ಸಂಕೋಚದಿಂದ ಸ್ವೀಕರಿಸಿ ಹಿಂದಿರುಗಿದನು. ಹಾರಾಣಚಂದ್ರನು ಹೊಸ ಧೋತ್ರ ಉಟ್ಟು ಸಂಭ್ರಮವಾಗಿ ಹೆಗಲಮೇಲೆ ಜರಿಯವಸ್ತ್ರ ಹೊದ್ದುಕೊಂಡು ಬ್ರಾಹ್ಮಣ ಅಗ್ರಹಾರಕ್ಕೆ ಹೋಗಿ ಪ್ರತಿಯೊಂದು ಅಂಗಡಿಯಲ್ಲೂ ಕೂತು ತನ್ನ ಹೊಸ ರೀವಿಯಿಂದ ಅವರೆಲ್ಲರನ್ನೂ ಮುಗ್ಧಗೊಳಿಸಿದನು. ಹೀಗೆಯೇ ಎಷ್ಟೋ ಸಂಗತಿಗಳು ನಡೆದುಹೋದುವು.

* * * *

ಇಂದು ಮಾಧವಚಂದ್ರನ ಕಾಯಿಲೆ ಕೊನೆಮುಟ್ಟಿದೆ. ಹಾಸುಗೆಯಲ್ಲಿ ಸುಮ್ಮನೆ ನರಳುತ್ತಾ ಇದ್ದಾನೆ. ತಲೆಯ ಬಳಿ, ಕಾಲ ಬಳಿ, ಸುತ್ತಲೂ, ರಾಸಮಣಿ, ಕೃಷ್ಣಾ ಠಾಕೂರಣಿ, ಛಲನಾ ಇವರೆಲ್ಲಾ ಹಣೆಯ ಮೇಲೆ ಕೈಯಿಟ್ಟು ಕೂತಿದ್ದಾರೆ. ಶುಭದಾ ಮಾತ್ರ ಅಲ್ಲಿಲ್ಲ. ಅವಳು ಅಡುಗೆ ಮನೆಯಲ್ಲಿ ಕೂತು ಅಡುಗೆ ಮಾಡುತ್ತಾ ಅಳುತ್ತಿದ್ದಾಳೆ. ಸದಾನಂದನು ಡಾಕ್ಟರನ್ನು ಕರತರಲು ಹೋಗಿದ್ದಾನೆ. ಹಾರಾಣಚಂದ್ರನು "ಇಕೋ, ಈಗಲೇ ಬಂದೆ" ಎಂದುಬಿಟ್ಟು ಮನೆ ಬಿಟ್ಟವನು ಮೂರು ಘಂಟೆ ಯಾಯಿತು, ಬರಲಿಲ್ಲ. ಎಲ್ಲರೂ ಸಂಕಟದಿಂದ ಏನೂ ತೋಚದೆ ಕೂತಿದ್ದಾರ. ಕೃಷ್ಣಾ ಠಾಕೂರಣಿಯು ಮಾಧವನ ಮೈ ಮುಟ್ಟಿನೋಡಿ ಡಾಕ್ಟರು ಯಾವಾಗ ಬರುತ್ತಾನೋ ಎಂದು ಗಳಿಗೆ ಎಣಿಸುತ್ತಿದ್ದಾಳೆ.

ಸಾಯಂಕಾಲದ ಹೊತ್ತಿಗೆ ಡಾಕ್ಟರು ಬಂದನು. ಈಗ ಏಳೆಂಟು

ದಿವಸಗಳಿಂದಲೂ ನಿತ್ಯ ಬರುತ್ತಿದ್ದನು. ನಿತ್ಯ ನೋಡುತ್ತಿದ್ದನು. ರೋಗ ಸ್ವಲ್ಪವೂ ಗುಣವಾಗಿರಲಿಲ್ಲ. ಇನ್ನೂ ಹೆಚ್ಚಾಗುತ್ತಲೇ ಇತ್ತು. ಅದನ್ನು ನೋಡಿ 'ಹುಡುಗ ಬದುಕುವುದಿಲ್ಲ' ಎಂಬ ತೀರ್ಮಾನಕ್ಕೂ ಬಂದಿದ್ದನು. ಆದುದರಿಂದ ಬರಲು ಇಷ್ಟವಿಲ್ಲದಿದ್ದರೂ ಸದಾನಂದನ ಒತ್ತಾಯದಿಂದ ಬರಬೇಕಾಯಿತು.

ಮನೆಗೆ ಬಂದು ಪರೀಕ್ಷೆ ಮಾಡಿ ಹೊರಗೆ ಬಂದನು. ಸದಾನಂದನನ್ನು ಕರೆದು "ಇವತ್ತು ರಾತ್ರಿ ಸ್ವಲ್ಪ ಎಚ್ಚರಿಕೆಯಾಗಿರಬೇಕು ನೀವೆಲ್ಲಾ. ಹುಡುಗ, ಬಹುಶಃ ಈ ರಾತ್ರಿ ಉಳಿಯುವುದು ಕಷ್ಟ" ಎಂದನು. ಸದಾನಂದನಿಗೂ ಅದು ಗೊತ್ತು.

ರಾತ್ರಿ ಬಹಳ ಹೊತ್ತಾದ ಮೇಲೆ ಹಾರಾಣನು ಮನೆಗೆ ಬಂದನು. ಕಳ್ಳನಂತೆ ಒಳಗೆ ಬರದೆ ಅಂಗಳದಲ್ಲಿ ಸ್ವಲ್ಪ ನಿಂತಿದ್ದು ಒಳಗಿನ ಸಂಗತಿ ಎಷ್ಟು ಮಟ್ಟಿಗೆ ತಿಳಿಯಬೇಕೋ ಅಷ್ಟು ಮಟ್ಟಿಗೆ ತಿಳಿದುಕೊಂಡು ಮೆಲ್ಲಗೆ ಬಾಗಿಲು ತಳ್ಳಿ ಮುಖ ತೋರಿಸುತ್ತಾ "ಈಗ ಹೇಗಿದೆ?" ಎಂದು ಕೇಳಿದನು. ಯಾರೂ ಉತ್ತರ ಕೊಡಲಿಲ್ಲ. ಶುಭದಾ ಮಾತ್ರ ಹೊರಗೆ ಬಂದು ಊಟದ ತಟ್ಟೆಯನ್ನು ಸಿದ್ಧಮಾಡಿದಳು. ಹಾರಾಣನು ಕೂಡುತ್ತಾ

"ಮಾಧೂ ಹೇಗಿದ್ದಾನೆ ಈಗ?" ಎಂದು ಕೇಳಿದನು.

"ಸರಿಯಾಗಿದ್ದ ಹಾಗೆ ಕಾಣ್ಸೊಲ್ಲ."

"ಸರಿಯಾಗಿಲ್ಲ?" ಎಂದು ಆಮೇಲೆ "ಯಾಕೋ ಇವತ್ತು ನನ್ನ ಮೈಯಲ್ಲೂ ಚೆನ್ನಾಗಿಲ್ಲ. ಏನೋ ಒಂದು ತರಹೆ ಆಗುತ್ತ ಇದೆ" ಎಂದನು.

ಯಾವ ಉದ್ದೇಶ್ಯದಿಂದ ಅವನು ಈ ಮಾತಂದನೊ, ಆದರೆ ಶುಭದಾ ಮಾತ್ರ ಅದನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಹಾರಾಣನಿಗೆ ಬಹಳ ಕೋಪ ಬಂತು. ಹೆಂಡತಿಯ ಹತ್ತಿರ ಮೈಚೆನ್ನಾಗಿಲ್ಲವೆಂದು ಹೇಳಿ ಅವಳಿಂದ ಅನುತಾಪದ ಒಂದು ಮಾತೂ ಬರದೇ ಇದ್ದುದನ್ನು ನೋಡಿ ಅವನಿಗೆ ವಿಪರೀತ ಅವಮಾನವಾಯಿತು. ಅಫೀಮು ಬೇರೆ ನುಂಗಿ ಬಂದಿದ್ದನು. ಅದರ ಅಮಲಿನಲ್ಲಿ ಈ ಸಾಮಾನ್ಯ ತಿರಸ್ಕಾರವೂ ಹತ್ತರಷ್ಟು ವೃದ್ಧಿಯಾಗಿ ತಲೆ ಕೆಡಿಸಿತು.

ಮುಖವನ್ನು ವಿಕಾರಮಾಡಿಕೊಂಡು ಊಟದ ತಟ್ಟೆಯನ್ನು ತಳ್ಳಿ

ಹಾಕಿ "ನನಗೆ ಅನ್ನಬೇಡ. ನಾನು ಸತ್ತುಹೋದರೂ ಈ ಮನೆಯಲ್ಲಿ ಕೇಳುವವರಿಲ್ಲ" ಎಂದು ಎದ್ದು ಕೈತೊಳೆದು ತನ್ನ ಹಾಸುಗೆಯ ಮೇಲೆ ಹೋಗಿ ಬಿದ್ದುಕೊಂಡನು. ತನಗೇನೋ ದೊಡ್ಡ ಕಾಯಿಲೆಯಾಗಿರುವಂತೆ ನಿಜ ವಾಗಿ ಭಾವಿಸಿದನು.

ಈ ಕಡೆ ಶುಭದಾ ಕೈತೊಳೆದು ಮಾಧವನ ಬಳಿ ಬಂದು ಕುಳಿತಳು. ಕೃಷ್ಣಾ ಠಾಕೂರಣಿಯು "ಹಾರಾಣನೆಲ್ಲಿ ?" ಎಂದಳು.

"ಅವರಿಗೆ ಮೈಯಲ್ಲಿ ಚೆನ್ನಾಗಿಲ್ಲ. ಮಲಗಿದ್ದಾರೆ."

ಠಾಕೂರಣಿಯು ಸ್ವಲ್ಪ ಮೌನವಾಗಿದ್ದು ಆಮೇಲೆ ಮೆಲ್ಲಗೆ "ಮನುಷ್ಯ ನಿಗೆ ದಯಾ ದಾಕ್ಷಿಣ್ಯ ಅಂತೂ ಇಲ್ಲ....ನಾಚುಗೆಯಾದರೂ ಇರಬೇಡವೇ?" ಎಂದಳು.

ರಾಸಮಣಿಯು ಈ ಮಾತು ಕೇಳಿ ತುಟಿ ಬಿಗಿಸಿಕೊಂಡಳು.

ರಾತ್ರಿ ಬಹಳ ಹೊತ್ತಾಯಿತು. ಕೃಷ್ಣಾಠಾಕೂರಣಿಯು ರೆಪ್ಪೆ ಮುಚ್ಚದೆ ಮಾಧವನ ಪಕ್ಕದಲ್ಲಿಯೇ ಕೂತಿದ್ದಳು. ಆಕೆ ಹೀಗೆಯೇ ಎಷ್ಟೋ ಮೃತ್ಯುಶಯ್ಯೆಗಳ ಪಕ್ಕ ಇದೇ ರೀತಿಯಾಗಿಯೇ ಕಾವಲು ಕಾದು ಅನುಭವವಿತ್ತು. ಮಾಧವನ ಎದೆಯ ಮೇಲೆ ಕೈಯಿಟ್ಟು ನೋಡಿದಳು. ಅವನಿಗೆ ಉಸಿರು ಕಡಿಮೆಯಾಗುತ್ತಿದ್ದುದು ತಿಳಿದು ಬಂತು. ಮಾಧವನು ಕಣ್ಣು ತೆರೆದು "ತಲೆ ತುಂಬಾ ನೋಯುತ್ತೆಮ್ಮಾ!" ಎಂದು ಕೂಗಿದನು.

ಕೃಷ್ಣಾಠಾಕೂರಣಿಯು ಅವನ ತಲೆಯ ಮೇಲೆ ಕೈಯಿಂದ ನೇವರಿಸಿ ದಳು....ಮಾಧವನು "ಅಯ್ಯೋ, ಹೊಟ್ಟೆ ಕಿವುಚತ್ತೇ.." ಎಂದು ಕೂಗಿ ದನು.

ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡು ಅವರವರ ಮನಸ್ಸಿ ನಲ್ಲಿ ಬಂದ ಭಾವವನ್ನು ಇತರರ ಮುಖದಲ್ಲಿ ಕಾಣಲು ಪ್ರಯತ್ನ ಮಾಡಿದರು.

ಸ್ವಲ್ಪ ಹೊತ್ತು ನಿಶ್ಶಬ್ದ. ಎಲ್ಲರೂ ಮೌನವಾಗಿ ಅಂತ್ಯದ ನಿರೀಕ್ಷಣೆ ಮಾಡುತ್ತ ಕೂತಿದ್ದರು. ಮಾಧವನು "ಬಾಯಾರಿಕೆ ಆಗುತ್ತೆ" ಎಂದು ಕೂಗಿದನು.

ರಾಸಮಣಿ ಉದ್ಧರಣೆಯಿಂದ ಬಾಯಲ್ಲಿ ಸ್ವಲ್ಪ ಗಂಗಾಜಲವನ್ನು ಕುಡಿಸಿದಳು. ಕುಡಿದು ಇದ್ದಕ್ಕಿದ್ದ ಹಾಗೆ ಮಾಧವನು ನಿಶ್ಶಬ್ದವಾಗಿ

ಮಲಗಿದನು.

ಕ್ರಮೇಣ ಶ್ವಾಸ ಹೊಡೆದುಕೊಳ್ಳಲು ಆರಂಭವಾಯಿತು. ಎಲ್ಲರಿಗೂ ಅದು ಗಮನಕ್ಕೆ ಬಂತು. ಕೃಷ್ಣಾ ರಾಕೂರಣಿಗೆ ನಾಡಿ ನೋಡುವುದಕ್ಕೆ ಗೊತ್ತು. ಸ್ವಲ್ಪ ಹೊತ್ತು ಮಾಧವನ ನಾಡಿ ಕೈಯಲ್ಲಿ ಹಿಡಿದು ನೋಡಿ ಅವಳು ಸದಾನಂದನನ್ನು ಹತ್ತಿರ ಕರೆದು "ಇನ್ನು ಕೆಳಗೆ ಮಲಗಿನಬೇಕಾಗುತ್ತಪ್ಪಾ" ಎಂದಳು.

ಸದಾನಂದನು ಸುಮ್ಮನಿದ್ದನು.

ರಾಸಮಣಿಯು ಈ ಮಾತು ಕೇಳಿ ಸ್ಫುಟವಾಗಿ ಅಳುತ್ತಾ ಎದ್ದು "ಇನ್ನೂ ಏನಪ್ಪಾ ನೋಡುತ್ತಿ, ಸದಾನಂದ?" ಎಂದಳು.

ಭಲನಾ ಅಳುವುದಕ್ಕೆ ತೊಡಗಿದಳು. ಕೃಷ್ಣಾ ರಾಕೂರಣಿಯೂ ಅಳುತ್ತಾ ಕಣ್ಣನ್ನು ನೆರಗಿನಲ್ಲಿ ಮುಚ್ಚಿಕೊಂಡಳು . ಹೇಗೋ ಮಾಧವನ ಚೇತನವಿಲ್ಲದ ದೇಹವನ್ನು ಕೆಳಗೆ ಇಳಿಸಿ ಮಲಗಿಸಿದ್ದಾಯಿತು.

ಸ್ವಲ್ಪ ವೇಳೆಯಾದ ಮೇಲೆ ಮಾಧವನು ಒಂದು ಸಲ, ಒಂದೇ ಸಲ, 'ಹಾ' ಎಂದನು. ಕೃಷ್ಣಾ ರಾಕೂರಣಿ ಪುನಃ ಮೊದಲಿನಂತೆ ಗಂಗೆಯನ್ನು ಕುಡಿಸಿದಳು. ಮಾಧವನಿಗೆ ಅದನ್ನು ಕುಡಿದು ಸ್ವಲ್ಪ ಬಲ ಬಂದಂತಾಯಿತು. ಒಂದು ಸಲ ಕಣ್ಣು ತೆರೆದು ನೋಡಿದನು. ಮುಗುಳ್ನಗೆಯೊಂದು ಅವನ ಸಾಯುತ್ತಿದ್ದ ಮುಖದ ಮೇಲೆ ಹೊಳೆದು "ಸದೂ ಮಾವ... ಅಕ್ಕಾ ...ಅಕ್ಕಾ...." ಎಂದು ಕೂಗಿದನು.

ಹತ್ತಿರ ಕೂತಿದ್ದ ಭಲನಾಮಯಿಯು ಬೆಚ್ಚಿಬಿದ್ದು ತಾಯ ಮಡಿಲಲ್ಲಿ ತಲೆಯಿಟ್ಟಳು. ರಾಸಮಣಿಯ ಮೈಯೆಲ್ಲಾ ರೋಮಾಂಚಿತವಾಯಿತು.

ನೋಡುತ್ತಾ ನೋಡುತ್ತಾ ಮಾಧವಚಂದ್ರನ ಮೈ ಅತ್ಯಂತ ಬಿಗಿಸಿಕೊಂಡಿತು. ತಲೆಯು ಅಲ್ಲಾಡಲು ಆರಂಭವಾಯಿತು. ಪ್ರಬಲವಾಗಿ ಶ್ವಾಸ ಹೊಡೆದುಕೊಳ್ಳಲು ಶುರುವಾಯಿತು. ನೋಡಿ ಕೃಷ್ಣಾ ರಾಕೂರಣಿಯು ಅಳುತ್ತಾ "ಇನ್ನೇಕಪ್ಪಾ . ಹೊತ್ತು ಆಯಿತು" ಎಂದಳು. ರಾಸಮಣಿಯು ಗಟ್ಟಿಯಾಗಿ ಚೀತ್ಕಾರಮಾಡುತ್ತಾ ಎದ್ದಳು. "ಇನ್ನು ಪರಲೋಕದ ವ್ಯವಸ್ಥೆ ಮಾಡಿ....ತುಲಸೀ ಕಟ್ಟೆಯ ಹತ್ತಿರ ಮಲಗಿಸಿ" ಎಂದಳು.

ಆಗ ಎಲ್ಲರೂ ಉಚ್ಚಸ್ವರದಲ್ಲಿ ಅಳುವುದಕ್ಕೆ ಆರಂಭಿಸಿದರು. ಅವರ

ಚೀತ್ಕಾರವು ಹಾರಾಣಚಂದ್ರನ ನಿದ್ರಾಭಂಗಮಾಡಿತು. ಅವನು ಎದ್ದು ಹೊರಗೆ ಬಂದು ನೋಡಿದನು. ಮಾಧವನನ್ನು ಎತ್ತಿಕೊಂಡು ಹೊರಗಡೆ ತೆಗೆದುಕೊಂಡು ಹೋಗುತ್ತಿದ್ದಾರೆ. ನೋಡಿದ ತಕ್ಷಣ ಅವನು ಕಿರುಚಿದನು. ಬೇಗ ಹೋಗಿ ಮಾಧವನನ್ನು ತಾನೇ ಎತ್ತಿಕೊಂಡು ತುಲಸೀಕಟ್ಟೆಯ ಬಳಿ ಕುಳಿತು ತನ್ನ ತೊಡೆಯಮೇಲೆ ಮಲಗಿಸಿಕೊಂಡು ಗಟ್ಟಿಯಾಗಿ ಅಳುತ್ತಾ "ಅಪ್ಪಾ, ಮಾಧೂ...." ಎಂದು ಕೂಗಿದನು.

ಮಾಧವನೂ ಕಡೆಯ ಸಲ ಕಷ್ಟಪಟ್ಟು "ಅ....ಪ್ಪಾ" ಎಂದು ಕೂಗಿದಂತೆ ಅನ್ನಿಸಿತು.

# ೧೦

ದೊಡ್ಡದೊಂದು ಉಪ್ಪರಿಗೆ ಮನೆಯ ವಿಶಾಲವಾದ ಸುಸಜ್ಜಿತ ಕೋಣೆಯೊಳಗೆ ಮೆತ್ತನೆಯ ಸೋಫಾದ ಮೇಲೆ ಅಪೂರ್ವಸುಂದರಿ, ಮಾಲತಿ ಕೂತಿದ್ದಾಳೆ. ಪಕ್ಕದಲ್ಲಿಯೇ ಅಮೃತ ಶಿಲೆಯಿಂದ ನಿರ್ಮಿತವಾದ ಮೇಜಿನ ಮೇಲೆ ಉಜ್ವಲವಾದ ದೀಪವೊಂದು ಬೆಳಗುತ್ತಿದೆ. ಆ ಬೆಳಕಿನಲ್ಲಿ ಮಾಲತಿಯು ಪುಸ್ತಕವೊಂದನ್ನು ಓದುತ್ತಾ ಇದ್ದಾಳೆ ..ಕೋಣೆಯಲ್ಲಿ ಬೇರಾರೂ ಇಲ್ಲ. ಸುತ್ತ ಎಲ್ಲಿ ನೋಡಿದರೂ ಅಮೌಲ್ಯವಾದ ದೇಶ ವಿದೇಶೀಯ ಕಲಾಕೃತಿಗಳು. ನಾಲ್ಕೂ ಕಡೆ ನಿಲುವುಗನ್ನಡಿಗಳು. ಮೇಲೆ ಚಿತ್ರವಿಚಿತ್ರವಾದ ತೂಗುದೀಪಗಳು. ಇಂತಹ ಲೋಲುಪ್ತತೆಯ, ವೈಭವದ ಮಧ್ಯೆ ಮಾಲತಿಯು, ಜೀವಂತ ಸ್ವರ್ಣಪ್ರತಿಮೆಯಂತೆ ಒಬ್ಬಳೇ ಕೂತಿದ್ದಾಳೆ. ಆ ಸೊಗಸಿನಾಗರಕ್ಕೇ ಅಲಂಕಾರವಾಗಿರುವ ಅವಳ ಅದ್ವಿತೀಯ ಸೌಂದರ್ಯವನ್ನು, ಎವೆಯಿಕ್ಕದೆ ನೋಡಿ ಮುಗ್ಧರಾಗುವವರು ಯಾರೂ ಅಲ್ಲಿಲ್ಲ. ಅದಕ್ಕಾಗಿಯೇ ಅವಳು ಇಷ್ಟವಿಲ್ಲದ ಮನಸ್ಸನ್ನು ಪುಸ್ತಕದಲ್ಲಿ ಮಗ್ನಳಾಗಿಸಲು ಪ್ರಯತ್ನಪಡುತ್ತಿದ್ದಾಳೆ .. ಹಾಳೆಯ ಮೇಲೆ ಹಾಳೆ ಮಗುಚಿ ಹಾಕುತ್ತಿದ್ದಾಳೇನೋ ನಿಜ. ಆದರೆ ಅದರಲ್ಲಿನ ವಾಕ್ಯ ಯಾವುದಾದರೂ ವಾಕ್ಯ ಮನಸ್ಸಿನಲ್ಲಿ ಹೊಕ್ಕಿದ್ದರೆ ಸರಿ. ಅವಳ ಮುಖವನ್ನು ನೋಡಿದರೆ ಆಗತಾನೆ ಅತ್ತುಅವ ಮುಗಿಸಿದ್ದಂತೆ ಕಾಣುತ್ತಿದೆ. ಏಕೆಂದರೆ ಕೆನ್ನೆಯಮೇಲೆ ಒಣಗಿದ ಕಣ್ಣೀರಿನ ಬಿಂದುವಿನ ಕರೆ ಕಾಣುತ್ತಿದೆ.

ಇಂತಹ ಸ್ವರ್ಗದಲ್ಲಿ ಕೂತೂ ಅವಳು ಏಕೆ ಅಳುತ್ತಿದ್ದಾಳೋ ಗೊತ್ತಿಲ್ಲ. ಆದರೆ ಅಳುತ್ತಿದ್ದುದೇನೋ ಖಂಡಿತ. ಆ ಅಳುವನ್ನು ನಿಲ್ಲಿಸುವುದಕ್ಕಾಗಿಯೇ ಬಹುಶಃ ಪುಸ್ತಕವನ್ನು ಕೈಗೆ ತೆಗೆದುಕೊಂಡಿದ್ದಾಳೆ.

ಮಾಲತಿಯು ಒಡವೆಯೇನೂ ತೊಟ್ಟಿಲ್ಲ. ಉಟ್ಟಿದ್ದುದು ಸಾಮಾನ್ಯವಾದೊಂದು ನೂಲಿನ ಸೀರೆ. ಅವಳ ಮನಸ್ಸಿಗೆ ಸುಖವಿಲ್ಲ. ಅದಕ್ಕೇ ಅಳುತ್ತಿದ್ದಾಳೆ.

ಪುಸ್ತಕ ಓದುವ ವ್ಯರ್ಥ ಪ್ರಯತ್ನವನ್ನು ನಿಲ್ಲಿಸಿ ಅದನ್ನು ಪಕ್ಕದ

ಅಲಮಾರಿನ ಮೇಲೆ ಎಸೆದಳು. ನಿಶ್ಶಬ್ದವಾಗಿ ಸೋಫಾದ ಒಂದು ಪಕ್ಕಕ್ಕೆ ತಲೆ ಆನಿಸಿಕೊಂಡು ಕೂತಳು. ಪುನಃ ಕಣ್ಣಲ್ಲಿ ನೀರು ಸುರಿಯಲಾರಂಭವಾಯಿತು. ಈಗ ಅದನ್ನು ಅವಳು ತಡೆಯಲು ಪ್ರಯತ್ನಮಾಡಲಿಲ್ಲ.... ಸುಮ್ಮನೇ ಸುರಿಯುತ್ತಲೇ ಇವೆ ತೊಟ್ಟು ತೊಟ್ಟಾಗಿ ಅವಳ ಸೀರೆಯ ಮೇಲೆ, ಸೋಫಾದ ಮೇಲೆ ಬೀಳುತ್ತಿದೆ ... ಇಂತಹ ಸಮಯದಲ್ಲಿ ಸುರೇಂದ್ರನಾಥನು ಕೋಣೆಯನ್ನು ಪ್ರವೇಶಮಾಡಿದನು.

ಮೃದುವಾದ ರತ್ನಗಂಬಳಿಯ ಮೇಲೆ ಅವನ ಕಾಲು ಸಪ್ಪುಳ ಅವಳಿಗೆ ಕೇಳಿ ಬರಲಿಲ್ಲವಾದ್ದರಿಂದ ತಲೆ ಮುಚ್ಚಿಕೊಂಡಿದ್ದ ಮಾಲತಿಗೆ ಅವನು ಪ್ರವೇಶಮಾಡಿದುದು ತಿಳಿಯಲಿಲ್ಲ. ಮೊದಲಿನಂತೆಯೇ ಅಳುತ್ತಿದ್ದಳು. ಸುರೇಂದ್ರ ಸ್ವಲ್ಪಹೊತ್ತು ಅವಳನ್ನೆ ನಿಟ್ಟಿಸಿ ನೋಡುತ್ತಿದ್ದು ಇನ್ನೂ ಹತ್ತಿರ ಬಂದು ಅವಳನ್ನು ನೋಡುತ್ತಾ ನಿಂತನು. ಆಮೇಲೆ ತಡೆಯಲಾರದೆ "ಮಾಲತೀ" ಎಂದು ಮೃದುವಾಗಿ ಕೂಗಿದನು.

ಮಾಲತಿಯು ಚಮಕಿತಳಾಗಿ ತಲೆ ಎತ್ತಿ ನೋಡಿ "ಬನ್ನಿ" ಎಂದಳು.

ಸುರೇಂದ್ರನು ಬಂದು ಅವಳ ಪಕ್ಕದಲ್ಲಿ ಕೂತನು. ಅವಳ ಎರಡು ಕೈಗಳನ್ನೂ ತನ್ನ ಕೈಯಲ್ಲಿ ತೆಗೆದುಕೊಂಡು

"ಮತ್ತೆ ಅಳುತ್ತಿದ್ದೆಯಾ ?" ಎಂದು ಕೇಳಿದನು. ಮಾಲತಿಯು ಕೈಗಳನ್ನು ಸಡಿಲಮಾಡಿಕೊಂಡು ಸುಮ್ಮನಿದ್ದಳು.

"ಏಕೆ ಅಳುತ್ತಿದ್ದೆ ?"

ಮಾಲತಿಯು ಪುನಃ ಹಾಗೆಯೇ ಇದ್ದಳು. ಉತ್ತರ ಕೊಡಲಿಲ್ಲ. ಸುರೇಂದ್ರನಿಗೂ ಏನು ಹೇಳಲೂ ತೋಚದೆ ಸುಮ್ಮನಿದ್ದನು. ಅನಂತರ ಅವರ ಕೈಗಳನ್ನು ಪುನಃ ಎಳೆದು ತೆಗೆದುಕೊಂಡು ಮೆಲ್ಲಗೆ "ಏನು ಅನ್ಯಾಯ, ಎಷ್ಟು ಪ್ರಯತ್ನ ಮಾಡಿದರೂ ನಿನ್ನ ದುಃಖ ಶಮನಮಾಡಲಾಗಲಿಲ್ಲವಲ್ಲಾ ನನಗೆ ? ಬೇಕು ಬೇಕಾದ, ಸಹಸ್ರ ವಸ್ತುಗಳನ್ನು ತಂದು ಕೊಟ್ಟೂ, ನಿನ್ನ ಮನಸ್ಸನ್ನ ಗೆಲ್ಲಲಾರದೆ ಹೋದೆ ..ಇನ್ನು ಏಕೆ ಬದುಕಿರಬೇಕು ?" ಎಂದನು.

ಮಾಲತಿಯು ಅದಕ್ಕೆ ಉತ್ತರ ಹೇಳಲು ಹುಡುಕಿದಳು. ಸಿಕ್ಕಲಿಲ್ಲ. ಅವನ ಸಂಕಟಕ್ಕೆ ಪರಿತಾಪವಾಯಿತು. ಆದರೆ ಉಪಶಮನ ಅವಳ ಕೈಲಾಗ

ಲಿಲ್ಲ. ಇನ್ನು ಏನುಮಾಡಿದರೂ ಅಳುವುದಿಲ್ಲವೆಂದು ಈ ಹಿಂದೆ ಪ್ರತಿಜ್ಞೆ ಮಾಡಿದ್ದಳು. ಅದೂ ಅವಳ ಕೈಲಾಗಲಿಲ್ಲ. ಕಣ್ಣೀರಿನ ಮೇಲೆ ಅವಳ ಒಡೆತನ ಸಾಗದೆ ಹೋಯಿತು. ಅದು ಮುಂಚೆ ಹೇಗೆ ಸ್ವೇಚ್ಛೆಯಾಗಿ ಹರಿಯುತ್ತಿತ್ತೋ ಹಾಗೆಯೇ ಹರಿಯಲು ತೊಡಗಿತು.

ಸುರೇಂದ್ರ ಹೇಳಲಾರಂಭಿಸಿದನು "ಏನು ಮಾಡಿದರೆ ಒಬ್ಬರನ್ನು ಸುಖಿಯಾಗಿ ಇಟ್ಟುಕೊಂಡಿರಬಹುದು, ಅದು ಬಹುಶಃ ಮನುಷ್ಯನಾದವನಿಗೆ ಯಾವನಿಗೂ ತಿಳಿದಿಲ್ಲವೆಂದು ಕಾಣುತ್ತೆ . ಇನ್ನು ದೇವತೆಗಳಿಗೆ ಯಾರಿಗಾದರೂ ತಿಳಿದಿದೆಯೋ ಅದೂ ಹೇಳುವುದಕ್ಕಾಗದು.

"ನಿನ್ನ ತೃಪ್ತಿಗಾಗಿ, ನಿನ್ನ ಸುಖ, ಆಮೋದಕ್ಕೆಂದು ಈ ಭವನವನ್ನು ಇಷ್ಟು ಹಣ ಖರ್ಚುಮಾಡಿ ಸಜ್ಜುಮಾಡಿದೆ .. ಈ ದೇವಿಯ ಪ್ರತಿಮೆಯನ್ನು ಈ ಮಂದಿರದಲ್ಲಿ ಪ್ರತಿಷ್ಠೆಮಾಡಿದೆ ..ಆದರೆ ಸುಖಿಯಾದೆನೇನು ?........ ಸುಖದ ಮಾತು ಬಿಡು....ಇರುವ ದುಃಖವಂತೂ ವೃದ್ಧಿಯಾಗುತ್ತಾ ಇದೆ. ಯಾರನ್ನು ಸುಖಿಯಾಗಿಡಬೇಕೆಂದು ಇಷ್ಟು ಮಾಡಿದೆನೋ ಅವಳು ಒಂದು ದಿನ, ಒಂದು ಕ್ಷಣವೂ ಸಂತೋಷವಾಗಿರುವುದನ್ನು ನೋಡಲಿಲ್ಲ... ನಿನ್ನನ್ನು ಪಡೆದ ಲಾಗಾಯಿತು ಈವತ್ತಿನ ವರೆಗೆ ಒಂದು ಕ್ಷಣ ಕೂಡ ಒಂದು ನಗುವಿನ ರೇಖೆ ನಿನ್ನ ತುಟಿಯ ಮೇಲೆ ಕಾಣಲಿಲ್ಲ" ಹೀಗೆಂದು ಹೇಳುತ್ತಾ ಸುರೇಂದ್ರನಾಥನು ಅವಳ ಕೈಗಳನ್ನು ಬಿಟ್ಟು ಅಧೀರನಾಗಿ ಅವಳ ಅಶ್ರುಮಲಿನ ಮುಖವನ್ನು ಮೇಲೆತ್ತಿ "ಮಾಲತೀ, ಇಷ್ಟು ದಿನಗಳು ಕಳೆದರೂ, ನಿನಗೆ ಯಾವುದರಿಂದಲೂ ಸಮಾಧಾನವಾಗಲಾರವೇ ? ..ಹೇಗಾದರೂ ಮಾಡಿ ಸ್ವಲ್ಪ ನಗು ಮುಖ ಹಾಕಿಕೊಳ್ಳಲಾರೆಯಾ ?" ಎಂದನು.

ಮಾಲತಿಯು ಕೈಯೆತ್ತಿ ಕಣ್ಣೊರಸಿಕೊಂಡಳು.

"ನಿನ್ನ ಸೌಂದರ್ಯ, ನಿನ್ನ ಲಾವಣ್ಯ ನನ್ನನ್ನ ಎಷ್ಟರಮಟ್ಟಿಗೆ ಹುಚ್ಚುಮಾಡಿವೆಯೋ ಹೇಳಲಿಕ್ಕೆ ಸಾಧ್ಯವಿಲ್ಲ. ನಿನ್ನ ರೂಪಿಗೆ ತಕ್ಕಂತೆ ಅಲಂಕಾರ ಮಾಡೋಣವೆಂದು ಎಷ್ಟು ಆಭರಣಗಳನ್ನು ತಂದುಕೊಟ್ಟೆ. ಒಂದೂ ತೊಡಲಿಲ್ಲ. ವಿಧವಿಧವಾದ ಸೀರೆ ವಸ್ತ್ರಗಳನ್ನು ತರಿಸಿದೆ. ಒಂದೂ ಉಡಲಿಲ್ಲ. ಮಾಲತೀ, ನಿನಗೆ ನನ್ನನ್ನ ಕಂಡರೆ ಆಗದೇ ?"

ಮಾಲತಿಯು ಅವನ ಎದೆಯ ಮೇಲೆ ತಲೆಯಿಟ್ಟು ಅಳಲು

ತೊಡಗಿದಳು.

ಸುರೇಂದ್ರನ ಕಣ್ಣುಗಳೂ ಒದ್ದೆಯಾದುವು. ಆದರದಿಂದ ಅವಳ ತಲೆಯ ಮೇಲೆ ಮೃದುವಾಗಿ ಕೈಯಾಡಿಸುತ್ತಾ ಗದ್ಗದ ಸ್ವರದಲ್ಲಿ "ನಿನಗೆ ನನ್ನನ್ನ ಕಂಡರ ಆಗುತ್ತೋ ಇಲ್ಲವೋ ಹೇಳಲಾರೆ....ಆದರ.. .ಆದರೆ ನನ್ನ ದಿನ್ನೂ ಒಂದು ಮಾತಿದೆ...ಏನೆಂದರೆ.. ನೀನು ನನ್ನ ಅಪರಾಧವನ್ನು ಗಮನಿಸಬೇಡ. ಆದದ್ದಾಯಿತು....ನನ್ನ ಮನಸ್ಸಿನಲ್ಲಿ ಏನು ಬರುತ್ತೆ ಅದನ್ನು ಇವತ್ತು ಆಡಿಬಿಡುತ್ತೇನೆ. ನೀನು ಯಾವ ದಾರಿಯನ್ನು ತುಳಿದಿದ್ದೀಯೋ ಅದು, ನನ್ನ ಅಭಿಪ್ರಾಯದಲ್ಲಿ, ಬಹಳ ಕೀಳು ವರ್ಗದ ಹೆಂಗಸರು ತುಚ್ಛ ಹಣಕ್ಕಾಗಿ, ದೈಹಿಕ ಸುಖಕ್ಕಾಗಿ, ಅವಲಂಬಿಸುವ ದಾರಿ. ಅಂತಹವರಿಗೆ ವಸ್ತ್ರ, ಒಡವೆ, ಬಂಗಾರ, ವಜ್ರ, ಐಶ್ವರ್ಯ ಇವು ಬಿಟ್ಟು ಬೇರೆ ಯಾವುದರಲ್ಲೂ ಸುಖವಿಲ್ಲ. ಆದರ ನೀನು ಅವರ ಸಂಗಡದಲ್ಲಿ ಸೇರಿದವಳಲ್ಲ. ಅದಕ್ಕೋಸ್ಕರವೇ ನಿನ್ನನ್ನು ಯಾವ ಬಗೆಯಾಗಿ ಸುಖದಲ್ಲಿಟ್ಟಿರಬೇಕೆಂದು ನನಗೆ ಹೊಳೆಯುವುದಿಲ್ಲ...ಹಾಗಿದ್ದ ಪಕ್ಷದಲ್ಲಿ....ಹಾಗಿದ್ದಿದ್ದರ ಈವರೆಗೆ ಎಷ್ಟೋ ಸುಖವಾಗಿರುತ್ತಿದ್ದೆ." ಹೀಗೆ ಹೇಳುತ್ತ ಸುರೇಂದ್ರನು ಇದ್ದಕ್ಕಿದ್ದ ಹಾಗೆ ನಿಲ್ಲಿಸಿ ಮೌನವಾದನು. ಆ ಮೇಲೆ ಸ್ವಲ್ಪ ಗಂಭೀರಭಾವದಿಂದ "ಮಾಲತೀ, ನಿನ್ನ ...ಯಜಮಾನರು ಬದುಕಿದ್ದಾರೆಯೇ ?" ಎಂದನು. ಮಾಲತಿಯು ಅವನ ಎದೆಯ ಮೇಲೆ ತಲೆ ಇಟ್ಟಿದ್ದವಳು ಹಾಗೆಯೇ ತಲೆಯಲ್ಲಾಡಿಸಿ ಬದುಕಿಲ್ಲವೆಂದು ಸೂಚಿಸಿದಳು.

"ಹಾಗಿದ್ದರೆ ಹೇಳು, ನಿನ್ನನ್ನ ನಾನು ಮದುವೆಯಾದರ ಸುಖವಾಗಿರುತ್ತೀಯೋ ? ಹೇಳು ...ನಾನು ಅದಕ್ಕೂ ಸಿದ್ಧ !"

ಈಸಲ ಮಾಲತಿ ಹಾಗೆಯೇ ನೆಲಕ್ಕೆ ಕುಸಿದು ಬಿದ್ದು ಅವನ ಕಾಲ ಮೇಲೆ ತಲೆಯಿಟ್ಟಳು. ಕೈಗಳಿಂದ ಅವನ ಮೊಣಕಾಲುಗಳನ್ನು ಹಿಡಿದುಕೊಂಡು ತನ್ನ ಮುಖವನ್ನು ಅದರಲ್ಲಿ ಮುಚ್ಚಿದಳು. ಸುರೇಂದ್ರನು ಅವಳನ್ನು ಎತ್ತಲು ಪ್ರಯತ್ನ ಮಾಡಲಿಲ್ಲ. ಆದರೆ ಅವಳ ಕಣ್ಣೀರಿಂದ ಅವನ ಪಾದಗಳು ಒದ್ದೆಯಾಗುತ್ತಿದ್ದುವು. ಆದರೂ ಎತ್ತಲಿಲ್ಲ, ಸುಮ್ಮನೆ ನಿಟ್ಟುಸಿರು ಬಿಟ್ಟು ಮೌನವಾಗಿ ಇದ್ದನು.

ಎಷ್ಟೋ ಹೊತ್ತು ಹೀಗೆಯೇ ಇದ್ದರು. ಆ ಮೇಲೆ ನಿಧಾನವಾಗಿ

ಮ್ಲಾನವಾದ ಧ್ವನಿಯಲ್ಲಿ ಹೇಳತೊಡಗಿದನು. "ದೇವರಿಗೆ ಗೊತ್ತು ನನಗೇನಾಗಿದೆಯೋ! ನಿನ್ನನ್ನ ಕಂಡರೆ ನನ್ನ ಅಂತಃಕರಣದಲ್ಲಿಯೇ ಪ್ರೀತಿ ಹುಟ್ಟಿದೆಯೋ ಅಥವಾ ನಿನ್ನ ಈ ಅದ್ವಿತೀಯ ಸೌಂದರ್ಯಕ್ಕೆ ಹುಚ್ಚಾಗಿದ್ದೇನೆಯೋ ...ಹೇಳಲಾರೆ. ಆದರೆ ಇಷ್ಟು ಹೇಳಬಲ್ಲೆ. ನೀನು ನನ್ನ ಮನಸ್ಸು, ಬುದ್ಧಿ, ವಿವೇಕ ಎಲ್ಲವನ್ನೂ ಸೂರೆಮಾಡಿ ಬಿಟ್ಟಿದ್ದೀಯೆ. ಒಳ್ಳೆಯದು, ಕೆಟ್ಟದು ಎನ್ನುವ ವಿವೇಚನೆಯೂ ಹೋಗಿಬಿಟ್ಟಿದೆ. ಇವತ್ತು ನಿನ್ನೆದುರಿಗೆ ಹೇಳುತ್ತೇನೆ...ನಂಬಿದರೆ ನಂಬು, ಬಿಟ್ಟರೆ ಬಿಡು ...ನಿನ್ನ ಒಂದು ಮಾತು. ..ಒಂದು ಮಾತಿಗೆ ಪ್ರಾಣಬಿಡೆಂದರೂ ಬಿಡುತ್ತೇನೆ ನಾನಿದನ್ನು ನಿನ್ನನ್ನ ವಶಮಾಡಿಕೊಳ್ಳುವುದಕ್ಕೆ ಹೀಗೆ ಹೇಳುತ್ತಾ ಇದ್ದೇನೆಂದುಕೋಬೇಡ. ಇದು ಸತ್ಯ ..ನನಗೆ ಸಂಪೂರ್ಣ ಆತ್ಮವಿಸ್ಮೃತಿಯಾಗಿದೆ...ಯಾವುದು ಆದರೂ ಆಗಲಿ. ..ನೀನು ಒಂದು ಮಾತು ಹೇಳು.... ನಿನ್ನನ್ನ ಲಗ್ನವಾದರೆ ನೀನು ಸುಖಿಯಾಗುವ ಪಕ್ಷದಲ್ಲಿ, ಈ ಕ್ಷಣ ಮಾಡಿಕೊಳ್ಳುತ್ತೇನೆ. ಜಾತಿ, ಕುಲ, ಮಾನ, ವಂಶ ಮರ್ಯಾದೆ—ಯಾವುದೂ ಲಕ್ಷ್ಯವಿಡುವುದಿಲ್ಲ ..."ಹೀಗೆ ಹೇಳುತ್ತಾ ಸುರೇಂದ್ರನ ಕಣ್ಣುಗಳಲ್ಲಿ ನೀರು ತುಂಬಿತು. ಕಂಠವು ಬಿಗಿದು ಬಂತು. ಸ್ವಲ್ಪ ಹೊತ್ತು ಸುಮ್ಮನಿದ್ದು ಕಣ್ಣೊರಸಿಕೊಂಡು ಬಹಳ ನಿದಾನವಾಗಿ, ಅತಿ ಮೃದುವಾಗಿ "ಇಲ್ಲವೆ ಹೋದರ, ಮಾಲತಿ, ನನ್ನಂತಹ ಮನುಷ್ಯರಿಗೆ...ಇರುವುದು ಒಂದೇದಾರಿ ....ಯಾವುದೂ ಇನ್ನು ಸಹಿಸಲು ಆಗದೆ ಹೋದರೆ ಆತ್ಮಹತ್ಯೆಮಾಡಿಕೊಂಡು ನರಕದ ದಾರಿ ಹಿಡಿಯುವುದೇ ..." ಎಂದನು.

ಮಾಲತಿಗೆ ಇನ್ನು ತಡೆಯಲಾಗಲಿಲ್ಲ. ಅಳುತ್ತಾ ಅಳುತ್ತಾ "ಅಯ್ಯೋ, ಅಂತಹ ಮಾತನ್ನಾಡಬೇಡಿ. ನೀವು ನನಗೆ ಪ್ರಾಣದಾನ ಮಾಡಿದ್ದೀರಿ. ಮಾನ ಕಾಪಾಡಿದಿರಿ. ಕರುಣೆ ತೋರಿ ಆಶ್ರಯಕೊಟ್ಟಿರಿ. ಇಲ್ಲವೆ ಹೋಗಿದ್ದಿದ್ದರೆ ನಾನು ಈಗ ಬದುಕಿರುತ್ತಿರಲಿಲ್ಲ. ನಾನು ಕೆಟ್ಟವಳು, ಮಾನವಿಲ್ಲದವಳು....ಆದರೆ ಕೃತಘ್ನಳು ಮಾತ್ರ ಅಲ್ಲ. ನಿಮ್ಮ ಕನಿಕರ, ನಿಮ್ಮ ಸ್ನೇಹ, ವಿಶ್ವಾಸಗಳನ್ನು ಈ ಜನ್ಮದಲ್ಲಿ ಮರೆಯುವುದಿಲ್ಲ ...ಹೀಗೆಯೇ ನಾನದಕ್ಕೆ ಮಾಡುವ ಪ್ರತ್ಯುಪಕಾರ ?"

ಸುರೇಂದ್ರನಾಥನು ದೀರ್ಘ ನಿಶ್ವಾಸಬಿಟ್ಟು "ಯಾವುದರಿಂದ ಪ್ರತ್ಯುಪ ಕಾರವಾಗುತ್ತೋ ದೇವರಿಗೆ ಗೊತ್ತು. ನನಗೆ ತಿಳಿಯದು. ಈ ಮನಸ್ಸಿನ ಸಂಕಟ, ಈ ಅಂತರ್ದಾಹ, ಈಗೊಂದು ತಿಂಗಳಿಂದಲೂ ಅನುಭವಿಸುತ್ತಾ ಇದ್ದೇನೆ. ಹೀಗೆನ್ನುತ್ತಾನೆ ಅಂದುಕೊಳ್ಳಬೇಡ....ಆದರೂ ಹೇಳುತ್ತೇನೆ.... ಹೇಳುವುದಕ್ಕೆ ನಾಚುಗೆಯಾಗುತ್ತದೆ. ಇಷ್ಟು ಸ್ವಲ್ಪ ದಿವಸಗಳಲ್ಲಿ ಹೆಂಗುಸಿನ ರೂಪಕ್ಕೆ ಪೂರ್ತಿ ಸೋತುಹೋಗಿದ್ದೇನೆ ...ಒಬ್ಬ....ಒಬ್ಬ....ನೀನು ಯಾರಾ ದರೂ ಆಗಲಿ....ಎಂತಹವಳಾದರೂ ಆಗಿರಲಿ....ನನ್ನ ಸ್ವರ್ಗೀಯ ತಂದೆ, ತಾತಂದಿರ ವಂಶಮರ್ಯಾದೆಯನ್ನೂ ತಳ್ಳಿಹಾಕಲು ಸಿದ್ಧನಾಗಿದ್ದೇನೆ" ಎಂದನು.

ಮಾಲತಿಯ ಅದೇ ರೀತಿಯಾಗಿ ಬಿಕ್ಕಿ ಬಿಕ್ಕಿ ಅಳುತ್ತಾ...."ನಾನು ನಿಮ್ಮ ದಾಸಿಯರಿಗೂ ದಾಸಿಯಾಗಲು ಯೋಗ್ಯಳಲ್ಲ. ನನಗೋಸ್ಕರ ನೀವಿಷ್ಟು ಮಾಡಲು, ನಾನು ಯಾರು? ನಿಮ್ಮ ಸಮಸ್ತವನ್ನೂ ತ್ಯಾಗ ಮಾಡಲು ನನ್ನದೇನು ಯೋಗ್ಯತೆ? ನಾನು ಹುಟ್ಟಿದಾರಭ್ಯ ದುಃಖಿನಿ. ಇಂತಹ ದಯೆಯನ್ನು ಜನ್ಮದಲ್ಲಿ ನೋಡಲಿಲ್ಲ ..." ಹೀಗೆಂದು ಅಳು ತಡೆಯ ಲಾಗದೆ ನಿಲ್ಲಿಸಿ "ಯಾವಾಗ ಸಾಯಬೇಕೋ ...ದೇವರು ವರ ಕೊಡಲಿ, ಹೀಗೆಯೇ, ಇದೇ ರೀತಿಯಲ್ಲಿಯೇ ಸಾಯುವ ಹಾಗೆ ಮಾಡಲಿ" ಎಂದಳು.

ಸುರೇಂದ್ರನು ಬಲಾತ್ಕಾರವಾಗಿ ಅವಳನ್ನು ಮೇಲೆತ್ತಿ ಹತ್ತಿರ ಕೂಡಿಸಿಕೊಂಡು "ಹಾಗಾದರ ಯಾವುದರಿಂದಲೂ ನಿನಗೆ ಸುಖವಾಗುವ ಹಾಗಿಲ್ಲವೇ ?" ಎಂದನು.

ಮಾಲತಿಯು ನೆರಗಿನಿಂದ ಕಣ್ಣುಮುಚ್ಚಿಕೊಂಡು "ನಾವು ದಟ್ಟ ದರಿದ್ರರು" ಎಂದಳು.

"ಆದರೆ ನಾನು ದರಿದ್ರನಲ್ಲವಲ್ಲ. ನನಗಿವತ್ತು ಇರುವುದೆಲ್ಲಾ ನಿನ ಗೋಸ್ಕರವೇ ಇದೆ."

"ನಾನು ನನ್ನ ಸ್ವಂತ ಮಾತು ಆಡುತ್ತಿಲ್ಲ."

"ಮತ್ತೆ ಯಾರ ಮಾತು? ನಿನಗೆ ಬೇರೆ ಯಾರಿದ್ದಾರೆ ?"

"ದೇವರಿಗೆ ಗೊತ್ತು........ಈಗಿದ್ದಾರೋ ಇಲ್ಲವೋ, ಆದರೆ ನಾನು ಬಿಟ್ಟು ಬಂದಾಗ ಮಾತ್ರ ಎಲ್ಲರೂ ಇದ್ದರು."

"ಏನು ಹಾಗೆಂದರೆ? .... ಹಡಗು ಮುಳುಗಿ....?"

"ಅದೆಲ್ಲಾ ಸುಳ್ಳು ..ಬೇಕೆಂದು ಸುಳ್ಳು ಹೇಳಿದೆ, ಹೇಳಬೇಕಾಯಿತು."

ಸುರೇಂದ್ರನು ವಿಸ್ಮಿತನಾಗಿ ಮುಖವನ್ನು ದೃಷ್ಟಿಸಿ ನೋಡುತ್ತಾ ಕೂತನು. ಅವನಿಗೆ ಹಿಂದೆ ಒಂದೊಂದು ಸಲ ಅನ್ನಿಸಿತ್ತು. "ಇದೆಲ್ಲಾ ನಟನೆಯೇ ಅಥವಾ ಸತ್ಯವೇ? ಎಂಬ ಸಂದೇಹವಾಗಿತ್ತು ...ಆದರೆ ಈ ಮುಖ ನಟನೆ ಮಾಡುವಂತಹ ಮುಖವಲ್ಲ. ಈ ಕಣ್ಣುಗಳು, ಈ ಅಶ್ರು ಪ್ರವಾಹದ ಮಧ್ಯೆಯೂ ಹೊಳೆಯುತ್ತಿರುವ ಈ ಕಾಂತಿ....ಸುಳ್ಳು ಕಥೆಯನ್ನು ಬಚ್ಚಿಟ್ಟುಕೊಳ್ಳಲು ಸಾಧ್ಯವಿಲ್ಲವೆಂದುಕೊಂಡಿದ್ದನು .......ಸ್ವಲ್ಪ ಹೊತ್ತು ನಿಟ್ಟಿಸಿನೋಡಿ ಸ್ವಲ್ಪ ಗಂಭೀರವಾಗಿ "ಮಾಲತೀ" ಎಂದನು.

"ಏನು ?"

"ನೀನು ಈಗ ಹೇಳುವುದು ನಿಜವೇ ?" ಎಂದು ಅವಳ ಮುಖದ ಕಡೆ ತೀಕ್ಷ್ಣವಾಗಿ ನೋಡಿದನು. ನೋಡುತ್ತಾ, ನೋಡುತ್ತಾ ಅವಳ ಕಣ್ಣುಗಳು ಕ್ಷಣ ಮಾತ್ರದಲ್ಲಿ ನೀರು ತುಂಬಿದವು. ಸುರೇಂದ್ರನು ಲಜ್ಜಿತನಾದನು. ಕೈಯಿಂದ ಅವಳ ಕಣ್ಣೊರಸುತ್ತಾ "ಹಾಗಾದರೆ ನಡೆದಿದ್ದೆಲ್ಲಾ ಬಿಚ್ಚಿ ಹೇಳು" ಎಂದನು.

ಮಾಲತಿಯು ಆಗ ಅವನ ಭುಜದ ಮೇಲೆ ತಲೆಯಿಟ್ಟು, ಮಧ್ಯೆ ಅಳುತ್ತಾ ನಿದಾನವಾಗಿ ಹೇಳತೊಡಗಿದಳು. "ಹುಟ್ಟಿದಾರಭ್ಯ ದುಃಖ, ಕಷ್ಟಗಳ ಮಡಿಲಲ್ಲೇ ನಾನು ಬೆಳೆದು ದೊಡ್ಡವಳಾಗಿದ್ದು. ಆದರೆ ನನಗೆ ಬೇಕಾದವರೆಲ್ಲಾ ಇದ್ದರು. ನಮ್ಮ ತಂದೆ ಕೈಲಾದಷ್ಟು ಹುಡುಕಿ ವರನನ್ನು ಗೊತ್ತುಮಾಡಿ ತಕ್ಕ ವಯಸ್ಸಿಗೆ ಮದುವೆ ಮಾಡಿದ್ದರು. ಆದರೆ ನನ್ನ ಕೆಟ್ಟ ಹಣೆಬರಹ, ಆದ ಒಂದೆರಡು ತಿಂಗಳಲ್ಲೇ ಮನೆತಪ್ಪಿದ ವಿಧವೆಯಾದೆ. ಯಾರನ್ನು ಮದುವೆಯಾಗಿದ್ದೆನೋ ಅವರನ್ನ ಒಂದು ಸಲವೇ ನೋಡಿದಂತೆ ಜ್ಞಾಪಕ . .ಅಂದಿನಿಂದ, ಐದು ವರ್ಷಗಳಾಯಿತು....ಮತ್ತೆ ನಮ್ಮ ತೌರು ಮನೆಯಲ್ಲಿಯೇ ಇದ್ದೆ. ತಂದೆ ಹತ್ತಿರ ಗ್ರಾಮದಲ್ಲಿ ಒಬ್ಬ ಜಮೀನ್ದಾರರ ಬಳಿ ನೌಕರಿ ಮಾಡುತ್ತಿದ್ದರು. 'ಸಂಬಳ ಕಡಿಮೆಯಾದರೂ ಹೇಗೋ ಕಷ್ಟವೋ, ನಿಷ್ಠುರವೋ, ಸಂಸಾರ ಕಳೆಯುತ್ತಿತ್ತು ..."

ಆಗ ಅವಳಿಗೆ ಮುಂದೆ ಹೇಳಲಾಗದೆ ಕಂಠ ಬಿಗಿದುಕೊಂಡು ಬಂತು.

ಸುರೇಂದ್ರನಾಥ "ನಿಮ್ಮ ಮನೆಯಲ್ಲಿ ಆಗ ಯಾರು ಯಾರು ಇದ್ದರು ?" ಎಂದನು.

"ಎಲ್ಲರೂ ಇದ್ದರು. ಅಪ್ಪ, ಅಮ್ಮ, ಸೋದರತ್ತೆ, ನಾವಿಬ್ಬರು ಅಕ್ಕತಂಗಿಯರು, ಒಬ್ಬ ತಮ್ಮ ..ಅದಾದ ಮೇಲೆ ಕಳ್ಳತನ ಮಾಡಿದರು ಅಂದುಬಿಟ್ಟು ನಮ್ಮಪ್ಪನ ಕೆಲಸ ಹೋಯಿತು. ಆ ಅವಧಿಯಲ್ಲಿ ಅಲ್ಲಿ ಇಲ್ಲಿ ಭಿಕ್ಷೆ ಮಾಡಿಕೊಂಡು ಆಗಾಗ ದಿನ ಕಳೆಯುತ್ತಿತ್ತು . .ಕೆಲವು ದಿನ ಯಾವುದೂ ಸಿಕ್ಕವೆ ಕಳೆಯುತ್ತಿತ್ತು. ನಮ್ಮಮ್ಮ ಸೀತೆ ಸಾವಿತ್ರಿ ಹಾಗೆ ಪತಿವ್ರತೆ. ಯಾವುದು ಸಿಕ್ಕುತ್ತದೋ ಹಾಗೆಯೇ ಸವರಿಸಿ ಎಲ್ಲರಿಗೂ ಬಡಿಸಿ ತಾನು ಮಾತ್ರ ಉಪವಾಸ ಇರುತ್ತಿದ್ದಳು .. ಒಂದೊಂದು ಸಲ ಒಟ್ಟಿಗೇ ಮೂರು ದಿವಸ ಹೀಗೆ ಇರುತ್ತಿದ್ದಳು " ಹೀಗೆ ಹೇಳಿ ಅವಳು ಮತ್ತೆ ಬಿಕ್ಕಿ ಬಿಕ್ಕಿ ಅತ್ತಳು. ಸ್ವಲ್ಪ ಹೊತ್ತಾದ ಮೇಲೆ ಸಮಾಧಾನ ಮಾಡಿಕೊಂಡು ಹೇಳತೊಡಗಿದಳು. "ಈ ಕಡೆ ನಮ್ಮಪ್ಪ ನಮ್ಮಗಳ ಯೋಚನೆಯೇ ಮಾಡವೆ, ಗಾಂಜಾ ಅಫೀಮು ತಿಂದುಕೊಂಡು ಸಿಕ್ಕಿದ ಕಡೆ ಅಲೆದುಕೊಂಡು ಬಿದ್ದಿರುತ್ತಿದ್ದ. ಒಂದೊಂದು ಸಲ ನಾಲ್ಕೈದು ದಿನವಾದರೂ ಮನೆಗೆ ಬರುತ್ತಿರಲಿಲ್ಲ."

"ನನ್ನ ತಮ್ಮ ಮಾಧವ ಸುಮಾರು ಒಂದು ವರ್ಷದಿಂದ ಮಲೇರಿಯಾ ಕಾಯಿಲೆಯಿಂದ ನರಳುತ್ತ ಮಲಗಿದ್ದ. ಸರಿಯಾದ ಔಷಧಿ, ಉಪಚಾರವಿಲ್ಲದೆ ಗುಣವೇ ಆಗಲಿಲ್ಲ ನನಗನ್ನಿಸುತ್ತೆ ಇವತ್ತಿನವರೆಗೆ ಅವನು ಬದುಕಿದ್ದಾನೆಯೋ, ಇಲ್ಲವೋ ?"

ಹೀಗೆಂದಾಗ ಸುರೇಂದ್ರನ ಕಣ್ಣಲ್ಲೂ ನೀರು ತುಂಬಿತು.

ಆ ಮೇಲೆ ಮಾಲತಿಯು ಕೃಷ್ಣಾ ಠಾಕೂರಣಿಯ ವಿಷಯ ಹೇಳಿದಳು, ಸದಾನಂದನ ವಿಷಯ ಹೇಳಿದಳು ...ಆ ಮೇಲೆ ಮದುವೆಗೆ ನೆರದಿದ್ದ ಛಲನಾ ವಿಷಯ.

"ಅವಳೋ ದಿನ ದಿನಕ್ಕೂ ಬೆಳೆಯುತ್ತಿದ್ದಳು. ಆದರೆ ನಮ್ಮಂತಹ ದರಿದ್ರರಿಗೆ ವರ ಹೇಗೆ ಸಿಗುತ್ತಾನೆ. ಮದುವೆಯಿಲ್ಲವೆ ನಮ್ಮ ಬ್ರಾಹ್ಮಣ ಪಂಗಡದಲ್ಲಿ ಜಾತಿ ಹೋಗುತ್ತದೆ. ಈ ಚಿಂತೆಯಲ್ಲಿ ನಮ್ಮಮ್ಮ ನಿದ್ರಾಹಾರ ಬಿಟ್ಟಳು. ಅಪ್ಪನಂತೂ ಮನೆಯ ಕಡೆ ತಿರುಗಿ ನೋಡುತ್ತಿರಲಿಲ್ಲ.

ನಮಗಿದ್ದದ್ದು ಕಡೆಯ ಭರವಸೆ, ಸದಾನಂದ. ಆತನೂ ಊರು ಬಿಟ್ಟು ತನ್ನ ಚಿಕ್ಕಮ್ಮನನ್ನ ಕರೆದುಕೊಂಡು ಕಾಶಿಗೆ ಹೊರಟುಹೋಗಿದ್ದ....

"ಅಪ್ಪನ ಚಾಕರಿ ಹೋದ ಮೇಲೆ ಇದೇ ರೀತಿಯಾಗಿ ಸುಮಾರು ಆರು ತಿಂಗಳು ಕಳೆದಿದ್ದಾಯಿತು. ನೆರೆಹೊರೆಯವರು ಎಷ್ಟು ಕಾಲ ಸಹಾಯ ಮಾಡುತ್ತಾರೆ? ಸದಾನಂದ ಕಾಶಿಗೆ ಹೋಗುವಾಗ ಐವತ್ತು ರೂಪಾಯಿ ಕೊಟ್ಟು ಹೋಗಿದ್ದ. ಅದೂ ಮುಗಿದು ಹೋಗಿತ್ತು ..ಆಗಿನ ವಿಷಯ ನನ್ನ ಕೈಯಲ್ಲಿ ಹೇಳುವುದಕ್ಕಾಗದು" ಎನ್ನುತ್ತಾ ಪುನಃ ಅತ್ತಳು. ಸುರೇಂದ್ರನೂ ಕಣ್ಣಲ್ಲಿ ನೀರು ಹಾಕಿಕೊಂಡನು. ಸ್ವಲ್ಪ ಹೊತ್ತಾದ ನಂತರ ಕಣ್ಣೊರಸಿಕೊಂಡು "ಇನ್ನು ಸಾಕು ಬಿಡು, ಇನ್ನೊಂದು ದಿನ ಹೇಳುವೆಯಂತೆ" ಎಂದನು.

ಮಾಲತಿಯೂ ಕಣ್ಣೊರಸಿಕೊಂಡು "ಇಲ್ಲ, ಇವತ್ತೇ ಹೇಳಿ ಬಿಡು ತೇನೆ....ಜನ ನನ್ನನ್ನ ಚೆಲುವೆ ಅನ್ನುತ್ತಿದ್ದರು. ನಾನು ಅಂದುಕೊಂಡೆ. ಕಲಿಕತ್ತೆಗೆ ಹೋಗಿ ಏನಾದರೂ ಸಂಪಾದನೆ ಮಾಡೋಣವೆಂದು. ಒಂದು ರಾತ್ರಿ ಗಂಗಾ ತೀರಕ್ಕೆ ಬಂದೆ. ದಡದಲ್ಲಿಯೇ ಸೀದಾ ನಡೆದುಕೊಂಡು ಹೋದರೆ ಕಲಿಕತ್ತೆ ಸಿಗುತ್ತದೆಂದು ನಡೆಯುತ್ತಾ ಹೊರಟೆ. ಯಾರಿಗೂ ಕಾಣುವುದಿಲ್ಲ. ಯಾರನ್ನೂ ದಾರಿ ಕೇಳುವ ಆವಶ್ಯಕವಿಲ್ಲ. ಸ್ವಲ್ಪ ದೂರ ಬರುತ್ತಲೂ ಎದುರಿಗೆ ದೊಡ್ಡ ನೌಕೆ ಬರುತ್ತಿದ್ದುದು ಕಂಡುಬಂತು....... ನನಗೆ ಈಜು ಬರುತ್ತಿತ್ತು. ನೌಕೆ ಹತ್ತಿರ ಬರುತ್ತಲೂ ಅಂದುಕೊಂಡೆ. ಯಾರಿಗೂ ತಿಳಿಯದೆ ನೌಕೆಯ ತಳ ಹಿಡಿದುಕೊಂಡು ಹಾಗೆಯೇ ನೌಕೆಯ ಹಿಂದೆ ತೇಲಿಕೊಂಡು ಕಲಿಕತ್ತೆಯವರೆಗೂ ಏಕೆ ಹೋಗಕೂಡದೆಂದು ಸಾಹಸ ಮಾಡಿದೆ. ಕಲಿಕತ್ತೆ ನಮ್ಮ ಊರಿಂದ ಅಷ್ಟೇನೂ ದೂರವಿಲ್ಲ ವೆಂದು ಕೇಳಿಯೂ ಇದ್ದೆ. ಆದರ ಎಷ್ಟು ದೂರವೆಂದು ಸರಿಯಾಗಿ ಗೊತ್ತಿರಲಿಲ್ಲ, ರಾತ್ರಿ ಕಳೆಯುವ ಹೊತ್ತಿಗೆ ನೌಕೆ ಕಲಿಕತ್ತೆ ತಲುಪುವು ದೆಂದು ಕೊಂಡಿದ್ದೆ. ಆಗ ನಾನೂ ನೌಕೆಯನ್ನು ಬಿಟ್ಟು ಹೋಗಬಹು ದೆಂದುಕೊಂಡೆ. ನೀರಿನಲ್ಲಿ ಬಿದ್ದೆ. ಈಜುತ್ತ ಸ್ವಲ್ಪ ದೂರ ಹೊರಟೆ. ಆ ಸಮಯದಲ್ಲಿ ಹಾಳು ನನ್ನ ಸೀರೆ ಕೈ, ಕಾಲುಗಳಿಗೆ ಸಿಕ್ಕಿ ಹಾಕಿಕೊಂಡು ಈಜಲಸಾಧ್ಯವಾಗುವ ಹಾಗೆ ಮಾಡಿತು. ಮುಳುಗುವಂತಾಯಿತು. ಹೇಗೋ

ಪ್ರಯಾಸಪಟ್ಟುಕೊಂಡು ಅದನ್ನು ಬಿಡಿಸಿಕೊಂಡು ಬಿಚ್ಚಿಹಾಕಿದೆ. ಆದರೆ, ನನ್ನ ಗ್ರಹಚಾರ, ಆ ಸೀರೆ ನನ್ನ ಕೈ ಜಾರಿ ನೀರಿನಲ್ಲಿ ಕೊಚ್ಚಿಕೊಂಡು ಹೋಯಿತು. ನೌಕೆ ಹತ್ತಿರ ಬಂತು. ಕೈ ಕಾಲುಗಳೂ ಸುಸ್ತಾಗಿದ್ದುವು. ಆಗ ಅದರ ತಳದ ಕೊಕ್ಕೆಯನ್ನು ಭದ್ರವಾಗಿ ಹಿಡಿದುಕೊಂಡು ಅದರ ಹಿಂದೆಯೇ ಬಹಳ ದೂರ ಬಂದೆ....ಇನ್ನು ಹಿಂದಿರುಗುವುದಕ್ಕೆ ಧೈರ್ಯವಿಲ್ಲ. ಹೆದರಿಕೆಯಾಯಿತು. ಎಲ್ಲಿ ಮುಳುಗಿ ಹೋಗುತ್ತೇನೋ ಎಂದು. ಒಂದು ಸಲ ಹಾಗೆ ಹೋದರೆ ಒಳ್ಳೆಯದೇ ಆಯಿತೆಂದುಕೊಂಡೆ....ಆ ಮೇಲೆ ಅಂದು ಕೊಂಡೆ .ಬೆಳಗಾದರೆ ಸ್ನಾನಕ್ಕಾಗಿ ಹೆಂಗಸರಾರಾದರೂ ಘಟ್ಟಕ್ಕೆ ಬಂದಾಗ ಅವರನ್ನ ಬೇಡಿಕೊಂಡು ಯಾವುದಾದರೂ ವಸ್ತ್ರ ತೆಗೆದುಕೊಂಡು ಮಾನ ಕಾಪಾಡಿಕೊಳ್ಳೋಣವೆನ್ನಿಸಿತು. ಅದಕ್ಕೆ ನಿಮ್ಮ ನೌಕೆ ಆ ದಡದಲ್ಲಿ ನಿಂತಾಗ ನಾನು ನೀರಿನಲ್ಲಿಯೇ ಉಳಿದಿದ್ದೆ. ಆ ಮೇಲಿನ ಕಥೆ ನಿಮಗೇ ತಿಳಿದಿದೆ."

ಸುರೇಂದ್ರನು ಬಹಳ ಹೊತ್ತು ಸುಮ್ಮನಿದ್ದು ಆ ಮೇಲೆ ಅವಳನ್ನು ತನ್ನ ಹತ್ತಿರ ಎಳೆದುಕೊಂಡು "ಯಾವುದಕ್ಕೋಸ್ಕರ ಇಷ್ಟೆಲ್ಲಾ ಮಾಡಿ ದೆಯೋ ಅದಕ್ಕೋಸ್ಕರ ಇವತ್ತಿನ ವರೆಗೂ ಯಾವ ಉಪಾಯವನ್ನೂ ಮಾಡಲಿಲ್ಲವೇ ?" ಎಂದನು.

ಮಾಲತಿಯು ತಲೆಯಲ್ಲಾಡಿಸಿ "ಇಲ್ಲ" ಎಂದಳು.

"ಗೊತ್ತು. ಅದೇ ಯೋಚಿಸುತ್ತಿದ್ದೆ" ಎಂದು ಆ ಮೇಲೆ "ಯಾವ ಧೈರ್ಯದಿಂದ ಇಷ್ಟೆಲ್ಲಾ ಕೆಲಸಮಾಡಿದೆ ?" ಎಂದು ಕೇಳಬೇಕೆಂದಿದ್ದವನು ಬಾಯಿಬಿಚ್ಚಿ ಕೇಳಲಾರದೆ ಸುಮ್ಮನಿದ್ದನು. ಮಾಲತಿಯೂ ಏನೂ ಹೇಳಲಿಲ್ಲ.

"ತಿಂಗಳಿಗೆ ಎಷ್ಟು ರೂಪಾಯಿ ಕಳುಹಿಸಿದರೆ ಅವರ ವ್ಯವಸ್ಥೆ ಯಾಗುತ್ತದೆ ?"

"ಇಪ್ಪತ್ತೈದು ರೂಪಾಯಿ."

"ಹಾಗಾದರೆ ಪ್ರತಿ ತಿಂಗಳೂ ಅಲ್ಲಿಗೆ ಐವತ್ತು ರೂಪಾಯಿ ಕಳುಹಿಸಿ ಕೊಡು."

"ನೀವು ಕೊಡುತ್ತೀರಾ ?"

ಸುರೇಂದ್ರನು ನಕ್ಕನು.

"ಹಾಂ _ಕೊಡುತ್ತೇನೆ. ಇನ್ನೂ ಎಷ್ಟು ಕೇಳಿದರೂ ಕೊಡುತ್ತೇನೆ."

ಮಾಲತಿ ಮನಸ್ಸಿನಲ್ಲಿ ಅಂದುಕೊಂಡಳು "ಇಷ್ಟು ದಿವಸಗಳಾದ ಮೇಲೆ ನನ್ನ ಜನ್ಮ ಸಾರ್ಥಕವಾಯಿತು" ಎಂದು.

ಮತ್ತೆ ಸುರೇಂದ್ರನು "ಅದಾದ ಮೇಲೆ ಇನ್ನೊಂದು ಮಾತು. ನನ್ನನ್ನ ಲಗ್ನಮಾಡಿಕೋ, ಏಕೆಂದರೆ, ನಾನೆಷ್ಟೇ ನೀಚನಾದರೂ, ಇಂತಹ ಶುಭ್ರ ಹೃದಯವನ್ನು ಕಳಂಕದ ಕೂಪದಲ್ಲಿ ತಳ್ಳಲು ಬಿಡುವುದಿಲ್ಲ" ಎಂದನು.

ಮಾಲತಿಯು ಅವನ ಎದೆಯ ಮೇಲೆ ತಲೆಯಿಟ್ಟು....ಮುಖವನ್ನು ಅಲ್ಲಾಡಿಸುತ್ತಾ ಅಸ್ಫುಟಸ್ವರದಲ್ಲಿ

"ಬೇಡ" ಎಂದಳು.

"ಬೇಡ? ಯಾಕೆ ಬೇಡ? ನೀನಂತೀಯಾ, ನನ್ನ ಜಾತಿ ಹೋಗುತ್ತೆ ದೆಂದು. ಆದರೆ ನಾನು ಈ ಊರಿಗೆ ಜಮೀದಾರ. ನನ್ನ ಹತ್ತಿರ ಎಷ್ಟು ಐಶ್ವರ್ಯವಿದೆ....ಇಷ್ಟು ಐಶ್ವರ್ಯವಿರುವವರಿಗೆ ಅಷ್ಟು ಸುಲಭವಾಗಿ ಜಾತಿ ಹೋಗುವುದಿಲ್ಲ."

"ಅಯ್ಯೋ, ಗಲಾಟೆಯಾಗಿ ಹೋಗುತ್ತೆ."

"ಆಗುತ್ತೆ. ಅದೂ ಹೆಚ್ಚಿಗೆ ದಿನ ಇರುವುದಿಲ್ಲ."

"ನಿಮ್ಮ ವಂಶ, ಕುಲ, ಮಾನ, ಸಂಭ್ರಮ ?"

"ಮಾಲತೀ, ಒಂದು ದಿನಕ್ಕೋಸ್ಕರವಾದರೂ ಆ ಮಾತುಗಳನ್ನ ಮರೆತುಬಿಡು. ಈ ಪ್ರಪಂಚದಲ್ಲಿ ಹುಟ್ಟಿ ಎಷ್ಟೋ ಹಣ ಪಡೆದೆ ...ಆದರೆ ಸುಖ ಎಂದೂ ಪಡೆಯಲಿಲ್ಲ. ಒಂದು ದಿನವಾದರೂ ನಾನು ನಿಜವಾಗಿ ಸುಖಿಯಾಗಿರಲು ಅವಕಾಶ ಕೊಡು."

ಈ ಮಾತು ಕೇಳಿ ಮಾಲತಿಯು ಅತಿ ದುಃಖಿತಳಾಗಿ, ತಡೆದು ಕೊಂಡು ನಿದಾನವಾಗಿ "ನೀವೇನೂ ಹೆದರಬೇಡಿ. ನಿಮ್ಮ ಬಳಿ ನೀವು ಹೋಗೆನ್ನುವವರೆಗೂ ಇರುತ್ತೇನೆ. ಹೋಗುವುದಿಲ್ಲ" ಎಂದಳು.

"ಈಶ್ವರೇಚ್ಛೆಯೂ ಹಾಗೆಯೇ ಇರಲಿ. ನೀನು ಚಿರಕಾಲವೂ ನನ್ನ ಹತ್ತಿರವೆ ಇರು. ಆದರೆ ನಾನು ಹೇಗೆ ಸುಮ್ಮನಿರಲಿ? ನೀನಿನ್ನೂ ಪ್ರಪಂಚ ನೋಡಿಲ್ಲ. ಆದರೆ ನಾನು ನೋಡಿದ್ದೇನೆ. ನನಗೆ ನನ್ನ ಮೇಲೆಯೇ

ವಿಶ್ವಾಸವಿಲ್ಲ. ಯಾವ ಪ್ರೇಮದಿಂದ ನೀನು ನನ್ನನ್ನು ಚಿರಕಾಲವೂ ಬಂಧನದಲ್ಲಿಟ್ಟಿರಬಲ್ಲೆಯೋ ಆ ಪ್ರೇಮವನ್ನು ನಾನು ಇದ್ದಕ್ಕಿದ್ದ ಹಾಗೆ ಒಂದು ದಿನ ತ್ಯಾಗಮಾಡಿ ಓಡಿಹೋಗಬಹುದು. ಮಾಲತೀ....ಸಮಯ ಸಿಕ್ಕಿರುವಾಗ ನನ್ನನ್ನ ಹಾಗೆ ಹೋಗದಂತೆ ಕಟ್ಟಿಟ್ಟುಕೋ."

ಮಾಲತಿಯು ಇದೆಲ್ಲಾ ಕೇಳಿ ಮನಸ್ಸನ್ನು ಚೆನ್ನಾಗಿ ದೃಢಮಾಡಿ ಕೊಂಡು ಗಂಭೀರಸ್ವರದಲ್ಲಿ "ನಾನು ಕಟ್ಟಹಾಕಿದ್ದೇನೆ. ಕಟ್ಟಿ ಹಾಕಬಲ್ಲೆ. ಇದನ್ನು ಬೇಕಾದರೆ ಕಿತ್ತು ಹಾಕಿಬಿಡಿ. ಇನ್ನು ಮೇಲೆ ಯಾವ ಬಂಧನದ ಆವಶ್ಯಕವೂ ಇಲ್ಲ."

"ನಿನಗೆ ಇಲ್ಲದಿರಬಹುದು. ನನಗೆ ಇದೆ."

"ಇರಲಿ. ಆದರೆ ಮದುವೆ ಆವಶ್ಯಕವಿಲ್ಲ, ಸಾಧ್ಯವೂ ಇಲ್ಲ."

"ಏಕಾಗಕೂಡದು. ವಿಧವೆಗೆ ಮದುವೆಯಾಗ ಕೂಡದೇನು?"

"ವಿಧವೆಗೆ ಆಗಬಹುದು. ಆದರೆ....ವೇಶ್ಯೆಗಲ್ಲ."

ಸುರೇಂದ್ರನು ಬೆಚ್ಚಿಬಿದ್ದು ಎದ್ದು ಗಟ್ಟಿಯಾಗಿ "ನೀನು, ಹಾಗಾದರೆ, ಅಂತಹವಳೇನು?" ಎಂದನು.

"ಅಲ್ಲವೇ?....ನೀವೇ ನೋಡಿ ..ನಾನು ಅಂತಹವಳಲ್ಲವೇ?"

"ಛೀ ಛೀ! ಅಂತಹ ಮಾತಾಡಬೇಡ. ನಾನು ಕೇಳಲಾರೆ. ನಾನೆಷ್ಟುಮಟ್ಟಿಗೆ ಪ್ರೀತಿಸಿದ್ದೇನೆ ನಿನ್ನ!"

"ಅದಕ್ಕೋಸ್ಕರವೇ—ಬಾಯಿಂದ ಆ ಮಾತು ಆಡುವ ಧೈರ್ಯ ಬಂತು. ಇಲ್ಲದೆ ಹೋದರೆ ಮದುವೆಮಾಡಿ ಕೊಳ್ಳುವುದಕ್ಕೂ ಒಪ್ಪುತ್ತಿದ್ದೆ ನೇನೋ."

"ಮಾಲತೀ!"

"ಏನು?"

"ಎಲ್ಲಾ ಬಿಚ್ಚಿ ಹೇಳುತ್ತೀಯಾ? ಯಾವುದೂ ಮುಚ್ಚಿಡವೆ?"

"ಹೇಳುತ್ತೇನೆ. ನಿಮ್ಮನ್ನು ಬಿಟ್ಟು ಇದಕ್ಕೆ ಮೊದಲು ಯಾವ ಗಂಡಸೂ ನನ್ನನ್ನ ಮುಟ್ಟಿಕೂಡ ಇಲ್ಲ, ಆದರೆ ಒಬ್ಬರಿಗೆ ಮಾತ್ರ ನನ್ನ ಮನಸ್ಸು, ಆತ್ಮಗಳೆರಡನ್ನೂ ಅರ್ಪಣೆ ಮಾಡಿಬಿಟ್ಟಿದ್ದೇನೆ. ಅವರನ್ನು ಮದುವೆ ಮಾಡಿಕೊಳ್ಳಲು ಎಷ್ಟೋ ಪ್ರಯತ್ನ ಮಾಡಿದೆ."

"ಆಮೇಲೆ?"

"ಎಷ್ಟೋ ಕೇಳಿದೆ. ಆದರೆ ಜಾತಿ ಹೋಗುತ್ತದೆನ್ನುವ ಭಯದಿಂದ ಅವರು ಒಪ್ಪಲಿಲ್ಲ."

"ಮತ್ತೆ ನಿನ್ನ ಮನಸ್ಸು, ಪ್ರೇಮಗಳನ್ನು ಹೇಗೆ ತೆಗೆದುಕೊಂಡೆ?"

"ಅವರೇ ಅವುಗಳನ್ನು ವಾಪಸು ಮಾಡಿದರು."

"ಹಾಗೆ ಮಾಡಲು ಹೇಗಾಯಿತು? ನಿನಗೆ ಅದು ಸಾಧ್ಯವಾಯಿತೇ?"

ಮಾಲತಿ ಸ್ವಲ್ಪ ಹೊತ್ತು ಸುಮ್ಮನಿದ್ದು "ಸಾಧ್ಯವಾಗಲಿಲ್ಲ....ಸಾಧ್ಯ ಮಾಡಿಕೊಳ್ಳಬೇಕಾಯಿತು." ಎಂದಳು.

" ಛೀ ...ಅವರು ಯಾರು, ಸದಾನಂದನೇ?"

"ಅಲ್ಲ. ಇನ್ನೊಬ್ಬರು."

"ಹಾಗಾದರೆ ನೀನು ಮನುಷ್ಯರು ಹೇಗೆ ಎಂದು ತಿಳಿದುಕೊಂಡಿಲ್ಲ. ಸದಾನಂದನಿಗೆ ಏಕೆ ಹೇಳಲಿಲ್ಲ? ಅವರು ನಿನ್ನನ್ನು ಪ್ರೀತಿಸುತ್ತಿದ್ದರು. ಅದನ್ನು ತಿಳಿದುಕೊಳ್ಳಲಾರದೆ ಹೋದೆ ನೀನು"

....ತಕ್ಷಣ ಮಾಲತಿಯ ಮೈಯೆಲ್ಲಾ ಒಂದು ಬಗೆಯಾಗಿ ಆಯಿತು. ಆ ಹುಚ್ಚು ಮುಖ ಮನಸ್ಸಿನ ಮುಂದೆ ಬಂತು. ಅಂದಿನ ..ಆ ಮಳೆ ಬೀಳುತ್ತಿದ್ದ ಸಂಜೆ ಜ್ಞಾಪಕಕ್ಕೆ ಬಂತು ಗಂಗೆಯಿಂದ ನೀರು ತರುತ್ತಿದ್ದಾಗ, ಮಳೆ ಬಂದು, ಸದಾನಂದನ ಅಂಗಳದಲ್ಲಿ ನಿಂತಿದ್ದುದೂ, ಅವನು ಹಾಡು ಹೇಳುತ್ತಿದ್ದುದೂ, ಅವತ್ತು ಅವನು ಆಡಿದ ಅರ್ಥವಿಲ್ಲದ ಮಾತುಗಳೂ.... ಆಮೇಲೆ ಇನ್ನೊಂದು ದಿನ ಅವನ ಬಳಿ ಹೋಗಿ ಮೊದಲನೆಯ ಸಲ ದುಡ್ಡು ಕೇಳಿದುದು,....ಅನಂತರ ನಿತ್ಯವೂ ಎಣಿಸುತ್ತಿದ್ದ ಆ ಹಣ....ಅಂದು ಕಾಶಿಗೆ ಹೋಗುವ ಮುಂಚೆ ಅವನು ಕೊಟ್ಟದ್ದು....ಇವಲ್ಲದೆ ಇನ್ನೂ ಎಷ್ಟೋ ಅವನು ಆಡಿದುದೂ, ಮಾಡಿದುದೂ ಎಲ್ಲಾ ಜ್ಞಾಪಕಕ್ಕೆ ಬಂದುವು.... ದುಃಖದ ಸಮಯದಲ್ಲಿ ಎಷ್ಟು ಸಹಾನುಭೂತಿ! ನಿಮಿಷದಲ್ಲಿ ಅವಳ ಕಣ್ಣುಗಳಲ್ಲಿ ನೀರು ತುಂಬಿತು. ಆದರೆ ಅದು ಹರಿಯುವ ಮೊದಲೇ ಅವಳು ಕಣ್ಣೊರಸಿಕೊಂಡಳು....ಆದರೆ ಸುರೇಂದ್ರನು ಅದನ್ನು ನೋಡಲಿಲ್ಲ. ಅವನು ಸೋಫಾದ ಮೇಲೆ ಒರಗಿಕೊಂಡು ಯಾವ ಕಡೆಯೋ ನೋಡುತ್ತಾ ಅನ್ಯ ಮನಸ್ಕನಾಗಿದ್ದನು.

"ಆಮೇಲೆ ?" ಎಂದನು.

"ಆ ಮೇಲೆ........ನಿಮಗೇ ಗೊತ್ತಿದೆ........ನಿಮ್ಮ ಪಾದಗಳ ಆಶ್ರಯ ಕೊಟ್ಟಿರಿ."

ಈ ಪ್ರಶ್ನೆಯನ್ನು ಅವನು ಅನ್ಯಮನಸ್ಕನಾಗಿ ಹಾಕಿದ್ದೇ ಹೊರತು ಬೇಕೆಂದು ಅಲ್ಲ. ಅವಳ ಉತ್ತರವನ್ನು ಕೇಳಿ ನಕ್ಕು ಎದ್ದುಕೂತು "ಮಾಲತೀ, ನೀನು ರತ್ನ. ರತ್ನ ಕೆಟ್ಟ ಸ್ಥಳದಲ್ಲಿ ಸಿಕ್ಕಿದರೂ ಅದನ್ನು ಕಂಠದಲ್ಲಿಯೇ ಧರಿಸಬೇಕು" ಎಂದನು.

"ಯಾರು ಹೇಳಿದರು? ಯಾವ ರತ್ನವನ್ನು ಒಬ್ಬರು ಕಂಠದಲ್ಲಿ ಧರಿಸಿದ್ದರೋ ಅದನ್ನ ಆ ಮೇಲೆ ಇತರರು ಕಾಲಲ್ಲಿ ಕೂಡ ಮೆಟ್ಟಿರು. ನೀವು ನನಗೆ ನಿಮ್ಮ ಚರಣಗಳಲ್ಲಿ ಆಶ್ರಯಕೊಡಿ. ನಾನು ರತ್ನವೇ ಇರಲಿ, ಏನೇ ಇರಲಿ....ನಾನದನ್ನೇ ಪರಮ ಸೌಭಾಗ್ಯವೆಂದುಕೊಳ್ಳುತ್ತೇನೆ."

ಸುರೇಂದ್ರನಾಥನು ಸ್ವಲ್ಪ ನಕ್ಕನು. "ನಾನು ಅಂದುಕೊಂಡಿದ್ದೆ, ನೀನು ಏನೂ ಅರಿಯದ ಮುಗ್ಧಳೆಂದು ...ಆದರೆ ನೀನು ಅಷ್ಟು ಮುಗ್ಧಳಲ್ಲ."

ಮಾಲತಿಯೂ ನಕ್ಕಳು. ದುಃಖದಲ್ಲಿ, ಸಂಕಟದಲ್ಲಿ ಅಂದು ಮೊದಲ ಸಲ ಅವಳ ಅಧರಗಳಲ್ಲಿ ನಗುವಿನ ಮಿಂಚನ್ನು ನೋಡಿ ಸುರೇಂದ್ರನು ಮುಗ್ಧನಾದನು.

ಆ ಸಮಯದಲ್ಲಿ ದಾಸಿಯು ಬಂದು "ಸ್ವಾಮೀ, ಅಘೋರಬಾಬುಗಳು ಹೊರಗೆ ಬಂದು ನಿಂತಿದ್ದಾರೆ" ಎಂದಳು.

ಸುರೇಂದ್ರನು ವಿಸ್ಮಿತನಾಗಿ "ಅಘೋರಬಾಬುವೆ ?........ಇಲ್ಲಿಗೇಕೆ ಬಂದರು? ಈ ತೋಟದ ಮನೆಯಲ್ಲಿದ್ದೇನೆಂದು ಯಾರು ಹೇಳಿದರು ಅವರಿಗೆ ?" ಎಂದನು.

"ಏನೋ ಗೊತ್ತಿಲ್ಲ, ಆದರೆ ತುರುತು ಕೆಲಸ ಅಂತೆ....ಹೇಳಿಕಳುಹಿಸಿದ್ದಾರೆ."

ಸುರೇಂದ್ರನು ತಕ್ಷಣ ಎದ್ದು "ಮಾಲತಿ, ಇನ್ನು ನಾನು ಬರುತೇನೆ."

"ಹೋಗಿ ಬನ್ನಿ....ಆದರೆ ಅಘೋರಬಾಬು ಯಾರು ?"

"ಆಮೇಲೆ ಹೇಳುತ್ತೇನೆ."

"ಅಘೊರಬಾಬುವನ್ನು ಕೇಳಿ. ಅವರಿಗೆ ಮದುವೆ ಎಲ್ಲಿ ಆಗಿದೆ

ಯೆಂದು ?"

ಸುರೇಂದ್ರನು ನಕ್ಕು "ಯಾಕೆ, ಎಲ್ಲಾದರೂ ಕೇಳಿದ್ದೀಯೇನು ಅವರ ಹೆಸರನ್ನು ?"

"ಕೇಳಿದ ಹಾಗೆ ಇದೆ."

"....ಸರಿ....ಕೇಳುತ್ತೇನೆ. ಬಿಡು" ಎಂದು ಸುರೇಂದ್ರನು ಹೊರಗೆ ಹೊರಡಲನುವಾದನು.

* * * *

# ೧೧

ಸುರೇಂದ್ರನಾಥನು ಹೊರಟುಹೋದ ಮೇಲೆ ಬಾಗಿಲು ಭದ್ರಮಾಡಿ ಮಾಲತಿಯು ನೆಲದ ಮೇಲೆ ಬಿದ್ದು ಅಳುತ್ತಾ ಹೊರಳಾಡಿದಳು. ಎದೆಯೇ ಒಡೆಯುವಂತೆ ಅತ್ತಳು. ಈ ಅಳುವಿಗೆ ಕಾರಣವೇನೋ ಅವಳ ದೆಸೆಯಲ್ಲಿಯೇ ಇರುವಂತಹ ಹೆಂಗಸರಿಗೇ ಗೊತ್ತು. ಈಗ ಅವಳು ಪ್ರೀತಿಗಾಗಿ, ಅನುರಾಗಕ್ಕಾಗಿ ಅತ್ತಳು. ಹೊಸದಾಗಿ ಅವಿರ್ಭವಿಸಿದ ಪ್ರಾಯದ ಹೆಂಗಸಿನ ಹೃದಯವನ್ನು ವಶಮಾಡಿಕೊಂಡಿದ್ದ ಇನಿಯನಿಗಾಗಿ ಅತ್ತಳು .ಈ ಪ್ರೀತಿ, ಈ ಅನುರಾಗವನ್ನು ತನ್ನ ಬಾಲ್ಯದ ಪ್ರಣಯದೊಂದಿಗೆ ತುಲನೆ ಮಾಡಿದಳು. ಅದು ಮಕ್ಕಳಾಟ....ಚಪಲಚಿತ್ತ ಬಾಲೆ ಲಲನಾಳೊಂದಿಗೇ ಆ ಕಿಶೋರ ಪ್ರಣಯವು ಸತ್ತುಹೋಗಿತ್ತು. ಈಗ ಬಂದಿರುವುದು ಅವಳ ಅನುಭವದಲ್ಲಿ ಹೊಸದು. ಈ ಪ್ರಣಯದಲ್ಲಿ ಸ್ನೇಹ, ಕೃತಜ್ಞತೆಗಳೂ ಮಿಶ್ರವಾಗಿ ಹೃದಯದಲ್ಲಿ ಅನಿರೀಕ್ಷಿತ ವೇದನೆಯನ್ನು ಉಂಟುಮಾಡುತ್ತಿದೆ. ಸ್ವಂತ ಸುಖಾಪೇಕ್ಷೆ ಹಾಗಿರಲಿ! ಅವಳಿಗನ್ನಿಸುತ್ತಿದೆ, ಅವರಿಗೋಸ್ಕರ ನಗುನಗುತ್ತಾ ಪ್ರಾಣ ಬಿಡೆಂದರೂ ಬಿಡಬಲ್ಲಳು.

ಮಾಲತಿ ತನ್ನ ಹೊಸ ನಲ್ಲನನ್ನ ಸಂಬೋಧಿಸಿಕೊಂಡಳು. "ನೀವು ನನ್ನ ಪ್ರಾಣಾಧಿಕ! ನಿಮ್ಮ ಒಂದು ಕೂದಲಿಗಾಗಿ ನನ್ನ ಪ್ರಾಣವನ್ನೇ ಕೊಡುತ್ತೇನೆ. ಅಂತಹ ನೀವು ನನಗಾಗಿ ಕಳಂಕವನ್ನು ಹೊರಬೇಕೇ? ಕೇವಲ, ನನ್ನ ದೆಸೆಯಿಂದ ಹತ್ತು ಜನ ಹತ್ತು ಮಾತು ಆಡಬೇಕೇ? ಅದನ್ನ ನೀವು ಸಹಿಸುವಂತೆ ಮಾಡಬೇ? ನಾನು ಹೆಸರಿಲ್ಲದವಳು, ಯಾರಿಗೂ ನಾನು ಯಾರೆಂದು ಗೊತ್ತಿಲ್ಲ. ಯಾರೂ ನನ್ನನ್ನ ಗುರುತುಹಿಡಿಯುವುದಿಲ್ಲ... ನಾನು ನಾಚುಗೆಯಿಲ್ಲದವಳು....ಆದರೆ ನೀವೋ, ಮಹಾನುಭಾವರು. ನಿಮ್ಮ ಕಳಂಕವನ್ನ, ನಿಮ್ಮ ಅವಮಾನದ ಕಥೆಯನ್ನು ಪ್ರಪಂಚವೆಲ್ಲಾ ಆಡಿಕೊಂಡು ನಗುತ್ತಾರೆ....ವೇಶ್ಯೆಯನ್ನು ಮದುವೆ ಮಾಡಿಕೊಂಡವನು ಎನ್ನುತ್ತಾರೆ. ಸಮಾಜದಲ್ಲಿ ನಿಮ್ಮನ್ನ ಕೀಳಾಗಿ ನೋಡುತ್ತಾರೆ. ಮರ್ಮಾಂತಿಕ ಸಂಕಟವನ್ನು ಅನುಭವಿಸುವಂತೆ ಮಾಡುತ್ತಾರೆ. ನಾನು ಹಾಗೆಂದಿಗೂ

ಆಗಲು ಬಿಡುವುದಿಲ್ಲ. ಎಂದಿಗೂ, ಏನಾದರೂ, ಇಲ್ಲ."

ಮಾಲತಿ ತಲೆಯಲ್ಲಾಡಿಸುತ್ತಾ "ಎಂದಿಗೂ ಆಗುವುದಿಲ್ಲ ……ಈ ಮದುವೆ ಏನು ಮಾಡಿದರೂ ಆಗಕೂಡದು" ಎಂದುಕೊಂಡಳು.

ಅವಳು ಸ್ಥಿರವಾಗಿ ಎದ್ದು ಕೂತಳು ಕಣ್ಣುಗಳನ್ನೊರಸಿಕೊಂಡು "ದೇವರೇ, ನಿನಗೇ ಗೊತ್ತು, ಈ ನನ್ನ ಜನ್ಮದಲ್ಲಿ ಎಷ್ಟು ಪಾಪ ಮಾಡಿದ್ದೇನೋ....ನಾನು ಅದು ಯಾವುದೂ ಮರೆಯುವುದಿಲ್ಲ. ಸಮಾಜದಲ್ಲಿ ನನಗಿನ್ನು ಸ್ಥಾನವಿಲ್ಲ. ಆದರೆ. ..ಆದರೆ ಯಾವಾಗ ನನ್ನ ಸ್ವಾಮಿಯ ಸ್ನೇಹವನ್ನು ಕಳೆದುಕೊಳ್ಳುತ್ತೇನೋ ಅಂತಹ ದುರ್ದಿನ ಬಂದಾಗ ನೀನು ಈ ಪತಿತಳಿಗೆ ನಿನ್ನ ಪಾದದಲ್ಲಿ ಸ್ಥಳ ಕೊಡು" ಎಂದು ಪ್ರಾರ್ಥಿಸಿದಳು.

ಆ ರಾತ್ರಿ ಮಾಲತಿಯು ಅಲ್ಲಿಯೇ ಹಾಗೆಯೇ ಮಲಗಿದಳು. ಮರುದಿನ ಸುರೇಂದ್ರನು ಆ ಕಡೆ ಬರಲಿಲ್ಲ. ಇಡೀ ದಿನವೆಲ್ಲಾ ಅವನ ಆಗಮನವನ್ನು ನಿರೀಕ್ಷಿಸಿದಳು ಮಾಲತಿ . ರಾತ್ರಿ ಬಹಳ ಹೊತ್ತಾದ ಮೇಲೆ ಸುರೇಂದ್ರನು ಬಂದನು. ಅವನ ಮುಖವು ಎಂದಿಗಿಂತಲೂ ಮ್ಲಾನವಾಗಿದ್ದಂತೆ ಕಂಡು ಅವಳು ಗಾಬರಿಯಾದಳು. ಆದರ ಅವನು ಕೊಠಡಿಯನ್ನು ಪ್ರವೇಶಮಾಡಿದೊಡನೆ ಮುಖದ ಮೇಲೆ ಮಂದಹಾಸ ತೋರುತ್ತಾ "ಮಾಲತೀ, ಬೆಳಗಿನಿಂದಲೂ ನನ್ನ ದಾರಿ ನೋಡುತ್ತಿದ್ದೆಯೆಂದು ಕಾಣುತ್ತೆ" ಎಂದನು.

ಹೊಳೆಯುವ ಮುಖದಿಂದ ಮಾಲತಿ ಉತ್ತರ ಹೇಳದೆ ಸುಮ್ಮನಿದ್ದಳು.

"ಏನುಮಾಡಲಿ ಹೇಳು, ಈ ಹಾಳು ಕೋರ್ಟು ಮೊಕದ್ದಮೆ . . . .. ಒಂದು ದಿನವೂ ಪುರಸೊತ್ತು ಕೊಡುವುದಿಲ್ಲ. ಯಾರಿಗೆ ಹೆಚ್ಚು ಐಶ್ವರ್ಯ ಇರುತ್ತದೋ ಅವರಿಗೆ ಕಷ್ಟವೂ ಅಷ್ಟಕ್ಕಷ್ಟು ಇರುತ್ತೆ."

"ಹಾಗಾದರೆ ಮೊಕದ್ದಮೆ ಮಾಡುವುದೇಕೆ ?"

ಸುರೇಂದ್ರನು ಅವಳ ಪ್ರಶ್ನೆಗೆ ನಕ್ಕನು.

"ಏಕೆ ಮಾಡುವುದೇ? ಅದು ಆ ಮೇಲೆ ಗೊತ್ತಾಗುತ್ತದೆ. ನಿನಗೆ... ಮೊದಲು ನೀನು ನನ್ನವಳಾಗು. ಎಲ್ಲಾ ವಿಷಯಗಳನ್ನೂ ನೀನೇ ಆಲೋಚನೆಮಾಡಲು ಕಲಿತುಕೋ. ಆ ಮೇಲೆ ಗೊತ್ತಾಗುತ್ತೆ, ಮೊಕದ್ದಮೆ

ಏಕೆ ಮಾಡಬೇಕೆಂದು."

ಮಾಲತಿಯು ಮೌನವಾಗಿ ನಾನಾ ವಿಷಯಗಳನ್ನು ಯೋಚಿಸಲು ತೊಡಗಿದಳು.

ಸುರೇಂದ್ರನು ಮತ್ತೆ "ಮಾಲತಿ, ನಾನು ಹೇಳಿದ ವಿಷಯ ಯೋಚಿಸಿದೆಯಾ ?" ಎಂದನು.

"ಯಾವ ವಿಷಯ ?"

"ಯಾವ ವಿಷಯವೇ? ನಿನ್ನೆ ಹೇಳಿದ ಮಾತನ್ನು ಇಷ್ಟು ಬೇಗ ಮರೆತುಬಿಟ್ಟೆಯಾ?"

"ಮರೆತಿಲ್ಲ. ಮನಸ್ಸಿನಲ್ಲಿದೆ."

"ಮನಸ್ಸಿನಲ್ಲಿದೆ ಗೊತ್ತು. ಆದರೆ ಏನು ನಿಷ್ಕರ್ಷೆ ಮಾಡಿದೆ ?"

"ನಿಷ್ಕರ್ಷೆ ಮಾಡಿದೆ........ಏನು ಮಾಡಿದರೂ ಮದುವೆ ಆಗಕೂಡದೆಂದು."

"ಆಗಕೂಡದೇ _ಏನು ಮಾತು ಇದು ?"

"ಏಕೆಂದು ಇದಕ್ಕೆ ಮೊದಲೇ ಹೇಳಿದ್ದೇನೆ ನಿಮಗೆ."

"ಏನು ಹೇಳಿರುವುದು ನೀನು, ನನ್ನ ತಲೆ! ನಾನು ಮದುವೆ ಮಾಡಿಕೊಂಡೇ ತೀರುತ್ತೇನೆ."

"ಮಾಡಿಕೊಳ್ಳಲು ನಾನು ಬಿಡುವುದಿಲ್ಲ. ಈಗೊಂದು ತಿಂಗಳಿಂದಲೂ ಇದ್ದೇನೆ ಇಲ್ಲಿ. ಈ ಅಭಿಪ್ರಾಯ ಇದ್ದಿದ್ದರೆ ಮುಂಚೆಯೇ ಏಕೆ ಮಾಡಿಕೊಳ್ಳಲಿಲ್ಲ ? ಈಗ ಎಲ್ಲರಿಗೂ ಗೊತ್ತಾಗಿ ಹೋಗಿದೆ. ನೀವು ಜಯಾವತಿಯ ಬದಲು, ಅವಳ ಸ್ಥಾನದಲ್ಲಿ ಕಲಿಕತ್ತೆಯಿಂದ ಯಾವಳನ್ನೋ ತಂದು ಇಟ್ಟುಕೊಂಡಿದ್ದೀರೆಂದು."

ಸುರೇಂದ್ರನು ಆ ಮಾತನ್ನು ಗ್ರಹಿಸಿ ಅನ್ಯಮನಸ್ಕನಾಗಿ "ನಾನೂ ಹಾಗೆಯೇ ಯೋಚಿಸುತ್ತಿದ್ದೆ..... ಹೋಗಲಿ ಬಿಡು....ನಾನು ..." ಎಂದನು.

ಮಾಲತಿಯು ಆಗ "ಹಾಗಾದರೆ ನಾನು ವಿಷ ಕುಡಿಯುತ್ತೇನೆ" ಎಂದಳು.

ಸುರೇಂದ್ರನು ಸ್ವಲ್ಪ ನಕ್ಕು "ಆಗಲಿ, ಏನು ಮಾಡುತ್ತೀಯೋ ಆಮೇಲೆ ನೋಡೋಣವಂತೆ. ಇವತ್ತಿಗೆ ಸರಿಯಾಗಿ ಒಂದು ವಾರದೊಳಗಾಗಿ ಎಲ್ಲಾ

ಏರ್ಪಾಡನ್ನೂ ಮಾಡಿಬಿಡುತ್ತೇನೆ." ಎಂದನು.

"ಹಾಗಾದರೆ ಒಂದು ವಾರವಾದ ಮೇಲೆ ನೀವು ನನ್ನನ್ನು ನೋಡುವುದಿಲ್ಲ."

ಸುರೇಂದ್ರನಾಥನು ವಿಸ್ಮಿತನಾಗಿ ಸ್ವಲ್ಪ ಹೊತ್ತು ಅವಳ ಕಡೆ ನೋಡುತ್ತಿದ್ದನು. ಆಮೇಲೆ "ಎಲ್ಲಿಗೆ ಹೋಗುತ್ತಿ ?" ಎಂದನು.

"ಇಷ್ಟ ಬಂದ ಕಡೆಗೆ."

"ಪ್ರಾಣ ತೆಗೆದುಕೊಳ್ಳುತ್ತೀಯಾ ?"

"ಇಲ್ಲ....ಪ್ರಾಣ ತೆಗೆದುಕೊಳ್ಳುವಷ್ಟು ಧೈರ್ಯವಿಲ್ಲ ನನಗೆ. ಯಾವ ಮಾರ್ಗದಲ್ಲಿ ಹೋಗಬೇಕೆಂದು ಹೊರಟಿದ್ದೆನೋ ಆ ಮಾರ್ಗವನ್ನು ಹಿಡಿಯುತ್ತೇನೆ."

"ನನ್ನ ಬಂಧನವನ್ನು ಇಟ್ಟುಕೊಂಡಿರುವುದಿಲ್ಲ ?"

"ಇಲ್ಲ."

ಇವಳ ದೃಢಸ್ವರವನ್ನು ಕೇಳಿ ಸುರೇಂದ್ರನಾಥನು ಕ್ಲೇಶದಿಂದ "ಈ ಮಾಲತಿ ಸುಳ್ಳು ಹೇಳುವವಳಲ್ಲ" ಎಂದುಕೊಂಡನು. ಆ ಮೇಲೆ ಸ್ವಲ್ಪ ಶುಷ್ಕವಾಗಿ ನಕ್ಕು "ನೀನೇನು ಮಾಡುತ್ತಿ ಹೇಳು. ಇದು ನಿನ್ನ ಜಾತಿ ಲಕ್ಷಣ. ಒಳ್ಳೆಯದು ಹಾಗೆಯೇ ಆಗಲಿ" ಎಂದು ವ್ಯಂಗ್ಯವಾಗಿ ಹೀಯಾಳಿಸಿದನು.

ಮಾಲತಿಯು ಈ ಪೆಟ್ಟಿಗೆ ಉತ್ತರ ಕೊಡಲಿಲ್ಲ. ಮೌನವಾಗಿಯೇ ಈ ತಿರಸ್ಕಾರವನ್ನೂ ಸಹಿಸಿಕೊಂಡಳು. ಬಹಳ ಹೊತ್ತಾದರೂ ಒಬ್ಬರಿಗೊಬ್ಬರು ಮಾತಾಡಲಿಲ್ಲ. ಆ ಮೇಲೆ ಸುರೇಂದ್ರನು "ಮನೆಗೆ ದುಡ್ಡು ಕಳುಹಿಸಿದೆಯಾ ?" ಎಂದನು.

ಮಾಲತಿಯು ಆಗ ಅಳುತ್ತಿದ್ದವಳು 'ಇಲ್ಲ'ವೆಂದು ತಲೆಯಲ್ಲಾಡಿಸಿದಳು.

"ಏಕೆ ಕಳುಹಿಸಲಿಲ್ಲ ?"

ಮಾಲತಿಯು ಉತ್ತರ ಕೊಡಲಿಲ್ಲ. ಆಗ ಅವನಿಗೆ ಅವಳು ಅಳುತ್ತಿದ್ದುದು ಕಂಡು ಬಂತು. ಆದರೂ ಸಮಾಧಾನಮಾಡದೆ "ಹತ್ತಿರ ದುಡ್ಡಿಲ್ಲವೇನು ?" ಎಂದನು.

ಮಾಲತಿ ತಲೆಯಲ್ಲಾಡಿಸಿದಳು.

"ಸ್ವಲ್ಪವೂ ಇರಲಿಲ್ಲವೇ ?"

"ಇಲ್ಲ."

"ಇಷ್ಟು ದಿನ ಇದ್ದೀಯ ಇಲ್ಲಿ, ಕೈಯಲ್ಲಿ ದುಡ್ಡು ಇಟ್ಟುಕೊಳ್ಳ ಬೇಕೆಂದೆನ್ನಿಸಲಿಲ್ಲವೇ ?"

ಮಾಲತಿ ಮತ್ತೆ ಅಳುವುದಕ್ಕೆ ಆರಂಭಿಸಿದಳು. ಅವಳ ಹತ್ತಿರ ಏನೂ ಇಲ್ಲವೆಂದು ಅವನಿಗೆ ತಿಳಿಯದೆ ಇಲ್ಲ. ಆದರೂ ವ್ಯರ್ಥವಾಗಿ ಪ್ರಶ್ನೆ ಹಾಕುತ್ತಿದ್ದನು. ಸ್ವಲ್ಪ ಹೊತ್ತಾದ ಮೇಲೆ ಕನಿಕರದಿಂದ ಅವಳ ಕೈ ಹಿಡಿದು ಹತ್ತಿರ ಕರೆದುಕೊಂಡನು. ಪಕ್ಕದಲ್ಲಿ ಕೂಡಿಸಿಕೊಂಡು ಸ್ನೇಹಾರ್ದ್ರ ಧ್ವನಿಯಲ್ಲಿ ನಿದಾನವಾಗಿ "ಹೀಗೆ ಛಲ ಹಿಡಿದು ಕೂತರೆ ನಾನೇನು ಮಾಡಲಿ ಹೇಳು. ಸುತ್ತಮುತ್ತು ಇರುವುದೆಲ್ಲಾ ನಿನ್ನದೇ ಆಗಿರುವಾಗ, ಒಂದು ಬಟ್ಟೆ ಉಡುವುದಿಲ್ಲ, ಒಂದು ಒಡವೆ ತೊಡುವುದಿಲ್ಲ....ಏನು ಬೇಕು, ಏನು ಇಷ್ಟ ಅನ್ನುವುದನ್ನು ಬಾಯಿಬಿಚ್ಚಿ ಹೇಳುವುದಿಲ್ಲ ... ...ನಾನಿನ್ನೇನು ಮಾಡಲಿ ಹೇಳು" ಎಂದು, ಜೇಬಿನಿಂದ ಒಂದು ಕಟ್ಟು ನೋಟುಗಳನ್ನು ತೆಗೆದು ಅವಳ ಕೈಯಲ್ಲಿಡುತ್ತಾ "ಇದನ್ನಿಟ್ಟುಕೋ, ಇದರಲ್ಲಿ ನಿನಗಿಷ್ಟ ಬಂದಷ್ಟು ಕಳುಹಿಸಿಕೊಡು. ಬಾಕಿ ಇರುವುದನ್ನ ಬೇಕಾದ ಹಾಗೆ ಖರ್ಚು ಮಾಡು. ಈ ಮಧ್ಯೆ ಇನ್ನೂ ಬೇಕಾದರೆ ಕೇಳಿ ತೆಗೆದುಕೊ..." ಎಂದು, ಸ್ವಲ್ಪ ನಕ್ಕು, "ಹಣ ಕೂಡಿಡುವುದನ್ನ ಕಲಿತುಕೋ" ಎಂದನು.

ಮಾಲತಿ ಏನೂ ಹೇಳದೆ ಕೇಳುತ್ತಲೇ ಇದ್ದಳು.

ಸುರೇಂದ್ರನು "ಮರೆಯಬೇಡ. ಇವತ್ತು ಏನಾದರೂ ಮಾಡಿ ಕಳುಹಿಸು" ಎಂದನು.

"ನಾನು ಹೇಗೆ ಕಳುಹಿಸಲಿ ?"

"ರಿಜಿಸ್ಟರು ಮಾಡಿ ಕಳುಹಿಸು."

"ನನ್ನ ಕೈಲಾಗದು, ನೀವೇ ಬೇರೆ ಯಾರ ಹೆಸರಿನಲ್ಲಾದರೂ ಕಳುಹಿಸಿಬಿಡಿ."

"ಏಕೆ, ಪತ್ತೆ ಹಚ್ಚಿಬಿಟ್ಟಾರು ಎಂತಲೋ ?"

"ಹೌದು."

"ಹಾಗಾದರೆ ನಮ್ಮ ವಕೀಲರು, ಅಘೋರಬಾಬುಗಳಿಗೆ ಹೇಳುತ್ತೇನೆ ಬಿಡು. ಅವರು ಕಲಿಕತ್ತೆಯಲ್ಲಿರುತ್ತಾರೆ. ಅಲ್ಲಿಂದಲೇ ಕಳುಹಿಸಿಬಿಡುತ್ತಾರೆ."

"ಅದೇ ಒಳ್ಳೆಯದು. ಆದರೆ ಯಾರಾದರೂ ಒಂದು ಪಕ್ಷ ಹುಡುಕಿಕೊಂಡು ಬಂದರೆ....ಆಗ ಏನು ಮಾಡುವುದು ?"

"ಬಂದರೆ ಏನು,....ಅವರಿಗೆ ಗೊತ್ತಾಗದ ರೀತಿಯಲ್ಲಿ ಜವಾಬು ಕೊಟ್ಟು ಕಳುಹಿಸುತ್ತಾರೆ."

"ಬೇಡ. ಅವರಿಗೆ ಮೊದಲೇ ಹೇಳಿಬಿಡಿ—ಏನಾದರೂ ಸರಿ, ನಿಮ್ಮ ಹೆಸರು ಹೇಳಕೂಡದೆಂದು."

"ಒಳ್ಳೆಯದು. ಹಾಗೇ ಆಗಲಿ."

* * * *

## ೧೨

ಜಯಾವತಿಯು ಸತ್ತುಹೋದಳು. ಆದರೆ ಅವಳ ತಾಯಿ ಇನ್ನೂ ಬದುಕಿದ್ದಳು. ನಾರಾಯಣಪುರಕ್ಕೆ ಸ್ವಲ್ಪ ದೂರ ವಾಸುಗ್ರಾಮದಲ್ಲಿಯೇ ಜಯಾವತಿಯ ಮನೆ. ಅಲ್ಲಿಯೇ ಜಯಾವತಿ ತಾಯಿಯೊಂದಿಗೆ ವಾಸ ಮಾಡುತ್ತಿದ್ದುದು. ಅವರ ಜೀವನ ಹೇಗೆ ಕಳೆಯುತ್ತಿತ್ತೋ ಏನೋ.... ಗ್ರಾಮದ ಜನ ನಾನಾ ವಿಧವಾಗಿ ಮಾತನಾಡಿಕೊಳ್ಳುತ್ತಿದ್ದರು.....ಅದು ಹೇಗಾದರೂ ಇರಲಿ, ಜಯಾವತಿಗೆ ಒಳ್ಳೆಯ ಕಂಠವಿತ್ತು. ತಕ್ಕಮಟ್ಟಿಗೆ ರೂಪವೂ ಇತ್ತು. ಹಾಡುಗಾರಿಕೆ ಸ್ವಲ್ಪ ಅಭ್ಯಾಸ ಮಾಡಿದ್ದಳು.

ಇಂತಹವಳು ಬಹಳ ದಿನ ಅನಾಥಳಾಗಿರಬೇಕಾಗಿರಲಿಲ್ಲ. ಹೇಗೋ ಮಾಡಿ ನಾರಾಯಣಪುರದ ಜಮೀನ್ದಾರರ ಆಶ್ರಯ ಪಡೆದಳು. ತಾಯಿಗೂ ಅವಳ ಜೊತೆಯಲ್ಲಿಯೇ ಸ್ಥಳ ಸಿಕ್ಕಿತ್ತು.....ಆದರೆ ಬಹಳ ದಿವಸ ಹಾಗಿರಲಿಲ್ಲ. ಆ ತಾಯಿಯ ಸ್ವಭಾವವೇ ವಿಚಿತ್ರ. ನಾಲ್ಕು ದಿನ ಮಗಳ ಜೊತೆಯಲ್ಲಿ ಸಮಾಧಾನವಾಗಿರಲಿಲ್ಲ. ಮೂರು ಹೊತ್ತೂ ಜಗಳ....ಹೀಗೆ ಆರು ತಿಂಗಳು ಹೇಗೋ ಕಳೆದು ಒಂದು ದಿನ ದೊಡ್ಡ ಜಗಳವಾಗಿ 'ನಿನ್ನ ಬಿನಾತೇನು ನನಗೆ ಹೋಗು' ಎಂದು ತಾಯಿ ಮಗಳನ್ನು ಶಪಿಸಿ ಪಕ್ಕದ ಗ್ರಾಮದಲ್ಲಿದ್ದ ತನ್ನ ಹಳೆಯ ಮನೆಗೆ ಹೋದಳು.

ಹೋದ ಮೇಲೆ ಸುರೇಂದ್ರನು ಜಯಾವತಿಗೂ, ನೌಕರರಿಗೂ ಇನ್ನು ಮುಂದೆ ಮುದುಕಿಯನ್ನು ಬಂಗಲೆಯೊಳಗೆ ಕಾಲಿಡಿಸಬೇಡಿ' ಎಂದು ಹೇಳಿಬಿಟ್ಟಿದ್ದನು. ಆದರೆ ಅವಳು ಬಿಡಬೇಕಲ್ಲ. ಮಗಳ ಮುಖ ನೋಡುವುದಿಲ್ಲವೆಂದು ಹೋಗಿದ್ದವಳು,—ಜೀವನ ಕಳೆಯಬೇಕಲ್ಲ—ಮತ್ತೆ ಬಂದಳು—ಅತ್ತಳು, ಬೈದಳು, ಎಲ್ಲರಿಗೂ ಶಾಪಕೊಟ್ಟಳು ...ಕೂದಲು ಕಿತ್ತುಕೊಂಡಳು. ....ಕಡೆಗೆ ಚಾರರು ಕತ್ತುಹಿಡಿದು ತಳ್ಳಬೇಕಾಯಿತು. ಮತ್ತೆ ಒಂದೆರಡು ತಿಂಗಳಾದನಂತರ ಹಾಜರು. ಮತ್ತೆ ಈ ನಾಟಕವೇ ನಡೆಯುತ್ತಿತ್ತು. ಮುದುಕಿ, ಯಾವುದಾದರೂ ಲಾಭದಾಸೆಯಿಂದ ಹೀಗೆ ಮಾಡುತ್ತಿದ್ದಳೋ ಅಥವಾ ದಾರಿ ತಪ್ಪಿ ಹೋಗಿದ್ದರೂ, ಮಗಳ ಮೇಲಿನ ಮಮತೆ ಮರೆಯಲಾ

ಗದೆ, ಅವಳನ್ನು ನೋಡಲು ಬರುತ್ತಿದ್ದಳೋ ಹೇಳಲಸಾಧ್ಯ.

....ಹೀಗಿರುವಾಗ ಜಯಾವತಿ ಗಂಗೆಯಲ್ಲಿ ಮುಳುಗಿ ಸತ್ತಳೆಂಬ ಸುದ್ದಿ ಕೇಳಿದ ಮೇಲಂತೂ ಅವಳ ದುಃಖ, ಆರ್ಭಟ ಹೇಳ ತೀರದು. ಅವಳ ಅಳುವನ್ನೂ ಕೋಲಾಹಲವನ್ನೂ ನೋಡಿ ಗ್ರಾಮದ ಜನರೆಲ್ಲಾ ಅವಳ ಮನೆಯ ಮುಂದೆ ಸೇರಿದರು.

....ಎಲ್ಲರೂ ಅವಳ ಕಥೆಯನ್ನು ಕೇಳಿದರು. ಜಯಾವತಿ, ಇನ್ನೂ ಕೆಲವರು ನೌಕರರು ದೊಡ್ಡ ಜಹಜಿನಲ್ಲಿ ಕೂತು ಹೋಗುತ್ತಿದ್ದವರು, ಜಹಜು ಗಂಗೆಯಲ್ಲಿ ಮುಳುಗಿ ಎಲ್ಲರೂ ಸತ್ತರು. ಜಹಜು ಬಹು ದೊಡ್ಡ ಜಹಜು, ಸಾಮಾನ್ಯವೇ ...ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳ ಬೆಲೆ ....ಇಡೀ ಕಲಕತ್ತೆ ಜನಗಳೆಲ್ಲಾ ಗೋಳಾಡಿದರು.. ಸ್ವತಃ ಲಾಟ್ ಸಾಹೇ ಬರೇ ಬಂದು ನೋಡಿಕೊಂಡು ಹೋದರು ...ಹುಡುಗಿ ಎಲ್ಲರಿಗೂ ಬೇಕಾಗಿ ದ್ದವಳು....ಅವಳ ಲಕ್ಷಣ, ಅವಳ ಕಂಠ, ಅವಳ ವಿದ್ಯೆ....ಅವಳ ತೂಕದ ಚಿನ್ನ ಕೊಟ್ಟರೂ ಅಂತಹ ಹುಡುಗಿ ಇನ್ನು ಸಿಕ್ಕುವಳೇ....ಆ ಜಮೀದಾರ ಬಾಬು....ಪ್ರಾಣಕ್ಕೆ ಪ್ರಾಣ ಕೊಡುತ್ತಿದ್ದ....ನಮ್ಮ ಹುಡುಗಿ ಅಂದರೆ.... ಅವನು ಹೇಗೆ ತಾನೇ ಜೀವ ಇಟ್ಟುಕೊಂಡಿದ್ದಾನೋ ಪಾಪ....ಹೋಗಿ ನೋಡಿಕೊಂಡು ಬರಬೇಕು....ಅಂತಹವನ ಆಶ್ರಯ ಸಿಕ್ಕಿ, ಪುಣ್ಯಮಾಡಿ ದ್ದಳು....ಆದರೇನು ...ಕೆಟ್ಟ ಹಣೆಬರಹ, ಉಳಿಸಿಕೊಳ್ಳಲಿಲ್ಲ. ಹೋಗಿ ನೋಡಿಕೊಂಡು ಬರುತ್ತೇನೆ ಅವರನ್ನ....ಇನ್ನು ನಾನು ತಾನೇ ಎಷ್ಟು ದಿನ ಬದುಕಿರುತ್ತೇನೆ ಹೇಳಿ ...ಇವತ್ತೋ ನಾಳೆಯೋ...."

ಕೇಳಿ ಅವರವರಿಗೆ ತೋಚಿದ್ದು ಹೇಳಿ ಗ್ರಾಮಸ್ಥರು ತಮ್ಮ ತಮ್ಮ ಮನೆಗಳಿಗೆ ಹೊರಟರು. ಮರುದಿನ ಬೆಳಿಗ್ಗೆಯೇ ಜಯಾಳ ತಾಯಿ ನಾರಾಯಣಪುರಕ್ಕೆ ಹೊರಟಳು.

ದ್ವಾರಪಾಲಕರ ಬಂಧನವನ್ನು ತನ್ನ ಅಳುವಿನ ಹೊಳೆಯಲ್ಲಿ ತಳ್ಳಿ ಹಾಕಿ ಮನೆಯೊಳಗೆ ಬಂದಳು. ನೆಟ್ಟಗೆ ಜಮೀದಾರ ಸುರೇಂದ್ರನ ಬೈಠಕು ಖಾನೆಯಲ್ಲಿ ಬಂದು ನಿಂತಳು. ಅವನು ಊಟಮಾಡಿ ವಿಶ್ರಮಿಸಿಕೊಳ್ಳು ತ್ತಿದ್ದವನು ಈ ಮುದುಕಿಯನ್ನು ನೋಡಿ ಅಪ್ರತಿಭನಾದನು....ಮತ್ತೆ ಅವನ ಮುಂದೆ ನಾಟಕವಾಯಿತು. ಜಯಾವತಿಯ ಗುಣಕಥನ, ಅಳು....ತಲೆ

ಚೆಚ್ಚಿಕೊಳ್ಳುವುದು ಇತ್ಯಾದಿ ...

ಸುರೇಂದ್ರನು ಎಲ್ಲದರ ಅರ್ಥವನ್ನೂ ಗ್ರಹಿಸಿ "ನಿನಗೆ ತಿಂಗಳಿಗೆ ಎಷ್ಟಾದರೆ ಜೀವನ ಕಳೆಯುತ್ತೆ ?" ಎಂದು ಕೇಳಿದನು.

ಜಯಾಳ ತಾಯಿ ಕಣ್ಣೊರಸಿಕೊಂಡು "ಅಪ್ಪಾ, ನಾನು ಒಬ್ಬಂಟಿಗಳು, ಯಾರೂ ದಿಕ್ಕಿಲ್ಲ...ತಿಂಗಳಿಗೆ ಹದಿನೈದು ರೂಪಾಯಿ ಯಾದರೂ ಬೇಕಾಗುತ್ತವೆ" ಎಂದಳು.

"ಸರಿ ...ಹಾಗಾದರೆ . ತಿಂಗಳಿಗೆ ಹದಿನೈದು ರೂಪಾಯಿ .......ಪ್ರತಿ ತಿಂಗಳೂ ಹತ್ತನೆಯ ತಾರೀಖು ಕಛೇರಿಗೆ ಬಂದು ತೆಗೆದುಕೊಂಡುಹೋಗು."

ಜಯಾಳ ತಾಯಿ ಅವನಿಗೆ ಅನೇಕ ಆಶೀರ್ವಾದವಮಾಡಿ 'ಗೆದ್ದೆ' ನೆಂದು ಹೊರಟುಬಂದಳು ಆದರೆ ಅಲ್ಲಿಂದ ಹೊರಟವಳು ಸೀದಾ ಮನೆಗೆ ಹೋಗಲಿಲ್ಲ. ಏನೆನ್ನಿಸಿತೋ ಏನೋ...ಅಲ್ಲಿಂದ ಸೇವಕರ ಚಾವಡಿಗೆ ಹೋದಳು. ಅಲ್ಲಿ ಅವರೆಲ್ಲರ ಮುಂದೆ ಜಯಾಳ ಹೆಸರು ಹೇಳಿ ಮತ್ತೆ ಅತ್ತಳು. ಅವರೆಲ್ಲರೂ ಜಯಾವತಿಗೆ ಬೇಕಾಗಿದ್ದವರು, ಸಹಾನುಭೂತಿ ತೋರಿದರು. ಮುದುಕಿ ಜಮೀನ್‌ದಾರ ಬಾಬುಗಳ ಔದಾರ್ಯವನ್ನೂ ಹೊಗಳಿದಳು. "ಎಲ್ಲಾ ಬಂದೋಬಸ್ತು ಮಾಡಿದಾರೆ ನನಗೂ" ಎಂದು ತೃಪ್ತಿಯನ್ನು ಸೂಚಿಸಿ ತಕ್ಷಣ ಏನೋ ಕೇಳಿ ಕಿವಿ ನಿಮಿರಿಸಿ ನಿಂತಳು ...

ಜಯಾವತಿಯ ಸ್ಥಳದಲ್ಲಿ ಬೇರೆ ಯಾರೋ ಹೆಂಗಸು ಬಂದಿದ್ದಾಳೆಂದು ಸೇವಕನೊಬ್ಬ ಹೇಳುತ್ತಿದ್ದದ್ದು ಕೇಳಿ ಮೈಯೆಲ್ಲಾ ಬಾಗಿಸಿ 'ಯಾರದು,' ಯಾವಳವಳು . ಹಾಂ ?" ಎಂದಳು.

ಅವಳು ಕಲಿಕತ್ತೆಯವಳು, ಬಾಬುಗಳು ಅವಳನ್ನು ಕರೆದುಕೊಂಡು ಬಂದು ವಿಪರೀತ ಸನ್ಮಾನದಿಂದ ಆ ತೋಟದ ಬಂಗಲೆಯಲ್ಲಿ ಬೇರೆಯಾಗಿ ಇಟ್ಟಿದ್ದಾರೆ...." ಎಂಬ ಸಮಾಚಾರ ಸಿಕ್ಕಿತು.....ಮುದುಕಿ ಕಣ್ಣಲ್ಲಿ ಬೆಂಕಿ ಸುರಿಸಿದಳು. ಬಾಯಿಂದ ಆಡಬಾರದ ಬೈಗಳ ಸುರಿಮಳೆಯಾಯಿತು....ಸೇವಕರು 'ಸುಮ್ಮನಿರು ಗಲಭೆ ಮಾಡದೆ ಹೋಗು' ಎಂದರು....ಅವಳು ಸುಮ್ಮನಿರಬೇಕಲ್ಲ. ಕಡೆಗೆ ಬಾಬುಗಳು ನಿನ್ನ ಮಾಶಾಸನ ನಿಲ್ಲಿಸಿಬಿಡುತ್ತಾರೆ ಗಲಾಟೆಮಾಡಿದರೆ, ಎಂದು ಹೆದರಿಸಿದಾಗ ನಿಲ್ಲಿಸಿದಳು ...ಆಮೇಲೆ 'ಆಗಲಿ, ಅದಕ್ಕೆ ಬೇರ ಉಪಾಯ ಮಾಡುತ್ತೇನೆ' ಎಂದುಕೊಂಡು ಅಳು

ನಿಲ್ಲಿಸಿ ಕಾಂಪೌಂಡು ಬಾಗಿಲು ದಾಟಿ ಹೊರಗೆ ಬಂದಳು.....ತನ್ನ ಗ್ರಾಮದ ದಾರಿ ಹಿಡಿಯದೆ ನೆಟ್ಟಗೆ ತೋಟದ ಬಂಗಲೆಯ ಕಡೆ ಹೊರಟಳು. 'ನನ್ನ ಮಗಳ ಸ್ಥಳ ಆಕ್ರಮಿಸುವ ಯೋಗ್ಯತೆ ಯಾವ ಡಾಕಿನಿಗಿದೆಯೋ ನೋಡಿ ಬಿಡುತ್ತೇನೆ' ಎಂದು ಮನಸ್ಸಿನಲ್ಲಿ ಹಟಮಾಡಿಕೊಂಡು ನೆಟ್ಟಗೆ ಬಂಗಲೆಯೊಳಕ್ಕೆ ಬಂದಳು. ಎದುರಿಗೆ ಬಂದ ದಾಸಿಯನ್ನು ನೋಡಿ ಗರ್ಜಿಸಿ, "ಎಲ್ಲೇ ಅವಳು, ಆ ರಾಕ್ಷಸಿ?" ಎಂದಳು. ಆ ದಾಸಿ ಹೊಸಬಳು ಏನು ಹೇಳಲೂ ತೋಚದೆ ಅವಳ ಗರ್ಜನೆಯನ್ನು ಕೇಳಿ ಹೆದರಿ ಹಿಂದೆ ಸರಿದಳು ..ಮುದುಕಿ ಮತ್ತೆ 'ಎಲ್ಲೇ ನಿಮ್ಮ ಯಜಮಾನಿ?' ಎಂದಳು. ಅವಳು ಮಹಡಿಯ ಕಡೆ ತೋರಿಸಿದಳು. ಮುದುಕಿ ಬೇಗ ಬೇಗ ಮಹಡಿ ಮೆಟ್ಟಲನ್ನು ಹತ್ತಿ ಮೇಲೆ ಬಂದು ಕೊರಡಿ ಕೊರಡಿಯಲ್ಲೂ ಇಣಿಕಿ ನೋಡಿದಳು. ಹೊಸಬಳು ಕಂಡು ಬರಲಿಲ್ಲ. ಆ ವೈಭವದಿಂದ ಸಜ್ಜುಗೊಳಿಸಿದ್ದ ಕೋಣೆಗಳೆಲ್ಲವನ್ನೂ ನೋಡಿ ಮುದುಕಿಯು 'ಇವೆಲ್ಲಾ ಜಯಾವತಿಯದಾಗುತ್ತಿತ್ತು, ಬದುಕಿದ್ದಿದ್ದರೆ' ಎಂದುಕೊಂಡು ಹೊಸಬಳ ಮೇಲೆ ಕ್ರೋಧವು ಮತ್ತೂ ಏರಿ ಅಕಸ್ಮಾತ್ತಾಗಿ ಬೇರೊಂದು ಅಲಂಕಾರಯುತವಾಗಿದ್ದ ಕೋಣೆಯಲ್ಲಿ ಸಾಮಾನ್ಯ ಉಡುಪು ಹಾಕಿಕೊಂಡಿದ್ದ ಹೆಂಗಸೊಬ್ಬಳನ್ನು ನೋಡಿದಳು. ಅವಳ ಬಟ್ಟೆ, ಬರೆ, ಒಡವೆಯಿಲ್ಲದ ಅವಳ ಮೈ ..ಇವೆಲ್ಲಾ ನೋಡಿ ಅವಳೊಬ್ಬ ನೌಕರಳೆಂದು ತಿಳಿದು ಮುದುಕಿ ಅವಳನ್ನು ನೋಡಿ "ಎಲ್ಲೇ, ಆ ಡಾಕಿನಿ, ನಿಮ್ಮ ಯಜಮಾನಿ?" ಎಂದಳು. ಆ ಹೆಂಗಸು ಇವಳ ಕಡೆ ಮುಖ ತಿರುಗಿಸುತ್ತಲೂ ಅವಳ ಸೌಮ್ಯ ಸುಂದರ ಮುಖಭಾವನ್ನು ನೋಡಿ ಮುದುಕಿ ತಕ್ಷಣ ಮೆತ್ತಗಾದಳು. ಮತ್ತೆ "ಎಲ್ಲಕ್ಕಾ, ನಿಮ್ಮ ಹೊಸ ಯಜಮಾನಿ? ನೀನು ಯಾರು?" ಎಂದಳು.

ಆ ತರುಣಿಯು ಇವಳನ್ನು ನೋಡಿ ಸುಮ್ಮನೆ "ಕೂತುಕೊಳ್ಳಿ" ಎಂದಳು. ಎಂತಹ ಮಧುರವಾದ ಕಂಠ?

ಮುದುಕಿ "ನೀನು ಬಂದು ಎಷ್ಟು ದಿವಸವಾಯಿತು ತಂಗೀ?" ಎಂದಳು.

"ಸುಮಾರು ಒಂದು ತಿಂಗಳಾಯಿತು."

"ನಿನ್ನ ಒಡತಿ ಎಲ್ಲಿ? ನೀನೂ ಬಹುಶಃ ಅವಳ ಸಂಗಡವೇ ಬಂದೆ ಎಂದು ಕಾಣುತ್ತದೆ ?"

ಹೊಸಬಳು ಮುದುಕಿಯನ್ನು ದುರುಗುಟ್ಟಿಕೊಂಡು ನೋಡಿ 'ಹೌದು' ಎಂದು ತಲೆಯಲ್ಲಾಡಿಸಿ "ಆಕೆಯ ಹತ್ತಿರ ಏನಾದರೂ ಕೆಲಸವಿದೆಯೇನು ?" ಎಂದಳು.

"ಕೆಲಸವೇ. ... ...ಹ್ಹ....ಕೆಲಸ ...... ಆ. . ...ಮಗಳ ಮುಖ ವರಚಿ ಅವಳನ್ನು ಪುಟ್ಟಲಿಲ್ಲ ಅನ್ನಿಸದಿದ್ದರೆ ನೈ!....ನಾನು ಯಾರು ಗೊತ್ತೇ? ನಾನು ಜಯಾಳ ತಾಯಿ ...ಸುತ್ತು ಮುತ್ತು ಹತ್ತು ಗ್ರಾಮಗಳಿಗೆಲ್ಲಾ ನಾನು ಗೊತ್ತು. ಆ ರಾಕ್ಷಸಿ ನನ್ನ ಜಯಾಳನ್ನ ತಿಂದಿದ್ದಾಳೆ....ನಾನು ಅವಳನ್ನು ಕಡಿದು ಚೂರುಮಾಡಿ ತಿಂತ್ತೇನೆ.... ಬಿಡುತ್ತೇನೆಯೇ ನೋಡುತ್ತಿರು ...

ಆ ಹೊಸಬಳು ಉಸಿರು ಬಿಗಿಹಿಡಿದು ಇವಳ ರೌದ್ರ ಭಂಗಿಯನ್ನು ನೋಡುತ್ತಾ ಕುಳಿತಳು....

"ಎಲ್ಲೀ ಅವಳು ...? ಎಲ್ಲಿ ಹೇಳು ...ಆ ಪಿಶಾಚಿ .. ತೋರಿಸಿಬಿಡು ತೇನೆ. ಇವತ್ತು ಅವಳಿಗೆ ನನ್ನ ಕೈಲೇನಾಗುತ್ತೆ ಅನ್ನುವುದನ್ನು ..."

ಆ ಹೆಂಗಸು ಬಹಳ ಪ್ರಯಾಸದಿಂದ ಧೈರ್ಯವಹಿಸಿ ಏನೋ ಯೋಚಿಸಿ ಮೆಲ್ಲಗೆ ಹತ್ತಿರ ಬಂದು ಮುದುಕಿಯ ಕೈಹಿಡಿದಳು.... "ಬೇಡಮ್ಮಾ, ದಯವಿಟ್ಟು ಸುಮ್ಮನಿರಿ" ಎಂದಳು.

ಮುದುಕಿಯು ಚೀತ್ಕಾರ ಮಾಡುತ್ತಾ "ಯಾಕೇ ಸುಮ್ಮನಿರಲಿ; ನಿನ್ನ ಮಗಳನ್ನ ತಿಂದುಕೊಂಡರೆ ನೀನು ಸುಮ್ಮನಿರುತೀಯೋ?....ಸುಮ್ಮನಿರ ಬೇಕಂತೆ ...ಎಲ್ಲಿ ಹೇಳು ಅವಳು ?" ಎಂದಳು.

"ಅವರು ಇವತ್ತು ಇಲ್ಲಿಲ್ಲ."

"ಇಲ್ಲವೇ...ಎಲ್ಲಿ ?"

"ಎಲ್ಲೋ ಹೊರಗೆ ಹೋಗಿದ್ದಾರೆ."

"ಹೊರಗೆ?...ಆಗಲಿ ...ಬರಲಿ ..ಎಲ್ಲಿ ಹೋಗುತಾಳೆ ಇಲ್ಲಿಗೆ ಬರವೆ. ನಾನು ಈ ಸ್ಥಳ ಬಿಟ್ಟು ಕದಲುವುದಿಲ್ಲ ಅವಳು ಬರುವ ವರೆಗೂ ..."

ಹೊಸ ಹೆಂಗಸು ಸ್ವಲ್ಪ ನಕ್ಕು "ನೀವು ಯಾಕೆ ಹೋಗಬೇಕು. ನೀವು ಇಲ್ಲೇ ಆರಾಮವಾಗಿ ಕೂಡಿ.....ಆದರೆ ಹೊತ್ತು ಬಹಳ ಆಯಿತು. ಇನ್ನೂ

ಊಟ ಆಗಿಲ್ಲ ಎಂದು ಕಾಣುತ್ತೆ ?" ಎಂದಳು.

"ಇನ್ನು ಊಟ ಎಂತಹುದು. ಊಟ ಒಂದೇ ಸಲವೇ...!"

"ಪಾಪ, ಪಾಪ! ಅಂತಹ ಮಗಳನ್ನು ಕಳೆದುಕೊಂಡು ಇನ್ನು ಊಟ ಹೇಗೆ ಸೇರುತ್ತೆ ?"

ಜಯಾವತಿಯ ತಾಯಿ ಆಗ ಸ್ವಲ್ಪ ಮೆತ್ತಗಾದಳು...."ನೋಡಮ್ಮಾ . . ನೀನೇ....ನಿನಗೆ ಅರ್ಥವಾಗುತ್ತೆ ನನ್ನ ಹೊಟ್ಟೆ ಸಂಕಟ....ಇನ್ನು ಯಾರೂ --" ಎಂದು ಕಣ್ಣೊರಸಿಕೊಂಡಳು.

" ...ಯಾಕೆ ಎಲ್ಲರಿಗೂ ಗೊತ್ತಾಗುತ್ತೆ? ಮನುಷ್ಯರಿಗೆ ಅಷ್ಟು ಕನಿಕರ ಇಲ್ಲವೇ ? ...ಆದರೆ ಮಾಡುವುದೇನು ಹೇಳಿ ...ಹೊಟ್ಟೆಗೆ ಹಾಕದೆ ಹೋದರೆ ಜೀವ ಇರಬೇಕಲ್ಲ ಮತ್ತೆ ?"

"ಅದೇನೋ ನಿಜ ಬಿಡು."

"ಅದಕ್ಕೇ ಹೇಳಿದೆ ...ಸ್ವಲ್ಪ ಏನಾದರೂ ಫಲಹಾರ ಮಾಡುವುದಿದ್ದರೆ ....ಏರ್ಪಾಡು ಮಾಡೋಣ ಅಂತ...."

"ಹಾಗಿದ್ದರೆ ಹಾಗೇ ಮಾಡಮ್ಮ, ನೀನು ಹೇಳಿದ ಹಾಗೆ ಹಾಳು ಹೊಟ್ಟೆ ಸುಮ್ಮನಿರಬೇಕಲ್ಲ !"

"ಸರಿ ಮತ್ತೆ....ಅದೂ ಪಾಪ, ನಮ್ಮ ಜಯಾವತಿ ತಾಯಿ ಅಂದಮೇಲೆ ನನಗೆ ಸುಮ್ಮನೆ ಕಳುಹಿಸುವುದಕ್ಕೆ ಆಗುವುದಿಲ್ಲ ...ನಿಮ್ಮ ವಿಚಾರ ಜಯಾ ಎಷ್ಟು ಹೇಳುತ್ತಾ ಇದ್ದಳೋ...."

ಮುದುಕಿಯ ಕಣ್ಣುಗಳು ಹೊಳೆದುವು.

"ಹೌದೇನೇ........ಹೇಳುತಾ ಇದ್ದಳೇ? ನಿನಗೆ ಅವಳು ಚೆನ್ನಾಗಿ ಗೊತ್ತಿತ್ತೇ ?"

"ಆಹಾ....ಎಷ್ಟು ದಿನ ನಾವು ಒಟ್ಟಿಗೇನೇ ಇದ್ದೆವು."

"ಹಾಗೇ ? ನೀವಿಬ್ಬರೂ ಒಟ್ಟಿಗೇ ಇದ್ದಿರಾ ?"

"ಹೌದು, ಆಕೆಯೇ ನನ್ನನ್ನು ನಮ್ಮ ಊರಿಂದ ಕರೆದುಕೊಂಡು ಬಂದಳು....ನಾವಿಬ್ಬರೂ ಎಷ್ಟು ಹೊತ್ತು ಮಾತಾಡಿಕೊಂಡು ದಿನವೆಲ್ಲಾ ಕಳೆದುಬಿಡುತ್ತಿದ್ದೆವು. .."

"ಅಲ್ಲವೇ ಮತ್ತೆ ? ಅವಳಿಗೆ ಜನ ಬೇಕು...ಯಾವಾಗಲೂ....ನನ್ನ

ಮಗಳಂಥಾ ಹುಡುಗಿ ಹುಡುಕಿದರೆ ಸಿಗುವುದಿಲ್ಲ....ನನ್ನ ಗ್ರಹಚಾರ...." ಎಂದು ಪುನಃ ಕಣ್ಣೊರಸಿಕೊಂಡಳು.

"ಖಂಡಿತ ಇಲ್ಲ ...ಬಹಳ ಒಳ್ಳೆಯ ಹೆಂಗಸು "

"ಅಂತಹ ಒಳ್ಳೆಯ ಹೆಂಗಸವೇ ಸಾಯುವುದು? ಆ ಮೇಲೆ ನಿನ್ನ ಹೊಸ ಯಜಮಾನಿ...ಈ ಡಾಕಿನಿ ಎಲ್ಲಿಂದ ಹುಟ್ಟಿಕೊಂಡಳು ?"

"ಓ ಅವಳೇ....ಅವಳು ಕಲಿಕತ್ತೆಯಿಂದ ಬಂದಳು."

"....ಆ ...ಮಗಳು ... ...ಬಾಬುಗಳಿಗೇನಾದರೂ ಮದ್ದು ಹಾಕಿ ವಶ ಮಾಡಿಕೊಂಡಿದಾಳೆ ಅಂತ ಕಾಣುತ್ತೆ?"

"ಓಹೋ, ನಾನೂ ಹಾಗೆಯೇ ಕೇಳಿದ್ದೇನೆ."

"ಹಾಗೇನು?....ಬರಲಿ ಅವಳು ...ಅವಳ ಮದ್ದು ಗಿದ್ದು ಎಲ್ಲಾ ಉಡಾಯಿಸಿ ಬಿಡುತ್ತೇನೆ .ಮುದುಕಿ ಯಾರು ಅಂತ ಗೊತ್ತಿಲ್ಲ ಅವಳಿಗೆ."

"ಹಾಗೆಯೆ ಮಾಡಿ....ಅವಳು ಎಂತಹ ಮಾಯಗಾತಿ ...ನೀವೇ ಪಾಠ ಕಲಿಸಬೇಕು ಅವಳಿಗೆ!"

"ಮಾಯಗಾತಿ ? ಅವಳಿಗೆ ಮಾಟ, ಗೀಟ ಬರುತ್ತದೇ ?"

"ಬರುತ್ತವೆ? . .ಚೆನ್ನಾಗಿ ಅಂದಿರಿ. ಅವಳು ಮಲೆಯಾಳಕ್ಕೆ ಹೋಗಿ ಕಲಿತುಕೊಂಡು ಬಂದಿದ್ದಾಳೆ. ಮನುಷ್ಯರನ್ನ ಮೃಗಗಳಾಗಿ ಮಾಡಿ ಕಟ್ಟಿ ಹಾಕಿಬಿಡುತಾಳಂತೆ . .. ಯಾಕೆ. . ..ನಮ್ಮ ಬಾಬುಗಳಿಗೇ .......ಹೇಗೆ ಮಾಡಿದಾಳೆ ...? ಕೂತುಕೋ ಅಂದರೆ ಕೂತುಕೊಳ್ಳುತ್ತಾರೆ . ಏಳು ಅಂದರೆ ಏಳುತ್ತಾರೆ."

ಮುದುಕಿಯ ಮುಖ ಸ್ವಲ್ಪ ಬಣ್ಣಗೆಟ್ಟಿತು ...ನಡುಗುವ ಧ್ವನಿಯಲ್ಲಿ "ಅದಕ್ಕೇನು ಮಂತ್ರ, ತಂತ್ರ ನನಗೂ ಗೊತ್ತು." ಎಂದಳು.

"ಅದಕ್ಕೇ ನಾನು ಹೇಳಿದೆ. ನೀವು ಅವಳಿಗೆ ಸರಿಯಾಗಿ ಪಾಠಕಲಿಸಿ ಕೊಡಿ, ಅಂತ"

"ಕಣ್ಣು ಕಟ್ಟು ಮಾಡುತಾಳೆಯೇ ಅವಳು ? ನೋಡಿ ?"

"ಓಹೋ.. .ಯಾವುದು ಬರುವುದಿಲ್ಲ ಅವಳಿಗೆ ? ಮಧ್ಯಾಹ್ನ ಅವಳು ಬರುತ್ತಾಳೆ .ನೀವೇ ನೋಡುವಿರಂತೆ."

"ಮಧ್ಯಾಹ್ನ ಬರುತ್ತಾಳೆಯೇ ?" ಎಂದು ಮುದುಕಿ ಕಿಟಕಿಯ

ಹೊರಗೆ ನೋಡಿದಳು. ಬಿಸಿಲು ನೋಡಿದರೆ ಮಧ್ಯಾಹ್ನಕ್ಕೆ ಇನ್ನು ಬಹಳ ಹೊತ್ತೇನೂ ಇಲ್ಲ. ಅವಳು ಹಾಗೆ ಹೀಗೆ ನೋಡಿ "ಇವತ್ತು ನನಗೆ ಬಹಳ ಕೆಲಸವಿದೆ....ಇನ್ನು ಹೊರಡುತ್ತೇನೆ. ನಾಳೆ ಬರುತ್ತೇನೆ." ಎಂದು ಎದ್ದಳು.

ಆ ಹೊಸ ಹೆಂಗಸು "ಯಾಕೆ ಎದ್ದಿರಿ, ಕೂಡಿ, ಕೂಡಿ....ಇವತ್ತು ಇಲ್ಲಿಯೇ ಊಟ ಮಾಡಿಕೊಂಡು ಹೊರಡಿ" ಎಂದಳು.

"ಬೇಡಮ್ಮಾ, ಬಹಳ ಹೊತ್ತಾಗುತ್ತೆ."

"ಯಾಕೆ .. ಹೊತ್ತೇನೂ ಆಗುವುದಿಲ್ಲ."

"ಹಾಗಾದರ ಜಾಗ್ರತೆ ಕೊಡಮ್ಮ, ಹೊತ್ತಾದೀತು. ನಿನ್ನ ಹೆಸರೇನೇ ಹುಡುಗಿ ?"

"ನನ್ನ ಹೆಸರೇ ? ನನ್ನ ಹೆಸರು ಮಾಲತಿ."

"ಮಾಲತಿಯೇ ? ಆಹಾ ಬಹಳ ಛಲೋ ಹೆಸರು."

ಮುದುಕಿ ಮಹಡಿಯಿಳಿದು ಏನೋ ಸ್ವಲ್ಪ ಆಹಾರ ತೆಗೆದುಕೊಂಡಳು. ಮಾಲತಿಯು ಹತ್ತಿರ ಕೂತು ಉಪಚಾರ ಮಾಡಿದರೂ ಮುದುಕಿಯು ಸರಿಯಾಗಿ ಊಟಮಾಡಲಿಲ್ಲ. ಬೇಗ ಊಟದ ಶಾಸ್ತ್ರ ಮಾಡಿ ಎದ್ದು ಕೈ ತೊಳೆದು "ಇನ್ನು ಬರುತೇನಮ್ಮಾ" ಎಂದಳು.

ಮಾಲತಿ "ಸ್ವಲ್ಪ ಇರಿ ...ನಿಮ್ಮೊಂದಿಗೆ ಇನ್ನೂ ಸ್ವಲ್ಪ ಮಾತಿದೆ. ಏನೂ ಇಲ್ಲ ಜಯಾವತಿಯ ಹತ್ತಿರ ನಾನು ಯಾವಾಗಲೋ ಹತ್ತು ರೂಪಾಯಿ ತೆಗೆದುಕೊಂಡಿದ್ದೆ. .ಅದನ್ನ ನಾನು ಬೇರೆ ಯಾರಿಗೆ ಕೊಡಲಿ ? ಹೇಗಾದರೂ ನೀವು ಬಂದಿದ್ದೀರಿ....ನಿಮಗೇನೂ ಆಕ್ಷೇಪಣೆ ಇಲ್ಲದೆ ಹೋದರೆ ನಿಮಗೆ ಕೊಡುತೇನೆ ಅದನ್ನ."

"ನನಗೆ ಕೊಡುತೀಯಾ ಅದನ್ನ ?"

"ಹೂಂ " ಎಂದು ಮಾಲತಿ ಮೇಲೆ ಹೋಗಿ ಬರುವಾಗ ಕೈಯಲ್ಲಿ ಹತ್ತು ರೂಪಾಯಿಗಳನ್ನ ತಂದು ಮುದುಕಿಗೆ ಕೊಟ್ಟಳು. ಮುದುಕಿಯು ಅದನ್ನ ತೆಗೆದುಕೊಂಡು ಮಾಲತಿಯ ಮುಖವನ್ನ ಸುಮ್ಮನೆ ನೋಡುತ್ತಾ ನಿಂತಳು. ಆ ಮೇಲೆ ಮೃದುವಾಗಿ "ಅಲ್ಲೇ ಹುಡುಗಿ....ನೀನು ನಿಜವಾಗಿ ದೊಡ್ಡ ಮನುಷ್ಯರ ಮನೆ ಹೆಣ್ಣು ಮಗಳು....ಇಲ್ಲದೆ ಹೋದರೆ ..."

ಮಾಲತಿ ಮುಗುಳ್ನಗೆಯಿಂದ "ನಾವೂ ಕಷ್ಟಪಟ್ಟಿರುವವರಮ್ಮ"

ಎಂದಳು. ಮುದುಕಿಯ ಕಣ್ಣಲ್ಲಿ ನೀರು ತುಂಬಿತು. "ಇರಬೇಕಮ್ಮಾ...ಕಷ್ಟ ವಿಲ್ಲದೆ ಇರುವುದಿಲ್ಲ....ಆದರೂ ನೀನು ದೊಡ್ಡ ಮನೆತನಸ್ಥರ ಹುಡುಗಿ.... ಯಾಕೆಂದರೆ....ಏನೂ ಇಲ್ಲ...ಹೀಗಂತಾಳೆ ಅನ್ನಬೇಡ.. ಆದರೂ ಇದ್ದ ದ್ದಿದ್ದ ಹಾಗೆ ಹೇಳಬೇಕು....ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳು ಜಯಾ, ಅವಳ ಕೈಯಲ್ಲಿ ಅಷ್ಟು ದುಡ್ಡು ಆಡುತಾ ಇತ್ತು ಒಂದು ಸಲವಾದರೂ "ಅಮ್ಮಾ, ತಗೋ" ಅಂದು ಧಾರಾಳವಾಗಿ ಹತ್ತು ರೂಪಾಯಿ ಕೊಟ್ಟಿದ್ದರೆ ಸರಿ...ಅವಳು....ಹೋದಳು....ಇನ್ನು ಅವಳನ್ನ ಯಾಕೆ ಅನ್ನಲಿ? ನನ್ನ ಪಾಪ !" ಎಂದು ಕಣ್ಣೊರಸಿಕೊಂಡಳು.

ಮಾಲತಿಯು "ಯಾಕೆ ಸಂಕಟಪಡುತ್ತೀರಮ್ಮಾ ! ಹೋಗಲಿ ಬಿಡಿ....ನಾವೆಷ್ಟೇ ಕಷ್ಟಪಟ್ಟಿದ್ದರೂ ದಯೆ, ಧರ್ಮ ಇರುವುದಿಲ್ಲವೇ?"

"ಇರಬೇಕಮ್ಮಾ .ಆದರ ಎಲ್ಲರಿಗೂ ಹಾಗನ್ನಿಸಬೇಕಲ್ಲ."

"ಯಾಕನ್ನಿಸುವುದಿಲ್ಲ? ಅದು ಬಿಡಿ ನಾಳೆ ಬರುತ್ತೀರಿ ತಾನೇ?"

"ನಾಳೆಯೇ...ನಾಳೆ...? ಓ ಬರುತ್ತೇನೆ ಬರು. ತ್ತೇನೆ, ಬಿಡು."

"ನಮ್ಮ ಯಜಮಾನಿಗೆ ನಿಮ್ಮ ವಿಷಯ ಹೇಳಿರಲೇನು ಹಾಗಾದರೆ?"

"ಓ....ಹೇಳು..ಬೇಡ ಸುಮ್ಮನೆ ಯಾಕೆ ಅವಳ ಹತ್ತಿರ .ಕೆಲಸ ವಿಲ್ಲ ಬಿಡು. ಅವಳು ಕೆಟ್ಟಾಳು... ಅವಳ ಸುದ್ದಿ ನಮಗೆ ಯಾಕೆ?"

ಮಲೆಯಾಳದಿಂದ ಮಾಟ ಕಲಿತು ಬಂದಿದ್ದ ಆ ಡಾಕಿನಿಯ ಸುದ್ದಿ ಮುದುಕಿಯ ಕಿವಿಗೆ ಹಿತವಾಗಿರಲಿಲ್ಲ. ಮಾಲತಿಗೂ ಅದು ತಿಳಿಯಿತು.

ಮುದುಕಿಯು ಹೊರಡುತ್ತಾ "ಇನ್ನು ಬರುತ್ತೇನಮ್ಮಾ, ಹೊತ್ತಾ ಯಿತು....ಇನ್ನು ಯಾವಾಗಲಾದರೂ ಬಂದು ನಿನ್ನನ್ನು ನೋಡುತ್ತೇನೆ.. ." ಎಂದಳು.

ಮಾಲತಿ "ಅಗತ್ಯವಾಗಿ ಬನ್ನಿ" ಎಂದು ಅವಳು ಹೊರಟ ತಕ್ಷಣ ತನಗೆ ತಾನೇ ನಕ್ಕಳು.

* * * *

## ೧೩

ಕಥೆಯೆಲ್ಲಾ ಕೇಳಿ ಸುರೇಂದ್ರನಾಥನು ಗಹಗಹಿಸಿ ನಕ್ಕನು.

"ಹಾಗಾದರೆ ಚೆನ್ನಾಗಿ ಜಗಳವಾಯಿತು ಅನ್ನು ?"

"ಜಗಳವೇಕೆ ...? ಎಲ್ಲಾ ಶಾಂತ ರೀತಿಯಲ್ಲಿಯೇ ಕೊನೆಮುಟ್ಟಿತು."

"ಹಾಗೇನು ...ಆದರ ಅವಳು ಸ್ವಂತ ಮಗಳ ಜೊತೆಯಲ್ಲಿಯೇ ಜಗಳ ವಿಲ್ಲದೆ ಹೋಗುತ್ತಿರಲಿಲ್ಲ."

"ಹೌದು, ನಾನೂ ಹಾಗೆಯೇ ಕೇಳಿದೆ."

"ನೀನು ಏನು ಕೇಳಿದೆ."

"ಮುದುಕಿಯೇ ಎದೆ ಸಂಕಟ ಬಿಚ್ಚಿ ಹೇಳಿಕೊಂಡಳು "

"ಅಂತೂ ಮನೆಗೆ ತಲೆ ಹಾಕಿದ ತಕ್ಷಣ ನಿನ್ನ ಬೈದುಕೊಂಡೇ ಬಂದಳು ?"

"ನನ್ನ ಬೈಯಲಿಲ್ಲ. ಆ ಡಾಕಿನಿಯನ್ನು ಬೈದಳು."

"ಆ ಡಾಕಿನಿ ನೀನು ತಾನೇ ?"

"ನಾನು ಹೇಗೆ ಆದೇನು? ನಾನೇನು ಕಲಿಕತ್ತೆಯಿಂದ ಬರಲಿಲ್ಲವಲ್ಲ?"

"ಎಲ್ಲಿಂದ ಬಂದರೆ ಏನು ...ನೀನೆ ಆ ಮಾಯಗಾತಿ."

"ನನ್ನನ್ನ ಅವಳು ಹಾಗೆ ಗುರುತು ಹಿಡಿಯಲೇ ಇಲ್ಲ. ಯಾರೋ ದಾಸಿ ಎಂದು ತಿಳಿದುಕೊಂಡಳು."

ಸುರೇಂದ್ರನು ಅವಳ ಮಾತನ್ನು ಕೇಳಿ ಸ್ವಲ್ಪ ದುಃಖಿತನಾಗಿ, "ನ್ಯಾಯವೇ.... ನೀನು ಇರುವ ಲಕ್ಷಣ ನೋಡಿ ಬೇರ ಯಾರು ತಾನೇ ಹಾಗೆ ಅಂದುಕೊಳ್ಳುವುದಿಲ್ಲ ?" ಎಂದನು.

"ಹಾಗಿರುವುದೇ ಸರಿ ಬಿಡಿ..ಹಾಗಿದ್ದಿದ್ದರಿಂದಲೇ ನನ್ನ ಜೀವ ಉಳಿಯಿತು ಇವತ್ತು... ಇಲ್ಲದೆ ಹೋದರೆ ಮುದುಕಿ ಏನುಮಾಡಿಬಿಡು ತ್ತಿದ್ದಳೋ....?"

"ಕೊಂದು ಹಾಕಿ ಬಿಡುತ್ತಿದ್ದಳೇ ?"

"ಹಾಗೆ ಮಾಡಿದರೂ ಮಾಡುತ್ತಿದ್ದಳೇನೋ ?"

"ಹಾಗೇನು....?"

"ನಾನು ಅವಳಿಗೆ ಹೇಳಿದೆ. ಆ ಮಾಯಗಾತಿ ಈಗ ಇಲ್ಲಿ ಇಲ್ಲ ಅಂತ. ಅದಕ್ಕೆ ಅವಳು 'ಬರಲಿ....ಅವಳು .. ತಿಂದುಹಾಕಿ ಬಿಡುತೇನೆ' ಅಂದಳು. ಹಲ್ಲುಕೂಡ ಕಡಿದಳು."

ಸುರೇಂದ್ರನು ನಕ್ಕನು.

"ಆಮೇಲೆ ಕೇಳಿದಳು .. ಆ ಡಾಕಿನಿ ಬಾಬುಗಳಿಗೆ ಮದ್ದುಗಿದ್ದು ಹಾಕಿದಾಳೆಯೇ? ಎಂದು.—ನಾನು ಹೇಳಿದೆ, ಓಹೋ ಮಾಡಿಯೇ ಇದ್ದಾಳೆ ...ಕೂತುಕೋ ಅಂದರೆ ಕೂತುಕೊಳ್ಳುತ್ತಾರೆ, ನಿಲ್ಲು ಅಂದರೆ ನಿಂತು ಕೊಳ್ಳುತ್ತಾರೆ, ಅಂದೆ."

"ಏನು ಹಾಗಾದರೆ, ನೀನು ಹಾಗೆಂದುಕೊಂಡಿದ್ದೀಯೇನು ....... ಹಾಗೆಂತಲೇ?"

"ಅಲ್ಲದೆ ಏನು ಮತ್ತೆ?"

"ಹಾಗೋ....ಆಗಲಿ ನೋಡೋಣ ...ಆಮೇಲೆ?"

"ಆಮೇಲೆ ಅವಳು 'ಮಾಟ, ಗೀಟ ಗೊತ್ತೋ ಅವಳಿಗೆ?' ಎಂದು ಕೇಳಿದಳು. ನಾನು ಅವಳು ಮಲೆಯಾಳದಿಂದ ಕಲಿತುಕೊಂಡು ಬಂದಿದಾಳೆ ಅಂದೆ. ನನಗೂ ಗೊತ್ತು ಅಂದಳು. ಆದರೆ ಗೊತ್ತಾಯಿತು ...ಹೆದರಿ ಬಿಟ್ಟಿದ್ದಳು ಎಂದು. ಕಣ್ಣುಕಟ್ಟು ಬರುತ್ತದೆಯೇ ಅಂದಳು....ಓಹೋ, ಚೆನ್ನಾಗಿ ಬರುತ್ತದೆ ಅಂದೆ"

ಸುರೇಂದ್ರನು ಮತ್ತೆ ಗಟ್ಟಿಯಾಗಿ ನಕ್ಕನು.

"ಆ ಮೇಲೆ ಪಲಾಯನ ಮಾಡಿದಳು ಅಂತ ಕಾಣುತ್ತೆ."

"ಹೂಂ."

"ಮತ್ತೆ ಇಲ್ಲಿಗೆ ಬರುವುದಿಲ್ಲ, ಹಾಗಾದರೆ?"

"ಬರದೇ ಏನು ? ಆದರೆ ಆ ಡಾಕಿನಿಯ ಹತ್ತಿರ ಬರುವುದಿಲ್ಲ. ಬಂದರೆ ನನ್ನ ಹತ್ತಿರ ಬರುತ್ತಾಳೆ."

"ಅವಳಿಗೆ ಇಷ್ಟ ಬಂದವರ ಹತ್ತಿರ ಹೋಗಲಿ, ನೀನು ಮಾತ್ರ ನನ್ನ ಹತ್ತಿರ ಬಾ." ಎಂದು ಸುರೇಂದ್ರನು ಅವಳ ಕೈ ಹಿಡಿದನು.

ಅವಳು ಹತ್ತಿರ ಸರಿಯುತ್ತಲೂ ಅವಳ ಎರಡು ಕೈಗಳನ್ನೂ ಹಿಡಿದು

ಕೊಂಡು ಮೃದುವಾಗಿ "ಮಾಲತೀ, ಹೀಗೆ ಎಷ್ಟು ದಿವಸ ಕಳೆಯಬೇಕೆಂದು ಕೊಂಡಿದ್ದೀಯಾ? ನಿನ್ನ ಈ ವೇಷ ನಾನು ಇನ್ನು ಕಣ್ಣಲ್ಲಿ ನೋಡಲಿಕ್ಕಾಗು ವುದಿಲ್ಲ."

ಮಾಲತಿ ನಕ್ಕು ಮುಖ ತಿರುಗಿಸಿ ಸ್ವಲ್ಪ ನಕ್ಕು "ಒಡವೆ ಹಾಕಿದ ಮಾತ್ರಕ್ಕೆ ರೂಪ ಹೆಚ್ಚಾಗುತ್ತದೇನು?" ಎಂದಳು.

"ನಿನ್ನ ರೂಪಕ್ಕೆ ಮಿತಿಯಿಲ್ಲ. ಅಂತಹ ಮಿತಿಯಿಲ್ಲದ ರೂಪ ಹೆಚ್ಚುವು ದೆಂದರೇನು—ಹೆಚ್ಚಿಸುವುದಕ್ಕೆ ಹೋಗುವುದು ಹುಚ್ಚು. ಆದರೆ ನನ್ನ ತೃಪ್ತಿ ಗೋಸ್ಕರವಾದರೂ "

"ಒಡವೆ ಹಾಕಿಕೊಳ್ಳಬೇಕೇನು?"

"ಹೂಂ."

"ಆಗಲಿ. ಹಾಕೋಣವಂತೆ. ಆದರೆ ಒಡವೆ ಹಾಕಬೇಕೆಂದು ನಿಮಗೇಕೆ ಇಷ್ಟು ಹಠ?"

"ಆಗಲಿ ಹೇಳುತ್ತೇನೆ. ಆದರೆ ನೀನು ಏನೂ ತಿಳಿದುಕೊಳ್ಳದೆ ಹೋದರೆ."

"ಏನೂ ಇಲ್ಲ, ಹೇಳಿ."

"ಏನೇ ...ಇಷ್ಟೇ ನೋಡು. ನಿನ್ನ ಈ ನಿರಾಭರಣ ಸೌಂದರ್ಯ ವಿದೆಯಲ್ಲಾ, ಅದು ಸೂರ್ಯನಂತೆ ಕೋರೈಸುವ ಕಾಂತಿ ...ಹತ್ತಿರ ಬಂದು ಮುಟ್ಟುವುದಕ್ಕೂ ಒಂದು ಬಗೆಯ ಸಂಕೋಚ, ಭಯ. ಹೇಳಿದರೆ ನಗು ತ್ತೀಯೇನೋ . ಒಂದೊಂದು ಸಲ ಅನ್ನಿಸುತ್ತೆ ಹತ್ತಿರ ಕೂತಿದ್ದರೆ— ಏನೋ ಒಂದು ಹೇಳಲಾಗದ ಭಯವಾಗುತ್ತೆ...ಮನಸ್ಸಿಗೆ ಅಷ್ಟು ಸುಖ ವಾಗುವುದಿಲ್ಲ. ನೀನು ಈ ಲೋಕದವಳಲ್ಲ. ನಿನ್ನನ್ನ ಬಲವಂತವಾಗಿ ತಂದು ಕಟ್ಟಿ ಇಲ್ಲಿ ಇಟ್ಟುಕೊಂಡಿರುವ ಹಾಗೆ ಅನ್ನಿಸುತ್ತದೆ... ಅದಕ್ಕೋ ಸ್ಕರವೇ ನಿನ್ನನ್ನ ಒಡವೆಗಳಿಂದ ಅಲಂಕಾರಮಾಡಿ ನಮ್ಮ ಹಾಗೆ ಪಾಮರ ಜನಗಳ ಸ್ವರೂಪಕ್ಕೆ ಇಳಿಸೋಣವೆನ್ನಿಸುತ್ತದೆ ...ಅಷ್ಟೇ...."

ಮಾಲತಿಯು ನಿಶ್ಶಬ್ದವಾಗಿ ತನ್ನ ಸರ್ವಾಂಗವನ್ನೂ ನಿರೀಕ್ಷಿಸಿದಳು. ಎದುರಿಗಿದ್ದ ದೊಡ್ಡ ನಿಲುವುಗನ್ನಡಿಯಲ್ಲಿ ತನ್ನ ಪೂರ್ಣ ಪ್ರತಿಬಿಂಬವನ್ನೂ ನೋಡಿಕೊಂಡಳು. ಅವಳ ಮನಸ್ಸಿಗೂ ಅನ್ನಿಸಿತು. ಅವಳ ರೂಪವು

ಯಥಾರ್ಥವಾಗಿ ಅಷ್ಟು ಉಜ್ವಲವಾಗಿತ್ತು. ಅಷ್ಟು ಪ್ರಕಾಶಮಯ. ಮನಸ್ಸಿನಲ್ಲಿದ್ದ ಅತೀತ ಪುಣ್ಯಸ್ಮೃತಿಯು ಈ ಶರೀರವನ್ನಿನ್ನೂ ಬಿಟ್ಟು ಹೋಗಿಲ್ಲ. ಪವಿತ್ರತೆಯ ಛಾಯೆ ಯಾವುದು ಅವಳಲ್ಲಿ ಇನ್ನೂ ಇತ್ತೋ, ಅತಿ ಉಚ್ಚ ಸೌಜನ್ಯದ ಯಾವ ಅಂಶವು ಅವಳ ನಡೆ ನುಡಿಗಳೆಲ್ಲವನ್ನೂ ಆವರಿಸಿತ್ತೋ, ಅದು ಇನ್ನೂ ಬಿಟ್ಟುಹೋಗಿಲ್ಲ. ಆ ರಾತ್ರಿ, ಆ ನಿಶ್ಶಬ್ದವಾದ ಕೊಠಡಿಯಲ್ಲಿ ಮಾಲತಿಗೆ ಸ್ವಲ್ಪ ಭ್ರಮೆಯಾಯಿತು. ಎದುರಿಗೆ ನಿಲುವು ಗನ್ನಡಿಯಲ್ಲಿ, ಕಳಂಕಿತವಾದ ಮುಖದೊಂದಿಗೆ ಯಾವುದೋ ದೇವಿಯ ಮೂರ್ತಿ ಅದರ ಪಾರ್ಶ್ವದಲ್ಲಿ ಅವಳ ಜೀವನದ ಆರಾಧ್ಯ, ಸುರೇಂದ್ರ ನಾಥನ ಅಕಳಂಕ ದೇವಮೂರ್ತಿ! ವಿಸ್ಮಯದಿಂದ, ಆನಂದದಿಂದ ಮಾಲತಿಯು ಕಣ್ಣುಗಳನ್ನು ಮುಚ್ಚಿದಳು

* * * *

ಮರುದಿನ ಸಂಜೆಯಾಗುತ್ತಲೂ ಸುರೇಂದ್ರನಾಥನು ಮೋಹಕವಾಗಿ ವೇಷಭೂಷಿತನಾಗಿ ಮಾಲತಿಯ ಸಮ್ಮುಖದಲ್ಲಿ ಬಂದು ನಿಂತನು. ಕಂಠ ದಲ್ಲಿ, ಎದೆಯ ತುಂಬ, ವಿಧವಿಧವಾದ ಹೂಗಳ ಮಾಲೆ, ಒಂದು ಕೈಯಲ್ಲಿ ತುರಾಯಿ, ಬೇರೆಯ ಕೈಯಲ್ಲಿ ಮಖಮಲ್ಲಿನ ಒಂದು ಚಿಕ್ಕ ಹಿಡಿಯ ಪೆಟ್ಟಿಗೆ. ಉಟ್ಟಿರುವುದು ರೇಶಿಮೆಯ ವಸ್ತ್ರ, ಕಾಲಿಗೆ ಜರತಾರಿಯ ಚಡಾವು, ಆನಂದ ದಿಂದ ಓಲಾಡುತ್ತಾ, ಸಂಭ್ರಮವಾಗಿ ಮಾಲತಿಯ ಮುಂದೆ ಬಂದು ನಿಂತನು.

ಅವನ ವೇಷಭೂಷಣಗಳನ್ನು ನೋಡಿ ಮಾಲತಿಯು ನಕ್ಕಳು... ಮೂಗಿನ ಮೇಲೆ ಬೆರಳಿಟ್ಟು "ಇದೇನಿದು ವಿಚಿತ್ರ!" ಎಂದಳು.

ಸುರೇಂದ್ರನು ನಕ್ಕು "ಏನು ಹೇಳು, ನೋಡೋಣ" ಎಂದನು.

"ನನಗೆ ಗೊತ್ತಿಲ್ಲ!"

ಸುರೇಂದ್ರನು ಕೃತ್ರಿಮ ಗಂಭೀರಭಾವದಿಂದ—

"ನೀನು ಪೂಜೆ ಮಾಡುತ್ತೀಯೋ?" ಎಂದನು.

"ಮಾಡುತ್ತೇನೆ."

"ಹಾಗಾದರ ನಿನ್ನ ಮನೆಯಲ್ಲಿ ಚಂದನವಿದೆ. ಚಂದನ ತೆಗೆದು ಕೊಂಡುಬಂದು ನನಗೆ ಹಚ್ಚು. ಇವತ್ತು ನನಗೆ ಮದುವೆ."

"ಯಾರೊಂದಿಗೆ ?"

"ಮೊದಲು ಗಂಧ ಹಚ್ಚು....ಆ ಮೇಲೆ ಹೇಳುತ್ತೇನೆ."

ಮಾಲತಿಯು ಕೆಳಗೆ ಹೋಗಿ ಚಂದನ ತಂದಳು. ತಂದು ಸುರೇಂದ್ರನ ಮುಖಕ್ಕೆ, ಕತ್ತಿಗೆ, ಕೈ ಕಾಲುಗಳಿಗೆ ಸವರಿದಳು.

ಸುರೇಂದ್ರನು ಅವಳನ್ನೇ ಪ್ರೇಮಾರ್ದ್ರ ನಯನಗಳಿಂದ ನೋಡುತ್ತಾ "ಇನ್ನೂ ಅರ್ಥವಾಗಲಿಲ್ಲವೇ ?" ಎಂದನು.

ಹಾಗಂದದ್ದೇ ತನ್ನ ಕಂಠದಲ್ಲಿನ ಹೂಮಾಲೆಗಳನ್ನು ತೆಗೆದು ಒಂದೊಂದಾಗಿ ಅವಳ ಕಂಠಕ್ಕೆ ಹಾಕಿದನು. ಮುಖಮಲ್ಲಿನ ಪೆಟ್ಟಿಗೆಯನ್ನು ತೆಗೆದು ನಾನಾ ವಿಧವಾದ ರತ್ನ ಭೂಷಿತ ಒಡವೆಗಳನ್ನು ಹೊರಕ್ಕೆ ತೆಗೆದು ಯಥಾ ಸ್ಥಾನದಲ್ಲಿ, ಯಥಾ ಕ್ರಮದಲ್ಲಿ ಅವಳಿಗೆ ಬಲಾತ್ಕಾರವಾಗಿ ತೊಡಿಸಿದನು. ಮಾಲತಿಯು ಇಡೀ ಜನ್ಮದಲ್ಲಿ ಅಂತಹ ಒಡವೆಗಳನ್ನು ನೋಡಿರಲಿಲ್ಲ. ರೆಪ್ಪೆ ಹೊಡೆಯದೆ ವಿಸ್ಮಯದಿಂದ ಅವುಗಳನ್ನು ನೋಡುತ್ತಾ ಮೈಮರೆತಳು.

ಎಲ್ಲವನ್ನೂ ತೊಡಿಸಿ ಅವಳ ಮುಖ ಚುಂಬನ ಮಾಡಿ ಸುರೇಂದ್ರನು "ನಿನ್ನನ್ನು ಲಗ್ನವಾದ ಹಾಗಾಯಿತು. ಇಷ್ಟು ದಿನಗಳಾದ ಮೇಲೆ ನೀನು ನನ್ನ ಹೆಂಡತಿಯಾದೆ. ಇನ್ನು ಎಲ್ಲೂ ಓಡಿಹೋಗುವ ಹಾಗಿಲ್ಲ. ನಿನಗೆ ಇವತ್ತು ತೊಡಿಸಿದ ಮಾಲೆ ಜನ್ಮ ಜನ್ಮಾವಧಿ ಕಿತ್ತುಹಾಕುವ ಹಾಗಿಲ್ಲ" ಎಂದನು.

ಇಬ್ಬರ ಕಣ್ಣುಗಳಲ್ಲೂ ನೀರು ತುಂಬಿತು. ಇಬ್ಬರೂ ಸ್ವಲ್ಪ ಹೊತ್ತು ಮಾತನಾಡಲಾಗಲಿಲ್ಲ. ಆಮೇಲೆ ಕಣ್ಣೊರಸಿಕೊಂಡು, ಸುರೇಂದ್ರನು "ಇನ್ನು ನಡೆ, ಮನೆಗೆ ಹೋಗೋಣ. ನಿನ್ನ ಸಂಸಾರದಭಾರ ನೀನು ವಹಿಸಿಕೋ...ಜೀವನವೆಲ್ಲಾ ಚಿರಸುಖಿಯಾಗಿರು ಎಂದು ಆಶೀರ್ವಾದ ಮಾಡುತ್ತೇನೆ" ಎಂದನು.

ಮಾಲತಿಯು ತಕ್ಷಣ ಅವನ ಕಾಲಿಗೆ ಪ್ರಣಾಮಮಾಡಿ ಪುನಃ ಹತ್ತಿರ ಕೂತಳು. ಕಣ್ಣಲ್ಲಿ ಬಿಡದೆ ನೀರು ಸುರಿಯುತ್ತಲೇ ಇತ್ತು. ನೂರುಸಲ ಒರೆಸಿಕೊಂಡರೂ, ಮತ್ತೆ ನೂರುಸಲ ತುಂಬಿಕೊಂಡು ಬಂತು. ತಡೆಯಲಾಗಲಿಲ್ಲ. ಸುರೇಂದ್ರನಾಥನು ನೋಡಿ ಅತ್ಯಂತ ಆದರದಿಂದ "ಮಾಲತಿ, ಇವತ್ತು ನಿನ್ನ ತಾಯಿ ತಂದೆಗಳ ನೆನವಾಗುತ್ತದೆ, ಅಲ್ಲವೇ ?"

ಮಾಲತಿಯು ತಲೆಯಲ್ಲಾಡಿಸಿ "ಹೂಂ" ಎಂದಳು. ಸುರೇಂದ್ರನು ಹೇಳತೊಡಗಿದನು.

"ನನಗೆ ಯಾವುದು ಇಷ್ಟವಿತ್ತೊ ಅದಕ್ಕೆ ನೀನೇ ಅಡ್ಡಿ ತಂದೆ. ನಾನು ಮನಸ್ಸು ಮಾಡಿದ್ದೆ, ಇನ್ನು ಇವೇ ರೀತಿಯಲ್ಲಿ ನಿನ್ನನ್ನು ಇಟ್ಟಿರಕೂಡ ದೆಂದು ಎಂದು ನಿನ್ನನ್ನು ಪಡೆದೆನೋ · ಅಂದೇ ...ಪ್ರಕಾಶವಾಗಿ ಇವಳನ್ನು ಲಗ್ನವಾಗಬೇಕು. ಮತ್ತೆ ಸಂಸಾರಿಯಾಗಬೇಕು. ನಿನ್ನ ತಂದೆ ತಾಯಿಗಳನ್ನು ಇಲ್ಲಿಗೆ ಕರೆಸಬೇಕು .ಜನ ಸಾವಿರ ಪ್ರಕಾರ ಮಾತಾಡಿಕೊಳ್ಳಲಿ · ಆದರೆ ನಾನು ನಿಜವಾಗಿ ಸುಖಿಯಾಗುತ್ತೇನೆ. ಹೀಗೆಂದುಕೊಂಡು ಎಷ್ಟೋ ಆಸೆ ಯಾಗಿದ್ದೆ" ಎಂದು ದೀರ್ಘ ನಿಶ್ವಾಸಬಿಟ್ಟನು ...ಮತ್ತೆ "ಆ ಆಸೆ ಈಗ ನಿರಾಸೆಯಾಯಿತು" ಎಂದನು. ಮಾಲತಿ ಮಾತಾಡಲಿಲ್ಲ. ಸುರೇಂದ್ರನು ಅವಳ ಕೈಹಿಡಿದು "ಹೋಗಲಿ, ನಡೆ, ಮನೆಗೆ ಹೋಗೋಣ" ಎಂದನು.

ಮಾಲತಿ ಆಶ್ಚರ್ಯದಿಂದ

"ಎಲ್ಲಿಗೆ ?" ಎಂದಳು.

"ನಿನ್ನ ಮನೆಗೆ! ನಾನಿರುವ ಕಡೆ."

"ಇದು ನಮ್ಮ ಮನೆ ಅಲ್ಲವೇ ಹಾಗಾದರೆ ?"

"ಇರಬಹುದು. ಆದರೆ ನೀನು ಅಲ್ಲಿಗೆ ಬರುವುದಿಲ್ಲವೇ ?"

"ಇಲ್ಲ."

ಸುರೇಂದ್ರನು ಅವಳ ದೃಢ ಸ್ವರವನ್ನೂ ಅವಳ ಗಂಭೀರ ಮುಖ ಭಾವವನ್ನೂ ಗ್ರಹಿಸಿ ಸ್ವಲ್ಪ ಹೊತ್ತು ಸುಮ್ಮನಿದ್ದು "ನನಗೆ ಗೊತ್ತು, ನೀನು ಏನು ಮಾಡಿದರೂ ಸೋಲುವುದಿಲ್ಲವೆಂದು" ಎಂದು ನಿಶ್ವಾಸಬಿಟ್ಟನು. ಮಾಲತಿಯು ಪ್ರೀತಿಯಿಂದ ಅವನ ಕಂಠವನ್ನಾಲಂಗಿಸಿ ಅವನ ತಲೆಯನ್ನು ತನ್ನ ಕೋಮಲವಾದ ಕೈಯಿಂದ ನೇವರಿಸಿ ಅವನ ಮುಖವನ್ನೇ ಪ್ರೇಮ ದಿಂದ, ಕೃತಜ್ಞತೆಯಿಂದ ನೋಡುತ್ತಾ ಕುಳಿತಳು.

* * * *

# ೧೪

ದುಃಖದ ದಿನಗಳು ಕಳೆಯುತ್ತವೆ. ಹೇಗಾದರೂ ಆಗಲಿ, ಅವು ಕಳೆಯುತ್ತವೆ. ದುಃಖ, ಎಷ್ಟೇ ನಿಧಾನವಾಗಿಯಾದರೂ, ಹಳಸುತ್ತಾ ಬರುತ್ತದೆ. ಅದು ನಿಯಮ. ಇಲ್ಲದೆ ಹೋದರೆ ಮನುಷ್ಯರು ಬದುಕುವುದು ಹೇಗೆ? ದುಃಖ ಹಳಸಿ ಮರೆವಿನ ತೆರೆಯ ಹಿಂದೆ ಅಡಗಿದರೆ ತಾನೇ ಮನುಷ್ಯರು ಹೋದ ಧೈರ್ಯವನ್ನು ಪಡೆದು ತಮ್ಮ ತಮ್ಮ ಕರ್ತವ್ಯಗಳಲ್ಲಿ ನಿರತರಾಗುವುದು. ಮತ್ತೆ ಹೊಸ ದುಃಖಗಳನ್ನು ತಡೆಯುವುದಕ್ಕೂ ಬಲವನ್ನು ಪಡೆಯುವರು.

ಮಾಧವನ ಸಾವಾದ ಮೇಲೆ ಶುಭದಾ ಕೂಡಾ ಹಾಗೆಯೇ ದಿನಗಳನ್ನು ಕಳೆದಿದ್ದಳು. ಆಗ ವರ್ಷಾಕಾಲ. ಆಕಾಶದ ತುಂಬ ಸದಾ ಮೋಡಗಳು. ಹೊರಗೆ ಹಾದಿಯೆಲ್ಲಾ ಕೆಸರು, ಕೊಳಕು. ಈಗ ಅದು ಹೋಗಿ ಶರತ್ಕಾಲ ಬಂದಿದೆ. ಅಂದಿನ ಮೋಡಗಳ ಕತ್ತಲಿಲ್ಲ. ಅಂದಿನ ಕೆಸರು, ಕೊಳಕು ಇಲ್ಲ. ರಸ್ತೆಗಳೂ, ನದೀಘಟ್ಟವೂ ಸೂರ್ಯನ ಬೆಳಕಿನಲ್ಲಿ ಹೊಳೆಯುತ್ತಿವೆ. ಆಕಾಶದಲ್ಲಿ ಅಲ್ಲಲ್ಲಿ ಒಂದೆರಡು ಶುಭ್ರವಾದ ಬಿಳಿಯ ಮೋಡಗಳು ಉದ್ದೇಶವಿಲ್ಲದೆ ಎಲ್ಲಿಗೋ ಹೋಗುತ್ತಿವೆ. ಅಂದು ಪ್ರಕೃತಿಯು ನಿತ್ಯ ಮ್ಲಾನಮುಖವನ್ನು ಹೊಂದಿದ್ದಳು. ನಿತ್ಯ ಅಳುವಿನ ಪ್ರವಾಹ. ಇಂದು ಎಷ್ಟೋ ಹಸನ್ಮುಖಿಯಾಗಿದ್ದಾಳೆ. ಆಗಾಗ ಸ್ವಲ್ಪ ಹೊತ್ತು ಆ ಮುಖ ಮಲಿನವಾಗುವುದು. ಆದರೂ ಕ್ಷಣಹೊತ್ತು ಮಾತ್ರ. ಪುನಃ ಕಣ್ಣೊರಸಿಕೊಂಡು ನಗುಮುಖಿಳಾಗುವಳು. ಒಂದೇ ಬಗೆಯಾಗಿದ್ದರೆ ಜೀವನ ಶೋಭಿಸುವುದಿಲ್ಲವೆಂದು ಪ್ರಕೃತಿದೇವಿಗೂ ಗೊತ್ತು. ಪರಿವರ್ತನವಿಲ್ಲದೆ ಪ್ರಪಂಚ ನಡೆಯುವುದಿಲ್ಲವೆಂದು ಎಲ್ಲರಿಗೂ ಗೊತ್ತು. ಆದರೆ ಶುಭದಾಳ ಸೃಷ್ಟಿಕರ್ತನಿಗೆ ಮಾತ್ರ ಗೊತ್ತಿಲ್ಲ. ಹುಟ್ಟಿದಲಾಗಾಯಿತು ಇದುವರೆಗೆ ಅವಳ ಜೀವನ ಒಂದೇ ಬಗೆ. ಶುಭದಾಳ ಮನಸ್ಸಿಗೆ ಇದು ಅನ್ನಿಸದೆ ಇಲ್ಲ. ಈ ಭಾವನೆ ಶ್ರೀ ಸದಾನಂದ ಚಕ್ರವರ್ತಿಗೂ ಬಂದಿತ್ತು.

ಗ್ರಾಮದ ಹತ್ತು ಜನ ನೋಡುತ್ತಾರೆ. ಶುಭದಾ ಸ್ನಾನ ಘಟ್ಟಕ್ಕೆ

ಅದೇ ಮ್ಲಾನ ಮುಖದಿಂದ ಹೋಗುತ್ತಾಳೆ. ಕೊಡವನ್ನು ಕಂಕುಳಲ್ಲಿಟ್ಟು ಕೊಂಡು, ಗಂಭೀರಳಾಗಿ, ಮೌನವಾಗಿ ಹೋಗುತ್ತಾಳೆ. ಮನೆಗೆಲಸ ಗಳನ್ನು ಹೇಗೋ ಮಾಡುತ್ತಾಳೆ. ಆದರೆ ದಿನದಿನಕ್ಕೂ ಕ್ಷೀಣವಾಗುತ್ತಿ ದ್ದಾಳೆ. ಮುಖವು ದಿನದಿನಕ್ಕೂ ವಿಷಾದದಿಂದ ಮಂಕಾಗುತ್ತಿವೆ. ವಯ ಸ್ಸಾದ ಹೆಂಗಸರು "ಹುಡುಗಿ ಇನ್ನು ಹೆಚ್ಚು ದಿನ ಬದುಕುವುದಿಲ್ಲ" ಎಂದು ಕೊಳ್ಳುತ್ತಾರೆ. ಸಮವಯಸ್ಕ ಹೆಂಗಸರು "ಇಂಥಾ ಗ್ರಹಚಾರ, ಅಬ್ಬಾ, ಶತ್ರುಗಳಿಗೂ ಬೇಡವಪ್ಪಾ .ಅಯ್ಯೋ" ಎಂದುಕೊಳ್ಳುತ್ತಾರ. ಆದರ ಅವಳ ಹಿಂದುಗಡೆ ಮಾತ್ರ. ಅವಳ ಎದುರಿಗೆ ಯಾರೂ 'ಅಯ್ಯೋ' 'ಆಹಾ' ಎಂಬ ಪರಿತಾಪವಚನಗಳನ್ನಾಡ ಹೋಗುವುದಿಲ್ಲ. ಅವಳು ಎದುರಿಗೆ ಬಂದರೆ ಯಾರಿಗೂ ಏನೂ ಮಾತನಾಡಲು ತೋಚುವುದಿಲ್ಲ, ಮೌನವಾಗು ವರು.

ಶುಭದಾ ನಗುವುದನ್ನೇ ಮರೆತು ಹೋಗಿರುವಳು; ಅಳುವುದನ್ನೂ ಮರೆತು ಹೋಗಿರುವಳು. ಅತ್ತರ ಅವಳಿಗೆ ಬಹಳ ನೋವಾಗುವುದು. ಹಿಂದಿನ ಕಥೆಯನ್ನು ನೆನೆಸಿಕೊಂಡರೆ ಅವಮಾನವಾಗುವುದು. ಮನೆ ಈ ನಡುವೆ ಸಂಪೂರ್ಣವಾಗಿ ನಿರ್ಜನವಾಗಿದೆ. ಛಲನಾ ಗಂಡನ ಮನೆಗೆ ಹೋಗಿದ್ದಾಳೆ. ರಾಸಮಣಿ ಸಾಧಾರಣವಾಗಿ ದಿನವೆಲ್ಲಾ ಹೊರಗೆ ಕಳೆಯು ವಳು. ಇನ್ನು ಹಾರಾಣಸೋ...

ಅವನು ಈ ನಡುವೆ ಸ್ವಲ್ಪ 'ಒಳ್ಳೆಯ ಹುಡುಗ'ನಾಗಿದ್ದಾನೆ. ನಿತ್ಯವೂ ಎರಡು ಹೊತ್ತೂ ಹೆಂಡತಿಯ ಬಳಿ ಮೊದಲಿನಂತೆ ಆಳೆ, ಎರಡಾಣೆ ತೆಗೆದು ಕೊಂಡು ಹೋಗುತ್ತಾನೆ. ರಾತ್ರಿ ಹೇಗೋ ಮನೆ ಸೇರುತ್ತಾನೆ. ಶುಭದಾ ಮಧ್ಯಾಹ್ನವೆಲ್ಲಾ ಅಡುಗೆಯ ಮನೆಯ ಜಗುಲಿಯ ಮೇಲೆ ಸುಮ್ಮನೆ ಬಿದ್ದು ಕೊಂಡಿರುವಳು. ಕತ್ತಲಾಗುವ ಸಮಯದಲ್ಲಿ ಏಳುವಳು. ನದಿಗೆ ಹೋಗಿ ನೀರು ತರುವಳು, ಮನೆಗೆ ಬಂದು ದೀಪ ಹಚ್ಚುವಳು. ಅಡುಗೆ ಮಾಡು ವಳು. ಶ್ರದ್ಧೆಯಿಂದ ಒಂದು ತಟ್ಟೆ ಅನ್ನ ಸಿದ್ಧಮಾಡಿ ಗಂಡನಿಗೆ ಪ್ರತ್ಯೇಕ ವಾಗಿಡುವಳು. ಸದಾನಂದನಿಗೆ ಬಡಿಸುವಳು—ಹಿಂದೆ ಬೆಳಗಾಗುವುದು, ಸಂಜೆಯಾಗುವುದು.

ಒಂದುದಿನ, ನಿತ್ಯದಂತೆ ಶುಭದಾ ಮಧ್ಯಾಹ್ನ ಅಡುಗೆಯ ಮನೆಯಲ್ಲಿ

ಮಲಗಿದ್ದಳು. ಹೊರಗಡೆ ಯಾರೋ "ಅಮ್ಮಣ್ಣೀ" ಎಂದು ಕೂಗಿದಂತಾಯಿತು.

ಶುಭದಾ ಮೊದಲು ಉತ್ತರ ಕೊಡಲಿಲ್ಲ.

ಮತ್ತೆ ಯಾರೋ ಗಂಡಸು "ಅಮ್ಮಣ್ಣೀ, ಮನೆಯಲ್ಲಿ ಯಾರೂ ಇಲ್ಲವೇ ಅಮ್ಮಣ್ಣೀ ?" ಎಂದಂತಾಯಿತು.

ಶುಭದಾ ಎದ್ದು ಹೊರಗೆ ಬಂದು "ಯಾರಪ್ಪಾ ?" ಎಂದಳು.

"ನಾನಮ್ಮಾ, ಪೋಸ್ಟ್ ಪ್ಯಾದೆ. ನಿಮಗೆ ಕಾಗದ ಇದೆ."

ಶುಭದಾ ವಿಪರೀತ ಆಶ್ಚರ್ಯದಿಂದ "ನನಗೆಲ್ಲಿಯದಪ್ಪಾ ಕಾಗದ?" ಎಂದು ಹತ್ತಿರ ಹೋಗಿ "ಎಲ್ಲಿ ಕೊಡು" ಎಂದಳು

"ಹಾಗೆ ಕೊಡುವುದಿಲ್ಲ ಅಮ್ಮಣ್ಣೀ.... ಇದು ರಿಜಿಸ್ಟರಾಗಿದೆ. ಶ್ರೀಮತಿ ಶುಭದಾ ದೇವಿಗೆಂದು. ಅವರ ರುಜುವಾಗಬೇಕು."

ಶುಭದಾ ರಿಜಿಸ್ಟರಿನ ಅರ್ಥ ಅಷ್ಟು ಆಗದೆ "ಆಗಲಿ ಕೊಡು, ನನ್ನ ಹೆಸರೇ ಶುಭದಾ" ಎಂದಳು.

ಪೋಸ್ಟ್ ಪ್ಯಾದೆಯು ಕಾಗದ ತೆಗೆದು ಅದರ ಜತೆಯಲ್ಲಿ ಇನ್ನೊಂದು ಚಿಕ್ಕ ಚೀಟಿಯನ್ನು ತೋರಿಸಿ "ಇಲ್ಲಿ ಸಹಿ ಮಾಡಿ" ಎಂದನು.

ಶುಭದಾಗೆ ಬರೆಹ ಗೊತ್ತು. "ಎಲ್ಲಿ ಲೇಖನಿ ಕೊಡು" ಎಂದಳು.

ಅವನು ನಕ್ಕು, "ನಾನೆಲ್ಲಿಂದ ತರಲಮ್ಮ ಲೇಖನಿ ? ನಿಮ್ಮ ಮನೆಯಲ್ಲಿ ಲೇಖನಿ ಮಸಿಕುಡಿಕೆ ಇರುವುದಿಲ್ಲವೇ ?" ಎಂದನು.

ಶುಭದಾ 'ಇರಲಿ, ನೋಡುತ್ತೇನೆ' ಎಂದು ಮನೆಯ ಕೆಳಭಾಗವೆಲ್ಲಾ ಹುಡುಕಿ ಒಂದು ಅರ್ಧ ಮುರಿದ ಮಸಿಕುಡಿಕೆಯನ್ನು ಕಂಡಳು. ಮಸಿಯೆಲ್ಲಾ ಒಣಗಿ ಹೋಗಿತ್ತು. ಸ್ವಲ್ಪ ನೀರು ಹಾಕಿ ಅದನ್ನೇ ಹೇಗೋ ಮಸಿಯನ್ನಾಗಿ ಮಾಡಿಯಾಯಿತು. ಆದರೆ ಲೇಖನಿಯೆಲ್ಲಿಂದ ತರುವುದು?

ಹಠಾತ್ತಾಗಿ ಶುಭದಾ ಮಾಧವನ ಓದು ಬರೆಹದ ನೆನಪಾಗಿ ಮೇಲೆ ಹೋದಳು. ಮಹಡಿಯ ಮೇಲೆ ಒಂದು ಕೋಣೆಯಲ್ಲಿ ಒಂದು ಚಿಕ್ಕ ಮರದ ಪೆಟ್ಟಿಗೆಯ ಮೇಲೆ ಕೂತು ಮಾಧವನೂ, ಛಲನಾಳೂ ಓದಿಕೊಳ್ಳುತ್ತಿದ್ದ ವಾಡಿಕೆ. ಲಲನಾ ಅವರಿಬ್ಬರಿಗೂ ಪಾಠ ಹೇಳಿಕೊಡುತ್ತಿದ್ದಳು. ಪಕ್ಕದ ಗೋಡೆಯ ಅಲಮಾರಿನಲ್ಲಿ ಅಲ್ಲಲ್ಲಿ ಚದರಿ ಬಿದ್ದಿವೆ ಪುಸ್ತಕದ ರಾಶಿ

....ಕೆಲವು ಫಲನಾಳದೂ, ಕೆಲವು ಮಾಧವನದೂ; ಮತ್ತೆ ಕೆಲವು ಲಲನಾಳು ಓದುತ್ತಿದ್ದ ಕಾದಂಬರಿಗಳು. ಅವಳ ಹಾಡಿನ ಪುಸ್ತಕಗಳೂ, ಕಸೂತಿಯ ಪುಸ್ತಕಗಳೂ ಅನಾಯಕವಾಗಿ ಬಿದ್ದಿವೆ. ಶುಭದಾ ಈ ಕಡೆ ಬಹಳ ದಿವಸ ದಿಂದಲೂ ಬಂದಿಲ್ಲ. ಲಲನಾ ಹೋದಲಾಗಾಯಿತು ಈ ದಿಕ್ಕಿನಲ್ಲಿ ತಲೆ ಹಾಕಿಲ್ಲ. ಇದು ಲಲನಾಳ ಕೊರಡಿ. .

ಒಂದು ಪಕ್ಕದಲ್ಲಿ ಮಾಧವನ ಶಾಲೆಯ ಚೀಲ. ಚೀಲವನ್ನು ತೆಗೆದು ನೋಡಿದಳು. ಒಂದು ಮುರಿದ ಸ್ಲೇಟು ಒಂದು ಮಾಸಿದ ಬಂಗಾಳಿಯ ವಾಚನ (ರೀಡರು), ಏಳೆಂಟು ನವಿಲು ಗರಿಗಳು, ಸಾಕ್ಸ್ಪ್ರೆದು ಬಳಪಗಳು, ಒಂದು ಡಜನ್ ಆಡುವ ಗೋಲಿಗಳು, ಆಂಗ್ಲ, ಬಂಗಾಳಿಯ ಮಾಸ ಪತ್ರಿಕೆ ಗಳಿಂದ ಹರಿದು ಕೂಡಿಸಿದ್ದ ಕೆಲವು ಬಣ್ಣದ ಚಿತ್ರಗಳು, ಒಂದೊಂದಾಗಿ ತೆಗೆದು ಎಲ್ಲವನ್ನೂ ನೋಡಿದಳು. ಟಪ್ ಎಂದು ಬಹು ದೊಡ್ಡ ನೀರಿನ ಬಿಂದುವೊಂದು ಅವಳ ಕಣ್ಣಿಂದ ಬಿತ್ತು. ಪ್ರಚಂಡ ರಭಸದಿಂದ ಮೇಲೆ ಉಕ್ಕಿ ಬರುತ್ತಿದ್ದ ದುಃಖವನ್ನು ಗಂಟಲಿನಲ್ಲಿಯೇ ತಡೆದುಕೊಂಡಳು. ಹೃದಯವೇ ನುಚ್ಚು ನೂರಾಗುವಂತಿತ್ತು. ಅಸಾಧಾರಣ ಶಕ್ತಿಯಿಂದ ಸ್ಥೈರ್ಯ ತಂದುಕೊಂಡು ಮತ್ತೆ ಎಲ್ಲ ಸಾಮಾನುಗಳನ್ನೂ ಜೋಪಾನವಾಗಿ ಚೀಲದಲ್ಲಿ ಸೇರಿಸಿದಳು. ಅವೆಲ್ಲವನ್ನೂ ಮಾಧವನು ಬಹಳ ಪ್ರಯಾಸದಿಂದ ಶೇಖರಿಸಿದ್ದನು. ಯಾರೂ ಅವುಗಳನ್ನು ಮುಟ್ಟಲು ಬಿಡುತ್ತಿರಲಿಲ್ಲ. ಅಲ ಮಾರಿನ ಜೇಬೊಂದು ಕಡೆ ಲಲನಾಳು ಬರೆಯುತ್ತಿದ್ದ ಲೇಖನಿಯೊಂದು ಸಿಕ್ಕಿತು.

ಕೆಳಗೆ ಬಂದು ಶುಭದಾ ಕಾಗದವನ್ನು ತೆಗೆದುಕೊಂಡಳು. ಒಳಗೆ ಹೋಗಿ ಬಿಚ್ಚಿನೋಡಿದರೆ ಅದರಲ್ಲಿ ಪತ್ರವೇನೂ ಇರಲಿಲ್ಲ. ಅದರ ಬದಲು ಐದು ಹತ್ತು ರೂಪಾಯಿ ನೋಟುಗಳು. ಖಂಡಿತ ಎಲ್ಲೋ ತಪ್ಪಾಗಿದೆ. ಪೋಸ್ಟ್ ಪ್ಯಾದೆಯನ್ನು ಕೂಗಲು ಬೇಗ ಹೊರಗೆ ಬಂದಳು. ಅವನು ಬಹು ದೂರ ಹೊರಟು ಹೋಗಿದ್ದಾನೆ. ಹೆಂಗಸು, ಗಟ್ಟಿಯಾಗಿ ಕೂಗಿ ಕರೆಯೋಣವೆಂದರ. ನೋಟುಗಳನ್ನು ತೆಗೆದುಕೊಂಡು ಮನೆ ಯೊಳಗೆ ಬಂದಳು. ಶುಭದಾ ಮನಸ್ಸಿನಲ್ಲಿ ಅಂದುಕೊಂಡಳು. ಪೋಸ್ಟ್ ಪ್ಯಾದೆಯೇ ತಪ್ಪು ಕಂಡುಹಿಡಿದು ವಾಪಸು ಬರುತ್ತಾನೆಂದು. ಆದರ

ಅವನು ಬರಲಿಲ್ಲ. ಆ ದಿನವಲ್ಲ, ಮರುದಿನವೂ ಬರಲಿಲ್ಲ. ಆಗ ಅವಳು ಸದಾನಂದನಿಗೆ ಹೀಗಾಗಿದೆಯೆಂದು ತಿಳಿಸಿದಳು. ಸದಾನಂದನು ಲಕೋಟೆಯನ್ನು ನೋಡಿ ಇದು ತಪ್ಪೆಂದು ಹೇಗೆ ಹೇಳುವುದಕ್ಕಾಗುತ್ತದೆ? ವಿಳಾಸ ನೋಡಿದರೆ ಶುಭದಾದೇವಿ, c/o ಹಾರಾಣ ಮುಖರ್ಜಿ, ಎಂದಿದೆ. ಈ ಗ್ರಾಮದಲ್ಲಿ ಶುಭದಾದೇವಿ ಎಂಬ ಹೆಸರು ಬೇರೆ ಯಾರಿಗೂ ಇಲ್ಲ. ಅಲ್ಲದೆ ಹಾರಾಣಮುಖೋಪಾಧ್ಯಾಯರ ಹೆಸರು ಬೇರೆ....ಆದರೆ ಕಲಿಕತ್ತೆಯಲ್ಲಿ ನಿಮಗೆ ಬೇಕಾದವರು ಯಾರಿದ್ದಾರೆ ?" ಎಂದನು.

"ಕಲಿಕತ್ತೆಯಲ್ಲಿ ಅಂತಹವರು ಯಾರೂ ಇಲ್ಲಪ್ಪ."

ಮರುದಿನ ಸದಾನಂದ ಅಂಚೆಯ ಕಛೇರಿಯಲ್ಲಿ ವಿಚಾರಿಸಿದನು. ಮನೆಗೆ ಬಂದು ಶುಭದಾಳಿಗೆ "ಕಲಿಕತ್ತೆಯಿಂದ ಅಘೋರನಾಥಬಸು, ವಕೀಲ್—ಇವರು ಈ ಹಣ ನಿಮಗೆ ಕಳುಹಿಸಿದಾರೆ" ಎಂದನು.

ಶುಭದಾ ವಿಸ್ಮಿತಳಾಗಿ "ಆ ಹೆಸರಿನವರ್‍ಯಾರೂ ನನಗೆ ಗೊತ್ತಿಲ್ಲಪ್ಪ ." ಎಂದಳು.

"ಹಾಗಾದರೆ ?"

"ನೀನೇ ಏನಾದರೂ ಮಾಡಪ್ಪ, ತೋಚಿದ್ದು"

ಸದಾನಂದನು ನಕ್ಕು "ಇನ್ನು ಮಾಡುವುದೇನಿದೆ? ಹಣ ನಿಮಗೆ ಬೇಕಿಲ್ಲವೆ ಹೋದರ ವಾಪಸು ಮಾಡಬೇಕು ಅಷ್ಟೇ" ಎಂದನು.

"ಅಪ್ಪಾ, ಸದಾನಂದ, ಮಕ್ಕಳು ಉಪವಾಸವಾಗಿದ್ದಾಗಲೂ ಕೂಡ ಬಹುಶಃ ಈ ಹಣ ನಾನು ತೆಗೆದುಕೊಳ್ಳುತ್ತಿರಲಿಲ್ಲವೋ ಏನೋ. ಈಗ ಯಾರಿಗೋಸ್ಕರ ತೆಗೆದುಕೊಳ್ಳಲಿ ? ನೀನೇ ಹೇಳು. ಈ ಹಣ ನಮ್ಮ ಹಣವಲ್ಲ. ಹೇಗಾದರೂ ಎಲ್ಲಿಂದ ಬಂತೋ ಅಲ್ಲಿಗೇ ತಲುಪಿಸಿಬಿಡು."

ಸ್ವಲ್ಪ ಹೊತ್ತು ಯೋಚಿಸಿ ಸದಾನಂದನು "ನಾನು ಕಲಿಕತ್ತೆಗೆ ಹೋಗಿ ವಿಚಾರಿಸಿಕೊಂಡು ಬರುತ್ತೇನೆ. ಸದ್ಯಕ್ಕೆ ರೂಪಾಯಿ ನಿಮ್ಮ ಹತ್ತಿರವೇ ಇರಲಿ. ವಾಪಸು ಮಾಡಬೇಕೆಂದು ಮನಸ್ಸುಮಾಡಿದ ಮೇಲೆ ಹಾಗೆಯೇ ಮಾಡೋಣ" ಎಂದನು.

"ಇಲ್ಲಪ್ಪಾ, ಹಣ ನೀನೇ ಸಂಗಡ ತೆಗೆದುಕೊಂಡು ಹೋಗು. ಹಿಂದು ಮುಂದು ನೋಡುವುದೇನು ಇನ್ನು. ಖಂಡಿತ ಕೊಟ್ಟೇ ಬಿಡು. ಬಹುಶಃ

ಅವರು ಇನ್ನು ಯಾರಿಗೋ ಕಳುಹಿಸಬೇಕೆಂದಿದ್ದು ಅಪ್ಪಿತಪ್ಪಿ ನಮ್ಮ ಅಡ್ರೆಸ್ಸು ಬರೆದುಬಿಟ್ಟಿದ್ದಾರೇನೋ!"

"ಸರಿ, ಹಾಗಾದರೆ ಅಲ್ಲಿಯೇ ಹೋಗಿ ಅದನ್ನು ತಿಳಿದುಕೊಂಡೇ ಬಂದರಾಯಿತು."

"ಹಾಗೇ ಮಾಡು. ಆದಷ್ಟು ಬೇಗ."

* * * *

# ೧೫

ಪ್ರಶಸ್ತವಾದ ತಮ್ಮ ಕಛೇರಿಯಲ್ಲಿ ವಕೀಲ್‌ಬಾಬು ಅಘೋರನಾಥ್ ಬಸುಗಳು ಕೂತಿದ್ದಾರೆ. ಎದುರು ಮೇಜಿನ ಪಕ್ಕದಲ್ಲಿ ಕುರ್ಚಿಯ ಮೇಲೆ ನಾರಾಯಣಪುರದ ಜಮೀನ್ದಾರರು, ಸುರೇಂದ್ರನಾಥಬಾಬು ಕೂತಿದ್ದಾರೆ. ಇಬ್ಬರೂ ವ್ಯಸ್ತಭಾವದಿಂದ ಜಮೀನ್ದಾರರ ಮೊಕದ್ದಮೆಯೊಂದನ್ನು ಚರ್ಚೆಮಾಡುತ್ತಿದ್ದಾರೆ.

ಸ್ವಲ್ಪ ಹೊತ್ತು ಸುಮ್ಮನಿದ್ದ ಸುರೇಂದ್ರನಾಥನು ಮುಖವೆತ್ತಿ "ಹಾಗೆಂದರೆ, ನಿಮ್ಮ ಅಭಿಪ್ರಾಯ, ನಾನು ಈ ಮೊಕದ್ದಮೆ ಗೆಲ್ಲುವುದಕ್ಕೆ ಸಾಧ್ಯವಿಲ್ಲವೆಂದು ತಾನೇ ?" ಎಂದನು.

"ಈಗಲೇ ಹಾಗೆಂದು ಖಂಡಿತವಾಗಿ ಹೇಳಲು ಸಾಧ್ಯವಿಲ್ಲ."

"ಯಾಕಾಗುವುದಿಲ್ಲ. ಈ ಮೊಕದ್ದಮೆಯಲ್ಲಿ ನಾನು ಸೋಲುತ್ತೇನೆಂದು ನನಗೆ ಈಗಾಗಲೇ ಗೊತ್ತು."

"ಆದರೆ ಹೈ ಕೋರ್ಟಿಗೂ ಮೇಲೆ ಅಪೀಲು ಹೋಗಬಹುದಲ್ಲ ?"

"ಇರಬಹುದು. ಆದರೆ ಅಷ್ಟು ದೂರ ಹೋಗುವುದಕ್ಕೆ ನನಗೆ ಇಷ್ಟವಿಲ್ಲ."

"ಏನು ಹಾಗೆಂದರೆ. ಮಾಲಪುರದ ಆಸ್ತಿ ಬಿಡುತ್ತೀರೇನು ?"

"ಬಿಡದೇ ಹೋದರೆ ಬೇರೆ ದಾರಿ ಏನು ?"

"ನಿಮ್ಮ ಜಮೀನ್ದಾರಿಯ ವರಮಾನವೇ ಬಹಳ ಕಡಿಮೆಯಾಗಿ ಬಿಡುತ್ತೆ."

"ಆಗುತ್ತೆ, ಗೊತ್ತು. ಅರ್ಧಕ್ಕಿಂತ ಹೆಚ್ಚಾಗಿಯೇ ಹೋಗುತ್ತದೆ."

ಅಘೋರಬಾಬುಗಳು ಮೌನವಾದರು. ಅವರ ಮನಸ್ಸಿಗೂ ವ್ಯಥೆಯಾಗಿತ್ತು. ನಾಳೆಯಲ್ಲ, ನಾಡಿದ್ದು, ಸುರೇಂದ್ರನು ಹೇಳಿದಂತೆಯೇ ಆಗುತ್ತದೆ.

ಆ ಸಮಯದಲ್ಲಿ ಭೃತ್ಯನೊಬ್ಬನು ಬಂದು "ಯಾರೋ ಹೊರಗಡೆ ನಿಂತಿದ್ದಾರೆ, ನಿಮ್ಮನ್ನು ಕಾಣಬೇಕಂತೆ" ಎಂದು ವಕೀಲರಿಗೆ ಹೇಳಿದನು.

"ಯಾರು ?"

"ಗೊತ್ತಿಲ್ಲ. ಯಾರೋ ಬ್ರಾಹ್ಮಣ ಪಂಡಿತರಂತೆ ಕಾಣುತ್ತದೆ."

"ಹಾಗಿದ್ದರೆ ಅವರಿಗೆ—ಈಗ ಪುರಸೊತ್ತಿಲ್ಲ, ಎಂದು ಹೇಳಿ ಕಳುಹಿಸಿ ಬಿಡು."

ಸ್ವಲ್ಪ ಹೊತ್ತಾದ ಮೇಲೆ ಭೃತ್ಯನು ಹಿಂದಿರುಗಿ ಬಂದು "ಅವರು ಹೋಗಲಿಷ್ಟಪಡುವುದಿಲ್ಲ. ಬಹಳ ಜರೂರು ಕೆಲಸವಿದೆಯೆಂದು ಹೇಳು ತ್ತಾರೆ" ಎಂದನು.

ಅಘೋರಬಾಬುಗಳಿಗೆ ಕೋಪ ಬಂತು. ಸುರೇಂದ್ರನ ಕಡೆ ನೋಡಿ "ಅವರಿಗೆ ಇಲ್ಲಿ ಕರೆಯಲೇನು ?" ಎಂದನು.

"ಅಗತ್ಯವಾಗಿ ನನಗೇನೂ ಬಾಧಕವಿಲ್ಲ."

ಭೃತ್ಯನು ಹೋಗಿ ದೀರ್ಘಾಕೃತಿಯ ಒಬ್ಬ ಗೌರವರ್ಣದ ಬ್ರಾಹ್ಮಣ ನನ್ನು ಕರತಂದನು. ತಲೆಯಲ್ಲಿ ಶಿಖೆ. ಹಣೆಯಲ್ಲಿ ಚಂದನ. ಸ್ವಲ್ಪ ಕೊಳೆಯಾದ ಧೋತರ. ಮೈಮೇಲೆ ಸಾಧಾರಣ ಒಂದು ಅಂಗವಸ್ತ್ರ. ಕಾಲಲ್ಲಿ ಮೆಟ್ಟು ಕೂಡ ಇಲ್ಲ. ಕೋಣೆಯಲ್ಲಿದ್ದ ಇಬ್ಬರೂ ಅವನನ್ನು ಆಶ್ಚರ್ಯದಿಂದ ನೋಡಿದರು. ವಕೀಲರು "ಕೂತುಕೊಳ್ಳಿ" ಎಂದರು.

ಬ್ರಾಹ್ಮಣನು ಸ್ವಲ್ಪ ದೂರದಲ್ಲಿ ಹಾಕಿದ್ದ ಬೆಂಚಿನಮೇಲೆ ಕೂತನು. ಆಮೇಲೆ "ವಕೀಲ್ ಅಘೋರನಾಥ ಬಸುಗಳೆಂದರೆ ನೀವೇಯೇ ?" ಎಂದನು.

"ನನ್ನ ಹೆಸರೇ ಅಘೋರನಾಥ ಬಸು."

"ಹಾಗಾದರೆ ನಿಮ್ಮ ಹತ್ತಿರವೇ ನನ್ನ ಕೆಲಸ. ಹೇಳಬೇಕಾದ್ದನ್ನು ಇಲ್ಲಿ ಹೇಳಬಹುದೋ ?"

"ಆಹಾ .. ನಿಸ್ಸಂಕೋಚವಾಗಿ ಹೇಳಿ."

ಆಗ ಆತನು ಉತ್ತರೀಯದ ಒಂದು ಕೊನೆಯಲ್ಲಿ ಕಟ್ಟಿದ್ದ ಲಕೋಟೆ ಯೊಂದನ್ನು ತೆಗೆದು "ಈ ಲಕೋಟೆಯನ್ನು ಶುಭದಾದೇವಿಗೆ ತಾವೇನೇ ಕಳುಹಿಸಿದ್ದು?" ಎಂದು ಕೇಳಿದನು. ಅಘೋರಬಾಬುಗಳು ಅದನ್ನು ಕೈಗೆ ತೆಗೆದುಕೊಂಡು ಅದರೊಳಗಿದ್ದ ಹತ್ತು ರೂಪಾಯಿಗಳ ಐದು ನೋಟುಗಳನ್ನು ನೋಡಿ "ಆಹಾ ...ನಾನೇ ಇದನ್ನು ಕಳುಹಿಸಿದೆ" ಎಂದರು.

ಬ್ರಾಹ್ಮಣನು ಆಶ್ಚರ್ಯದಿಂದ "ಹಲೂದ್‌ಪುರಕ್ಕೆ—? ಹಾರಾಣ

ಮುಖೋಪಾಧ್ಯಾಯರ ಮನೆಯ....ಶುಭದಾ ದೇವಿಗೆ?" ಎಂದನು.

"ಹಾ ...ಹಾ...ಖಂಡಿತ"

"ಏಕೆಂದು ಕೇಳಬಹುದೋ."

"ಅಗತ್ಯವಾಗಿ. ನಮ್ಮ ಕಕ್ಷಿಗಾರರ ಹುಕುವಿನ ಪ್ರಕಾರ...."

"ಯಾರು ಆ ಕಕ್ಷಿಗಾರರು ?"

ಅಘೋರನಾಥರು ಸುರೇಂದ್ರನ ಕಡೆ ಸ್ವಲ್ಪ ನೋಡಿ "ಅದನ್ನು ತಿಳಿಸುವುದಕ್ಕೆ ನಿಷೇಧವಿದೆ" ಎಂದರು.

"ಹಾಗಾದರೆ ಈ ಹಣವನ್ನು ವಾಪಸು ತೆಗೆದುಕೊಳ್ಳಿ. ಯಾರಿಗೆ ಇದನ್ನು ಕಳುಹಿಸಿದ್ದಿರೋ ಆಕೆ ಇದನ್ನು ಮುಟ್ಟುವುದಿಲ್ಲ. ಆಕೆಗೆ ನಿಮ್ಮ ಪರಿಚಯವಿಲ್ಲ. ಬಹುಶಃ ನಿಮ್ಮ ಕಕ್ಷಿಗಾರರೂ ಪರಿಚಯವಿಲ್ಲ. ಎಲ್ಲ ವಿಷಯವನ್ನೂ ತಿಳಿದುಕೊಂಡು ನಿಮಗೆ ಈ ಹಣವನ್ನು ವಾಪಸು ಮಾಡಿಬಿಟ್ಟು ಬಾರೆಂದು ನನ್ನನ್ನು ಕಳುಹಿಸಿದ್ದಾರೆ. ನಾವೆಲ್ಲಾ ತಿಳಿದುಕೊಂಡಿದ್ದೆವು. ಏನೆಂದರೆ ಅಪ್ಪಿತಪ್ಪಿ ಯಾರದೋ ವಿಳಾಸ ಬರೆಯಲು ಹೋಗಿ ಶುಭದಾದೇವಿಯ ಹೆಸರು ಬರೆದುಬಿಟ್ಟಿದ್ದೀರೆಂದು."

ಅಘೋರಬಾಬುಗಳು ನಕ್ಕು "ಅಂತಹ ತಪ್ಪು ವಕೀಲರು ಮಾಡುವುದಿಲ್ಲ" ಎಂದನು.

"ಇರಬಹುದು, ಆದರೆ ಈ ಹಣವನ್ನು ವಾಪಸು ತೆಗೆದುಕೊಳ್ಳಿ."

"ಅದೂ ನನ್ನ ಕೈಯಲ್ಲಿ ಸಾಧ್ಯವಿಲ್ಲ. ಕಕ್ಷಿಗಾರರ ಅಪ್ಪಣೆಯಿಲ್ಲದೆ ಯಾವುದನ್ನೂ ಮಾಡುವ ಹಾಗಿಲ್ಲ"

ಬ್ರಾಹ್ಮಣನು "ಹಾಗಾದರೆ ಅವರಿಗೆ ಹೇಳಿಕಳುಹಿಸಿ ಅಪ್ಪಣೆಯನ್ನು ತೆಗೆದುಕೊಳ್ಳಿ. ನಾನು ಇನ್ನೊಂದು ದಿನ ಬಂದು ಹೋಗುತ್ತೇನೆ." ಎಂದು ಏಳಹೋದನು. ಆಗ ಸುರೇಂದ್ರನಾಥನು ಕೈಯಿಂದ ಅಡ್ಡಮಾಡಿ "ತಮ್ಮ ಹೆಸರೇನು, ಸ್ವಾಮಿ" ಎಂದನು.

"ನನ್ನ ಹೆಸರು ಸದಾನಂದ ಚಕ್ರವರ್ತಿ."

ಸುರೇಂದ್ರನು ಚಮಕಿತನಾದನು.

ಸ್ವಲ್ಪ ಅವನ ಕಡೆಯೇ ದೃಷ್ಟಿಸಿ ನೋಡಿ "ಇಲ್ಲಿ ಎಲ್ಲಿ ಇಳಿದುಕೊಂಡಿದ್ದೀರಿ" ಎಂದನು.

"ಎಲ್ಲಿ ಇಳಿದುಕೊಳ್ಳಬೇಕೋ ಇನ್ನೂ ಸ್ಥಿರಮಾಡಿಲ್ಲ. ಸೀದಾ ಇಲ್ಲಿಗೇ ಬಂದೆ, ಬಹುಶಃ ಸೀದಾ ಹೊರಟು ಹೋಗುತ್ತೇನೆ."

ಸುರೇಂದ್ರನು ಅಘೋರಬಾಬುಗಳನ್ನು ನೋಡಿ "ಇನ್ನು ಹೊರಡು ತ್ತೇನೆ, ವಕೀಲರೇ.... ..ರಾತ್ರಿ ಬಂದು ಪುನಃ ನೋಡುತ್ತೇನೆ" ಎಂದು, ಸದಾನಂದನನ್ನು ಕುರಿತು "ನನಗೆ ನಿಮ್ಮೊಡನೆ ಸ್ವಲ್ಪ ಮಾತನಾಡುವುದಿದೆ" ಎಂದನು.

"ಅಪ್ಪಣೆ ಕೊಡಿಸಿ."

"ಇಲ್ಲಲ್ಲ. ನನ್ನ ವಾಸಸ್ಥಳ ಹತ್ತಿರವೇ ಇದೆ. ಆಕ್ಷೇಪಣೆ ಇಲ್ಲದೆ ಹೋದರೆ ಬನ್ನಿ, ಅಲ್ಲಿಗೇ ಹೋಗೋಣ ಅಲ್ಲಿ ಎಲ್ಲಾ ಹೇಳುತ್ತೇನೆ."

ಸದಾನಂದನಿಗೆ ಅಡ್ಡಿಯಿರಲಿಲ್ಲ. ಇಬ್ಬರೂ ಹೊರಗೆ ಬಂದು ಗಾಡಿ ಯಲ್ಲಿ ಕುಳಿತರು. ಗಾಡಿಯಲ್ಲಿ ಸದಾನಂದನು "ತಮ್ಮನ್ನು ನಾನು ಹಿಂದೆ ಎಲ್ಲೂ ಕಂಡ ಹಾಗೆ ಇಲ್ಲ. ಆದರ...ಆದರೆ ...ನೀವೆಲ್ಲಾದರೂ ನನ್ನನ್ನು ನೋಡಿದ್ದೀರೇನು ?" ಎಂದನು.

"ಇಲ್ಲ....ನೋಡಿಲ್ಲ. ಆದರೆ ನಿಮ್ಮ ವಿಷಯ ಗೊತ್ತು."

"ಹೇಗೆ ಗೊತ್ತಾಯಿತು ?"

"ಮನೆಗೆ ಹೋಗೋಣ. ಎಲ್ಲಾ ಹೇಳುತ್ತೇನೆ."

ಸ್ವಲ್ಪ ಹೊತ್ತಿನಲ್ಲಿಯೇ ಗಾಡಿಯು ಸುರೇಂದ್ರನಾಥನ ಕಲಿಕತ್ತೆಯ ವಾಸಸ್ಥಳಕ್ಕೆ ತಲುಪಿತು. ಸುರೇಂದ್ರನು ಸದಾನಂದನನ್ನು ಒಳಗೆ ಕರೆದು ಕೊಂಡು ಹೋಗಿ "ನಾನೂ ಬ್ರಾಹ್ಮಣನೇ. ಹೊತ್ತು ಬಹಳವಾಗಿದೆ ಇಲ್ಲಿಯೇ ಸ್ನಾನಾಹಾರಗಳು ಆಗಬಹುದಲ್ಲ ?" ಎಂದನು.

"ನನ್ನದೇನೂ ಅಡ್ಡಿಯಿಲ್ಲ."

ಇಬ್ಬರೂ ಆಹಾರ ತೆಗೆದುಕೊಂಡಮೇಲೆ ದಿವಾನ್‌ಖಾನೆಯಲ್ಲಿ ಕುಳಿ ತರು.

ಸುರೇಂದ್ರನು ಸದಾನಂದನನ್ನು ಕುರಿತು "ಶುಭದಾದೇವಿ ಬಹಳ ಬಡತನದಲ್ಲಿದ್ದಾರಲ್ಲವೇ ?" ಎಂದನು.

"ಬಡತನದಲ್ಲಿರುವುದೇನೋ ಹೌದು. ಆದರೆ ಹಾಗೆಂದು ಹೇಳಿ ..."

"ಅರ್ಥವಾಯಿತು. ಹಾಗೆಂದು ಹೇಳಿದಾಗ ಹೇಗೆ ತೆಗೆದುಕೊಳ್ಳು

ವುದಕ್ಕಾಗುತ್ತದೆ."

"ಸ್ವಲ್ಪ ಅದೂ ನಿಜವೇ.....ಅಲ್ಲದೆ ದಾತಾರನು ಯಾರು ಎಂದು ಕೂಡ ತಿಳಿಯದೆ...."

"ಆದರೆ ಅದರಲ್ಲಿ ಆಕ್ಷೇಪಣೆಯೇನು? ದಾನ ಮಾಡಿದವನು ಹೇಳುತ್ತಾನೆ....ತಪ್ಪು, ಪ್ರಮಾದ ಏನೂ ಆಗಿಲ್ಲ. ಯೋಗ್ಯ ವ್ಯಕ್ತಿಗೇ ಕಳುಹಿಸಿರುವುದು ಎಂದು."

"ಯಾರು ಹಾಗೆ ದಾನಮಾಡಿರುವುದು ?"

"ಸದ್ಯಕ್ಕೆ ಅಘೋರಬಾಬುಗಳೇ ಎಂದು ಇಟ್ಟುಕೊಳ್ಳಿ."

"ಅಘೋರಬಾಬುಗಳಿಗೇನು ಅಧಿಕಾರ, ಹಣ ಕಳುಹಿಸುವುದಕ್ಕೆ? "

ಸುರೇಂದ್ರನು ಸ್ವಲ್ಪ ಅಪ್ರತಿಭನಾಗಿ "ಆದರೆ ದಾನಮಾಡುವುದಕ್ಕೂ ಎಲ್ಲರಿಗೂ ಅಧಿಕಾರ ಬೇಕೇನು ?" ಎಂದನು.

"ಇರಬೇಕಾಗಿಲ್ಲ. ಆದರೆ ಎಲ್ಲರೂ ದಾನ ತೆಗೆದುಕೊಳ್ಳುವವರೇ ಏನು?"

"ಇಲ್ಲ. ಆದರೆ ಯಾರಿಗೆ ವಿಧಿಯೇ ಇಲ್ಲವೋ ಅವರು ?"

ಸದಾನಂದನಿಗೆ ಸ್ವಲ್ಪ ಕೋಪ ಬಂತು.

"ಶುಭದಾದೇವಿಗೆ ಈರೀತಿ ಭಿಕ್ಷೆಯಿಲ್ಲದಿದ್ದರೂ ಹೇಗೋ ಕಳೆಯುತ್ತದೆ" ಎಂದನು.

"ಈಗ ನಡೆಯಬಹುದು. ಆದರೆ ಹಿಂದೆ ಹಾಗಿತ್ತೇನು ?"

"ಆ ಮಾತಿಂದ ಈಗ ಪ್ರಯೋಜನವೇನು? ಅಲ್ಲದೆ ಇದೆಲ್ಲಾ ತಮಗೆ ಹೇಗೆ ತಿಳಿಯಿತು ?"

"ನನಗೆ ಇನ್ನೂ ಎಷ್ಟೋ ಗೊತ್ತಿದೆ. ಹಾರಾಣ ಬಾಬುಗಳಿಗೆ ಸಂಪಾದನೆಯಿಲ್ಲ. ನಡತೆ, ಚಾರಿತ್ರ ಸರಿಯಾಗಿಲ್ಲ. ಹೆಂಡತಿ, ಮಕ್ಕಳನ್ನ ನೋಡಿಕೊಳ್ಳುವಂತಹನಲ್ಲ. ಅವನ ಸಂಸಾರ ಬೇರೆಯವರ ಆಧಾರದಿಂದ ಅಲ್ಲದೆ ಹೇಗೆ ನಡೆಯಬೇಕು ?"

ಸದಾನಂದನಿಗೆ ಬಹಳ ಕಳವಳವಾಯಿತು. ಯಾವುದಕ್ಕೂ ಉತ್ತರ ಕೊಡಲಾಗಲಿಲ್ಲ.

ಸುರೇಂದ್ರನು ಮತ್ತೆ "ಹಾರಾಣಬಾಬು ಈಗ ಏನು ಮಾಡಿಕೊಂಡಿ

ದ್ದಾರೆ?" ಎಂದನು.

"ಏನೂ ಇಲ್ಲ."

"ಗೊತ್ತು, ಸದ್ಯಕ್ಕೆ ತಮ್ಮ ಸಹಾಯದಿಂದಲೇ ಸಂಸಾರ ನಿರ್ವಹಣೆ ಆಗುತ್ತಿದೆ, ಅಲ್ಲವೇ?"

"ಭಗವಂತ ಸಹಾಯ ಮಾಡುತ್ತಾನೆ. ನಾನೇನು ಮಾಡಬಲ್ಲೆ, ಬಡವ."

"ಛಲನಾಳ ಲಗ್ನವಾಯಿತೇ?"

"ಆಯಿತು."

"ಎಲ್ಲಿ .. ಯಾರೊಂದಿಗೆ ಸಂಬಂಧ?"

"ನಮ್ಮ ಊರಿನಲ್ಲಿಯೇ. ಶಾರದಾಚರಣರಾಯ್ ಎಂಬವರೊಂದಿಗೆ."

"ಮಾಧವ ಹೇಗಿದ್ದಾನೆ?"

"ಮಾಧವ ತೀರಿಕೊಂಡ. ಬಹಳ ದಿನಗಳಾಯಿತು."

"ಪಾಪ! ಅವರ ದೊಡ್ಡ ಮಗಳು ಈಗ ಎಲ್ಲಿ?"

ಸದಾನಂದನು ಬೆಚ್ಚಿ ತಕ್ಷಣ ಏನೂ ಹೇಳದೇ ಸುರೇಂದ್ರನನ್ನು ದೃಷ್ಟಿಸಿ ನೋಡಿದನು.

"ಎಲ್ಲೇನು? ಅವಳೂ ಹೋಗಿ ಎಷ್ಟೋ ದಿನಗಳಾದವು" ಎಂದನು.

"ಹೋದಳೇ? ಹೇಗೆ ಹೋದಳು? ಸತ್ತು ಹೋದಳೇ?"

"ಹೂಂ ...ಗಂಗೆಯಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಂಡಳು."

"ಹೇಗೆ ಗೊತ್ತಾಯಿತು. ಶವ ಸಿಕ್ಕಿತ್ತೇ?"

"ಶವ ಸಿಕ್ಕಲಿಲ್ಲ. ಆದರೆ ಅವಳು ಉಡುತ್ತಿದ್ದ ವಸ್ತ್ರ ನೀರಿನಲ್ಲಿ ಸಿಕ್ಕಿತು. ಆದರಿಂದ ಅಂದುಕೊಂಡಿದ್ದಾಯಿತು, ನೀರಿನಲ್ಲಿ ಮುಳುಗಿ ಸತ್ತಳೆಂದು."

"ಈ ವಿಷಯದಲ್ಲಿ ಯಾರಿಗೂ ಯಾವ ಸಂದೇಹವೂ ಇಲ್ಲವೇ?"

"ಸ್ವಲ್ಪವೂ ಇಲ್ಲ."

ಇಬ್ಬರೂ ಸ್ವಲ್ಪ ಹೊತ್ತು ಸುಮ್ಮನಿದ್ದರು. ಆಮೇಲೆ ಸುರೇಂದ್ರನು "ಒಳ್ಳೆಯದು, ನೀವು ಹೀಗೆಂದುಕೊಳ್ಳಿ, ಒಂದು ಪಕ್ಷ ಈ ಹಣವನ್ನ ಆಕೆಯೇ ಕಳುಹಿಸಿದ್ದರೆ?"

"ಯಾರು? ಲಲನಾ ?"

"ಲಲನಾ ಯಾರು? ಆಕೆಯ ಹೆಸರು ಲಲನಾ ಎಂತಲೇನು ?"

"ಹೌದು."

ನನಗೆ ಆಶ್ಚರ್ಯವಾಯಿತು. ಲಲನಾ . ನಿಜ, "ಲಲನಾ. ಲಲನಾ, ಛಲನಾ ಇವರಿಬ್ಬರೇ ಹೆಣ್ಣುಮಕ್ಕಳು. ಅಲ್ಲವೇ ?"

"ಹೌದು."

"ಸರಿ. ಈ ಲಲನಾಳೇ ಹಣ ಕಳುಹಿಸಿದಳು ಎಂದುಕೊಳ್ಳಿ."

"ಯಾರೂ....ಸತ್ತು ಹೋಗಿರುವವಳೇ ?"

"ಹೂಂ, ಅವಳೇ ಎಂದಿಟ್ಟುಕೊಳ್ಳಿ. ಗಂಗಾತೀರದಲ್ಲಿ ಅವಳ ವಸ್ತ್ರ ಸಿಕ್ಕಿತೆಂದ ಮಾತ್ರಕ್ಕೆ ಅವಳ ಸಾವು ನಿಶ್ಚಯವಾಗುವುದಿಲ್ಲ. ಅವಳೇ ಈ ಹಣ ಕಳುಹಿಸಿದ್ದರೆ ಏನು ಮಾಡುತ್ತೀರಿ ?"

ಸದಾನಂದನು ವಿಹ್ವಲನಾದನು. ಅವನಿಗೆ ಏನು ಹೇಳಲೂ ತೋಚ ಲಿಲ್ಲ. ತಲೆಯಲ್ಲಿ ಸಾವಿರ ಯೋಚನೆಗಳು, ಸಾವಿರ ನೆನಪುಗಳು ತುಂಬ ದಿಗ್ಭ್ರಮೆ ಮಾಡಿದುವು. ಸ್ವಲ್ಪ ಹೊತ್ತು ತಲೆ ತಗ್ಗಿಸಿಕೊಂಡಿದ್ದು "ಅವಳು ಬದುಕಿಲ್ಲ. ಬದುಕಿದ್ದಿದ್ದರೆ ಖಂಡಿತವಾಗಿ ಪತ್ರ ಬರೆಯುತ್ತಿದ್ದಳು" ಎಂದನು.

"ಪತ್ರ ಬರೆಯುವುದಕ್ಕೆ ಬಹುಶಃ ನಾಚುಗೆಯೇನೋ ?"

"ನನಗೆ ಲಲನಾ ಎಂತಹವಳೆಂದು ಗೊತ್ತು. ಅವಳನ್ನ ಚೆನ್ನಾಗಿ ಬಲ್ಲೆ. ನಾಚುಗೆ ಪಡುವಂತಹ ಕೆಲಸ ಅವಳೆಂದಿಗೂ ಮಾಡುವವಳಲ್ಲ. ಜೀವ ದಿಂದಿದ್ದೂ ಕೂಡ ಕಾರಣವಿಲ್ಲದೆ ಮೈಮರಸಿಕೊಂಡು ಇರುವಂತಹವಳಲ್ಲ."

"ಅವಳು ಸತ್ತಿಲ್ಲ, ನನ್ನ ಮಾತು ಕೇಳಿ, ಬದುಕಿದ್ದಾಳೆ. ಅವಳೇ ಈ ಹಣವನ್ನು ಕಳುಹಿಸಿದ್ದು. ಅಲ್ಲದೆ ಪ್ರತಿ ತಿಂಗಳೂ ಕಳುಹಿಸುತ್ತಾಳೆ."

ಸದಾನಂದನು ಹಣೆಯನ್ನು ಕೈಯಿಂದ ಮುಚ್ಚಿಕೊಂಡು "ತಮ್ಮ ಹೆಸರು ?" ಎಂದು ಮೆಲ್ಲಗೆ ಕೇಳಿದನು.

"ಸುರೇಂದ್ರನಾಥ ರಾಯ್"

"ಇರುವುದು ?"

"ಹತ್ತಿರವೇ. ನಾರಾಯಣಪುರದಲ್ಲಿ."

"ನಿಮಗೆ ಹಾರಾಣಬಾಬುಗಳ ವಿಷಯವೆಲ್ಲಾ ಹೇಗೆ ಗೊತ್ತಾಯಿತು ?"

"ಲಲನಾ ಹೇಳಿದಳು."

"ಲಲನಾ ಹೇಳಲಿಲ್ಲ. ಅವಳು ಸತ್ತುಹೋಗಿದ್ದಾಳೆ."

"ಸತ್ತಿಲ್ಲ. ಸುಖವಾಗಿದ್ದಾಳೆ."

"ಇಲ್ಲ. ಅವಳು ಸ್ವರ್ಗಕ್ಕೆ ಹೋಗಿದ್ದಾಳೆ" ಎಂದು ಗಂಭೀರ ಮುಖದಿಂದ ಮೇಲಕ್ಕೆದ್ದನು.

ಸುರೇಂದ್ರನು ಗಟ್ಟಿಯಾಗಿ ಕೂಗುತ್ತಾ "ಸದಾನಂದಬಾಬು ....... ಹೋಗಬೇಡಿ. ಇನ್ನೂ ಸ್ವಲ್ಪ ನಿಲ್ಲಿ." ಎಂದನು.

"ಇನ್ನು ಕೆಲಸವಿಲ್ಲ. ನಾನು ಹೊರಟೆ."

"ಇಲ್ಲ, ನಿಲ್ಲಿ. ಇನ್ನೂ ಸ್ವಲ್ಪ ಹೇಳುವುದಿದೆ."

"ಇನ್ನು ಸಾಕು. ಅವಳನ್ನ ನೋಡುವ ಅವಕಾಶ ಸಿಕ್ಕಿದಾಗ ಹೇಳಿ.... ಸದಾನಂದ ಮಾವನು ಅನೇಕ ಆಶೀರ್ವಾದಗಳನ್ನ ಕಳುಹಿಸಿದನೆಂದು."

"ಅವರ ತಾಯಿಗೆ ಇದನ್ನ ಹೇಳಿ ?"

"ಅವಳು ಸ್ವರ್ಗದಲ್ಲಿದಾಳೆಂದು ಹೇಳುತ್ತೇನೆ" ಎಂದು ಸದಾನಂದನು ಹೊರಟನು. ಮತ್ತೆ ಹಿಂದಿರುಗಿ ನೋಡಲಿಲ್ಲ. ಸುರೇಂದ್ರನೂ ಅವನನ್ನ ಕೂಗುವ ಸಾಹಸಕ್ಕೆ ಹೋಗಲಿಲ್ಲ.

ಅವನು ಹೊರಟ ಮೇಲೆ ಸುರೇಂದ್ರನು ಬಹಳ ಹೊತ್ತು ಏನೂ ತೋಚದೆ ಹಾಗೆಯೇ ಕೂತಲ್ಲಿಯೇ ಕೂತಿದ್ದನು. ಕೆಲವು ದಿವಸಗಳ ಹಿಂದೆ ಹೀಗೆ ಆಗಿದ್ದಿದ್ದರ ನಕ್ಕುಬಿಡುತ್ತಿದ್ದನು. ಆದರೆ ಈಗ ಕಣ್ಣಿಂದ ನೀರು ಸುರಿಸಿದನು....ಆಗ ಚಾಕರನೊಬ್ಬನು ಬಂದು "ಸ್ವಾಮಿ, ಹುಕ್ಕಾ ತಯಾರು ಮಾಡಲೇ? ಎಂದನು. "ಹುಂ....ತಯಾರು ಮಾಡು" ಎಂದು ಉತ್ತರ ಬಂತು.

# ೧೬

ರಾತ್ರಿ ಬಹಳ ಹೊತ್ತಾಗಿದೆ ಮಾಲತಿಯು ತನ್ನ ಕೊರಡಿಯಲ್ಲಿ ಕೂತು 'ಸೀತಾವನವಾಸ'ವನ್ನು ಓದುತ್ತಿದ್ದಾಳೆ. ಎಷ್ಟೋ ಅತ್ತಿದ್ದಾಳೆ. ಕಣ್ಣೊರಸಿಕೊಂಡಿದ್ದಾಳೆ. ಆದರೂ ಕಣ್ಣೀರು ಹರಿಯುತ್ತಲೇ ಇವೆ.... "ಆಹಾ ...ಎಷ್ಟು ಚೆನ್ನಾಗಿದೆ ... ಬಿಡಲು ಮನಸ್ಸಾಗುವುದೇ ಇಲ್ಲ"

ಈ ಸಮಯದಲ್ಲಿ ಹೊರಗಿನ ಬಾಗಿಲಲ್ಲಿ ಯಾರೋ ನಿಂತು ಬಹಳ ಗಡಸು ಧ್ವನಿಯಲ್ಲಿ 'ಲಲನಾ' ಎಂದು ಕೂಗಿದಂತಾಯಿತು

ಮಾಲತಿಯು ಬೆಚ್ಚಿಬಿದ್ದಳು. "ಸೀತಾವನವಾಸ" ಕೈಯಿಂದ ತಾನಾಗಿ ಜಾರಿಬಿತ್ತು.

"ಲಲನಾ."

ಮಾಲತಿಯ ಎದೆಯೊಡೆಯುವಂತಾಗಿ ದುಃಖ ಉಕ್ಕಿ ಬಂದಿತು. ಬಹಳ ಕ್ಷೀಣ ಕಂಠದಿಂದ "ಯಾರು" ಎಂದಳು.

ಆಗ ಗಟ್ಟಿಯಾಗಿ ನಗುತ್ತಾ ಸುರೇಂದ್ರನಾಥನು ಒಳಗೆ ಪ್ರವೇಶ ಮಾಡಿ ಮತ್ತೆ "ಲಲನಾ" ಎಂದು ಕೂಗಿದನು.

"ನೀವೇ !"

"ಹಾ ... .ನಾನೇ . ...! ಅಂತೂ ನೀನು ಸಿಕ್ಕಿ ಬಿದ್ದೆ....ಹೆಸರೇಕೆ ಬಚ್ಚಿಟ್ಟುಕೊಂಡಿದ್ದೆ ?"

"ನಾನೇ ?"

"ಪುನಃ ಸುಳ್ಳು" ಎಂದು ನಕ್ಕು ಸುರೇಂದ್ರನು ಅವಳ ಒಣಗಿದ ತುಟಿಗಳನ್ನು ಮುತ್ತಿಟ್ಟುಕೊಂಡನು.

"ಎಲ್ಲಾ ವಿಷದವಾಗಿ ತಿಳಿದುಕೊಂಡು ಬಂದೆ. ಲಲನಾ ಆಗಿದ್ದೆ. ಈಗ ಮಾಲತಿಯಾಗಿ ಕೂತಿದ್ದೀಯಾ."

"ಎಲ್ಲಿ ?"

"ಕಲಿಕತ್ತೆಯಲ್ಲಿ ತಿಳಿದುಕೊಂಡು ಬಂದೆ."

"ಕಲಿಕತ್ತೆಯಲ್ಲಿ ನನಗೆ ತಿಳಿದವರು ಯಾರೂ ಇಲ್ಲವಲ್ಲ ?"

"ನಿನಗೆ ತಿಳಿದಿರುವವರು ಅಲ್ಲಿ ಯಾರೂ ಇಲ್ಲ ನಿಜ. ಆದರೆ ತಿಳಿದಿರುವವರು ಹಲೂದ್‌ಪುರದಿಂದ ಅಲ್ಲಿಗೆ ಬಂದಿದ್ದರು.

"ಯಾರು ?"

"ನಿಮ್ಮ ಸದಾನಂದ—ನಾವು ಕಳುಹಿಸಿದ ಹಣ ವಾಪಸು ಮಾಡಲು ವಕೀಲ ಬಾಬುಗಳ ಮನೆಗೆ ಬಂದಿದ್ದನು."

"ಹಣ ವಾಪಸು ಮಾಡುವುದಕ್ಕೇ?"

"ಹಾಂ."

"ನದೂ ಮಾವ?"

"ಅವರೇ."

ಮಾಲತಿ ಏನೂ ಹೇಳದೆ ಸುಮ್ಮನೆ ಎತ್ಲೋ ನೋಡುತ್ತಾ ಕುಳಿತಳು. ಸ್ವಲ್ಪ ಹೊತ್ತಾದ ಮೇಲೆ ಸುರೇಂದ್ರನು "ಮಾತಾಡುವುದಿಲ್ಲ ಏಕೆ?" ಎಂದನು.

"ನದೂ ಮಾವ ಹೇಗಿದ್ದಾರೆ?"

"ಚೆನ್ನಾಗಿದ್ದಾರೆ. ನಿಮ್ಮ ತಾಯಿಯೂ ಚೆನ್ನಾಗಿದ್ದಾರೆ. ಅವರ ಅವಸ್ಥೆ ಅಷ್ಟು ಕೆಟ್ಟು ಹೋಗಿಲ್ಲ. ಅದಕ್ಕೋಸ್ಕರ ನಿಮ್ಮ ದಾನ ಸ್ವೀಕಾರ ಮಾಡುವುದಕ್ಕೆ ಆಗದೇ ಹೋಯಿತು ಅವರಿಗೆ. ನದಾನಂದ ಬಾಬು ಅವರ ಪರವಾಗಿ ಹಿಂದಿರುಗಿಕೊಡಲು ಬಂದಿದ್ದನು."

"ನನ್ನ ಹೆಸರು ಲಲನಾ ಎಂದು ಯಾರು ಹೇಳಿದರು ನಿಮಗೆ?"

"ನಿಮ್ಮ ಸದಾನಂದನೇ. ಅವರಲ್ಲರೂ ನೀನು ನದಿಯಲ್ಲಿ ಮುಳುಗಿ ಸತ್ತುಹೋಗಿದ್ದೀಯೆಂದು ತಿಳಿದಿದ್ದಾರೆ."

ಮಾಲತಿ ದೀರ್ಘ ನಿಶ್ವಾಸ ಬಿಟ್ಟಳು.

ಮತ್ತೆ ಸುರೇಂದ್ರನು "ಆದರೆ ನಾನು ಇನ್ನೂ ನೀನು ಬದುಕಿದ್ದೀಯೆಂದು ಹೇಳಿದೆ. ಸುಖವಾಗಿದ್ದೀಯೆಂದು ಹೇಳಿದೆ."

"ಹಾಗೇಕೆ ಹೇಳಿದಿರಿ ?"

"ಹಾಗಾದರೆ ಸುಳ್ಳು ಹೇಳಲೇನು? ನೀನು ಬದುಕಿದ್ದೀಯ ನಿಜ. ಬಹುಶಃ ಸುಖವಾಗಿಯೂ ಇದ್ದೀಯ....ನಿಜ....ಸುಖವಾಗಿಲ್ಲವೇನು ?"

"ಇದ್ದೇನೆ. ಆದರೆ ಈ ವಿಷಯ ಸದಾನಂದನು ನಿಮ್ಮನ್ನು ಪ್ರಶ್ನೆ

ಮಾಡಿದನೇ ?"

"ಇಲ್ಲ—ನಾನೇ ಸ್ವತಃ ಹೇಳಿದೆ. ನಿಮ್ಮ ತಾಯಿಗೂ ತಿಳಿಸೆಂದು ಹೇಳಿದೆ."

"ನಾನೇ ದುಡ್ಡು ಕಳಹಿಸುವುದಾಗಿಯೂ ಹೇಳಿದಿರಾ ?"

"ಹೂಂ, ಹೇಳಿದೆ."

"ಅಯ್ಯೋ....ನೀವು ನನ್ನ ಮನೆ ಹಾಳುಮಾಡಿದಿರಿ. ಅವನು ಹುಚ್ಚ. ಈ ಮಾತನ್ನು ಗ್ರಾಮದಲ್ಲಿ ಎಲ್ಲರಿಗೂ ಹೇಳಿಬರುತ್ತಾನೆ. ಯಾವಾಗ ಅವರೆಲ್ಲರ ದೃಷ್ಟಿಯಿಂದ ಸತ್ತುಹೋಗಿದ್ದೆನೋ ಸುಮ್ಮ ಸುಮ್ಮನೆ ಏಕೆ ಬದುಕಿಸುವುದಕ್ಕೆ ಹೋದಿರಿ ?"

ಸುರೇಂದ್ರನು ವ್ಯಥಿತನಾಗಿ ಮೃದುವಾಗಿ ನಕ್ಕನು. ಆ ಮೇಲೆ "ಯಾರನ್ನ ನೀನು ಹುಚ್ಚ ಎಂದು ತಿಳಿದುಕೊಂಡಿದ್ದೀಯೋ ಅವರು ಯಥಾರ್ಥವಾಗಿ ಎಳ್ಳಷ್ಟೂ ಹುಚ್ಚಲ್ಲ. ಹಿಂದೆ ಯಾವಾಗಲೋ ಹುಚ್ಚ ರಾಗಿರಬಹುದು. ಆದರ ಅದಕ್ಕೆ ವಿರುದ್ಧ. ಅವರ ಮೂಲಕ ನೀನು ಪುನಃ ಹಲೂದ್‌ಪುರದಲ್ಲಿ ಬದುಕುವುದಿಲ್ಲ. ನಿನ್ನಲ್ಲಿ ಆ ಭಯವೇನೂ ಇರ ಬೇಕಾಗಿಲ್ಲ. ನೀನು ಏತಕ್ಕಾಗಿ ಮೈಮರೆಯಿಸಿಕೊಂಡಿದ್ದೀಯೋ ಅವರು ಆ ವಿಷಯವನ್ನು ಏನುಮಾಡಿದರೂ ಯಾರಿಗೂ ಹೇಳಲಾರರು."

"ನಿಮಗೆ ಹೇಗೆ ಗೊತ್ತು ?"

"ಹೇಗೋ ಗೊತ್ತಾಯಿತು. ಯಾವಾಗ ನೀನು ಜೀವದಿಂದಿರುವ ವಿಷಯವನ್ನು ನಿಮ್ಮ ತಾಯಿಗೆ ಹೇಳೆಂದು ಹೇಳಿದೆನೋ ಆಗ ಅವರು 'ಲಲನಾ ನಾಚುಗೆಯಾಗುವಂತಹ ಕೆಲಸವನ್ನು ಎಂದಿಗೂ ಮಾಡುವುದಿಲ್ಲ. ಬದುಕಿದ್ದೂ ಮೈ ಮರೆಯಿಸಿಕೊಳ್ಳುವವಳಲ್ಲ ಅವಳು. ಅವಳು ಬದುಕಿಲ್ಲ. ಸತ್ತಿದ್ದಾಳೆ" ಎಂದರು. ನಾನೆಂದೆ "ಇಲ್ಲ, ಅವಳು ಬದುಕಿದ್ದಾಳೆ. ಸುಖ ವಾಗಿದ್ದಾಳೆ.' ಅದಕ್ಕೆ ಅವರು "ಅವಳು ಸ್ವರ್ಗಕ್ಕೆ ಹೋಗಿದ್ದಾಳೆ" ಎಂದರು. ನಾನು "ಸದಾನಂದ ಬಾಬು, ಇನ್ನೂ ಸ್ವಲ್ಪ ನಿಲ್ಲಿ" ಎಂದೆ. "ಇಲ್ಲ, ಹೊರಟೆ. ಅವಳನ್ನು ಕಂಡಾಗ ನನ್ನ ಅನೇಕ ಆಶೀರ್ವಾದಗಳನ್ನು ಅವಳಿಗೆ ಹೇಳಿ" ಎಂದು ಹೊರಟು ಹೋದರು. ಮಾಲತೀ, ನನಗೆ ಚೆನ್ನಾಗಿ ಅರ್ಥವಾ ಯಿತು. ನಾನು ಯಾವ ವಿಷಯವನ್ನು ಪಾನ ಮಾಡಿದ್ದೇನೋ, ಅದನ್ನ

ಅವರೂ ಪಾನ ಮಾಡಿದ್ದಾರೆ. ನನಗೇನೋ ವಿಮುಕ್ತಿಯಾಗಿ ಸುಖಿಯಾಗಿದ್ದೇನೆ. ಆದರೆ ಅವರ ಜೀವವನ್ನು ಅದು ತಿಂದುಕೊಂಡಿದೆ."

ಮಾಲತಿಯು ಅಧೋವದನಳಾಗಿ ಕೇಳುತ್ತಿದ್ದಳು. ಚೆನ್ನಾಗಿ ಅತ್ತು ಬಿಡೋಣವೆನ್ನಿಸುತ್ತಿತ್ತು. ಆದರೆ ವಿಪರೀತ ನಾಚುಗೆಯಾಯಿತು.

ಸುರೇಂದ್ರನು "ಇನ್ನೊಂದು ಒಳ್ಳೆಯ ಸುದ್ದಿ. ನಿಮ್ಮ ಛಲನಾಳಿಗೆ ಮದುವೆಯಾಯಿತು" ಎಂದನು.

ಮಾಲತಿಯು ತಕ್ಷಣ ಉತ್ಸಾಹದಿಂದ "ಆಯಿತೇ .. ಸಧ್ಯ....? ಎಲ್ಲಿ —ಯಾರ ಸಂಗಡ ?" ಎಂದಳು.

"ಅದೇ ಊರೇ . .ಯಾರೋ ಶಾರದಾಚರಣನಂತೆ—ಅವರೊಂದಿಗೆ."

ಮಾಲತಿಗೆ ಅರ್ಥವಾಯಿತು. ಮನಸ್ಸಿನಲ್ಲಿಯೇ ಅವನಿಗೆ ಸಾವಿರ ಧನ್ಯವಾದಗಳನ್ನು ಅರ್ಪಿಸಿದಳು. "ಮದುವೆ ಮಾಡಿಕೊಂಡರೇ ಅವರೇ ಮಾಡಿಕೊಳ್ಳುವರೆಂದು ನನಗೆ ಚೆನ್ನಾಗಿ ಗೊತ್ತಿತ್ತು" ಎಂದಳು.

"ಹೇಗೆ ಗೊತ್ತಿತ್ತು. ಮುಂಚೆ ಏನಾದರೂ ಮಾತುಕಥೆಯಾಗಿತ್ತೇ ?"

"ಇಲ್ಲ. ಮಾತುಕಥೆಯೇನೂ ಆಗಿರಲಿಲ್ಲ. ಆದರೆ ನಾನೇ ಒಂದು ಸಲ ಛಲನಾಳನ್ನ ಮದುವೆಯಾಗಿ ಎಂದು ಅವರನ್ನ ಕೇಳಿಕೊಂಡಿದ್ದೆ. ಆದರೆ ಅವರು ತಂದೆಯ ಭಯದಿಂದ ಒಪ್ಪಿಕೊಳ್ಳಲಿಲ್ಲ. ಆ ಮೇಲೆ ನಾನು ಸತ್ತಿನಲ್ಲ. ಆಗ ಕನಿಕರದಿಂದ ಮದುವೆಗೆ ಒಪ್ಪಿಕೊಂಡಿದ್ದಾರೆ "

"ತಂದೆಯ ಭಯವೇಕೆ ?"

"ಅವರಪ್ಪನಿಗೆ ಬಹಳ ಹಣದ ಆಸೆ. ಮಗನ ಮದುವೆಯಿಂದ ಚೆನ್ನಾಗಿ ವರದಕ್ಷಿಣೆ ಪಡೆಯುವುದಕ್ಕೆ ಕಾದುಕೊಂಡಿದ್ದರು."

"ಅದನ್ನು ಹೇಗೆ ಮರೆತರು. ನಿಮ್ಮ ತಂದೆಗಂತೂ ವರದಕ್ಷಿಣೆ ಕೊಡುವಷ್ಟು ಚೈತನ್ಯವಿಲ್ಲ."

""ಇರಬಹುದು." ಮಾಲತಿಯು ಮನಸ್ಸಿನಲ್ಲಿ ಅಂದುಕೊಂಡಳು. "ಯಾವ ಪ್ರೇಮದ ಬಲದಿಂದ ಶಾರದಾಚರಣನನ್ನ ನೀವು ಸೋಲಿಸಿದ್ದೀರೋ ಅದೇ ಪ್ರೇಮದ ಬಲದಿಂದ ಶಾರದಾಚರಣನೂ ತಂದೆಯನ್ನು ಸೋಲಿಸಿದ್ದಾರೆ." ಹಾಗೆಂದು ಸುರೇಂದ್ರನಿಗೆ ಹೇಳಲಾಗಲಿಲ್ಲ ಅವಳಿಗೆ.

ಮಾಲತಿಯು ಯೋಚನೆ ಮಾಡುವುದಕ್ಕೆ ಎಷ್ಟೋ ವಿಷಯಗಳಿವೆ.

ಆದ್ದರಿಂದ ಹೆಚ್ಚು ಮಾತನಾಡಲು ಇಷ್ಟವಾಗಲಿಲ್ಲ. ಆದರೆ ಮಾಧವನ ಜ್ಞಾಪಕ ಬಂತು.

"ಮಾಧೂ ...ನಮ್ಮ ಮಾಧವ .?ಅವನ ವಿಷಯವೇನಾದರೂ ಕೇಳಿದಿರಾ" ಎಂದಳು.

"ಅವನೇ ...ಓ ...ಕೇಳಿದೆ ...ಅವನು ಚೆನ್ನಾಗಿದಾನಂತೆ."

ಮಾಲತಿಯು ದೀರ್ಘಶ್ವಾಸ ಬಿಟ್ಟಳು. ಅಂದು ರಾತ್ರಿ ಬಹಳ ಹೊತ್ತಿನವರೆಗೂ ಅವಳು ಎಚ್ಚತ್ತಿದ್ದಳು. ಎಷ್ಟೋ ವಿಷಯಗಳನ್ನು ಪುನಃ ಮನಸ್ಸಿಗೆ ತಂದುಕೊಂಡಳು. ಅವಳಿಗೆ ಅನ್ನಿಸಿತು. "ಸದಾನಂದ ಬಂದಿದ್ದನು. ದುಡ್ಡು ವಾಪಸು ಕೊಡಲು ಪ್ರಯತ್ನ ಪಟ್ಟನು. ಬಹುಶಃ ಅವರಿಗೆ ಈಗ ಅವಶ್ಯಕವಿಲ್ಲವೆಂದು ಕಾಣುತ್ತದೆ. ನಾನೂ ಇನ್ನು ಕಳುಹಿಸುವುದಿಲ್ಲ" ಆಮೇಲೆ ಶಾರದಾಚರಣನನ್ನ ಕುರಿತು ಆಲೋಚಿಸಿದಳು.

ಮುಂಚೆ ಅವನಿಗೆ ನೂರುಸಲ ಧನ್ಯವಾದಗಳನ್ನು ಅರ್ಪಿಸಿದ್ದಳು. ಈಗ ಸಾವಿರ ಧನ್ಯವಾದಗಳನ್ನರ್ಪಿಸಿದಳು ...ಮನಸ್ಸಿನಲ್ಲಿ ಅವನಿಗೆ ಅರಿಕೆ ಮಾಡಿಕೊಂಡಳು "ನೀವು ನನ್ನ ಅಪರಾಧವನ್ನು ಕ್ಷಮಿಸಿ. ಅಂದು ನಿಮ್ಮ ಯೋಗ್ಯತೆಯನ್ನು ತಿಳಿದುಕೊಳ್ಳದೆ ಹೋದೆ. ಇನ್ನು ನಿಮ್ಮನ್ನು ಈ ಜೀವಮಾನದಲ್ಲಿ ಹೇಗೆ ನೋಡುತ್ತೇನೋ ಇಲ್ಲವೋ ಆದರೆ ಸಾಯುವ ವರೆಗೂ ನಿಮ್ಮ ಈ ದಯೆಯನ್ನು ಮರೆಯುವುದಿಲ್ಲ. ಹಿಂದೆ ನಿಮ್ಮ ಮೇಲೆ ಭಕ್ತಿಯಿಟ್ಟಿದ್ದೆ, ಇನ್ನು ಮುಂದೆಯೂ ಚಿರದಿನವೂ ಭಕ್ತಿಯಿಡುತ್ತೇನೆ." ಅವಳು ಹುಡುಕಿ ನೋಡಿದಳು. ಶಾರದಾಚರಣನ ಅಸ್ಪಷ್ಟ ಛಾಯೆಯು ಅವಳ ಹೃದಯದ ತೆರೆಯ ಮೇಲಿಂದ ಇನ್ನೂ ಅಳಿಸಿ ಹೋಗಿಲ್ಲ. ಈಗ ಸ್ಪಷ್ಟಾಕೃತಿ ತಾಳಿ ನಿಂತಿದೆ. ಮನಸ್ಸಿನಲ್ಲಿ ಹೇಳಿಕೊಂಡಳು. ನನ್ನ ಯಜಮಾನರು "ಸದಾನಂದನೇ ನಿನ್ನ ಪ್ರೇಮದಿಂದ ಬಂಧಿತನಾಗಿರುವುದು ಎನ್ನುತ್ತಾರೆ. ಅದು ಹಾಗಲ್ಲ, ಶಾರದಾಚರಣನೇ ಹಾಗಾಗಿರುವುದು."

# ೧೭

ಈ ಕಡೆ ಸದಾನಂದನು ಊರಿಗೆ ಹಿಂದಿರುಗಿ ಬಂದನು. ದಾರಿ ಯುದ್ದಕ್ಕೂ ಅವನ ಮನಸ್ಸು ಎಲ್ಲೋ ಹೋಗಿತ್ತು. ಬುದ್ಧಿ ವಿಕಲ್ಪ ವಾಗಿತ್ತು ...ದಾರಿಯಲ್ಲಿ ಯಾರಾದರೂ 'ಅಯ್ಯನವರು ಎಲ್ಲಿಂದ ಬಂದರೋ' ಎಂದು ಕೇಳಿದರೆ ತಲೆಯಲ್ಲಾಡಿಸಿ 'ಹುಂ' ಎನ್ನುವರು. 'ಎಲ್ಲಿಗೆ ಹೋಗಿ ದ್ದಿರಿ' ಎಂದರೆ ಸದಾನಂದನು ನಿಂತು ಅವರನ್ನು ದುರುಗುಟ್ಟಿಕೊಂಡು ನೋಡಿ "ಮನೆಗೆ ಹೋಗುತ್ತೇನೆ" ಎನ್ನುವನು.

ರಾಮು ಮಾವು ಅಂಗಡಿಯಲ್ಲಿ ತಂಬಾಕು ತೀಡುತ್ತಾ ಕೂತಿದ್ದವನು "ಏ, ಸದಾನಂದಪ್ಪ, ನಾಲ್ಕೈದು ದಿನದಿಂದ ಕಂಡುಬರಲಿಲ್ಲ, ಎಲ್ಲಿ ಹೊರ ಟಿದ್ದಿರಿ ?" ಎಂದನು

ಸದಾನಂದನು ಹಿಂದೆ ತಿರುಗಿ ನೋಡದೆ ಕೈ ಬೆರಳನ್ನು ಪಶ್ಚಿಮ ದಿಕ್ಕಿಗೆ ತಿರುಗಿಸಿ "ಅಲ್ಲಿಗೆ" ಎಂದನು.

"ಎಲ್ಲಿಗೆ? ಬ್ರಾಹ್ಮಣ ಅಗ್ರಹಾರಕ್ಕೇ ?"

"ಹುಂ."

"ಇಷ್ಟು ದಿನ?"

"ಹುಂ."

ಸದಾನಂದನು ಮುಖ ಗಂಟು ಹಾಕಿಕೊಂಡು ಹೊರಟನು ...ರಾಮು ಮಾಮನು ಕೋಪಗೊಂಡು "ಅದಕ್ಕೇ ಹುಚ್ಚ ಎನ್ನುವುದು....ಏನು ಹೇಳು ತ್ತಾನೋ ಆ ಅಪ್ಪಯ್ಯ ಏನೂ ಅರ್ಥವಾಗುವುದಿಲ್ಲ" ಎಂದನು.

ಸದಾನಂದನು ಮನೆಗೆ ಬಂದು ಶುಭದಾಳ ಮುಂದೆ ನಿಂತನು. ಅವಳ ಎದುರಿಗೆ ರೂಪಾಯಿಗಳ ನೋಟನ್ನಿಟ್ಟು "ನನಗೆ ಅವರ ಪತ್ತೆ ಯಾವುದೂ ಸಿಗಲಿಲ್ಲ" ಎಂದನು.

ಶುಭದಾ ವ್ಯಥಿತಳಾಗಿ "ಅಯ್ಯೋ, ವೃಥಾ ಶ್ರಮ ತೆಗೆದುಕೊಂಡ ಹಾಗಾಯಿತು" ಎಂದಳು.

ಸದಾನಂದ ಮಾತನಾಡಲಿಲ್ಲ.

ಶುಭದಾ ಮತ್ತೆ "ಹಾಗಾದರೆ ಈ ಹಣ ತೆಗೆದುಕೊಂಡು ಏನು ಮಾಡುವುದು?" ಎಂದಳು.

"ನಿಮಗೆ ಇಷ್ಟ ಬಂದ ಹಾಗೆ ಮಾಡಿ. ಬೇಕಾದರೆ ಖರ್ಚು ಮಾಡಿ. ಬೇಡದೆ ಹೋದರೆ ಹಾಗೆಯೇ ಇಟ್ಟಿರಿ. ಯಾವಾಗಾದರೂ ಪತ್ತೆ ಸಿಕ್ಕಿದಾಗ ವಾಪಸು ಮಾಡುವಿರಂತೆ."

ಶುಭದಾ ಬೇರೆ ಮಾತಾಡದೆ ಆ ನೋಟುಗಳನ್ನು ತನ್ನ ಸಂದೂಕ ತೆಗೆದು ಅದರಲ್ಲಿಟ್ಟಳು. ಮತ್ತೆ ಅದಕ್ಕೆ ಬೀಗ ಹಾಕಿದಳು. ಸದಾನಂದನು "ಹಾರಾಣಮಾವ ಎಲ್ಲಿ?" ಎಂದನು. ಅವಳು ಪಕ್ಕದ ಕೋಣೆಯನ್ನು ತೋರಿ 'ಅವರು ಅಲ್ಲಿ ಮಲಗಿದಾರೆ' ಎಂದಳು.

"ಎಲ್ಲಿಗೂ ಹೋಗಲಿಲ್ಲ ?"

"ಹೋಗಿದ್ದರು. ಈಗ ತಾನೇ ಬಂದರು."

* * * *

ಆ ದಿನ ಸಂಜೆ ದೊಡ್ಡ ಮಳೆ ಸುರಿಯಿತು. ಶುಭದಾ ಬೇಗ ಬೇಗ ಅಡುಗೆ ಕೆಲಸ ಮುಗಿಸಿಬಿಟ್ಟಿದ್ದಳು. ಹಾರಾಣನು ಊಟ ಮಾಡಿ ಹತ್ತಿರ ಬಂದು 'ಏನಾದರೂ ದುಡ್ಡಿದ್ದರೆ ಕೊಡೆ' ಎಂದನು.

"ಈಗೆಲ್ಲಿಗೂ ಹೋಗಬೇಡಿ. ಮಳೆ ಇನ್ನೂ ಸುರಿಯುವ ಹಾಗಿದೆ. ಗವ್ ಎಂದು ಮೋಡ ಮುಚ್ಚಿಕೊಂಡಿದೆ ನೋಡಿ."

"ಇದ್ದರೆ ಏನು ಬಿಡೆ."

"ವಾಪಸು ಬರಬೇಕಾದರೆ ಹೇಗೆ ಬರುತ್ತೀರಿ ಮಳೆಯಲ್ಲಿ ?"

"ಹೇಗೋ ಬರುತ್ತೇನೆ. ಈ ಮಳೆಗೆಲ್ಲಾ ಹೆದರುತ್ತಾರೆಯೇ? ವಿಪರೀತ ಕೆಲಸವಿದೆ. ಹೋಗದೆ ಹೋದರೆ ಆಗುವುದಿಲ್ಲ."

ಕೆಲಸ ಎಂತಹುದು ಎಂದು ಅವಳಿಗೆ ಗೊತ್ತು. ಆದರೂ "ಇವತ್ತು ಏಕಾದಶಿ. ಅತ್ತಿಗೆಗೆ ಪುನಃ ಅಸ್ವಸ್ಥವಾಗಿದೆ....ನರಳುತ್ತಾ ಮಲಗಿದ್ದಾರೆ" ಎಂದಳು.

ಹಾರಾಣನ ಕಿವಿಗೆ ಅದು ಬೀಳಲಿಲ್ಲ. ಹೆಗಲ ಮೇಲೆ ವಸ್ತ್ರ ಹೊದೆದು ಕೊಂಡು ಅವಳು ಕೊಟ್ಟ ಚಿಲ್ಲರೆಯನ್ನು ಜೇಬಿನಲ್ಲಿ ಹಾಕಿ ಮೆಟ್ಟನ್ನು ಹಾಕಿ ಕೊಂಡು ಆ ಕೊಚ್ಚೆಯಲ್ಲಿಯೇ ಹೊರಟನು. ಶುಭದಾ ಧೀರ್ಘ ನಿಶ್ವಾಸ

ಬಿಟ್ಟು "ಸ್ವಭಾವ," ಎಂದುಕೊಂಡಳು.

ಅವಳಿಗೆ ಗೊತ್ತು ರಾತ್ರಿ ಜೋರಾಗಿ ಮಳೆ ಹೊಡೆಯುತ್ತದೆಂದು. ಹಾಗೆಯೇ ಆಯಿತು. ಈ ನಡುವೆ ಪ್ರತಿ ರಾತ್ರಿಯೂ ಅವಳಿಗೆ ಸ್ವಲ್ಪ ಜ್ವರ ಬರುತ್ತಿತ್ತು. ಅದನ್ನು ಅವಳು ಗಮನಕ್ಕೆ ತಂದುಕೊಳ್ಳುತ್ತಿರಲಿಲ್ಲ. ಯಾರಿಗೂ ಹೇಳಿಯೂ ಇರಲಿಲ್ಲ. ಈ ರಾತ್ರಿಯಂತೂ ಮಳೆ ಬಿದ್ದು ಶೀತ ಗಾಳಿ ಬೀಸಿ ಜ್ವರ ಹೆಚ್ಚಾಯಿತು. ನಿದ್ದೆ ಬರಲಿಲ್ಲ. ಮೆಲ್ಲಗೆ ನರಳುತ್ತಾ ಮಲಗಿದ್ದಳು. ರಾತ್ರಿ ಬಹಳ ಹೊತ್ತಾದ ಮೇಲೆ ಹೇಗೋ ಒಂದು ಬಗೆಯಾಗಿ ಮಂಪರ ಬಂತು ...ಆ ಸಮಯದಲ್ಲಿ ಯಾರೋ ಒದ್ದೆಂದು ಬಾಗಿಲನ್ನು ತೆಗೆದು ಒಳಗೆ ಪ್ರವೇಶ ಮಾಡಿದಂತಾಗಿ ಎಚ್ಚರ ಬಿದ್ದಳು. ಯಾರೋ ಒಬ್ಬ ಮನುಷ್ಯ ತಲೆಯ ತುಂಬಾ ಮುಸುಗು ಹಾಕಿಕೊಂಡು ಕೈಯಲ್ಲಿ ದೊಣ್ಣೆ ಹಿಡಿದು ಹತ್ತಿರ ಬಂದು, ವಿಪರೀತ ಗಡಸು ಧ್ವನಿಯಲ್ಲಿ "ಸದ್ದು! ಪೆಟ್ಟಿಗೆ ಬೀಗದ ಕೈ ತಾ! ಹೂಂ!" ಎಂದನು . ಅವಳು ಏನೂ ಯೋಚಿಸದೆ ಸುಮ್ಮನಿದ್ದು ಅವನನ್ನೇ ದುರುಗುಟ್ಟಿಕೊಂಡು ನೋಡುತ್ತಿದ್ದಳು.

ಆ ಮನುಷ್ಯ ದೊಣ್ಣೆಯನ್ನು ನೆಲದ ಮೇಲೆ ಹೊಡೆದು 'ಹೂಂ . ತಲೆ ಒಡೆದುಬಿಡುತ್ತೀನಿ ...ಬೇಗ.. ಬೀಗದ ಕೈ !" ಎಂದು ಗರ್ಜಿಸಿದನು. ಅವನ ಧ್ವನಿ ಯಥಾರ್ಥಕಾರ ವಿಪರೀತ ಗಡುಸು ಬೇಕೆಂದು ಧ್ವನಿಯನ್ನು ಕೃತ್ರಿಮವಾಗಿ ಗಡುಸು ಮಾಡಿಕೊಂಡಿದ್ದಾನೆಂದು ಅವಳಿಗೆ ಅನ್ನಿಸಿತು.

.. ಅವಳು ತಕ್ಷಣ ಬುಡಿಯಲ್ಲಿದ್ದ ಬೀಗದಕ್ಕೆ ಗೊಂಚಲನ್ನು ಅವನ ಹತ್ತಿರ ಬಿಸಾಡಿದಳು. ಆಮೇಲೆ ಶಾಂತಭಾವದಿಂದ "ಆ ಸಣ್ಣ ಸಂದೂಕದಲ್ಲಿ ಎಡಭಾಗದಲ್ಲಿ ಹತ್ತು ರೂಪಾಯಿಗಳ ಐದು ನೋಟುಗಳಿವೆ, ಅದನ್ನು ತೆಗೆದುಕೋ ..ಬಲಭಾಗದಲ್ಲಿ ದೇವರ ಕರಂಡಿಕೆ, ಜಪ್ಪಿಯುಮು, ಇಟ್ಟಿದ್ದೇನೆ. ಅದನ್ನು ಮಾತ್ರ ಮುಟ್ಟಬೇಡ" ಎಂದಳು. ಅವಳ ಮಾತಿನ ಭಂಗಿಯಲ್ಲಿ ಅವಳಿಗೆ ಎಳ್ಳಷ್ಟೂ ಭಯವಿದ್ದಂತೆ ತೋರಲಿಲ್ಲ ... ...

....ಮುಸುಕು ಹಾಕಿಕೊಂಡಿದ್ದ ಗಂಡಸು ತಡಮಾಡದೆ ಸಂದಕ ತೆಗೆದು ಬೇಗ ಬೇಗ ನೋಟುಗಳನ್ನ ಕೈಗೆ ತೆಗೆದುಕೊಂಡನು. ಅವನು ಅವಕ್ಕಾಗಿ ಹುಡುಕಾಡದೆ ಇದ್ದದ್ದು ನೋಡಿದರೆ ಮುಂಚೆಯೇ ಗೊತ್ತಾಗಿದ್ದವನಂತೆ ತೋರುತ್ತಿತ್ತು ...ಅವನು ಬೀಗದ ಕೈ ಗೊಂಚಲನ್ನ ಅವಳ ಕಡೆ

ಬಿಸಾಡಿ ಹೊರಟು ಹೋಗುತ್ತಿದ್ದಾಗ ಶುಭದಾ ಗಂಭೀರ ಸ್ವರದಲ್ಲಿ "ನೋಟುಗಳ ಮೇಲೆ ಹೆಸರಿದೆ. ನಂಬರಿರುತ್ತದೆ. ಸ್ವಲ್ಪ ಹುಷಾರಾಗಿ ವಿಲೇವಾರಿ ಮಾಡಿಕೋಪ್ಪ" ಎಂದಳು.

ಅವನು ಅವಳ ಮಾತನ್ನ ಗಮನಿಸಿದನೋ ಇಲ್ಲವೋ.... ಬೇಗ ಬೇಗ ಕಾಲಿಗೆ ಬುದ್ಧಿ ಹೇಳಿದನು....

ಶುಭದಾ ದೀರ್ಘ ನಿಶ್ವಾಸ ಬಿಟ್ಟು ಮತ್ತೆ ಬಂದು ಮಲಗಿದಳು. ಮನಸ್ಸಿನಲ್ಲಿ ತಕ್ಷಣ ಯೋಜನೆಯೊಂದು ಹೊಳೆದು ಮೈಯೆಲ್ಲಾ ಜಿಲ್ಲೆಂದಿತು. ತಕ್ಷಣ "ಎಂದಿಗೂ ಇರಲಾರದು.......ಸಾಧ್ಯವಿಲ್ಲ ..ಅಷ್ಟು ಕೆಟ್ಟಿಲ್ಲ........" ಎಂದು "ನಾರಾಯಣ, ವಿಶ್ವೇಶ್ವರಾ" ಎಂಬ ನಾಮಸ್ಮರಣೆ ಮಾಡಿ ಮತ್ತೆ ಮಲಗಿದಳು.

---

# ಕಥೆ ಕಾದಂಬರಿಗಳು

| | | | |
|---|---|---|---|
| ನೌಕಾಘಾತ—ರವೀಂದ್ರನಾಥ ರಾಕೂರ್ | ೧ | ೮ | ೦ |
| ಮೂಲಾನಕ್ಷತ್ರ—ಶೇಷನಾರಾಯಣ | ೧ | ೪ | ೦ |
| ಮನೆ–ಜಗತ್ತು—ರವೀಂದ್ರನಾಥ ರಾಕೂರ್ | ೧ | ೮ | ೦ |
| ವಿನೋದಿನಿ ,, ,, | ೧ | ೮ | ೦ |
| ಪ್ರೇಮಪ್ರಕರಣ—ಕ. ಶಂಕರ | ೧ | ೮ | ೦ |
| ಗಂಗಾವತಾರ—ಜನಾರ್ದನ ಗುರ್ಕಾರ್ | ೧ | ೪ | ೦ |
| ಮಮತೆಯ ಸುಳಿ—ಶ್ರೀನಿವಾಸರಾವ್ ಕೊರಟಿ | ೧ | ೪ | ೦ |
| ಗೋರಾ—ರವೀಂದ್ರನಾಥ ರಾಕೂರ್ | ೨ | ೮ | ೦ |
| ಮೂಕಪ್ರೇಮ—ವಿಶಾಲಾಕ್ಷಿ | ೧ | ೪ | ೦ |
| ಭ್ರಮಾಧೀನ—ನೇವ ನಮಿರಾಜಮಲ್ಲ | ೧ | ೮ | ೦ |
| ಪೇಟೆಮಾತೇನಜ್ಜಿ ?—ಪುಟ್ಟಣ್ಣ | ೦ | ೮ | ೦ |
| ವಿವಾಹ ವಿಚ್ಛೇದ—ಕ. ಶಂಕರ | ೧ | ೮ | ೦ |
| ರಂಗಭೂಮಿ—ಕ. ಶಂಕರ | ೧ | ೮ | ೦ |